ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.

೨೦೦೭-೨೦೦೮ನೇ ಸಾಲಿನ ಕನ್ನಡ ಎಂ.ಫಿಲ್. ಪದವಿಯ ಭಾಗವಾಗಿ
ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಾದರಪಡಿಸಿದ ಸಂಶೋಧನಾ ನಿಬಂಧ

"ಯಶವಂತ ಚಿತ್ತಾಲರ ಕತೆಗಳಲ್ಲಿ ಮನೋವೈಜ್ಞಾನಿಕತೆ" : ಒಂದು ಅಧ್ಯಯನ

ಮಾರ್ಗದರ್ಶಕರು
ಡಾ|| ಪ್ರಧಾನ್ ಗುರುದತ್ತ
ನಿವೃತ್ತ ಕನ್ನಡ ಪ್ರಾಧ್ಯಾಪಕರು,
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ,
ಮಾನಸ ಗಂಗೋತ್ರಿ, ಮೈಸೂರು.

ನಿಬಂಧಕಾರರು:
ಡಿ. ಸುಂದರಿ
ಕನ್ನಡ ಎಂ.ಫಿಲ್. ವಿದ್ಯಾರ್ಥಿ,
ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.
ಕುವೆಂಪು ವಿದ್ಯಾವರ್ಧಕ ಟ್ರಸ್ಟ್,
ಜಯಲಕ್ಷ್ಮಿ ಪುರಂ,
ಮೈಸೂರು.

367

367

ಯಶವಂತ ಚಿತ್ತಾಲ

ಐವತ್ತೊಂದು ಕತೆಗಳು



ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.

೨೦೦೭–೨೦೦೮ನೇ ಸಾಲಿನ ಕನ್ನಡ ಎಂ.ಫಿಲ್. ಪದವಿಯ ಭಾಗವಾಗಿ
ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಾದರಪಡಿಸಿದ ಸಂಶೋಧನಾ ನಿಬಂಧ

"ಯಶವಂತ ಚಿತ್ತಾಲರ ಕತೆಗಳಲ್ಲಿ ಮನೋವೈಜ್ಞಾನಿಕತೆ" : ಒಂದು ಅಧ್ಯಯನ

ಮಾರ್ಗದರ್ಶಕರು
ಡಾ|| ಪ್ರಧಾನ್ ಗುರುದತ್ತ
ನಿವೃತ್ತ ಕನ್ನಡ ಪ್ರಾಧ್ಯಾಪಕರು,
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ,
ಮಾನಸ ಗಂಗೋತ್ರಿ, ಮೈಸೂರು.

ನಿಬಂಧಕಾರರು:
ಡಿ. ಸುಂದರಿ
ಕನ್ನಡ ಎಂ.ಫಿಲ್. ವಿದ್ಯಾರ್ಥಿ,
ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.
ಕುವೆಂಪು ವಿದ್ಯಾವರ್ಧಕ ಟ್ರಸ್ಟ್,
ಜಯಲಕ್ಷ್ಮಿ ಪುರಂ,
ಮೈಸೂರು.

ಮಾರ್ಗದರ್ಶಕರ ಪ್ರಮಾಣ-ಪತ್ರ

ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ಕನ್ನಡ ಎಂ.ಫಿಲ್.ಪದವಿಯ ವಿದ್ಯಾರ್ಥಿಯಾದ **ಡಿ.ಸುಂದರಿ** ಅವರು ನನ್ನ ಮಾರ್ಗದರ್ಶನದಲ್ಲಿ **"ಯಶವಂತ ಚಿತ್ತಾಲರ ಕತೆಗಳಲ್ಲಿ ಮನೋವೈಜ್ಞಾನಿಕತೆ"** ಒಂದು ಅಧ್ಯಯನ, ಎಂಬ ಶೀರ್ಷಿಕೆಯ ನಿಬಂಧವನ್ನು ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಒಪ್ಪಿಸಲು ಸಿದ್ಧಪಡಿಸಿದ್ದಾರೆ.

ಈ ನಿಬಂಧವನ್ನು ಈ ಹಿಂದೆ ಭಾಗಶಃವಾಗಲಿ, ಪೂರ್ಣವಾಗಿಯಾಗಲಿ, ಈ ವಿಶ್ವವಿದ್ಯಾನಿಲಯಕ್ಕೆ ಅಥವಾ ಬೇರೆ ಯಾವುದೇ ವಿಶ್ವವಿದ್ಯಾನಿಲಯಗಳ ಪದವಿ, ಡಿಪ್ಲೊಮೊ ಅಥವಾ ಯಾವುದೇ ಪರೀಕ್ಷೆಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇವೆ.

ದಿನಾಂಕ: 20-8-'08
ಸ್ಥಳ : ಮೈಸೂರು

ಪ್ರಧಾನ್ ಗುರುದತ್ತ
ಮಾರ್ಗದರ್ಶಕರು
(ಡಾ॥ ಪ್ರಧಾನ್ ಗುರುದತ್ತ,)
ನಿವೃತ್ತ ಕನ್ನಡ ಪ್ರಾಧ್ಯಾಪಕರು,
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ,
ಮಾನಸ ಗಂಗೋತ್ರಿ, ಮೈಸೂರು.

ಅಭ್ಯರ್ಥಿಯ ಘೋಷಣಾ ಪತ್ರ

ಡಾ॥ಪ್ರಧಾನ್ ಗುರುದತ್ತ, ನಿವೃತ್ತ ಕನ್ನಡ ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ಇವರ ಮಾರ್ಗದರ್ಶನದಲ್ಲಿ "**ಯಶವಂತ ಚಿತ್ತಾಲರ ಕತೆಗಳಲ್ಲಿ ಮನೋವೈಜ್ಞಾನಿಕತೆ**" ಒಂದು ಅಧ್ಯಯನ, ಎಂಬ ವಿಷಯದ ಬಗೆಗೆ ನಡೆಸಿದ ಅಧ್ಯಯನದ ಫಲವೇ ಈ ನಿಬಂಧ.

ಈ ನಿಬಂಧವನ್ನು ಈ ಹಿಂದೆ ಭಾಗಶಃವಾಗಲಿ, ಪೂರ್ಣವಾಗಿಯಾಗಲಿ, ಈ ವಿಶ್ವವಿದ್ಯಾನಿಲಯಕ್ಕೆ ಅಥವಾ ಬೇರೆ ಯಾವುದೇ ವಿಶ್ವವಿದ್ಯಾನಿಲಯಗಳ ಪದವಿ, ಡಿಪ್ಲೊಮೊ ಅಥವಾ ಯಾವುದೇ ಪರೀಕ್ಷೆಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ: ೨೦/೦೮/೨೦೦೮
ಸ್ಥಳ : ಮೈಸೂರು

ಡಿ.ಸುಂದರಿ
ನಿಬಂಧಕಾರರು
೨೦೦೭-೦೮ನೇ ಸಾಲಿನ ಎಂ.ಫಿಲ್. ವಿದ್ಯಾರ್ಥಿ
ಕುವೆಂಪು ವಿದ್ಯಾವರ್ಧಕ ಟ್ರಸ್ಟ್,
ಜಯಲಕ್ಷ್ಮಿಪುರಂ, ಮೈಸೂರು.

“ಯಶವಂತ ಚಿತ್ತಾಲರ ಕತೆಗಳಲ್ಲಿ ಮನೋವೈಜ್ಞಾನಿಕತೆ : ಒಂದು ಅಧ್ಯಯನ”

ಪರಿವಿಡಿ

ವಿಷಯ	ಪುಟಸಂಖ್ಯೆ
೧. ಪೀಠಿಕೆ	೧-೨
೨. ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ	೩-೪
೩. ಕನ್ನಡ ಕಥಾಸಾಹಿತ್ಯದ ಹಿನ್ನೆಲೆ	೫-೧೧
೪. ಮನೋವಿಜ್ಞಾನದ ಹಿನ್ನೆಲೆ	೧೨-೧೮
೫. ಯಶವಂತ ಚಿತ್ತಾಲರ ಜೀವನ ಪಥ	೧೯-೨೨
೬. ಯಶವಂತ ಚಿತ್ತಾಲರ ಕತೆಗಳು ಒಂದು ಕಿರುನೋಟ	೨೩-೩೧
೭. ಯಶವಂತ ಚಿತ್ತಾಲರ ಕತೆಗಳಲ್ಲಿನ ಮನೋವೈಜ್ಞಾನಿಕ ಅಂಶಗಳು	೩೨-೭೮
೮. ಉಪ ಸಂಹಾರ	೭೯-೮೦
೯. ಅನುಬಂಧ	೮೧-೮೪
೧೦. ಗ್ರಂಥಋಣ	-೮೫

೧. ಪೀಠಿಕೆ

೧೯ನೇ ಶತಮಾನ ಮಾನವನ ಚಿಂತನೆಯ ದಿಕ್ಕನ್ನೇ ಬದಲಾಯಿಸಿದ ವಿಚಾರಗಳು ಯೂರೋಪಿನಲ್ಲಿ ಉದಯಿಸಿದ ಕಾಲ. ಕೃಷಿ ಪ್ರಧಾನ ಬದುಕು ತನ್ನ ಶಕ್ತಿ ಕಳೆದುಕೊಂಡಿತ್ತು. ಜನರು ಹಳ್ಳಿಗಳಿಂದ ನಗರಗಳತ್ತ ವಲಸೆ ಬಂದು, ಕೈಗಾರಿಕೆಗಳಲ್ಲಿ ಕೆಲಸವನ್ನು ಹುಡುಕತೊಡಗಿದರು. ಪರಿಣಾಮ ಕೃಷಿಪ್ರಧಾನ ಬದುಕು ನಾಶವಾಗಿ ನಗರೀಕರಣ ಎಲ್ಲೆಡೆ ಕಾಣತೊಡಗಿತು. ಈ ನಗರೀಕರಣದಿಂದಾಗಿ ಕೌಟುಂಬಿಕ ಸಾವಯವ ಸಂಬಂಧದ ಬದುಕು ಶಿಥಿಲವಾಗಿ ಮಾನವೀಯ ಸಂಬಂಧಗಳ ಪರಿಕಲ್ಪನೆಯೇ ಬೇರೆಯಾಗತೊಡಗಿತು. ನೈತಿಕ ನೆಲೆಗಟ್ಟು ಸಡಿಲಗೊಂಡು ಮಾನವಸಂಬಂಧ ಛಿದ್ರಗೊಂಡಿತು. ಸಾಮಾಜಿಕ ಮೌಲ್ಯಗಳಲ್ಲಾದ ಸ್ಥಿತ್ಯಂತರ ಇಡೀ ಜೀವನ ವಿಧಾನದ ಸ್ವರೂಪವನ್ನೇ ಬದಲಿಸಿತು. ವಿಜ್ಞಾನದ ಹೊಸ-ಹೊಸ ಸಂಶೋಧನೆಗಳು, ವೈಚಾರಿಕ ಕ್ರಾಂತಿಗಳು, ಕೃಷಿ ಬದುಕಿನ ಅವಸಾನ, ಔದ್ಯೋಗೀಕರಣ, ನಗರೀಕರಣ, ಒಟ್ಟಾರೆ ಇವೆಲ್ಲಾ ಧಾರ್ಮಿಕ ನಂಬಿಕೆಗಳು ಕುಸಿಯುವುದಕ್ಕೆ ಕಾರಣಗಳಾಗಿ ಪರಿಣಮಿಸಿದವು. ಆಗ ಡಾರ್ವಿನ್ನನ ವಿಕಾಸವಾದ, ಕಾಮೂನ-ಅಸಂಗತವಾದ, ಸಾರ್ತ್ರೆಯ ಅಸ್ಥಿತ್ವವಾದ, ಫ್ರಾಯ್ಡನ- ಮನೋವೈಜ್ಞಾನಿಕ ಶೋಧನೆ- ಇವೆಲ್ಲಾ ಮಾನವನ ಚಿಂತನಾಕ್ರಮದ ಮೇಲೆ, ಸಾಹಿತ್ಯದ ಮೇಲೆ ಆಳವಾದ ಪ್ರಭಾವ ಬೀರಲು ಪ್ರಾರಂಭಿಸಿದವು.

ಇವುಗಳಲ್ಲಿ ಫ್ರಾಯ್ಡನ- ಮನೋವೈಜ್ಞಾನಿಕ ಶೋಧನೆ ಬಹಳ ಮಹತ್ತರವಾದುದು. ಇದು ಮನುಷ್ಯನ ಮನಸ್ಸನ್ನು ಆಳವಾಗಿ ಅಭ್ಯಸಿಸಿ, ವಿಮರ್ಶಿಸಿ, ವಿಶ್ಲೇಷಿಸಿತು. ಆಧುನಿಕ ಮನೋವಿಜ್ಞಾನಕ್ಕೆ ಫ್ರಾಯ್ಡ್ ಮತ್ತು ಯೂಂಗ್‌ರ ಕೊಡುಗೆ ಅಪೂರ್ವವಾದುದು. ಸರಳ ಸೈದ್ಧಾಂತಿಕ ಹಿನ್ನೆಲೆಯಲ್ಲಿ ಸಾಮಾನ್ಯರಿಗೂ ಸುಪ್ತ ಮನಸ್ಸಿನ ಪರಿಚಯ ಮಾಡಿಸಿದ ಹಿರಿಮೆ ಇವರದು.

ಮನುಷ್ಯನ ಮನಸ್ಸಿನ ಬಹುತೇಕ ಭಾಗ ನಮ್ಮ ಕಣ್ಣಿಗೆ ಕಾಣುವುದಿಲ್ಲ, ಅರ್ಥಾತ್ ನಮ್ಮ ಅರಿವಿಗೆ ಬರುವುದಿಲ್ಲ, ಅರಿವಿಗೆ ಬರುವುದು ಕೇವಲ ಸ್ವಲ್ಪ ಭಾಗವಷ್ಟೆ. ಈ ಕಾಣದ ಅರಿವಿಗೆ ತೀರದ ಮನಸ್ಸಿನ ಅಭಿವ್ಯಕ್ತಿಯೇ ಕನಸು, ಈ ಸುಪ್ತ ಮಾನಸಿಕ ಆಸೆ, ಆಕಾಂಕ್ಷೆ, ಇಷ್ಟಾರ್ಥಗಳು ಸ್ವತಂತ್ರವಾದ ಪರಿಹಾರ ಬಯಸುತ್ತವೆ. ಆದರೆ ಪ್ರತಿರೋಧಕ ಶಕ್ತಿಗಳಿಂದಾಗಿ ಅದು ಒಳಗೇ ಅವಿತಿರುತ್ತದೆ. ನಮ್ಮ ಪ್ರಜ್ಞೆಗೆ ನಿಲುಕುವ ಜಾಗೃತ ಮನಸ್ಸು ನಾಗರಿಕತೆಯ ಪರಿಧಿಯಲ್ಲೇ ಸಂಚರಿಸುತ್ತಿರುತ್ತದೆ. ಈ ಜಾಗೃತ ಹಾಗೂ ಅರಿವಿಗೆ ಬಾರದ ಅಜಾಗೃತ ಮನಸ್ಸಿನ ಸಂಘರ್ಷವೇ ಕನಸುಗಳು ಎಂದು ಫ್ರಾಯ್ಡ್

ಪ್ರತಿಪಾದಿಸಿದ. ಅಷ್ಟೇ ಅಲ್ಲ ಲೈಂಗಿಕ ಪ್ರವೃತ್ತಿಯೇ ಜೀವನದ ಬಹು ಬಲವತ್ತರವಾದ ಪ್ರವೃತ್ತಿ ಎಂದು ಈತ ಉದ್ಘೋಷಿಸಿದ. ಈ ಹಿನ್ನೆಲೆಯಲ್ಲೇ ಈಡಿಪಸ್ ಮತ್ತು ಇಲೆಕ್ಟ್ರಾ ಕಾಂಪ್ಲೆಕ್ಸ್ ಎಂಬ ಪರಿಭಾವನೆಗಳನ್ನು ಹುಟ್ಟುಹಾಕಿದ ಈ ಪರಿಭಾವನೆಗಳು ಮನುಷ್ಯನ ನಂಬಿಕೆಯ ಬೇರುಗಳನ್ನೇ ಅಲುಗಾಡಿಸಿತು.

ಫ್ರಾಯ್ಡ್‌ನ ಶಿಷ್ಯನಾದ ಯೂಂಗ್ ಸುಪ್ತ ಚೇತನದಲ್ಲಿ ಮುಖ್ಯವಾಗಿ ಜನಾಂಗದ ಪೂರ್ವಾನುಭವ ತುಂಬಿರುತ್ತದೆ ಎಂದು ಸಾರಿದ. ನಮ್ಮಲ್ಲಿ ಅನಾಗರಿಕ ಮನುಷ್ಯನ ಬಯಕೆಗಳು ಉಳಿದುಬಿಟ್ಟಿವೆ. ಅವು ನಾಗರಿಕತೆಯ ಲಕ್ಷಣಗಳಲ್ಲವೆಂದು ತಿಳಿದು, ಅದನ್ನು ನಾವು ಒಳಗೇ ಅದುಮಿಡುತ್ತೇವೆ. ಅನಾಗರಿಕವಾದ ದ್ವೇಷ, ಮೌಢ್ಯ, ಶ್ರೌರ್ಯ, ನಮ್ಮ ಮನಸ್ಸಲ್ಲಿ ಮನೆ ಮಾಡಿರುತ್ತವೆ. ಇದನ್ನೇ ಸಮಷ್ಠಿ ಸುಪ್ತ ಚೇತನ ಎಂದು ಯೂಂಗ್ ಕರೆದ. ನಮ್ಮ ಕನಸುಗಳು ಫ್ರಾಯ್ಡ್ ಹೇಳಿದಂತೆ ಜಾಗೃತ- ಅಜಾಗೃತ ಮನಸ್ಸುಗಳ ನಡುವಿನ ಸಂಘರ್ಷವಾಗಿರದೆ ಸಮಷ್ಠಿ ಸುಪ್ತ ಚೇತನದ ಅಭಿವ್ಯಕ್ತಿಯಾಗಿರುತ್ತವೆ ಎಂದು ಈತ ವಿವರಿಸಿದ. ಪುರಾಣ-ಇತಿಹಾಸಗಳನ್ನು ಇಡೀ ಮಾನವ ಜನಾಂಗದ ಕನಸುಗಳೆಂದು ಕರೆದ ಈತ ಇವೂ ಸುಪ್ತ ಚೇತನದ ಆಶೋತ್ತರಗಳ ಪ್ರತೀಕ ಎಂದು ವಿವರಿಸಿದ.

ಹೀಗೆ ಫ್ರಾಯ್ಡ್, ಯೂಂಗ್, ಏಡ್ಲರ್ ಇವರೇ ಮೊದಲಾದವರ ಮನೋವೈಜ್ಞಾನಿಕ ಅಂಶಗಳು ಸಾಹಿತ್ಯವಾದುದ್ದಕ್ಕೂ ಎಣೆದುಕೊಂಡಿರುವುದನ್ನು ಕಾಣಬಹುದು. ಈ ಮನೋವೈಜ್ಞಾನಿಕ ಅಂಶಗಳು ಚಿತ್ತಾಲರ ಕತೆಗಳಲ್ಲಿ ಹೇಗೆ ಒಡಮೂಡಿವೆ? ಎಂಬುದನ್ನು ನೋಡುವ ಒಂದು ಪ್ರಯತ್ನ ನನ್ನದು.

೧. ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಕನ್ನಡ ಸಾಹಿತ್ಯದಲ್ಲಿ ಪ್ರಾಚೀನ ಕಾಲದಿಂದಲೂ ಪಾತ್ರಗಳ ಮನಸ್ಸಿನ ಚಿತ್ರಣವನ್ನು ಅಲ್ಲಲ್ಲಿ ಕ್ವಚಿತ್ತಾಗಿ ಕಾಣಬಹುದಾಗಿದೆ. ಆದಿಕವಿ ಪಂಪನ ಆದಿಪುರಾಣ ಇದಕ್ಕೊಂದು ಉತ್ತಮ ಉದಾಹರಣೆಯಾಗಿದೆ. ಅಲ್ಲಿ ಬರುವ ಲಲಿತಾಂಗನ ಪಾತ್ರ, ಸಾವು ಸನ್ನಿಹಿತವಾಯಿತು ಎಂದು ತಿಳಿದಾಗ ಅವನ ಮನಸಿನ ಚಡಪಡಿಕೆಯನ್ನು ಪಂಪ ಕಣ್ಣಿಗೆ ಕಟ್ಟುವಂತೆ ವರ್ಣಿಸಿದ್ದಾನೆ. ಸಾವನ್ನು ಎದುರುನೋಡುತ್ತಿರುವ ಮನಸಿನ ತಾಕಲಾಟಗಳು ಇದರಲ್ಲಿ ಬಹಳ ಚೆನ್ನಾಗಿ ಮೂಡಿವೆ. ಹಾಗೆಯೇ ಇದರಲ್ಲಿ ಬರುವ ಶ್ರೀಮತಿಯ ಮದುವೆಯ ಪ್ರಸಂಗ, ಶ್ರೀಮತಿಯನ್ನು ಮದುವೆ ಮಾಡಿ ಕಳುಹಿಸಿದಾಗ ಇಡೀ ಬಂಧು-ಬಳಗದ ಸಾಮೂಹಿಕ ಮನಸ್ಥಿತಿಯನ್ನು ಬಹುಶಃ ಅಷ್ಟು ಚೆನ್ನಾಗಿ ಬೇರೆ ಯಾರೂ ಬರೆಯಲಾರರು ಎಂದೆನಿಸುತ್ತದೆ.

ಮುಂದೆ ಜನ್ನನ ಯಶೋಧರ ಚರಿತೆ ಅದರಲ್ಲಿನ ಅಮೃತಮತಿ ಒಬ್ಬ ಮಾವುತನ ಸಂಗೀತಕ್ಕೆ ಸೋಲುವ ಅವಳ ಮನಸ್ಸು, ಅದನ್ನು ನಾವು ಸುಲಭವಾಗಿ 'ದುರ್ಬಲ' ಎಂದು ಬಿಡಬಹುದು. ಆದರೆ ಎಷ್ಟೋ ವೇಳೆ ನಾವು ವ್ಯಕ್ತಿಗಳ ಯಾವುದೋ ಒಂದು ಅಥವಾ ಎರಡು ಒಳ್ಳೆಯ ಗುಣಾಂಶಗಳನ್ನು ನೋಡಿ ಜೀವನಪೂರ್ತಿ ಇಷ್ಟಪಡುತ್ತೇವೆ. ಇಷ್ಟ ಪಡುತ್ತಲೇ ಇರುತ್ತೇವೆ. ಎಷ್ಟೋ ವೇಳೆ ಇಷ್ಟುಪಡುವುದಕ್ಕೆ ಕಾರಣಗಳೇ ಇರುವುದಿಲ್ಲ. ಹಾಗೆಯೇ ಅಮೃತಮತಿ ಇಷ್ಟಪಟ್ಟ ಅನಂತರ ಅವಳಾಡುವ ಮಾತುಗಳು "ಪೊಲ್ಲಮೆಯೆ ಲೇಸು ನಲ್ಲರಮೈಯೊಳ್" ಎಂಬ ಒಂದೇ ವಾಕ್ಯ ಅವಳ ಇಡಿಯ ಮನಸ್ಸಿನ ಸ್ಮೃತಿಗೆ ಕನ್ನಡಿ ಹಿಡಿಯುತ್ತದೆ. ಆ ತರಹದ ಸನ್ನಿವೇಶದಲ್ಲಿ ಎಷ್ಟೋ ವೇಳೆ ನಾವು ನಮ್ಮ ಮನಸ್ಸುಗಳು ನೈತಿಕತೆಯ ಎಲ್ಲೆಯನ್ನು ದಾಟಿ ಬಿಡುತ್ತವೆ. ಎಲ್ಲಾ ನೈತಿಕ ಮೌಲ್ಯಗಳನ್ನು ಬದಿಗಿಟ್ಟು ವರ್ತಿಸುತ್ತವೆ. ಆದರೆ ಇಲ್ಲಿ ಕೇವಲ ಲೈಂಗಿಕ ಅಭಿಪ್ರಾಯವೊಂದೆ ಕಾರಣವಲ್ಲ. ಅಮೃತಮತಿ ಹಾಗೆ ಮಾಡಲು ಯಶೋಧರ ಎಷ್ಟು ಕಾರಣ ಎಂಬುದನ್ನು ಮಾತ್ರ ಇಲ್ಲ ಪ್ರಸ್ತಾಪಿಸಿಲ್ಲ. ಹಾಗೊಂದು ವೇಳೆ ಯಶೋಧರನ ದೌರ್ಬಲ್ಯಗಳನ್ನು ಇಲ್ಲಿ ಕವಿ ಜನ್ನ ಹೇಳಿದ್ದರೆ, ಬಹುಶಃ ಇದೊಂದು ಪರಿಪೂರ್ಣ ಮನೋವಿಶ್ಲೇಷಣಾತ್ಮಕ ಕೃತಿ ಎನಿಸುತ್ತಿತ್ತು. ಅಂತೆಯೇ ಅನಂತನಾಥ ಪುರಾರಣದ ಸುನಂದ ಮತ್ತು ಚಂಡಶಾನದ ಪಾತ್ರವನ್ನೂ ನೋಡಬಹುದು.

ಹೀಗೆ ಪ್ರಾಚೀನ ಕಾಲದಿಂದಲೂ ಹಲವು ಕೃತಿಗಳಲ್ಲಿ ಮನೋವಿಶ್ಲೇಷಣೆಗೆ ಒಳಪಡಬಹುದಾದಂತಹ ಹಲವು ಪಾತ್ರಗಳ ಸೃಷ್ಟಿಯಾಗಿರುವುದು ಸಾಹಿತ್ಯದ ಉದ್ದಕ್ಕೂ ಕಾಣಬಹುದಾಗಿದೆ. ಅಂತೆಯೇ ಪದ್ಯಪಂಥದ ಲೇಖಕರಾದ ಯಶವಂತ ಚಿತ್ತಾಲರ ಕತೆಗಳಲ್ಲಿನ ಹಲವು ಪಾತ್ರಗಳನ್ನು ಮೊದಲಿನಿಂದಲೇ ಮೆಚ್ಚಿದ್ದ ನಾನು ಅವರ ಕತೆಗಳಲ್ಲಿನ ಪಾತ್ರಗಳಲ್ಲಿ ಮನೋತೊಳಲಾಟದಲ್ಲಿ, ಮನೋವಿಶ್ಲೇಷಣೆಯು ಹೇಗೆ ಕಾಣಿಸುತ್ತದೆ? ಹೇಗೆ ಹರಿದಾಡಿದೆ? ಎಂಬುದನ್ನು ತಿಳಿಯುವ ಒಂದು ಯತ್ನವನ್ನು ಮಾಡಿದ್ದೇನೆ. ಹಾಗಾಗಿ ಯಶವಂತ ಚಿತ್ತಾಲರ ಕತೆಗಳು ಮನೋವೈಜ್ಞಾನಿಕ ಅಧ್ಯಾಯನ ಎಂಬ ಶೀರ್ಷಿಕೆಯಡಿಯಲ್ಲಿ ಆ ಒಂದು ಪ್ರಯತ್ನ ಮಾಡುವ ಉದ್ಧೇಶ ನನ್ನದು.

" ಯಶವಂತ ಚಿತ್ತಾಲರ ಕಥೆಗಳಲ್ಲಿ ಮನೋವೈಜ್ಞಾನಿಕತೆ" ಈ ಶೀರ್ಷಿಕೆಯಲ್ಲಿ ಮೂಡಿ ಬಂದಿರುವ ನಿಬಂಧದ ವ್ಯಾಪ್ತಿಯನ್ನು ಗಮನಿಸುವುದಾದರೆ ಕೇವಲ ಫ್ರಾಯ್ಡ್, ಯೂಂಗರು ಪ್ರತಿಪಾದಿಸಿದ ಸಿದ್ಧಾಂತಗಳ ಪ್ರಭಾವವನ್ನು ಕುರಿತಂತೆ ಮಾತ್ರ ಅಧ್ಯಯಿನಿಸುವುದು ಈ ಸಂಶೋಧನಾ ನಿಬಂಧದ ಉದ್ದೇಶವಲ್ಲ. ಆದರೊಳಗೆ ಒಟ್ಟಾರೆ ಮನಃಶಾಸ್ತ್ರವು ಹೇಗೆ ಚಿತ್ತಾಲರ ಕಥೆಗಳಲ್ಲಿ

ವ್ಯಕ್ತವಾಗಿದೆ? ಅಲ್ಲಿ ಬರುವ ಪ್ರಮುಖ ಸನ್ನಿವೇಶಗಳಿಗೆ, ಘಟನೆಗಳಿಗೆ ಹೇಗೆ ಅಲ್ಲಿನ ಪಾತ್ರಗಳ ಮಾನಸಿಕ ಯಾತನೆ ಕಾರಣವಾಗುತ್ತದೆ? ಹೇಗೆ ಏಕಾಂಗಿತನ, ಅಪರಾಧಪ್ರಜ್ಞೆ, ನಗರ ಪರಿಸರ ದೊಂದಿಗೆ ಹೊಂದಿಕೊಳ್ಳಲಾರದ ಮನಸಿನ ಪ್ರತಿಕ್ರಿಯೆ......ಇವೆಲ್ಲಾ ಹೀಗೆ ಅಲ್ಲಿನ ಒಟ್ಟಾರೆ ಕಥಾ ಹಂದರದ ಮೇಲೆ ಪ್ರಭಾವ ಬೀರುತ್ತದೆ ಎಂದು ಅಧ್ಯಯನಿಸುವುದು ಈ ಸಂಶೋಧನೆಯ ಉದ್ದೇಶ.

ಎಷ್ಟೋ ಬಾರಿ ಈ ಮೇಲ್ನೋಟದ ಉದಾಹರಣೆಗಿಂತ ಮುಖ್ಯವಾಗಿ ಪಾತ್ರಗಳ ಸುಪ್ತಮನಸಿನ ಭಾವನೆಗಳು ಅನೇಕ ಘಟನಾವಳಿಗಳಿಗೆ ಕಾರಣವಾಗುತ್ತವೆ. ಅವುಗಳ ದುರಂತಕ್ಕೂ ಇದೇ ವೇದಿಕೆಯಾಗುತ್ತದೆ. ಅದುಮಿಟ್ಟ ಲೈಂಗಿಕ ಬಯಕೆಗಳು, ಒಪ್ಪಿಗೆಯಿಲ್ಲದೆ ಅಚಾನಕ್ಕಾಗಿ ಘಟಿಸಿದ ಲೈಂಗಿಕ ಕ್ರಿಯೆಗಳಿಂದ ಅಥವಾ ಬೇಡವೆಂದರೂ ಮನಸಿನಲ್ಲಿ ಉದಯಿಸಿದ ಲೈಂಗಿಕ ಭಾವನೆಗಳಿಂದ ಮನಸ್ಸು ಅನುಭವಿಸುವ ಸಂಕಟ, ಅದರಿಂದಾಗುವ ಪರಿಣಾಮಗಳ ಅಧ್ಯಯನವೂ ಇದರೊಟ್ಟಿಗೆ ಸೇರಿಕೊಂಡಿದೆ.

ಎಂದೋ ಚಿಕ್ಕವಯಸ್ಸಿನಲ್ಲಿ ನಡೆದ ಘಟನೆ ಮುಂದೆ ದೊಡ್ಡವನಾದಾಗಲೂ ಅದು ಅವನ ಮೇಲೆ ಬೀರುವ ಪರಿಣಾಮಗಳು, ಅದರಿಂದ ಹೊರಬರಲು ತವಕಿಸುವ ಮನಸ್ಸಿನ ಹೊಯ್ದಾಟ, ಇವುಗಳು ಅಧ್ಯಯನಕ್ಕೆ ಇಲ್ಲಿ ಒಳಗಾಗುತ್ತವೆ.

ಅದುಮಿಟ್ಟ ಲೈಂಗಿಕ ಬಯಕೆಗಳು ಮುಂದೆ ಭೂತಾಕಾರವಾಗಿ ವ್ಯಕ್ತವಾಗಿ, ವ್ಯಕ್ತಿಯ ಬದುಕಿನ ಚಿತ್ರಣವನ್ನು ಬದಲಿಸುವುದನ್ನು ನಾವು ಚಿತ್ತಾಲರ ಕೆಲವು ಕತೆಗಳಲ್ಲಿ ಕಾಣಬಹುದು. ಇದೆಲ್ಲಾ ಮನಃಶಾಸ್ತ್ರೀಯವಾಗಿ ನಿಜವೆಂದು ಸಾಬೀತಾಗಿವೆ. ಈ ನಿಟ್ಟಿನಲ್ಲಿ ಅವರ ಅನೇಕ ಕಥೆಗಳು ಎಲ್ಲಿಲ್ಲದ ಪ್ರಾಧ್ಯಾನ್ಯಗಳಿಸುತ್ತವೆ. ಉತ್ತುಮಿ, ಒಂದು ತತ್ವದ ಸಲುವಾಗಿ, ಗುಂಡಾಭಟ್ಟರ ಮಡಿ, ಮುಕುಂದನ ದಾಕ್ಷಿಣ್ಯ, ಪೀಜೀ, ಸಂದರ್ಶನ, ಆಬೋಲೀನ , ಮುದಿಹುಚ್ಚು, ಖಾಲಿಕೋಣೆ, ಅಪರಿಚಿತರು, ಮಲ್ಲನಾಥ, ಗಾನಪ್ರಿಯಶಂಭೂಶಾಸ್ತ್ರಿ, ಸೆರೆ, ಹಾವು, ಅದೃಷ್ಟ, ಪಯಣ, ಆಟ, ಭಲ, ಕತೆಯಲ್ಲಿ ಬಂದಾತ ಮನೆಗೂ ಬಂದು ಕದ ತಟ್ಟಿದ, ಕತೆಯಾದಳು ಹುಡುಗಿ, ತ್ರಯೋದಶ ಪುರಾಣ, ಅಶ್ವತ್ಥಾಮ,ಮುಖಾಮುಖಿ, ಉದ್ಧರ, ಚಕ್ರವ್ಯೂಹ, ಬೀಗ ಮತ್ತು ಬೀಗದ ಕೈ, ಚೀನ್ಯಾ, ಮೂರನೆಯವನು, ವಿಸರ್ಜನೆ, ಸಿದ್ದಾರ್ಥ, ಹುಡುಕಾಟ- ಇವೇ ಮೊದಲಾದ ಕತೆಗಳ ಅಧ್ಯಯನ ಇಲ್ಲಿ ಕಾಣಸಿಗುತ್ತದೆ. ಚಿತ್ತಾಲರ ಎಲ್ಲಾ ಕಥಾ ಸಂಕಲನಗಳ ಕತೆಗಳ ಸಂಗ್ರಹವಾದ ಚಿತ್ತಾಲರ ಐವತ್ತೊಂದು ಕತೆಗಳು ಕೃತಿಯಲ್ಲಿನ ಕತೆಗಳ ಅಧ್ಯಯನವನ್ನು ಮನೋವೈಜ್ಞಾನಿಕವಾಗಿ ನಡೆಸಿರುವುದನ್ನು ಕಾಣಬಹುದಾಗಿದೆ. ಈ ನಿಬಂಧದ ಅಧ್ಯಯನ ವ್ಯಾಪ್ತಿಯು ಐವತ್ತೊಂದು ಕಥೆಗಳ ಮನೋವೈಜ್ಞಾನಿಕ ಅಧ್ಯಯನವನ್ನು ಒಳಗೊಂಡಿರುವುದನ್ನು ಕಾಣಬಹುದಾಗಿದೆ.

೩. ಕನ್ನಡ ಕಥಾಸಾಹಿತ್ಯದ ಹಿನ್ನೆಲೆ

ಕನ್ನಡ ಸಣ್ಣಕಥೆಗಳಿಗೆ ಸಂಬಂಧಿಸಿದಂತೆ ಇದುವರೆಗೂ ಸಾಕಷ್ಟು ಅಧ್ಯಯನಗಳು ನಡೆದಿವೆ. 'ವಡ್ಡಾರಾಧನೆ' ಯಲ್ಲಿಯೇ ನಾವು ಸಣ್ಣಕಥೆಗಳ ಛಾಯೆಯನ್ನು ಗುರುತಿಸಬಹುದು. ಆದರೆ ಸಣ್ಣಕಥೆ ಎಂಬ ಸಾಹಿತ್ಯಿಕ ಪ್ರಕಾರವೇ ಆರಂಭವಾದದ್ದು, ಅದು ಒಂದು ಪ್ರವಾಹದಂತೆ ನಮ್ಮನ್ನು ಆವರಿಸಿದ್ದ ಆಧುನಿಕ ಯುಗದಲ್ಲಿಯೇ ಎಂದು ಹೇಳಬಹುದು.

ಆಧುನಿಕ ಸಾಹಿತ್ಯಕ್ಕೆ ಮೂಲ ಪ್ರೇರಣೆ ಆಂಗ್ಲಭಾಷೆ. ಅದರ ಪ್ರಭಾವಕ್ಕೆ ಮೊದಲು ಒಳಗಾದದ್ದು ಬಂಗಾಳ, ಅಂತೆಯೇ ಆ ಭಾಷೆಯ ಮೇಲೆ ಆಂಗ್ಲ ಭಾಷಾ ಪ್ರಭಾವದಿಂದ ಅನೇಕ ಹೊಸ ಪ್ರಕಾರಗಳು ಆವಿರ್ಭವಿಸಿದವು. ನಂತರ ಕನ್ನಡವು ಇವುಗಳಿಂದ ಅನೇಕ ಪ್ರಾಕಾರಗಳನ್ನು ಸ್ವೀಕರಿಸಿತು. ಅವುಗಳಲ್ಲಿ ಕಥಾಸಾಹಿತ್ಯ ಪ್ರಾಕಾರವೂ ಒಂದು.

ಮೊದ ಮೊದಲು ಕನ್ನಡದಲ್ಲಿ ಕಥೆಗಳನ್ನು ಬರೆಯಲು ಆರಂಭಿಸಿದವರೆಂದರೆ ಪಂಜೆ ಮಂಗೇಶರಾಯರು. ಇವರು ಬರೆದ 'ನನ್ನ ಚಿಕ್ಕಪ್ಪ' ಮೊದಲ ಸಣ್ಣಕತೆ ಎಂದು ಗುರ್ತಿಸಲ್ಪಟ್ಟಿದೆ. ಆದರೆ ಬಹುತೇಕ ಮಂದಿ ನನ್ನ ಚಿಕ್ಕತಾಯಿ ಎಂಬ ಕಥೆಯೇ ಮೊದಲ ಕಥೆ ಒಪ್ಪುತ್ತಾರೆ. ಆದರೆ ಪಂಜೆ ಮಂಗೇಶರಾಯರ (೧೮೭೪– ೧೯೩೭) ಕನ್ನಡದ ಮೊದಲ ಕಥೆಗಾರರು ಎಂಬುದರಲ್ಲಿ ಯಾವುದೇ ವಿವಾದಗಳಿಲ್ಲ. 'ನನ್ನ ಚಿಕ್ಕತಾಯಿ' ಎನ್ನುವ ಕತೆಯು ಸುವಾಸಿನಿ ಪತ್ರಿಕೆಯಲ್ಲಿ ೧೯೦೦ ರಲ್ಲಿ ಪ್ರಕಟವಾಗಿದೆ. ನಂತರ ಪಂಜೆಯವರು 'ನನ್ನ ಚಿಕ್ಕ ತಂದೆ', ' ಭಾರತ ಶ್ರವಣ', 'ನನ್ನ ಹೆಂಡತಿ', 'ನನ್ನ ಚಿಕ್ಕ ತಂದೆ'ಯವರ ಉಯಿಲ್' ಎಂಬ ಸ್ವತಂತ್ರ ಸಾಮಾಜಿಕ ಕಥೆಗಳು ಅಲ್ಲದೇ ಪ್ರಥುಲ, ವೀರಮತಿ ಎಂಬ ಚಾರಿತ್ರಿಕ ಕಥೆಗಳು ಪ್ರಕಟವಾಗಿವೆ

ಇವರ ಬಹುತೇಕ ಕಥೆಗಳಲ್ಲಿ ಆತ್ಮ ಚರಿತ್ರೆಯ ನಿರೂಪಣೆಯ ಧಾಟಿಯಿದೆ. ಸಂಕೀರ್ಣವಾದ ಹಾಸ್ಯವೂ ಇವಕ್ಕೆ ಇನಷ್ಟು ಮೆರುಗನ್ನು ಕೊಟ್ಟಿವೆ. ಒಟ್ಟಾರೆ ಇವರ ಕಥೆಗಳಲ್ಲಿ "ಹಾಸ್ಯಪ್ರಜ್ಞೆ ಹಾಗೂ ಸಣ್ಣಕತೆಗಳನ್ನು ಕಲಾರೂಪವಾಗಿ ಸಾಧಿಸುವ ಪ್ರಯತ್ನ ಮುಖ್ಯವಾಗಿ ಕಂಡು ಬರುತ್ತದೆ"

ಪಂಜೆಯವರ ನಂತರ ಕನ್ನಡ ಕಥಾಸಾಹಿತ್ಯವನ್ನು ಪ್ರವೇಶಸಿದವರೆಂದರೆ ಎಂ.ಎನ್.ಕಾಮತ್ (೧೮೮೫–೧೯೪೦). ಇವರು ಹೆಚ್ಚಾಗಿ 'K' ಎಂಬ ಹೆಸರಿನಲ್ಲಿ ಪತ್ರಿಕೆಗಳಲ್ಲಿ ಕಥೆಗಳನ್ನು ಬರೆದರು. ೧೯೨೨ ರ ಹೊತ್ತಿಗೆ ಸ್ವದೇಶಾಭಿಮಾನಿ ಪತ್ರಿಕೆಯಲ್ಲಿ ಸ್ತ್ರೀ ಜಾತಿಯ ಮಹತ್ವ ಎಂಬ ಕಥೆಯನ್ನು ಬರೆದರು. ನಂತರ 'ಸ್ವಪ್ನದ ತೊಟ್ಟಿಲು', 'ಕಲಾವತಿ' ಮೊದಲಾದ ಕಥೆಗಳು ಪ್ರಕಟವಾದವು. ಇವರು ಪ್ರಮುಖವಾಗಿ ಮಹಿಳೆಯರನ್ನು ಕುರಿತಂತೆ, ಅವರ ಮೇಲಾಗುವ ಶೋಷಣೆಯ ಕುರಿತಂತೆ, ಮೂಢನಂಬಿಕೆಗಳನ್ನು ಕುರಿತಂತೆ ಕಥೆಗಳನ್ನು ಬರೆದಿರುವುದನ್ನು ಗಮನಿಸಬಹುದು. ಎಂ.ಎನ್.ಕಾಮತ್ ರ ನಂತರ ಶ್ರೀ.ಆರ್.ಶ್ರೀನಿವಾಸರಾವ್, ಗೋಪಾಲಕೃಷ್ಣ, ಎಚ್.ಬಿ.ರಾವ್, ಪಿ.ಎನ.ವೆಂಕಟರಾವ್, ಎಲ್.ವಿ. (೧೯೦೦–೧೯೨೦ ರ ಅವಧಿಯಲ್ಲಿ) ಅವರ ಅನೇಕ ಪತ್ರಿಕೆಗಳಿಗೆ ಕಥೆಗಳನ್ನು ಬರೆದಿದ್ದಾರೆ.

ಈ ಅವಧಿಯಲ್ಲಿ ಪ್ರಕಟವಾದ ಕಥೆಗಳಲ್ಲಿ ಬಹಳ ಪ್ರಮುಖವಾಗಿ 'ನೀತಿ' ಯನ್ನು ಕಾಣಬಹುದಾಗಿದೆ. ಮನರಂಜನೆಯ ಉದ್ದೇಶಕ್ಕಿಂತ ಮಿಗಿಲಾಗಿ 'ನೀತಿ' ಯನ್ನು ಹೇಳುವುದು ಬಹುತೇಕ ಕಥೆಗಳ ಆಶಯವಾಗಿದೆ. ಈ ಕಾಲದಲ್ಲಿ ಬಂದ ಐತಿಹಾಸಿಕ ಕಥೆಗಳು ಬಹಳ ಪ್ರಮುಖವಾಗಿ ಹಿಂದೂಧರ್ಮವನ್ನು ಕುರಿತಾದ ಬಲವನ್ನು ಪ್ರಕಟಪಡಿಸುತ್ತವೆ. ಇತಿಹಾಸದಲ್ಲಿ ಮಿನುಗಿದ ರಾಜ-ಮಹಾರಾಜರನ್ನು ಕುರಿತಾದ ವೈಭವೀಕರಿಸಲ್ಪಟ್ಟ ಕಥೆಗಳನ್ನು ಕಾಣಬಹುದು. ಸ್ತ್ರೀಯರನ್ನು ಕುರಿತಂತೆ ಈ ಕೆಲವು ಕಥೆಗಳು ಪಾತೀವ್ರತ್ಯ, ಗೃಹಿಣಿಯರ ಕರ್ತವ್ಯಗಳಂತ ವಿಷಯವನ್ನು ವಿಪರೀತವಾಗಿ ವೈಭವೀಕರಿಸುತ್ತವೆ. ಇನ್ನೂ ಕೆಲವು ಕಥೆಗಳಲ್ಲಿ ಸ್ತ್ರೀಯರಿಗೆ ಸಂಬಂಧಿಸಿದ್ದಂತಿದ್ದ ಕನಿಷ್ಟ ಆಚರಣೆಗಳನ್ನು ಖಂಡಿಸುವ, ವರದಕ್ಷಿಣೆ ಮೊದಲಾದ ಪಿಡುಗನ್ನು ಕುರಿತಂತೆ ಮಹಿಳಾ ಶೋಷಣೆಯ ವಿವಿಧ ಮಜಲುಗಳನ್ನು ಕಾಣಬಹುದು.

ಪಂಜೆ, ಕಾಮತ್ ಮೊದಲಾದವರ ಕಥೆಗಳು ಪ್ರಬಂಧದ ಮಾದರಿಯಲ್ಲಿ ಸಾಗುತ್ತವೆ ಅನುಭವವನ್ನು ಹೇಳುವುದೆ ಪ್ರಮುಖ ಉದ್ದೇಶವಾಗಿದ್ದರಿಂದ ಕಲಾತ್ಮಕತೆಯ ಕತೆಗೆ ಅಷ್ಟಾಗಿ ಗಮನ ಹರಿಸಿದಂತೆ ಕಾಣಬರುವುದಿಲ್ಲ. ಇನ್ನು ಈ ಕಾಲದ ಕಥೆಗಳ ಆಕೃತಿಯನ್ನು ನೋಡಿದಾಗ ತೀರಾ ವಿವರಣಾತ್ಮಕವಾದ ರೀತಿಯಲ್ಲಿರುವುದನ್ನು ಕಾಣಬಹುದು. ಎಷ್ಟೋ ಕಥೆಗಳಲ್ಲಿ ಕಥೆಗಾರನೇ ನೇರವಾಗಿ ಪ್ರವೇಶಿಸಿ ಸ್ಪಷ್ಟೀಕರಣವನ್ನು, ಘಟನೆಗಳಿಗೆ ಕಾರಣ. ಕ್ರಿಯೆಗಳಿಗೆ ಸಮರ್ಥನೆಯನ್ನು, ಕೊನೆಗೆ ತಾನೇ ತೀರ್ಮಾನವನ್ನು ಕೊಟ್ಟುಬಿಡುತ್ತಾನೆ.

ಆದಾಗ್ಯೂ ಸಣ್ಣಕಥೆಗಳಿಗೆ ಒಂದು ಅಧಿಕೃತತೆ ಪ್ರಾಪ್ತವಾದದ್ದು ಮಾಸ್ತಿಯವರ ಕಥೆಗಳಲ್ಲಿ. ಅದರ ಜೀವನಾಡಿಯನ್ನು ಮೀಟಿ, ಸಮಗ್ರವಾಗಿ ಹಾಗೂ ಸಶಕ್ತವಾಗಿ ಕನ್ನಡದಲ್ಲಿ ಮೂಡಿಸಿದ ಕೀರ್ತಿ ಇವರಿಗೆ ಸಲ್ಲಬೇಕು. ಇವರ ಮೊದಲ ಕಥೆ ೧೯೧೪ ರಲ್ಲಿ 'ಮಧುರವಾಗಿ' ಎಂಬ ಪತ್ರಿಕೆಯಲ್ಲಿ 'ರಂಗಪ್ಪನ ಮದುವೆ' ಎಂಬ ಕಥೆ ಪ್ರಕಟವಾಯಿತು. ನಂತರ ಪ್ರಕಟವಾದ 'ರಂಗಪ್ಪನ ಕಥೆಗಳು' ಹಾಸ್ಯಪದದ ಮೇಲೆ ರಚಿಸಲ್ಪಟ್ಟು ಸುಂದರ ಚಿತ್ರಗಳು ರಂಗಪ್ಪನ 'ಕೋಟೇಶ್ವರ' ಕಥೆಯಲ್ಲಿಯೂ ಹಾಸ್ಯದ ಬಗ್ಗೆಯೇ ಚಿಮ್ಮಿದೆ. ಕೇವಲ ಹಾಸ್ಯವೇ ಇವರ ಪ್ರಮುಖ ಆಶಯವಲ್ಲ. ಪ್ರೇಮ-ಪ್ರಣಯವು ಕುರಿತಂತೆಯೂ ಹಲವು ಕಥೆಗಳನ್ನು ಇವರು ಬರೆದಿದ್ದಾರೆ. ಅವುಗಳಲ್ಲಿ ಪ್ರಮುಖವಾದಗಳೆಂದರೆ 'ವೆಂಕಟಶಾಮಿಯ ಪ್ರಣಯ' ಇದರಲ್ಲಿ ಅಂತರಜಾತಿಯ ವಿವಾಹದಂತಹ ಕ್ಲಿಷ್ಟಕರ ಸಮಸ್ಯೆಯನ್ನು ಆಯ್ದುಕೊಂಡು ಆ ಕಾಲಘಟ್ಟದ ಸಾಧ್ಯತೆಗೆ ಅನುಗುಣವಾಗಿ, ಸಮರ್ಥವಾಗಿ ಈ ಕತೆಯನ್ನು ನಿಭಾಯಿಸುತ್ತಾರೆ. ನಾಯಿಂದನ ಹುಡುಗನೊಬ್ಬ ದೊಂಬರ ಹುಡುಗಿಯನ್ನು ಪ್ರೀತಿಸುವುದು, ಕೊನೆಗೆ ಮದುವೆಯಾಗಲಾರದೆ ಅದೇ ಕೊರಗಿನಲ್ಲಿ ತೀವ್ರ ಜ್ವರಪೀಡಿತನಾಗಿ ಸಾಯುವುದು ಇದರ ವಸ್ತು.

ಇವರ 'ಮೊಸರಿನ ಮಂಗಮ್ಮ' ಕಥೆಯಂತೂ ಆ ಕಾಲಕ್ಕೆ ಮಾತ್ರವಲ್ಲ ಈ ಕಾಲಕ್ಕೂ ಪ್ರಸ್ತುತವೆನಿಸುವಂತಹ ಒಂದು ಅಪೂರ್ವ ಕಥೆ. ಸೊಸೆಯಿಂದಾಗಿ ತನ್ನನ್ನು ಕಡೆಗಣಿಸುತ್ತಿದ್ದ ಮಗನ ಬಗೆಗೆ ಕೋಪದಿಂದ ಬೇರೆಯಾಗಿ ಜೀವಿಸುವ ಮುದುಕಿಯ ಕಥೆ ಇಲ್ಲಿ ಬಲು ಸೊಗಸಾಗಿ ಮೂಡಿ ಬಂದಿದೆ. ಈ ಮುದುಕಿ ಮಂಗಮ್ಮನ ಮನಸ್ಸಿನ ಭಾವನೆಗಳು, ಆಕೆಯ ಮನದಾಳದ ಪದರ ಪದರವನ್ನು ಓದುಗರ ಕಣ್ಮುಂದೆ ಬಿಚ್ಚಿಡುವ ಮಾಸ್ತಿಯರ ಕಲೆಗಾರಿಕೆಯನ್ನು ನಾವು ಮೆಚ್ಚಲೇಬೇಕು. ಈ ಕಥೆಯನ್ನು ಮನಶಾಸ್ತ್ರೀಯ ಹಿನ್ನೆಲೆಯಲ್ಲಿ ವಿಶ್ಲೇಷಿಸಬೇಕು. ಚಿತ್ತಾಲರಿಗೂ ಮುಂಚೆ ಕನ್ನಡ ಕಥಾ ಸಾಹಿತ್ಯದಲ್ಲಿ ಮನಶಾಸ್ತ್ರದ ಹೊಳವುಗಳನ್ನು ಮೂಡಿಸಿದವರಲ್ಲಿ ಮಾಸ್ತಿ ಅಗ್ರಗಣ್ಯರು.

ಈ ಕಥೆಯಲ್ಲಿ ಎಲ್ಲಿಯೂ ಅಸಹಜತೆ ತಲೆಹಾಕಿಲ್ಲ. ಅತಿರೇಕ ಸುಳಿದಿಲ್ಲ, ಇಲ್ಲಿ ಬರುವ ದೇಸಿನುಡಿಗಳೂ, ನಿರ್ಮಿಸಿರುವ ಪರಿಸರ, ಕ್ರಮಕ್ರಮವಾಗಿ ಸ್ವಲ್ಪ-ಸ್ವಲ್ಪವೇ ವಿಕಾಸಗೊಳ್ಳುವ ಇಲ್ಲಿಯ ಪಾತ್ರಗಳ ಮನಸುಗಳು ಒಟ್ಟಾರೆ ಎಲ್ಲವೂ ಕಲಾತ್ಮಕವಾಗಿ ಚಿತ್ರಿಸಲ್ಪಟ್ಟಿದ್ದು ಕನ್ನಡದ ಅತಿ ಪ್ರಮುಖ ಕಥೆಗಳಲ್ಲಿ ಒಂದಾಗಿದೆ. 'ಬೀದಿಯಲ್ಲಿ ಹೋಗುವ ನಾರಿ', 'ಮೇಲೂರು ಲಕ್ಷ್ಮಮ್ಮ' ಇವು ಮನಶಾಸ್ತ್ರೀಯ ಹಿನ್ನೆಲೆಯಲ್ಲಿ ನೋಡಲೇಬೇಕಾದ ಕಥೆಗಳಾಗಿವೆ.

ಅಜ್ಞಾನ, ಮೂಢನಂಬಿಕೆಗಳನ್ನು ಕುರಿತಂತೆಯೂ ಕಥೆಗಳನ್ನು ಬರೆದಿರುವ ಮಾಸ್ತಿಯವರು ಎಲ್ಲಿಯೂ ಅವಹೇಳನದ ಅತಿರೇಕವಿರದಂತೆ ಎಚ್ಚರ ವಹಿಸಿರುವುದನ್ನು ಕಾಣಬಹುದು. 'ಕಾಮನ ಹಬ್ಬದ ಒಂದು ಕಥೆ' ಹಾಗೂ 'ಕಲ್ಮಾಡಿಯ ಕೋಣ' ಗಳು ಈ ನಿಟ್ಟಿನಲ್ಲಿ ಪ್ರಮುಖವೆನಿಸುತ್ತವೆ.

ಹೆಣ್ಣನ್ನು ಅತಿ ಸಹಾನುಭೂತಿಯಿಂದ ನೋಡಿದ ಕಥೆಗಾರರಲ್ಲಿ ಮಾಸ್ತಿಯೂ ಒಬ್ಬರು. ಇವರ 'ಚಂದ್ರವದನ ಕಥೆಯಲ್ಲಿ' ವೇಶ್ಯೆಯೊಬ್ಬಳ ಮಾತೃ ಪ್ರೇಮದ ಪರಿಯನ್ನು ಕಾಣಬಹುದು. ಪ್ರಗತಿಶೀಲರಲ್ಲಿ ಪ್ರಮುಖವೆನಿಸುವ ಈ ತತ್ವವನ್ನು ನಾವು ಮಾಸ್ತಿಯವರಲ್ಲೇ ಗುರುತಿಸಬಹುದು.

ತಂತ್ರದ ದೃಷ್ಟಿಯಿಂದ 'ವೆಂಕಟಿಗನ ಹೆಂಡತಿ' ಅತ್ಯಂತ ವಿಶಿಷ್ಟ ಎನಿಸುತ್ತದೆ. ಇದರಲ್ಲಿ ಮಾಸ್ತಿ ಅವರು ಕಥೆಯೊಳಗೆ ಕಥೆ ಹುಟ್ಟುವ ತಂತ್ರವನ್ನು ಎಣೆದಿದ್ದಾರೆ. 'ಸ್ವತಃ ಚಿತ್ತಾಲರೆ ಈ ಕಥೆಯನ್ನು ಮೆಚ್ಚಿಕೊಳ್ಳುತ್ತಾ ಕನ್ನಡದಲ್ಲಿ ಇಂಥ ಒಂದು ಕತೆ ಇದೆ ಎನ್ನುವುದು ಆಶ್ಚರ್ಯದಂತೆ ಅಭಿಮಾನಕ್ಕೂ ಕಾರಣವಾಗಿದೆ. ತನ್ನನ್ನು ತಿರಸ್ಕರಿಸಿ ಹೊರಟ ತನ್ನ ಹೆಂಡತಿ ಮತ್ತೆ ಬಂದು ಮಗುವಿನ ದೈಹಿಕ ಲಕ್ಷಣಗಳನ್ನು ವರ್ಣಿಸುತ್ತಾ ಅತ್ಯಂತ ಸೂಕ್ಷ್ಮವಾಗಿ ಮಗು ವೆಂಕಟಿಗನಿಗೆ ಹುಟ್ಟಿದ್ದೆಂದು ಬಿಂಬಿಸಲು ಯತ್ನಿಸಿದಾಗ ಯಾವುದೇ ಪ್ರಶ್ನೆ ಮಾಡದೆ ಹೆಂಡತಿ ಹಾಗೂ ಮಗುವನ್ನು ಸ್ವೀಕರಿಸುವ ವೆಂಕಟಿಗ ನಿಜಕ್ಕೂ ಶ್ರೀರಾಮನನ್ನು ಮೀರಿಸುತ್ತಾನೆ. ರಾಮ ಏನೂ ಪಾಪ ಮಾಡದ ಸೀತೆಯನ್ನು ಬೆಂಕಿಗೆ ತಳ್ಳಿದ. ಆದರೆ ಇಲ್ಲಿಯ ವೆಂಕಟಿಗ ತಪ್ಪು ಮಾಡಿ, ಪ್ರಾಯಶ್ಚಿತ್ತ ಪಟ್ಟ ಹೆಂಡತಿಯನ್ನು ಸ್ವೀಕರಿಸಿದ. ಅಸಾಧಾರಣವಾದ ಅಂತಃಕರಣವನ್ನು ಪ್ರದರ್ಶಿಸಿದ್ದು, ಇದು ಮಾಸ್ತಿಯವರ ಲೇಖನಿಯಿಂದ ಮೂಡಿದ ಅಪೂರ್ವ ಕಥೆ ಮಾತ್ರವಲ್ಲ ಇಡಿಯ ಕನ್ನಡ ಕಥಾ ಸಾಹಿತ್ಯದಲ್ಲೇ ಅಸಾಧಾರಣವಾದ, ಅಪೂರ್ವವಾದ, ಅಪಾರ ಹೃದಯ ಶ್ರೀಮಂತಿಕೆಯುಳ್ಳ ಕಥೆಯಾಗಿದೆ. ಇಂತಹ ವಸ್ತು ನವ್ಯದವರ ಕಾಲದಲ್ಲಿಯೂ ಮೂಡಿ ಬಂದಿಲ್ಲ. ಅಷ್ಟೇ ಅಲ್ಲ ಇಷ್ಟೊಂದು ದಿಟ್ಟತನದಿಂದ ಕೂಡಿಲ್ಲ.

ಐತಿಹಾಸಿಕ ಕಥೆಗಳನ್ನೂ ಬರೆದಿರುವ ಮಾಸ್ತಿಯವರಲ್ಲಿ ಅನುಭವ ಮತ್ತು ತಾದಾತ್ಮತೆಗಳನ್ನು ಇತಿಹಾಸದಿಂದ ಎದ್ದು ಬಂದಂತೆ ಚಿತ್ರಿಸುವ ಕಥನ ಕವಿಯನ್ನು ಕಾಣಬಹುದು. ಇಂತಹವುಗಳಲ್ಲಿ ಬಾದಷಹನ ಗೆಳೆಯ, ಬಾದಷಹನ ದಂಡನೆ, ನಿಜಗಲ್ಲನ ರಾಣಿ ಮುಖ್ಯವೆನಿಸುತ್ತವೆ.

ಚಿತ್ತಾಲರೇ ಹೇಳುವಂತೆ 'ಗೌತಮಿ ಹೇಳಿದ ಕಥೆ' ಯಲ್ಲಿ ಮಾಸ್ತಿಯವರ ಸೃಜನಶೀಲತೆಯು ಎಲ್ಲಾ ಶಕ್ತಿಗಳು ಒಟ್ಟಾಗಿ ಕೆಲಸ ಮಾಡಿರುವುದನ್ನು ನೋಡಬಹುದು. ಇದನ್ನು ಚಿತ್ತಾಲರೇ 'ನಿಸ್ಸಂಶಯವಾಗಿ ಮಾಸ್ತಿಯವರ ಶ್ರೇಷ್ಠ ಕಥೆ' ಎಂದು ಹೇಳುತ್ತಾರೆ. ಕಥಾನಾಯಕಿಯೇ ಸ್ವತಃ ತನ್ನ ಕಥೆಯನ್ನು ಬೇರೆಯೊಬ್ಬಳ ಕಥೆಯಾಗಿ ಹೇಳುವ ತಂತ್ರವಿದೆ.

ಸಾಂಕೇತಿಕತೆಯೇ ಪ್ರಧಾನವಾದ ಕಥೆ ಎಂದರೆ 'ಕಾಕಲೋಕ', ಒಂದು ಹಳೆಯ ಕಥೆ. ಇಲ್ಲಿಯ ಸನ್ನಿವೇಶ ನಿರ್ಮಿತಿಯು ಓದುಗನನ್ನು ದಂಗು ಬಡಿಸುತ್ತದೆ. 'ವೆಂಕಟರಾಯನ ಪಿಶಾಚಿ' ಕಥೆಯಲ್ಲಿ ಸುಪ್ತ ಮನಸ್ಸಿನಲ್ಲಿದ್ದ ಭೂತದ ಭಯವು ಕನಸಾಗಿ ಕಾಡಿದ ಕಥೆಯಿದೆ. ಮನಶಾಸ್ತ್ರೀಯ ಹಿನ್ನೆಲೆಯಲ್ಲಿ ಈ ಕಥೆಯನ್ನು ಅಧ್ಯಯನ ಮಾಡುವ ಜರೂರು ಇದೆ.

ಮಾಸ್ತಿಯವರನ್ನು ಕುರಿತಂತೆ ಚಿತ್ತಾಲರೆ ಈ ಕೆಳಗಿನಂತೆ ದಾಖಲಿಸುತ್ತಾರೆ. ಮಾಸ್ತಿಯವರ ಕಥೆಗಳಲ್ಲಿ ನಮ್ಮ ಕೌತುಕಕ್ಕೆ ಕಾರಣವಾಗುವುದು ಕಥೆ ಹೇಳುವುದರಲ್ಲಿ ಅವರಿಗಿದ್ದ ಉತ್ಸಾಹವೇ ಹಾಗೂ ಈ ಉತ್ಸಾಹಕ್ಕೆ ಮೂಲವಾದ ಮನುಷ್ಯನ ಬಗೆಗಿನ ನಿಂತಂತ ಪ್ರೀತಿಯೇ! ಅವರ ಕಥೆಗಳು ಮನುಷ್ಯನನ್ನು ಹಲವು ಸನ್ನಿವೇಶಗಳಲ್ಲಿಟ್ಟು ಪರೀಕ್ಷಿಸುತ್ತವೆ. ಈ ಸನ್ನಿವೇಶಗಳು ಮನುಷ್ಯನನ್ನು ಸತ್ವ ಪರೀಕ್ಷೆಗೆ ಒಡ್ಡುವ ತಾಣಗಳಾಗಿ ಅವರಿಗೆ ಕಂಡಿವೆ. ಕಥನ ಸಾಹಿತ್ಯ ಅವರ ಕೈಯಲ್ಲಿ ಮನುಷ್ಯ ಚೈತನ್ಯದ ಕಥೆಯಾಗಿದೆ. ಅವರು ಸೃಷ್ಟಿಸಿದ ಸನ್ನಿವೇಶಗಳ ವೈರುಧ್ಯ ನಿಜಕ್ಕೂ ಬೆರಗುಗೊಳಿಸುವಂಥದ್ದು... ಇವರ ಕಥೆಗಳು ನಮಗೆ ಮಾಸ್ತಿ-ಕಥೆಗಳಾಗಿಯೇ ಪ್ರಿಯವಾಗುತ್ತವೆ. ನಮ್ಮೊಂದಿಗೆ ಉಳಿಯುತ್ತವೆ.

ಮಾಸ್ತಿಯವರ ಪರಂಪರೆಯಲ್ಲಿ ಬಂದ ಸಮರ್ಥ ಕಥೆಗಾರರಲ್ಲಿ ಆನಂದರು ಅಗ್ರಗಣ್ಯರು. ಆದರೆ, ಮಾಸ್ತಿಯವರಲ್ಲಿದ್ದಷ್ಟು ಬಹುಮುಖತೆಯನ್ನು ಇವರಲ್ಲಿ ಕಾಣಲಾಗದು. ಇವರ ಕಥಾಜಗತ್ತು ಬಹು ಸೀಮಿತ. ಇವರ ಅನೇಕ ಕಥೆಗಳಲ್ಲಿ ಸರಸ ಶೃಂಗಾರದ ಸುಂದರ ಚಿತ್ರಗಳನ್ನು ಕಾಣಬಹುದು. ರಾಧೆಯ ಕ್ಷಮೆ, ಪದ್ಮಪಾಕ, ಸಂಸಾರ ಶಿಲ್ಪ, ಕಥೆಗಳು ದಾಂಪತ್ಯದ ಸುರಮ್ಯ ಜೀವನವನ್ನೇ ಎಳೆ ಎಳೆಯಾಗಿ ನಮ್ಮ ಕಣ್ಮುಂದೆ ಬಿಡಿಸುತ್ತಿವೆ. ಹೆಂಡತಿಯ ಕಾಗದ ಕಥೆಯಲ್ಲಿನ ಸಂವಾದ ವೈಖರಿ ನಿಜಕ್ಕೂ ಆನಂದರ ಮುದ್ರೆ ಎನಿಸುವಷ್ಟು ಚಿತ್ತಾಕರ್ಷಕವಾಗಿದೆ. ಹಾಸ್ಯ, ಕುತೂಹಲಕರವಾದ ಬೆಳವಣಿಗೆ ಮೋಹಕ ಪ್ರಣಯ ಇವರ ಕಥೆಗಳ ಜೀವನಾಡಿಗಳಾಗಿವೆ. ಇವರ ಅತ್ಯಂತ ಪ್ರಮುಖವಾದ ಕಥೆ ಎಂದರೆ ನಾನು ಕೊಂದ ಹುಡುಗಿ. ಇದರಲ್ಲಿ ಆನಂದರ ಮಾನವೀಯ ಅನುಕಂಪ ಅತ್ಯುನ್ನತ ಮಟ್ಟದಲ್ಲಿ ಅಭಿವ್ಯಕ್ತಿಗೊಂಡಿದೆ.

ಇದೇ ಸಂಪ್ರದಾಯದ ಮತ್ತೊಬ್ಬ ಕಥೆಗಾರ ಆನಂದ ಕಂಡ ಇಬ್ಬಣದ ದಿಬ್ಬಣ, ಜಾಡರ ಜಾಣಪ್ಪ, ನೇಯಕಲ್ಲು, ಮಲ್ಲಯ್ಯ ಮಹಾಭಾರತ, ದೆವ್ವದ ಸಂಸಾರ, ಇಲ್ಲೆಲ್ಲಾ ನೈಜವಾದ ಜೀವನಾನುಭವವಿದ್ದರೂ, ತಮ್ಮ ಸಹಜತೆಯ ಸೊಗಡಿನಿಂದ ಸೌಂದರ್ಯದಿಂದ ಓದುಗರ ಮನಸ್ಸನ್ನು ಸೆಳೆದರೂ ವಾಸ್ತವತೆ ವರದಿಯಾಗಿ ಕೆಲವೊಮ್ಮೆ ಕಲಾಕರ್ಷಣೆ ಕಳೆದುಕೊಳ್ಳುತ್ತದೆ.

ಗೊರೂರರು ಕನ್ನಡ ಕಥಾ ಜಗತ್ತು ಕಂಡ ಪ್ರಮುಖ ಕಥೆಗಾರರಲ್ಲಿ ಒಬ್ಬರು. ಶಿವರಾತ್ರಿ, ಬೆಸ್ತರ ಕರಿಯ, ವೈಯ್ಯಾರಿ, ಗರುಡಗಂಬದ ದಾಸಯ್ಯ, ಹಳ್ಳಿಯ ಚಿತ್ರಗಳು ಮೊದಲಾದ ಕಥೆಗಳಲ್ಲಿ ವಿಶಿಷ್ಟವಾದ ಹಾಸ್ಯ ಪ್ರಜ್ಞೆ ಇದೆ. ಹಳ್ಳಿಯ ಜೀವನದ ವಿವಿಧ ಮುಖಗಳ ಚಿತ್ರಣವಿದು. ಆರೋಗ್ಯಕರವಾದ ತಿಳಿಹಾಸ್ಯ ಇವರ ಕಥೆಗಳಲ್ಲಿ ಜುಳು ಜುಳು ನೀರಿನಂತೆ ಹರಿದಾಡಿದೆ. ಹೃದಯವನ್ನು ತಟ್ಟಿದೆ. ಕೆಲವೊಮ್ಮೆ ಕಥೆಗಳ ತೂಕ ಹಗುರವಾದರೂ ಓದುಗರನ್ನು ಸೆಳೆಯುವಲ್ಲಿ ಯಶಸ್ವಿಯಾಗುತ್ತಿವೆ.

ಶ್ರೀಪತಿ ಎಂಬ ಹೆಸರಿನಿಂದ ೧೩ ಕಥೆಗಳನ್ನಷ್ಟೆ ಆರ್.ಕೃಷ್ಣಶಾಸ್ತ್ರಿಗಳು ಬರೆದರೂ ಅಧ್ಭುತವಾದ ಜೀವನಾನುಭವದಿಂದ, ಸರಳವಾದ ಗಂಭೀರ ಶೈಲಿಯಿಂದ, ವ್ಯಾಪಕವಾದ ಸಾಹಿತ್ಯ ಅಧ್ಯಯನದಿಂದ ಸತ್ವಶಾಲಿಯಾದ ಕಥೆಗಳಾಗಿ ಇಂದಿಗೂ ಓದಿಸಲ್ಪಡುತ್ತವೆ.

ಕುವೆಂಪು ಅವರು ತೀರಾ ವಿರಳವೆನಿಸುವಷ್ಟು ಕಥೆಗಳನ್ನು ಬರೆದರೂ ಬಹುಮುಖ ಪ್ರತಿಭೆಯಿಂದ ಇಂದಿಗೂ ಜೀವಂತವಾಗಿವೆ. ಸಂನ್ಯಾಸಿ, ಮತ್ತು ಇವರ ಕಥೆಗಳು, ನನ್ನ ದೇವರು ಮತ್ತು ಇತರ ಕಥೆಗಳು ಎಂಬ ಎರಡೇ ಎರಡು ಕಥಾ ಸಂಕಲನಗಳನ್ನು ಕುವೆಂಪು ಪ್ರಕಟಿಸಿದ್ದಾರೆ. ಮೊದಮೊದಲ ಹಲವು ಕಥೆಗಳು ಅಸಹಜತೆಯಿಂದ, ಭಾವನಾವಶತೆಯಿಂದ ಬಳಲಿವೆ. ಇನ್ನೂ ಕೆಲವು ಕಥೆಗಳು ಸಮರ್ಥವಾಗಿವೆ. ಇವುಗಳಲ್ಲಿ ವಸ್ತುವೈಶಿಷ್ಟ್ಯ ವರ್ಣನಾ ವೈವಿಧ್ಯ, ನಿರೂಪಣಾ ವೈವಿಧ್ಯ, ರಸವೈವಿಧ್ಯಗಳೆಲ್ಲಾ ಮೇಳೈವಿಸಿವೆ. ಆದಾಗ್ಯೂ ಕುವೆಂಪು ಕಾದಂಬರಿಗಾರರಾಗಿ, ;ಕವಿಯಾಗಿ, ಮಹಾಕವಿಯಾಗಿ, ನಾಟಕರಾರರಾಗಿ, ವಿಮರ್ಶಕರಾಗಿ, ಯಶಸ್ವಿಯಾದಷ್ಟು, ಕಥೆಗಾರರಾಗಿ ಯಶಸ್ವಿಯಾಗಿಲ್ಲ ಎಂದೇ ಹೇಳಬೇಕು. ಇಷ್ಟು ಹೇಳಿಯೂ ಕುವೆಂಪು ಅವರ ಯಶಸ್ವಿ ಕಥೆಯಾಗಿ ದೆವ್ವದ ಕಾಟ, ನನ್ನ ದೇವರು, ಮೀನಾಕ್ಷಿ ಮನೆ ಮೇಷ್ಟರು ಕಾಣಸಿಗುತ್ತವೆ. ಅದರಲ್ಲೂ ಧನ್ವಂತರಿಯ ಚಿಕಿತ್ಸೆ ಕುವೆಂಪು ಕಥಾಲೋಕದ ಶೃಂಗ ಮಾತ್ರವಲ್ಲ. ಕನ್ನಡ ಕಥಾಸಾಹಿತ್ಯದ ಧೃವ ನಕ್ಷತ್ರವೂ ಹೌದು.

ಮಾಸ್ತಿ ಅವರ ಜಾಡಿನಲ್ಲಿಯೇ ಮುಂದುವರಿದ ಕೆ.ಗೋಪಾಲ ಕೃಷ್ಣರಾಯರು ನಲಿ, ಬಂಗಾರದ ಡಾಬು, ಉಡುಗೊರೆ ಎಂಬ ಕಥಾ ಸಂಕಲನಗಳನ್ನು ಬರೆದಿದ್ದಾರೆ. ಸರಳ, ಸುಂದರ, ನೇರ ಶೈಲಿ ಇದ್ದರೂ, ಶುದ್ಧ ಜೀವನ ದೃಷ್ಟಿ ಕಾಣಿಸಿದರೂ, ಬಹುಪಾಲು ಕಥೆಗಳಲ್ಲಿ ವಸ್ತುವಿನ ಗಟ್ಟಿತನವಿಲ್ಲ.

ಜೀವನದ ವಿಶಾಲವಾದ ಅರಿವು, ಅನುಭವಗಳನ್ನೇ ಬೆನ್ನೆಲುಬನ್ನಾಗಿಸಿಕೊಂಡು ಅಗಾಧ ಸಂಖ್ಯೆಯಲ್ಲಿ ಶ್ರೀ ಅಶ್ವಥರು ಕಥೆಗಳನ್ನು ಬರೆದಿದ್ದಾರೆ. ಆದರೆ, ಇವರಲ್ಲಿ ತಾಂತ್ರಿಕತೆಯ ಕಲೆಗಾರಿಕೆ ಸಿದ್ದಿಸಿಲ್ಲ. ಸಂಗ್ರಹಗುಣದ ಕೊರತೆ ಎದ್ದು ಕಾಣುತ್ತದೆ. ಕೆಲವೊಮ್ಮೆ ಕಥೆಗಳು ಅಡ್ಡಾದಿಡ್ಡಿಯಾಗಿ ಬೆಳೆದು, ಶಿಥಿಲ ಬಂಧದಿಂದ ಅಷ್ಟಾಗಿ ಯಶಸ್ವಿಯಾಗುವುದಿಲ್ಲ.

ಇದೇ ಅವಧಿಯಲ್ಲಿ ಬೇಂದ್ರೆ, ಪುತಿನ, ಪಡುಕೋಣೆ ರಮಾನಂದರಾಯರು, ಕೃಷ್ಣಕುಮಾರ ಕಲ್ಲೂರರು, ದೇವುಡು, ಕಾರಂತ, ಎಂವೀಸಿ, ಕ್ಷೀರಸಾಗರ, ಸೇಡಿಯಾಪು ಕೃಷ್ಣಭಟ್ಟ, ಮೊದಲಾದವರು ಕೆಲವು ಕಥೆಗಳನ್ನು ಬರೆದಿದ್ದರೂ, ಸಮರ್ಥ ಕಥೆಗಾರರಾಗುವಲ್ಲಿ ಎಡವಿದ್ದಾರೆ.

ಆದರೆ, ಇದೇ ಅವಧಿಯ ಕೊಡಗಿನ ಗೌರಮ್ಮ ಮಹಿಳಾ ಕಥೆಗಾರರಲ್ಲೇ ಮೊದಲಿಗರು. ಮಾತ್ರವಲ್ಲ ಕೇವಲ ಕೆಲವೇ ಕೆಲವು ಬೆರಳೆಣಿಕೆಯಷ್ಟು ಕಥೆಗಳನ್ನು ಬರೆದರೂ, ಕನ್ನಡ ಕಥಾಲೋಕದ ಮಹಾನ್ ನಕ್ಷತ್ರವಾಗಿ ಕೋರೈಸುತ್ತಾರೆ. ಹೆಣ್ಣಿನ ಬಾಳಿನ ಹಲವು ಮುಖಗಳನ್ನು ಸಾವಧಾನದಿಂದ, ತಾದಾತ್ಮ್ಯತೆಯಿಂದ ಮನೋಜ್ಞವಾಗಿ ಇವರು ಚಿತ್ರಿಸಿದ್ದಾರೆ.

ಪ್ರಗತಿಶೀಲರ ಸಂದರ್ಭದಲ್ಲಿ ಆ ಚಳುವಳಿಯ ಮುಖಂಡರಾಗಿದ್ದ ಅನಕೃ ಮಂಜು, ಕಿಡಿ, ಕಾಮನ ಸೋಲು, ಪಾಪ ಪುಣ್ಯ, ಶಿಲ್ಪಿ ಮೊದಲಾದ ೬ ಕಥಾ ಸಂಕಲನಗಳನ್ನು ಬರೆದಿದ್ದಾರೆ.

ಇವರಲ್ಲಿ ವಸ್ತು ವೈವಿಧ್ಯವಿದೆ, ಆಸಕ್ತಿ ಜನಕವಾದ ವೇಗಯುತವಾದ ಬರವಣಿಗೆ ಇದೆ. ಆದರೆ, ಇವರ ಕಾದಂಬರಿಗಳಲ್ಲಿ ಇರುವಂತೆ ಗುಣದೋಷಗಳು ಇಲ್ಲಿಯೂ ಸಿಗುತ್ತವೆ. ಕಲಾಕೌಶಲ್ಯಕ್ಕಿಂತ ಮಿಗಿಲಾಗಿ ಪ್ರಚಾರದ ಅಬ್ಬರವೇ ಓದುಗನನ್ನು ಸೆಳೆದುಬಿಡುತ್ತವೆ. ಒಟ್ಟಾರೆ, ಪ್ರಗತಿಶೀಲ ಚಳುವಳಿಯ ನೇತಾರರಾಗಿ, ಕನ್ನಡಕ್ಕೆ ಅಮೂಲ್ಯವಾದ ಕೊಡುಗೆ ಸಲ್ಲಿಸಿದ ಅನಕೃ ಸಮರ್ಥ ಕಥೆಗಾರರಾಗಿ ವಿಫಲರಾಗಿದ್ದಾರೆ.

ಇದೇ ಪಂಥದ ಜಾಡು ಹಿಡಿದು ಹೊರಟವರಲ್ಲಿ ತ.ರಾ.ಸು. ಅಗ್ರ ಗಣ್ಯರು. ಇವರಲ್ಲಿ ಆಳವಾದ ಪೃಥಕರಣೆ, ಜ್ವಲಂತವಾದ ನಿರೂಪಣೆ, ಹರಿತವಾದ ಮಾತು, ತೀವ್ರವಾದ ಸಂವೇದನೆ ಕಾಣಸಿಗುತ್ತದೆ. ಗಿರಿಮಲ್ಲಿಗೆಯ ನಂದನದಲ್ಲಿ ಒಂದು ಸಾರ್ಥಕ ಕತೆ. ಎಕ್ಸ್ ಮತ್ತು 0-0=0 ಎಂಬ ಕತೆಗಳು ಅತ್ಯುತ್ತಮವಾದವುಗಳು. 0-0=0 ಎಂಬ ಕಥೆಯಂತೂ ನವ್ಯಕತೆಗಳಿಗೆ ನಾಂದಿ ಹಾಡುವ ಕತೆಗಳಲ್ಲಿ ಒಂದು.

'ಕೊನೆಯ ಗಿರಾಕಿ' ಅಂತ ಒಂದು ಕಥಾ ರತ್ನವನ್ನು ಕನ್ನಡಕ್ಕೆ ಕೊಟ್ಟ ನಿರಂಜನರು ಪ್ರಗತಿಶೀಲರಲ್ಲಿ ಮಾತ್ರವಲ್ಲ ಇಡಿಯ ಕಥಾ ಲೋಕದಲ್ಲೇ ಬಹುದೊಡ್ಡ ಹೆಸರು.

ಗಿರಿಜಾ ಕಂಡ ಸಿನಿಮಾ, ಬರದ ದೇವಿ, ದೀಪಾವಳಿಯ ಕತ್ತಲೆ, ಬೂಟ್‌ಪಾಲಿಷ್, ಕಾರವಾನ್, ಗುಲಾಬಿ ಹೂ, ಆಗಸ್ಟ್ ಒಂಭತ್ತು ನಂತಹ ಸಮರ್ಥ ಕಥೆಗಳನ್ನು ಬರೆದು ತಮ್ಮಗೆ ವಿಶಿಷ್ಟ ಛಾಪನ್ನು ಮೂಡಿಸಿದವರೆಂದರೆ ಬಸವರಾಜ ಕಟ್ಟೀಮನಿ. ಪ್ರಾಮಾಣಿಕವಾದ ಸುಧಾರಣೆಯ ಧೀರ ಮನೋಭಾವ, ತೀವ್ರವಾದ ಸಮಕಾಲಿಕ ಪ್ರಜ್ಞೆ ಇವರಲ್ಲಿದೆ. ಕೃಷ್ಣಮೂರ್ತಿ ಪುರಾಣಿಕರು, ಕೂಲಿ ಚೆನ್ನಬಸಪ್ಪ, ಮೊದಲಾದವರೂ ಅನೇಕ ಕಥೆಗಳನ್ನು ಬರೆದಿದ್ದಾರೆ.

ಮಹಿಳಾ ಲೇಖಕಿಯರಲ್ಲಿ ಎಂ.ಕೆ.ಇಂದಿರಾ, ತ್ರಿವೇಣಿ, ಅನುಪಮ, ಸಾವಿತ್ರಮ್ಮ ಇವರು ಸಮರ್ಥ ಕಥೆಗಾರ್ತಿಯಾಗಿ, ಸ್ತ್ರೀ ಸಂವೇದನೆಯ ಹಿನ್ನೆಲೆಯಲ್ಲಿ ಬರೆದಿದ್ದಾರೆ. ಹೆಣ್ಣಿನ ಬಾಳಿನ ನೋವು-ನಲಿವುಗಳ ಚಿತ್ರಣವೇ ಇವರಲ್ಲಿ ಪ್ರಧಾನವಾಗಿರುವುದರಿಂದ ಜೀವನದ ವಿವಿಧ ಜಟಿಲತೆ, ಆಳವಾದ ಚಿಂತನೆ ಕಾಣಬರುವುದಿಲ್ಲ.

ಗ್ರಾಮೀಣ ಜೀವನವನ್ನೇ ತಮ್ಮ ಕಥೆಗಳಲ್ಲಿ ಸಮರ್ಥವಾಗಿ ಚಿತ್ರಿಸುವತ್ತ ಗಮನ ಹರಿಸಿದವರೆಂದರೆ ಜೀ.ಶಂ.ಪ., ಭಾರತೀಸುತ, ಸುಧಾಕರ, ಬೆಸಗರಹಳ್ಳಿ ರಾಮಣ್ಣ.

ನವ್ಯದ ಸಂದರ್ಭದಲ್ಲಿ ಯಶವಂತ ಚಿತ್ತಾಲ, ಯು.ಆರ್.ಅನಂತಮೂರ್ತಿ, ಲಂಕೇಶ, ಶಾಂತಿನಾಥ ದೇಸಾಯಿ, ಸದಾಶಿವ, ರಾಮಚಂದ್ರ ಶರ್ಮ, ತೇಜಸ್ವಿ, ಟಿ.ಜಿ.ರಾಘವ, ಅವರು ಹೆಸರಿಸತಕ್ಕವರು.

ಅನಂತ ಮೂರ್ತಿಯವರ'ಎಂದೆಂದೂ ಮುಗಿಯದ ಕತೆ', ಲಂಕೇಶರ 'ಕೆರೆಯ ನೀರನು ಕೆರೆಗೆ ಚೆಲ್ಲಿ', ನಾನಲ್ಲೆ, ಶಾಂತಿನಾಥದೇಸಾಯಿ ಅವರ'ಕ್ಷಿತಿಜ' 'ಮಂಜುಗೆಡ್ಡೆ', ರಾಮಚಂದ್ರಶರ್ಮರ

ಸೆರಗಿನ ಕೆಂಡ, ಏಳನೆಯ ಜೀವ, ಸದಾಶಿವರ ನಲ್ಲಿಯಲ್ಲಿ ನೀರು ಬಂತು, ಟಿ.ಜಿ.ರಾಘವ ಅವರ ಜ್ವಾಲ ಅರಿತು ಮೊದಲಾದವು ಇಲ್ಲಿ ಉಲ್ಲೇಖಾರ್ಹವಾದ ಯಶಸ್ವಿ ಕಥೆಗಳು.

ಇತ್ತೀಚೆಗಿನ ದಲಿತ-ಬಂಡಾಯದ ಸಂದರ್ಭದಲ್ಲಿ ರೊಚ್ಚು ವೇಷಗಳೇ ಪ್ರಧಾನವಾಗಿ ಕಾಣಬರುತ್ತಿವೆ. ದೇವನೂರು ಮಹಾದೇವ ಅವರು ಈ ನಿಟ್ಟಿನಲ್ಲಿ ಹೆಸರಿಸಹುದಾದ ಅತ್ಯಂತ ಯಶಸ್ವಿ ಕಥೆಗಾರರು. ಕೆಲವೇ ಕೆಲವು ಬೆರಳೆಣಿಕೆಯಷ್ಟು ಕಥೆಗಳನ್ನು ಬರೆದಿದ್ದರೂ ಅತ್ಯಂತ ಸಮರ್ಥವಾದ ಕಥೆಗಾರರಾಗಿದ್ದಾರೆ. ಸಮಕಾಲೀನ ಸಂದರ್ಭದಲ್ಲಿ ಯಾವುದೇ ನಿರ್ದಿಷ್ಟ ಚಳುವಳಿಯ ಹಿನ್ನೆಲೆಯಲ್ಲಿ ಪ್ರವಾಹದೋಪಾದಿಯಲ್ಲಿ ಕಥೆಗಾರರು ಬಾರದಿದ್ದರೂ, ತೀರಾ ಸಂಕೀರ್ಣವಾದ ಕಥೆಗಳು ಬಂದಿವೆ ಬರುತ್ತಿವೆ. ಅವುಗಳನ್ನು ಒರೆಗಚ್ಚು ಕೆಲಸವಾಗಬೇಕಿದೆ. ಆದಾಗ್ಯೂ ಇವರಲ್ಲಿ ಜಾಗತೀಕರಣದ ಪ್ರಭಾವ, ಆಧುನಿಕ ಜೀವನ ರೀತಿ-ನೀತಿಗಳ ಕುರಿತಾದ ಕಥೆಗಳೇ ಸಾಕಷ್ಟಿವೆ. ನಗರಗಳಲ್ಲಿ ನೆಲೆಸಿದ ಯುವ ತರುಣ-ತರುಣಿಯರು ಕಥೆಗಾರರು ಗ್ರಾಮೀಣ ಜೀವನದ ಸೊಗಡನ್ನು ಬೆಳೆಸುವ ಪ್ರಯತ್ನ ಕಂಡುಬಂದರೂ, ಅನುಭವದ ಕೊರತೆ ಎದ್ದು ಕಾಣುತ್ತಿದೆ. ಇವೆಲ್ಲಕ್ಕಿಂತ ಮಿಗಿಲಾಗಿ ಕಥೆಗಳನ್ನು ಓದುವ, ಅಧ್ಯಯನಿಸುವ ಪ್ರವೃತ್ತಿಯೇ ಕಡಿಮೆಯಾಗುತ್ತಿದೆ. ಜಾಗತೀಕರಣದ ಈ ಸಂದರ್ಭದಲ್ಲಿ ಆಧುನಿಕ ಜೀವನದ ವೇಗವಾದ ಪಯಣದಲ್ಲಿ, ಟಿ.ವಿ.ವಾಹಿನಿಗಳ ಅಬ್ಬರದಲ್ಲಿ, ನಕಲಿ ಚಳುವಳಿಗಳ ಭ್ರಮನಿರಸನ ರಾಜಕೀಯದ ಮಧ್ಯದಲ್ಲಿ ಕಥೆಗಳನ್ನು ಓದುವ, ಅವನ್ನು ಅಧ್ಯಯನಿಸುವ ಪ್ರವೃತ್ತಿಯ ಕೊರತೆಯಿಂದಾಗಿ ಕೇವಲ ಕಥಾಜಗತ್ತು ಮಾತ್ರವಲ್ಲ ಸಾಹಿತ್ಯದ , ಸಾಂಸ್ಕೃತಿಕ ರಂಗವೇ ಕಳಾಹೀನವಾಗಿದೆ.

೪.ಮನೋವಿಜ್ಞಾನದ ಹಿನ್ನೆಲೆ

ಇಂದಿನ ಮಾಹಿತಿ ತಂತ್ರಜ್ಞಾನ ಯುಗದ ಮಾನವನು ಅನ್ವೇಷಣೆಯ ಮಾರ್ಗದಲ್ಲಿ ಅತ್ಯದ್ಭುತವಾದ ಪ್ರಗತಿಯನ್ನು ಸಾಧಿಸುತ್ತಾ ಮುನ್ನಡೆದಿದ್ದಾರೆ. ಆಡುಮುಟ್ಟದ ಸೊಪ್ಪಿಲ್ಲ, ಇಂದಿನ ಮಾನವನು ಕೈ ಹಾಕದ ಕ್ಷೇತ್ರವಿಲ್ಲ. ಅವನು ಪ್ರಪಂಚವನ್ನು ಅತಿ ಸಣ್ಣದಾಗಿಸಿದ್ದಾನೆ. ಚಂದ್ರಗ್ರಹದ ಮೇಲೆ ಕಾಲೂರಿ ವಿಕ್ರಮವನ್ನು ಸಾಧಿಸಿದ್ದಾನೆ. ಇದೆಲ್ಲವನ್ನು ಗಮನಿಸಿದಾಗ ಮಾನವನು ಕ್ಷಿಪ್ರಗತಿಯಲ್ಲಿ ಎಷ್ಟೊಂದು ಪ್ರಗತಿಯನ್ನು ಸಾಧಿಸಿದ್ದಾನೆಂಬುದು ತಿಳಿದುಬರುವುದು. ಇವುಗಳನ್ನು ಮಾನವನ ವರ್ತನೆಯ ವಿವಿಧ ಮುಖಗಳು ಎಂದು ಹೇಳಬಹುದು. ಇಂತಹ ವರ್ತನೆಗೆ ಕಾರಣವಾಗುವುದು ಯಾವುದು ಎಂಬುದನ್ನು ಅಧ್ಯಯನ ಮಾಡುವುದು ಮನೋವಿಜ್ಞಾನ.

ಮನೋವಿಜ್ಞಾನ ಪದವನ್ನು ಇಂಗ್ಲೀಷಿನ Psychology ಎಂಬ ಪದಕ್ಕೆ ಸಮನಾಗಿ ಬಳಸಲಾಗುತ್ತಿದೆ. ಈ ಇಂಗ್ಲೀಷಿನ ಪದವು ಗ್ರೀಕ್ ಭಾಷೆಯ ಪದಗಳಾದ Psyche ಮತ್ತು Logos ಎಂಬ ಪದಗಳಿಂದ ಬಂದಿದೆ. ಸೈಕಿ ಎಂದರೆ ಆತ್ಮ, ಲಾಗೋಸ್ ಎಂದರೆ ಅಧ್ಯಯನ, ಅದರ ಶಬ್ಧಶಃ ಅರ್ಥ ಆತ್ಮದ ಅಧ್ಯಯನ ಅಥವಾ ಆತ್ಮದ ವಿಜ್ಞಾನ Psychology ಎಂಬ ಪದವನ್ನು ಮೊದಲಿಗೆ ರುಡೋಲ್ಫ್ ಗೋಯಕ್ಸ್ ೧೫೯೦ ರಲ್ಲಿ ಬಳಸಿದನು.

೧೯ನೇ ಶತಮಾನದ ಮೊದಲಿಗೆ ವಿಜ್ಞಾನದ ವಿಷಯಗಳು ಸ್ವಲ್ಪಮಟ್ಟಿಗೆ ತತ್ವಶಾಸ್ತ್ರದಲ್ಲಿಯೇ ಅಧ್ಯಯನವಾಗುತ್ತಿದ್ದವು. ಏಕೆಂದರೆ ಆತ್ಮ ಮತ್ತು ಮನಸ್ಸು ಎನ್ನುವಂತಹ ವಿಷಯಗಳು ತತ್ವಶಾಸ್ತ್ರಕ್ಕೆ ಬಹಳ ಹತ್ತಿರದ ವಿಷಯಗಳಾಗಿದ್ದವು. ಮನೋವಿಜ್ಞಾನವೆಂದರೆ ಆತ್ಮ ಮತ್ತು ಮನಸ್ಸಿನ ಅರ್ಥವೆಂದು ತಪ್ಪಾಗಿ ಗ್ರಹಿಕೆಯಾದ್ದರಿಂದ ತತ್ವಶಾಸ್ತ್ರದ ಒಂದು ಭಾಗವಾಗಿಯೇ ಅಧ್ಯಯನ ಮಾಡಲ್ಪಡುತ್ತಿತ್ತು. ಮನೋವಿಜ್ಞಾನವೆಂದರೆ ಮಂತ್ರವಿದ್ಯೆಯೆಂದೂ. ಭೂತ ಪಿಶಾಚಿಗಳಿಗೆ ಸಂಬಂಧಿಸಿದ ವಿಷಯವೆಂದು ಶಂಕಿಸಲಾಗಿತ್ತು.

ಪ್ಲೇಟೋನಿಂದ ಡೆಕಾರ್ಚೆ ಕಾಲದವರೆಗೂ ಮನೋವಿಜ್ಞಾನ ಆತ್ಮವನ್ನು ಪರಿಶೋಧಿಸುವ ವಿಜ್ಞಾನವೆಂದು ಗುರುತಿಸಲಾಗಿತ್ತು. ಇದು ಆ ಕಾಲಕ್ಕೆ ಸಾಮಾನ್ಯವಾದ ವ್ಯಾಖ್ಯಾನವಾಗಿತ್ತು. ಕಾಲ ಕಳೆದಂತೆ ಈ ರೀತಿಯ ವ್ಯಾಖ್ಯಾನಕ್ಕೆ ಟೀಕೆಗಳು ಎದುರಾಗತೊಡಗಿದವು. ಈ ಟೀಕೆ-ಟಿಪ್ಪಣಿಗಳಿಗೆ ಸರಿಯಾದ ಉತ್ತರವು ದೊರೆಯದಿದ್ದಾಗ ವ್ಯಾಖ್ಯಾನಕಾರರು ತಮ್ಮ ವಾದವನ್ನು ಕೈಬಿಡಬೇಕಾಯಿತು.

ಆ ಟೀಕಾಕಾರರ ನಾಯಕನಾದ ಕೆಂಟನ ಆತ್ಮ ಎಂದರೇನು? ಅದು ದೇಹದ ಯಾವ ಭಾಗದಲ್ಲಿದೆ? ಅದರ ಕಾರ್ಯಗಳೇನು? ಅದರ ಆಕಾರವೆಂತಹದು? ಅದರ ಗುಣಲಕ್ಷಣಗಳೇನು? ಅದರ ಸ್ವರೂಪವೆಂಥಹುದು? ಅದು ಕಣ್ಣಿಗೆ ಗೋಚರಿಸುತ್ತದೆಯೋ? ಮುಂತಾದ ಪ್ರಶ್ನೆಗಳನ್ನು ಹಾಕಿದನು. ಆಗ ಮನೋವಿಜ್ಞಾನವು ಆತ್ಮದ ವಿಜ್ಞಾನವೆಂದು ಕರೆಯುತ್ತಿದ್ದ ವ್ಯಾಖ್ಯಾನಕಾರರು ಕೆಂಟನ ಪ್ರಶ್ನೆಗಳಿಗೆ ಸಮಂಜಸವಾಗಿ ಉತ್ತರಿಸುವಲ್ಲಿ ಅಸಮರ್ಥರಾದರು. ಇದರಿಂದಾಗಿ ಕೆಂಟನು ವ್ಯಾಖ್ಯಾನಕಾರರ ವಾದವು ಸುಳ್ಳು ಎಂಬ ತೀರ್ಮಾನಕ್ಕೆ ಬಂದನು. ಈ ತೀರ್ಮಾನವು ಉಳಿದ ಮನೋವಿಜ್ಞಾನಿಗಳಿಂದಲೂ ಸಮರ್ಥಿಸಲ್ಪಟ್ಟಿತು. ಹೀಗೆ ಮನೋವಿಜ್ಞಾನಕ್ಕೆ ಮೊದಲು ತನ್ನ ಆತ್ಮವನ್ನು ಕೆಂಟನ ಕೈಯಿಂದ ಕಳೆದುಕೊಳ್ಳುವ ಪ್ರಸಂಗ ಒದಗಿ ಬಂದಿತು.

ಹೀಗೆ ತನ್ನ ಆತ್ಮವನ್ನು ಕಳೆದುಕೊಂಡ ಮನೋವಿಜ್ಞಾನವು ಮನಸ್ಸನ್ನು ಕುರಿತು ಶಾಸ್ತ್ರವಾಗಿ ಪರಿವರ್ತನೆಗೊಂಡಿತು. ೧೭ನೇ ಶತಮಾನದ ತತ್ವಜ್ಞಾನಿ ರೇನೆ ಡೆಕಾರ್ಟ ಮನಸ್ಸು ಮತ್ತು ದೇಹಗಳ ನಡುವಿನ ವ್ಯತ್ಯಾಸವನ್ನು ವಿವರಿಸಿದ. ಮನಸ್ಸು ಯೋಚನೆಯ ಲಕ್ಷಣವನ್ನು ಹೊಂದಿದ್ದರೆ, ಅದು ಕಾರ್ಯರೂಪಕ್ಕೆ ಬರುವ ವ್ಯಾಪ್ತಿಯನ್ನು, ವಿಸ್ತೀರ್ಣತೆಯನ್ನು ದೇಹ ಲಕ್ಷಣವಾಗಿ ಹೊಂದಿದೆ ಎಂಬ ಅಭಿಪ್ರಾಯ ಹೊಂದಿದ್ದನು. ಆದರೆ ಈ ಹೇಳಿಕೆಗೂ ಸಹಿತ ಆತ್ಮಕ್ಕೆ ಯಾವ ರೀತಿಯ ಪ್ರತಿಕ್ರಿಯೆ ಬಂದಿತ್ತೋ ಅದೇ ರೀತಿಯ ಪ್ರತಿಕ್ರಿಯೆ ಬಂದಿತು. ಈ ಪ್ರತಿಕ್ರಿಯೆ ನೀಡಿದವರಲ್ಲಿ ಪ್ರಮುಖರು ಜೆ.ಬಿ.ವ್ಯಾಟ್ಸನ್, ಯಾಕೆಂದರೆ ಆತ್ಮದಂತೆಯೇ ಆದಿ ಭೌತಿಕ ವಸ್ತು ಸೂಚಕವಾಗಿರುವ ಮನಸ್ಸು ಮತ್ತು ದೇಹದ ಸಂಬಂಧವನ್ನು ಇದಮಿತ್ಥಂ ಎಂದು ವಸ್ತುನಿಷ್ಠವಾಗಿ ವಿವೇಚಿಸುವುದು, ಪ್ರಯೋಗಕ್ಕೊಳಪಡಿಸುವುದು ದುಸ್ಸಾಧ್ಯ. ಆದ್ದರಿಂದ ಮನೋವಿಜ್ಞಾನವು ಮನಸ್ಸಿನ ವಿಜ್ಞಾನವೆಂಬ ವಾದವು ತಿರಸ್ಕರಿಸಲ್ಪಟ್ಟಿತು. ಈ ರೀತಿಯಾಗಿ ಮನೋವಿಜ್ಞಾನವು ತನ್ನ ಮನಸ್ಸನ್ನು ವ್ಯಾಟ್ಸನ್‌ನಿಂದ ಕಳೆದುಕೊಂಡಿತು.

ತನ್ನ ಮನಸ್ಸನ್ನು ಕಳೆದುಕೊಂಡ ಮನೋವಿಜ್ಞಾನವು ಜರ್ಮನಿಯ ದೇಹಶಾಸ್ತ್ರಜ್ಞ ಮತ್ತು ತತ್ವಶಾಸ್ತ್ರಜ್ಞನಾದ ವ್ಹಿಲ್ ಹೆಲ್ಮ್ ವೂಂಟ್ ಮತ್ತು ಇತರ ವಿಜ್ಞಾನಿಗಳ ಪ್ರಕಾರ, ಪ್ರಜಾನುಭವದ ವಿಜ್ಞಾನವಾಗಿ ಪರಿವರ್ತನೆ ಹೊಂದಿತು. ಪ್ರಜ್ಞಾನುಭವವೆಂದರೆ ಜಾಗ್ರತವಾಗಿರುವುದು, ವೂಂಟ್‌ರವರ ಪ್ರಕಾರ ರಚನಾಂಶಗಳಿರುವ ಸಂವೇದನೆಗಳು, ಮನೋಪ್ರತಿಮೆಗಳು, ಮತ್ತು ಭಾವಾನುಭವಗಳನ್ನು ಸ್ವಯಂ ಅವಲೋಕಿಸಿ, ವಿಶ್ಲೇಷಿಸಿ, ತನ್ಮೂಲಕ ಪ್ರಜ್ಞಾನುಭವ ತತ್ವ ರೂಪಿಸಲು ಸಾಧ್ಯವೆಂದಿದ್ದಾರೆ.

ಈ ಆಯಾಮವನ್ನು ಮನೋವಿಜ್ಞಾನಕ್ಕೆ ತಂದುಕೊಟ್ಟ ಶ್ರೇಯಸ್ಸು ರಚನಾವಾದಿಯಾದ ಇ.ಬಿ.ಟಿಚ್ನರ್ ನಿಗೆ ಸಲ್ಲುತ್ತದೆ. ಪ್ರಜ್ಞಾನುಭವವೆಂದರೆ ಎಚ್ಚರದಿಂದ ಇರುವುದ ಅಥವಾ ಜಾಗ್ರತಾವಸ್ಥೆಯಲ್ಲಿರುವುದೆಂದರ್ಥ. ಪ್ರಜ್ಞಾನುಭವವೆಂಬುದು ಸಹ ಸಂಕುಚಿತಾರ್ಥವನ್ನು ಹೊಂದಿದೆ. ಇದು ಮನಸ್ಸಿನ ಪೂರ್ಣಚಿತ್ರಣವನ್ನು ಪಡೆಯುವುದಿಲ್ಲವೆಂದು ಅಭಿಮತಕ್ಕೆ ಬರಲಾಯಿತು. ಇಲ್ಲಿ ನಮ್ಮ ಅರೆಪ್ರಜ್ಞಾನುಭವ ಶೈಶವಾವಸ್ಥೆ ಮತ್ತು ಅಪ್ರಜ್ಞಾನುಭವ ಗಮನಿಸಲಿಲ್ಲವೆಂದು ನಂತರದವರ ಅಭಿಮತವಾಗಿತ್ತು. ಈ ವ್ಯಾಖ್ಯೆಯ ನಿರಾಕರಣೆಗೆ ಮನೋವಿಜ್ಞಾನಿಗಳು ನೀಡಿರುವ ಪ್ರಮುಖ ಕಾರಣಗಳೆಂದರೆ, ಅಧ್ಯಯನದ ವಿಧಾನವಾದ ಅಂತರಾವಲೋಕನದಿಂದ ಅರ್ಥೈಸಿಕೊಳ್ಳುವ ಪ್ರಜ್ಞಾನುಭವದ ವ್ಯವಸ್ಥಿತ ಜ್ಞಾನದಿಂದ ಬೇರೊಬ್ಬರ ಪ್ರಜ್ಞಾನುಭವದ ಬಗ್ಗೆ ಸಾಮಾನ್ಯೀಕರಿಸಲು ಸಾಧ್ಯವಿಲ್ಲ. ಪ್ರಜ್ಞಾನುಭವದ ಜೊತೆಗೆ ವ್ಯಕ್ತಿಯ ಸುಪ್ತಾವಸ್ಥೆಯ ಅನುಭವಗಳನ್ನು ಅರಿಯುವುದು ಅಗತ್ಯ. ಇದು ಅನುಭವದ ಎಲ್ಲ ಮಗ್ಗಲುಗಳನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುವುದಿಲ್ಲ. ಪ್ರಾಣಿಗಳ, ಅಪಸಾಮಾನ್ಯರ ಹಾಗೂ ಮಕ್ಕಳ ಪ್ರಜ್ಞಾನುಭವದ ಅಧ್ಯಯನ ಅಂತರಾವಲೋಕನದಿಂದ ಸಾಧ್ಯವಿಲ್ಲ. ಈ ಎಲ್ಲ ಕಾರಣಗಳಿಂದಾಗಿ ಮನೋವಿಜ್ಞಾನಕ್ಕೆ ಪ್ರಮುಖವಾಗಿ ಸಿಗ್ಮಂಡ್ ಫ್ರಾಯ್ಡ್ ನಿಂದ ತನ್ನ ಪ್ರಜ್ಞೆಯನ್ನು ಕಳೆದುಕೊಳ್ಳುವ ದುಸ್ಥಿತಿ ಒದಗಿ ಬಂದಿತು. ವೆಲ್ಸಬರಿ ಮತ್ತು ವುಡ್‌ವರ್ಥ್ ಅವರ ಪ್ರಕಾರ ಮನೋವಿಜ್ಞಾನವು ವ್ಯಕ್ತಿಯ ಚಟುವಟಿಕೆಗಳನ್ನು ಪರಿಸರದೊಂದಿಗೆ, ವೈಜ್ಞಾನಿಕವಾಗಿ ಅಧ್ಯಯನ ಮಾಡುವುದು ಮತ್ತು ಜೀವನದ ಪ್ರತಿಯೊಂದ ಕ್ರಿಯೆ ಇಲ್ಲವೆ ಚಟುವಟಿಕೆಯ ವರ್ತನೆಯಾಗುವುದೆಂದು ವಿವರಣೆ ನೀಡಿದ್ದಾರೆ.

ಈ ಸಂದರ್ಭದಲ್ಲಿ ವುಡ್‌ವರ್ಥ್ ರವರು ಮನೋವಿಜ್ಞಾನವನ್ನು ಕುರಿತು ಈ ರೀತಿಯಾಗಿ ಹೇಳಿದ್ದಾರೆ. ಮನೋವಿಜ್ಞಾನವು ಮೊದಲು ಅದರ ಆತ್ಮವನ್ನು ಕಳೆದುಕೊಂಡಿತು. ನಂತರ ತನ್ನ ಮನಸ್ಸನ್ನು ಕಳೆದುಕೊಂಡಿತು. ಅನಂತರ ಅದು ತನ್ನ ಪ್ರಜ್ಞೆಯನ್ನು ಕಳೆದುಕೊಂಡಿತು. ಆದಾಗ್ಯೂ ಅದು ಒಂದು ವಿಧವಾದ ವರ್ತನೆಯುಳ್ಳದ್ದಾಗಿದೆ.

ಮನೋವಿಜ್ಞಾನವು ಭೌತಶಾಸ್ತ್ರ, ರಾಸಾಯನಶಾಸ್ತ್ರ, ಗಣಿತಗಳಂತೆ ನಿಖರವಾದ ವಿಜ್ಞಾನವಲ್ಲ. ಇದು ಜೀವಿಗಳ ವರ್ತನೆಯನ್ನು ಕುರಿತು ತಿಳಿಸುವ ವಿಜ್ಞಾನವಾಗಿದೆ. ವರ್ತನೆಯು ಪೂರ್ಣವಾಗಿ ಅದ್ವಿತೀಯವಾದುದು ಮತ್ತು ವರ್ತನೆಯ ಮುನ್ಸೂಚನೆಯನ್ನು ನಿಖರವಾಗಿ ಊಹಿಸಲಿಕ್ಕಾಗದು. ಜೀವಿಗಳ ವರ್ತನೆಯಲ್ಲಿ ಸ್ಥಿರತೆಯಿರುವುದಿಲ್ಲ. ಅದು ಯಾವಾಗಲೂ ನಿತ್ಯ ಗತಿಶೀಲವಾದುದು. ಮತ್ತೊಂದು ದಿಸೆಯಲ್ಲಿ ಪ್ರಾಕೃತಿಕ ವಿಜ್ಞಾನವನ್ನು ಅವಲೋಕಿಸಿದಾಗ ಅದು ಯಾವಾಗಲೂ ಭವಿಷ್ಯವನ್ನು ಸೂಚಿಸುವಂತಹುದಾಗಿದೆ. ಪ್ರಾಕೃತಿಕ ವಿಜ್ಞಾನಗಳು ಹೆಚ್ಚಿನ ನಿಖರತೆ, ಸತ್ಯತೆ, ವಿಶ್ವಾಸನೀಯತೆ ಮತ್ತು ಸಿಂಧುತ್ವವನ್ನು ಹೊಂದಿವೆ. ಮನೋವಿಜ್ಞಾನವು ಇವುಗಳಂತೆ ನಿಖರತೆ ಹೊಂದಿಲ್ಲ. ಅವುಗಳನ್ನು ಹೊಂದಲು ಪ್ರಯತ್ನಿಸುತ್ತದೆ. ಈ ಮೇಲಿನ ಎಲ್ಲಾ ಹೇಳಿಕೆಗಳನ್ನು ಅವಲೋಕಿಸಿದಾಗ ಮನೋವಿಜ್ಞಾನವು ಒಂದು ಬೆಳವಣಿಗೆ ಹಂತದಲ್ಲಿರುವ ಜೀವಿಸುವ ಜೀವಿಗಳ ವರ್ತನೆಯನ್ನು ಅಧ್ಯಯನಗೈಯ್ಯುವ ನಿಶ್ಚಿತ ಮತ್ತು ನಿಖರತೆಯನ್ನು ಹೊಂದಿದ ವಿಜ್ಞಾನವೆಂದು ಹೇಳಬಹುದು

ಅನೇಕ ಮನೋವಿಜ್ಞಾನಿಗಳು ಮನೋವಿಜ್ಞಾನದ ಅರ್ಥವನ್ನು ವೈಜ್ಞಾನಿಕ ರೀತಿಯಲ್ಲಿ ವ್ಯಾಖ್ಯಾನಿಸಲು ಪ್ರಯತ್ನಿಸಿದ್ದಾರೆ. ಅವುಗಳು ಇಂತಿವೆ.

೧. ಕ್ರೋ ಮತ್ತು ಕ್ರೋ : ಸಂಕ್ಷಿಪ್ತವಾಗಿ ಹೇಳುವುದಾದರೆ, ''ಮನೋವಿಜ್ಞಾನವು ಮಾನವನ ವರ್ತನೆ ಮತ್ತು ಮಾನವನ ಆಂತರ ಸಂಬಂಧಗಳ ಅಧ್ಯಯನವಾಗಿದೆ.''

೨. ಈ.ಜಿ.ಬೋರಿಂಗ್: ''ಮಾನವನ ಸ್ವಭಾವದ ಅಧ್ಯಯನವೇ ಮನೋವಿಜ್ಞಾನ.''

೩. ವುಡ್‌ವರ್ಥ್ ಮತ್ತು ಮಾರ್ಕ್ವಿಸ್ : ''ಪರಿಸರಕ್ಕೆ ಸಂಬಂಧಿಸಿದಂತೆ ವ್ಯಕ್ತಿಯ ಚಟುವಟಿಕೆಗಳ ವೈಜ್ಞಾನಿಕ ಅಧ್ಯಯನವೇ ಮನೋವಿಜ್ಞಾನ''.

೪. ಮ್ಯಾಕ್‌ಡ್ಯೂಗಲ್ : ''ನಡತೆ ಮತ್ತು ವರ್ತನೆಗಳ ಸ್ಪಷ್ಟವಾದ ವಿಜ್ಞಾನವೇ ಮನೋವಿಜ್ಞಾನ.''

೫. ಎಸ್.ಎಲ್.ಮನ್ : ''ವರ್ತನೆಗಳನ್ನು ಅನುಭವದ ದೃಷ್ಟಿಕೋನದಿಂದ ಅಧ್ಯಯನ ಮಾಡುವ ಧನಾತ್ಮಕ ವಿಜ್ಞಾನವೇ ಮನೋವಿಜ್ಞಾನ''.

೬. ಸಿ.ವಿ.ಗುಡ್ : ''ಬದಲಾಗುತ್ತಿರುವ ಪರಿಸರದೊಂದಿಗೆ ಮಾನವನು ಮಾಡಿಕೊಳ್ಳುವ ಹೊಂದಾಣಿಕೆಯ ಅಧ್ಯಯನವನ್ನು ಮನೋವಿಜ್ಞಾನ ಎಂದು ಕರೆಯಬಹುದು''.

೭. ಹೆಚ್.ಇ.ಗ್ಯಾರೆಟ್ : ''ಬೌದ್ಧಿಕ ಮತ್ತು ದೈಹಿಕವಾಗಿ ಸಾಮಾನ್ಯ ಮತ್ತು ಅಪಸಾಮಾನ್ಯ ಸ್ಥಿತಿಯಲ್ಲಿ ಮಗು ಮತ್ತು ಮನುಷ್ಯರ ವರ್ತನೆಯನ್ನು ಅಧ್ಯಯನ ಮಾಡುವುದೇ ಮನೋವಿಜ್ಞಾನ''.

೮. ಡೆಕ್ಸ್‌ಟರ್ ಮತ್ತು ಗಾರ್ಲಿಕ್ : ''ಮನೋವಿಜ್ಞಾನವು ವ್ಯಕ್ತಿಯ ಮಾನಸಿಕ ಕ್ರಿಯೆಗಳನ್ನು ವರ್ಣಿಸುವ, ವರ್ಗೀಕರಿಸುವ ಮತ್ತು ವಿವರಿಸುವ ವಿಜ್ಞಾನವಾಗಿದೆ''.

೯. ಕಾಫ್ಕ: ''ಬಾಹ್ಯ ಪ್ರಪಂಚದೊಂದಿಗೆ ಸಂಬಂಧ ಹೊಂದಿರುವ ಸಜೀವಿಗಳ ಚಟುವಟಿಕೆಯ ಮರ್ತನೆಯ ವೈಜ್ಞಾನಿಕ ಅಧ್ಯಯನವೇ ಮನೋವಿಜ್ಞಾನ''.

೧೦. ವಿಲಿಯಂ ಜೇಮ್ಸ್ : ''ಪ್ರಜ್ಞಾವಸ್ಥೆಯ ನಿರೂಪಣೆ ಮತ್ತು ವಿವರಣೆಯೇ ಮನೋವಿಜ್ಞಾನ''

೧೧. ಇ. ವ್ಯಾಟ್ಸನ್ : ''ಮನೋವಿಜ್ಞಾನವು ವರ್ತನೆಯ ಧನಾತ್ಮಕ ವಿಜ್ಞಾನವಾಗಿದೆ''.

೧೨. ಜಾನ್‌ಡ್ಯೂಯಿ : ''ಆತ್ಮದ ಪ್ರಕ್ರಿಯಾ ನಿರೂಪಣೆಯ ವಿಜ್ಞಾನವೇ ಮನೋವಿಜ್ಞಾನವಾಗಿದೆ''

೧೩. ಸಿ.ಇ.ಸ್ಕಿನ್ನರ್ : ''ಬದುಕು ಪ್ರತ್ಯಕ್ಷೀಕರಿಸುವ ಎಲ್ಲ ಬಗೆಯ ಸನ್ನಿವೇಶಗಳಿಗೆ ತೋರುವ ಪ್ರತಿಕ್ರಿಯೆಯನ್ನು ಕುರಿತು ಅಭ್ಯಸಿಸುವುದೇ ಮನೋವಿಜ್ಞಾನ''.

ಮೇಲಿನ ವ್ಯಾಖ್ಯೆಗಳನ್ನು ಗಮನಿಸಿದಾಗ ಮನೋವಿಜ್ಞಾನವು ಜೀವಿಗಳ ವರ್ತನೆಗಳನ್ನು ಸದಾಕಾಲದಲ್ಲಿ ವೈಜ್ಞಾನಿಕವಾಗಿ ಅಧ್ಯಯನ ಮಾಡುತ್ತದೆ ಎಂದು ತಿಳಿದುಬರುತ್ತದೆ. ಜೀವಿಗಳು ಏನು ಮಾಡುತ್ತಾರೆ? ಹೇಗೆ ಮಾಡುತ್ತಾರೆ? ಏಕೆ ಮಾಡುತ್ತಾರೆ? ಎಂಬ ಹಲವಾರು ಪ್ರಶ್ನೆಗಳಿಗೆ ಉತ್ತರಿಸುತ್ತದೆ. ಜೀವಿಯನ್ನು ಸಮಗ್ರವಾಗಿ ನೋಡಿ ಅದರ ವರ್ತನೆಯನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳಲು ಮತ್ತು ನಿಯಂತ್ರಣದಲ್ಲಿಡಲು ಸಹಾಯ ಮಾಡುವುದೇ ಮನೋವಿಜ್ಞಾನದ ಗುರಿಯಾಗಿದೆ.

ಮನೋವಿಜ್ಞಾನವು ಒಂದು ವಿಜ್ಞಾನ ಎಂಬುದು ಈಗಾಗಲೇ ಸಾಬೀತಾಗಿದೆ. ಅನೇಕ ವಿದ್ವಾಂಸರು ಮನೋವಿಜ್ಞಾನಕ್ಕೆ ಸಂಬಂಧಿಸಿದಂತೆ ವ್ಯಾಖ್ಯಾನಗಳನ್ನ ಗಮನಿಸಿದಾಗ ಈ ಹೇಳಿಕೆಗೆ ಪುಷ್ಠಿ ದೊರೆಯುತ್ತದೆ. ಇದೊಂದು ವರ್ತನೆ ವಿಜ್ಞಾನವಾಗಿದೆ. ವ್ಯಕ್ತಿಯ, ಪ್ರಾಣಿಗಳ ವರ್ತನೆಯನ್ನು ವೈಜ್ಞಾನಿಕ ತಳಹದಿಯ ಮೇಲೆ ಅಧ್ಯಯನ ಮಾಡುವ ಶಾಸ್ತ್ರವಾಗಿದೆ.

ಮನೋವಿಜ್ಞಾನವು ಸುಸಂಘಟಿತವಾದ ಸಿದ್ಧಾಂತಗಳನ್ನೊಳಗೊಂಡಿದೆ. ಅದಕ್ಕೆ ಸಂಬಂಧಿಸಿದ ಮನೋವೈಜ್ಞಾನಿಕ ನಿಯಮಗಳು ಮತ್ತು ತತ್ವಗಳನ್ನು ಒಳಗೊಂಡಿದೆ. ಇದು ಅನ್ವಯಿಕ ಅಂಶಗಳನ್ನು ಒಳಗೊಂಡಿದ್ದು, ಅವುಗಳು ಅನ್ವಯಿಕ ಮನೋವಿಜ್ಞಾನದ ಶಾಖೆಗಳ ರೂಪದಲ್ಲಿವೆ. ಅವುಗಳೆಂದರೆ ಕಾನೂನು, ಚಿಕಿತ್ಸಾ, ಔದ್ಯೋಗಿಕ ಮತ್ತು ಶೈಕ್ಷಣಿಕ ಮನೋವಿಜ್ಞಾನವಾಗಿವೆ. ಪ್ರತಿಯೊಂದು ವರ್ತನೆಗೂ ತನ್ನದೇ ಆದ ಬೇರುಗಳಿರುತ್ತವೆ. ಕಾರಣವಾದ ಕಾರಕಾಂಶಗಳು, ಪ್ರಭಾವಗಳು ಇರುತ್ತವೆ ಎಂಬುದನ್ನು ಮನೋವಿಜ್ಞಾನವು ನಂಬುತ್ತದೆ. ಇಲ್ಲಿ ವರ್ತನೆಯ ಅಧ್ಯಯನ ಮಾಡುವಲ್ಲಿ ವ್ಯಕ್ತಿನಿಷ್ಠ ವಿಚಾರಗಳು ಮತ್ತು ಅಭಿಪ್ರಾಯಗಳನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ.

ಮನೋವಿಜ್ಞಾನದಲ್ಲಿ ವರ್ತನೆಯ ಅಧ್ಯಯನ ಮಾಡುವಲ್ಲಿ ಪದ್ಧತಿಗಳು ಮತ್ತು ತಂತ್ರಗಳನ್ನು ಬಳಸಲಾಗುತ್ತದೆ. ವರ್ತನೆಯನ್ನು ಅಧ್ಯಯನ ಮಾಡಲು ಪ್ರಮುಖ ವೈಜ್ಞಾನಿಕ ಪದ್ಧತಿಗಳ ಮೆಟ್ಟಿಲುಗಳಾದ ವರ್ತನೆಯ ವಿಶ್ಲೇಷಣೆ, ಪರಿಕಲ್ಪನೆಗಳನ್ನು ರೂಪಿಸುವುದೇ, ವಸ್ತುನಿಷ್ಠ ಅವಲೋಕನ ಅಥವಾ ನಿಯಂತ್ರಿತ ಪ್ರಯೋಗ, ಸಂಶ್ಲೇಷಣೆ , ಪರಿಶೀಲನೆ ಮತ್ತು ಫಲಿತಾಂಶಗಳ ಸಾಧಾರಣೀಕರಣ ಇತ್ಯಾದಿಗಳನ್ನು ಒಳಗೊಂಡಿರುತ್ತದೆ.

ವರ್ತನೆಯ ಅಧ್ಯಯನದ ಫಲಿತಾಂಶಗಳು ಯಾವಾಗಲೂ ಮುಕ್ತವಾಗಿರುತ್ತದೆ. ಅದೇ ತೆರನಾದ ಸನ್ನಿವೇಶಗಳಲ್ಲಿ ಬೇರೆ ಪ್ರಯೋಗಕಾರರು ಮತ್ತು ಅವಲೋಕನಾಕರಾರು ಮತ್ತೊಮ್ಮೆ ಅವುಗಳನ್ನು ಪರಿಶೀಲಿಸಲು ಅವಕಾಶವಿರುತ್ತದೆ, ಬದಲಾಯಿಸಲೂಬಹುದು. ಈ ಫಲಿತಾಂಶಗಳನ್ನು ಸ್ವೀಕರಿಸ ಬಹುದು ಅಥವಾ ತಿರಸ್ಕರಿಸಬಹುದು, ಮಾರ್ಪಾಡುಗೊಳಿಸಬಹುದು ಅಥವಾ ಇತ್ತೀಚಿನ ದತ್ತಾಂಶಗಳು ಮತ್ತು ಕಂಡುಕೊಂಡ ಫಲಿತಾಂಶಗಳ ಬೆಳಕಿನಡಿಯಲ್ಲಿ ಬದಲಾಯಿಸಲೂಬಹುದು.

ವ್ಯವಹಾರಿಕ ಜೀವನದಲ್ಲಿ ಮನೋವಿಜ್ಞಾನದಲ್ಲಿ ವರ್ತನೆಯ ನಿಯಮಗಳು, ತತ್ವಗಳು ಮತ್ತು ವಾಸ್ತವಾಂಶಗಳನ್ನು ವ್ಯವಹಾರಿಕ ಜೀವನದಲ್ಲಿ ಸಾರ್ವತ್ರಿಕವಾಗಿ ಅನ್ವಯಿಸಬಹುದು. ಅವುಗಳನ್ನು ಇನ್ನಿತರ ಕ್ಷೇತ್ರಗಳಲ್ಲೂ ಸಹ ಬಳಸಬಹುದು. ಮನೋವಿಜ್ಞಾನದ ಮುಖಾಂತರ ವರ್ತನೆಯ ಪರಿಮಾಣವನ್ನು ಸಮಂಜಸವಾದ ರೀತಿಯಲ್ಲಿ ವಿವರಿಸಲು ಸಾಧ್ಯ. ಇದರ ಸ್ವರೂಪವು ಸಾಮಾನ್ಯವಾಗಿ ವೈಜ್ಞಾನಿಕವಾದುದು.

ಎಲ್ಲಾ ಭೌತಿಕ, ಜೈವಿಕ ಹಾಗೂ ಸಾಮಾಜಿಕ ವರ್ತನೆಗಳಂತೆಯೇ ಜೀವಿಗಳ ವರ್ತನೆಯೂ ಸ್ವಾಭಾವಿಕವಾದುದು. ಆದ್ದರಿಂದ ಅದರ ಹಿನ್ನೆಲೆಯಲ್ಲಿ ಸ್ವಾಭಾವಿಕ ನಿಯಮಗಳು ಇರಲೇಬೇಕು. ಆ ನಿಯಮಗಳನ್ನು ಅರಿಯಲು ನಮಗೆ ಸಾಧ್ಯವಾಗುವುದಾದರೆ, ಜೀವಿಗಳ ವರ್ತನೆಗಳನ್ನು ಅರ್ಥಮಾಡಿಕೊಳ್ಳಲು, ಅದರ ಮುನ್ಸೂಚನೆ ಕೊಡಲು, ಅದನ್ನು ನಿಯಂತ್ರಿಸಲೂ ಮತ್ತು ನಮ್ಮ ಅನುಕೂಲಗಳಿಗೆ ಅನುಗುಣವಾಗಿ ಮಾರ್ಪಡಿಸಿಕೊಳ್ಳಲು ಸಾಧ್ಯವಾಗಲೇ ಬೇಕು ಎಂಬ ಇತ್ಯಾದಿ ವೈಜ್ಞಾನಿಕ ನಂಬಿಕೆಗಳ ಪರಿಶೀಲನೆಗಾಗಿ ನಡೆದ ಮನೋವೈಜ್ಞಾನಿಕ ಪ್ರಯತ್ನದಿಂದಾಗಿ ಆಧುನಿಕ ಮನೋವಿಜ್ಞಾನ .ಅಧಿಕೃತವಾಗಿ ರೂಪುಗೊಂಡು ಕೇವಲ ಒಂದು ಶತಮಾನದ ಅವಧಿಯಲ್ಲಿ ದಶಕದಿಂದ ದಶಕಕ್ಕೆ, ವರ್ಷದಿಂದ ವರ್ಷಕ್ಕೆ ಹೆಚ್ಚು-ಹೆಚ್ಚು ಪ್ರಗತಿ ಹೊಂದುತ್ತಾ ಬಂದಿದೆ. ಇಂದು ಈ ವಿಜ್ಞಾನದ ವ್ಯಾಪ್ತಿಯನ್ನು ಗಮನಿಸಿದಾಗ ಅದರ ವಿಕಾಸದ ಶೀಘ್ರಗತಿ ಎಷ್ಟೆಂಬುದು ತಾನಾಗಿಯೇ ವೇದ್ಯವಾಗದಿರದು.

ಮನೋವಿಜ್ಞಾನದ ಹರವು ಜೀವಿಯ ಸಮಸ್ತ ಚಟುವಟಿಕೆಗಳನ್ನ ಒಳಗೊಳ್ಳುವಷ್ಟು ವ್ಯಾಪಕವಾಗಿದೆ. ವ್ಯಕ್ತಿ ವರ್ತನೆಯ ಮೇಲೆ ಅಧ್ಯಯನ ನಡೆಸಲಾಗುವ ಜೀವನದ ವಿವಿಧ ಕ್ಷೇತ್ರಗಳಿಗೂ ಅದು ವ್ಯಾಪಿಸಿದೆ. ಈಗಾಗಲೇ ಚರ್ಚಿಸಿರುವಂತೆ ಸಾಮಾನ್ಯ ಮಾನವನ ವರ್ತನೆಯ ಜೊತೆ ಜೊತೆಯಲ್ಲಿಯೇ ಅಪಸಾಮಾನ್ಯ ಮಾನವನ ವರ್ತನೆಯ ಅಧ್ಯಯನವು ಸೇರುತ್ತದೆ. ವ್ಯಕ್ತಿಯ ವಿಚಾರಗಳು, ಭಾವನುಭಾವಗಳು ಕ್ರಿಯೆಗಳೆಲ್ಲವನ್ನೂ ಮತ್ತು ವ್ಯಕ್ತಿಯ ವರ್ತನೆಯನ್ನು ಆತನ ಜೀವಿತಾದ್ಯಾಂತ ವಿವರವಾಗಿ ಅಧ್ಯಯನ ಮಾಡುತ್ತದೆ. ಹಾಗೆಯೇ ಇತರ ಪ್ರಾಣಿಗಳ ವರ್ತನೆಯನ್ನು ವೈಜ್ಞಾನಿಕ ಅಧ್ಯಯನಕ್ಕೆ ಒಳಪಡಿಸುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಮನೋವಿಜ್ಞಾನದ ವಿಸ್ತಾರವು ಬಹಳ ವ್ಯಾಪಕವಾಗಿದೆ. ಅದರ ವಿಸ್ತಾರ ಇಡೀ ಜೀವ ಪ್ರಪಂಚದಷ್ಟೇ ವಿಸ್ತಾರವಾಗಿದೆ ಎಂದರೆ ತಪ್ಪಾಗಲಾರದು. .

ಮನೋವಿಜ್ಞಾನವು ಅನೇಕ ವಿಷಯಗಳೊಂದಿಗೆ ಹಾಸುಹೊಕ್ಕಾಗಿದೆ. ಭೌತಶಾಸ್ತ್ರ, ರಾಸಾಯನಶಾಸ್ತ್ರ, ಜೀವಶಾಸ್ತ್ರ, ತಳಿಶಾಸ್ತ್ರ, ವೈದ್ಯಶಾಸ್ತ್ರ, ಶರೀರಶಾಸ್ತ್ರ, ಸಂವನಹಶಾಸ್ತ್ರಗಳೊಂದಿಗೆ ಸಂಬಂಧ ಪಡೆದುಕೊಂಡಿರುವ ರೀತಿಯಲ್ಲಿಯೇ ಮಾನವಶಾಸ್ತ್ರ, ಸಮಾಜಶಾಸ್ತ್ರ, ರಾಜ್ಯಶಾಸ್ತ್ರಗಳೊಂದಿಗೆ ಕೊಡುಕೊಳ್ಳುವಿಕೆಯನ್ನು ಇಟ್ಟುಕೊಂಡಿದೆ. ಹೀಗೆ ಮನೋವಿಜ್ಞಾನದ ವ್ಯಾಪ್ತಿಯು ವಿಶಾಲವಾಗಿದೆ. ಮನೋವಿಜ್ಞಾನದಲ್ಲಿ ಹಲವಾರು ಶಾಖೆಗಳಿದ್ದು, .ಅವುಗಳಲ್ಲಿ ಪ್ರಮುಖವಾದವುಗಳೆಂದರೆ:

೧. ಪ್ರಾಯೋಗಿಕ ಮನೋವಿಜ್ಞಾನ
೨. ವೃತ್ತಿ ಮನೋವಿಜ್ಞಾನ
೩. ಮಗುವಿನ ಮನೋವಿಜ್ಞಾನ
೪. ರಕ್ಷಣಾ ಮನೋವಿಜ್ಞಾನ
೫. ಸಾಮಾಜಿಕ ಮನೋವಿಜ್ಞಾನ
೬. ಅಪಸಾಮಾನ್ಯ ಮನೋವಿಜ್ಞಾನ
೭. ಚಿಕಿತ್ಸಾ ಮನೋವಿಜ್ಞಾನ
೮. ಪರಮನ ಮನೋವಿಜ್ಞಾನ
೯. ವಿಕಾಸ ಮನೋವಿಜ್ಞಾನ
೧೦. ಔದ್ಯೋಗಿಕ ಮನೋವಿಜ್ಞಾನ
೧೧. ಶಾರೀರಿಕ ಮನೋವಿಜ್ಞಾನ
೧೨. ಶೈಕ್ಷಣಿಕ ಮನೋವಿಜ್ಞಾನ
೧೩. ವಿಭೇದಾತ್ಮಕ ಮನೋವಿಜ್ಞಾನ
೧೪. ಪ್ರಾಣಿ ಮನೋವಿಜ್ಞಾನ
೧೫: ಅಪರಾಧ ಮನೋವಿಜ್ಞಾನ
೧೬. ಆನ್ವಯಿಕ ಮನೋವಿಜ್ಞಾನ

ಈ ಎಲ್ಲಾ ಶಾಖೆಗಳ ಕೊಡುಗೆ ಅಪಾರವಾದುದು. ಒಂದು ಶಾಖೆಯ ವಿಷಯ ಮತ್ತೊಂದು ಶಾಖೆಯ ವಿಷಯದೊಂದಿಗೆ ಅನ್ಯೋನ್ಯ ಸಂಬಂಧ ಹೊಂದಿದೆ. ಶೈಕ್ಷಣಿಕ ಮನೋವಿಜ್ಞಾನ , ಸಾಮಾಜಿಕ ಮನೋವಿಜ್ಞಾನದಿಂದ ಮತ್ತು ನೈದಾನಿಕ ಮನೋವಿಜ್ಞಾನದಿಂದ ಸಹಾಯವನ್ನು ಪಡೆಯುವ ಹಾಗೆ ರಕ್ಷಣಾ ಮನೋವಿಜ್ಞಾನ , ಸಾಮಾನ್ಯ ಮನೋವಿಜ್ಞಾನ , ಶಾರೀರಿಕ ಮನೋವಿಜ್ಞಾನದಿಂದ ಸಹಾಯ ಪಡೆದುಕೊಳ್ಳುತ್ತದೆ. ಹೀಗೆ ಅವುಗಳಲ್ಲಿ ಅವಿನಾಭಾವ ಸಂಬಂಧವಿರುವುದರಿಂದಲೇ ಮನೋವಿಜ್ಞಾನವು ಸರ್ವವ್ಯಾಪಿಯಾಗಿ ತನ್ನ ವ್ಯಾಪ್ತಿಯನ್ನು ಹರಡಿಕೊಂಡಿದೆ.

ಮನೋವಿಜ್ಞಾನದ ಪಂಥಗಳು

ಮನುಷ್ಯ ತನ್ನನ್ನು, ತನ್ನ ಸುತ್ತಲಿನ ವ್ಯವಹಾರಗಳನ್ನು ತಿಳಿದುಕೊಳ್ಳಲು ತೊಡಗಿದಂತೆ ತತ್ವಶಾಸ್ತ್ರದ ಉಗಮವಾಯಿತು. ಎಲ್ಲಾ ಪ್ರಶ್ನೆಗಳಿಗೂ ತತ್ವಶಾಸ್ತ್ರ ಉತ್ತರಿಸದೇ ಹೋದಾಗ ಮತ್ತು ಪ್ರಶ್ನೆಗಳ ಸ್ವರೂಪದಲ್ಲಿನ ಭಿನ್ನತೆಯ ಅರಿವಿನಿಂದಾಗಿ ವಿವಿಧ ವಿಜ್ಞಾನಗಳು ಜನ್ಮತಳೆದವು. ತನ್ನನ್ನೇ ಕುರಿತ ಪ್ರಶ್ನೆಗಳ ಸಮೂಹಕ್ಕೆ ಉತ್ತರವನ್ನು ಕಂಡುಕೊಳ್ಳುವ ಪ್ರಯತ್ನದ ಭಾಗವಾಗಿ ಮನುಷ್ಯ ಮನೋವಿಜ್ಞಾನವನ್ನು ರೂಪಿಸಿಕೊಂಡನು. ಸ್ವಪ್ನ, ಮನಸ್ಸು, ವರ್ತನೆ, ನಂಬಿಕೆ ಮುಂತಾದವು ಇದರ ವ್ಯಾಪ್ತಿಗೆ ಸೇರಿಕೊಂಡವು. ಮನೋವಿಜ್ಞಾನವನ್ನು ತತ್ವಶಾಸ್ತ್ರದಿಂದ ಪ್ರತ್ಯೇಕಶಾಖೆಯಾಗಿ, ಕ್ರಮಬದ್ಧ ಅಧ್ಯಯನ ಕ್ರಮಕ್ಕೆ ಒಗ್ಗಿಸಿದ ವಿಜ್ಞಾನಿಗಳಲ್ಲಿ ಪ್ರಮುಖರಾದವರು ಜರ್ಮನಿಯ ಮ್ಯಾಕ್ಸ್‌ವೆಬರ್ , ಫೆಚನರ್ ಮತ್ತು ವೂಂಟ್ . ೧೮೭೪ ರಲ್ಲಿ 'ವಿಲ್‌ಹೆಲ್ಮ್‌ವೂಂಟ್' ನು 'ಲಿಪಿಜಿಗ್' ನಲ್ಲಿ ಮನೋವೈಜ್ಞಾನಿಕ ಪ್ರಯೋಗಾಲಯವನ್ನು ಸ್ಥಾಪಿಸುವುದರೊಂದಿಗೆ ಮನೋವಿಜ್ಞಾನದ ಇತಿಹಾಸ ಆರಂಭವಾಯಿತು. ಮನೋವಿಜ್ಞಾನವು ಬಹಳ ದೀರ್ಘಕಾಲದ ಇತಿಹಾಸವನ್ನು ಹೊಂದಿದ್ದರೂ ಅದರ ಇತಿಹಾಸ ಚಿಕ್ಕದು. ಮನೋವಿಜ್ಞಾನವು ಇತ್ತೀಚೆಗೆ ಅತಿಶೀಘ್ರಗತಿಯಲ್ಲಿ ಬೆಳೆದು ವಿಶಾಲವಾದ ವ್ಯಾಪ್ತಿಯನ್ನು ಹೊಂದಿದೆ. ಇದರಿಂದಾಗಿ ಮನೋವಿಜ್ಞಾನದ ಕೆಲವು ವಿಶಿಷ್ಟ ಸಮಸ್ಯೆಗಳನ್ನು ವಿಶಿಷ್ಟವಾದ ತಂತ್ರಗಳಿಂದ ಅಭ್ಯಸಿಸುತ್ತದೆ. ಕೆಲವು ಸಾರಿ ಅವು ಒಂದಕ್ಕೊಂದು ಪೂರಕವಾಗಿ ಕಂಡುಬಂದರೂ ಕೆಲವೊಮ್ಮೆ ವಿರೋಧಿಸುವಿಕೆಯು ಕಾಣಸಿಗುತ್ತದೆ. ಮನೋವಿಜ್ಞಾನದ ಪಂಥಗಳೆಂದರೆ

1.	ರಚನಾ ಪಂಥ	-	ಇ.ಬಿ.ಟಿಚ್ನರ್
2.	ಕ್ರಿಯಾಪಂಥ	-	ಜಾನ್‌ಡ್ಯೂಯಿ
3.	ವರ್ತನಾಪಂಥ	-	ವ್ಯಾಟ್ಸನ್, ಟಾಲಮನ್, ಸ್ಕಿನ್ನರ್, ಹಲ್
4.	ಮನೋವಿಶ್ಲೇಷಣಾ ಸಿದ್ಧಾಂತ	-	ಸಿಗ್ಮಂಡ್ ಫ್ರಾಯ್ಡ್
5.	ಸಪ್ರಯೋಜನಾ ಪಂಥ	-	ಮ್ಯಾಕ್‌ಡ್ಯೂಗಲ್
6.	ಅರ್ಥಪೂರ್ಣ ಸಮಗ್ರದೃಷ್ಟಿ ಪಂಥ	-	ಮ್ಯಾಕ್ಸ್‌ವರ್ದೈಮರ್, ಕುರ್ಟ್‌ಕೊಪ್ಕ, ಗಾಂಗ್‌ಕೊಯ್ಲರ್.

ಸಂಶೋಧನೆ ಮತ್ತು ಆಲೋಚನೆಗಳು ಇತರರ ಮೇಲೆ ಪ್ರಭಾವ ಬೀರುವ ಮೂಲಕ ಹೊಸ ಪಂಥಗಳು ಹುಟ್ಟುತ್ತವೆ. ಉಳಿದ ವಿಷಯಗಳಂತೆ ಮನೋವಿಜ್ಞಾನವೂ ಇದಕ್ಕೆ ಹೊರತಾಗಿಲ್ಲ. ಯಾವುದೇ ಒಂದು ಪಂಥ ಮನೋವಿಜ್ಞಾನದ ಎಲ್ಲಾ ಸತ್ಯಗಳನ್ನು, ಕೊಡುಗೆಗಳನ್ನು ಒಳಗೊಳ್ಳುವುದು ಸಾಧ್ಯವಿಲ್ಲ. ಯಾವುದೇ ಪಂಥವೂ ಮಾನವರ ವರ್ತನೆಗಳ ಬಗೆಗೆ ಇದೇ ಸಾರ್ವತ್ರಿಕ ಸತ್ಯ ಎಂದು ಪ್ರತಿಪಾದಿಸಲು ಸಾಧ್ಯವಿಲ್ಲ. ಯಾಕೆಂದರೆ ಅದು ಕೇವಲ ಆಂಶಿಕ ಸಾಪೇಕ್ಷ ಸತ್ಯವಾಗಿರುತ್ತದೆ. ಅಂತರ್ ಶಾಸ್ತ್ರೀಯ ಅಧ್ಯಯನಗಳ ಆವಶ್ಯಕತೆ ಮತ್ತು ಪ್ರಾಯೋಜನ ತೀವ್ರವಾಗಿರುವುದರಿಂದ ಮನೋವಿಜ್ಞಾನದ ಹೆಸರಿನಲ್ಲಿ ಮಿತಿ ಹಾಕಿಕೊಳ್ಳದೆ ಪಂಥಗಳ ಸಮನ್ವಯತೆಯನ್ನು ಸಾಧಿಸಬೇಕು.

ಒಟ್ಟಾರೆ ಮನೋವಿಜ್ಞಾನವು ವರ್ತನೆಯನ್ನು ಕುರಿತ ಅಧ್ಯಯನವಾಗಿದ್ದು, ವರ್ತನೆಯು ಮೂರು ರೀತಿಯ ಚಟುವಟಿಕೆಗಳನ್ನು ಒಳಗೊಂಡಿದೆ.

೧. ಜ್ಞಾನಾತ್ಮಕ ಚಟುವಟಿಕೆ
೨. ಭಾವನಾತ್ಮಕ ಚಟುವಟಿಕೆ
೩. ಕ್ರಿಯಾಜನ್ಯ ಚಟುವಟಿಕೆ

ವರ್ತನೆಯು ಮೂರು ಮುಖಗಳನ್ನು ಒಳಗೊಂಡಿದೆ. ಅವುಗಳನ್ನು ಮನಸ್ಸಿನ ವಿವಿಧ ಸ್ತರಗಳು ಅಥವಾ ವ್ಯವಸ್ಥೆಗಳೆಂದು ಗುರುತಿಸಲಾಗಿದೆ. ಅವುಗಳೆಂದರೆ ೧. ಜಾಗರೂಕಾವಸ್ಥೆ ೨. ಅರೆಜಾಗರೂಕಾವಸ್ಥೆ ೩. ಅಜಾಗರೂಕಾವಸ್ಥೆ.

ಈ ಮೇಲಿನ ವಿವಿಧ ಅವಸ್ಥೆಗಳಲ್ಲಿ ಮಾನವನ ವರ್ತನೆಯನ್ನು ಅಧ್ಯಯನ ಮಾಡುವುದೇ ಮನೋವಿಜ್ಞಾನವಾಗಿದೆ. ಈ ಮೇಲೆ ಕಾಣಿಸಿದಂತೆ ಮನೋವಿಜ್ಞಾನವು ತನ್ನದೇ ಆದ ಹುಟ್ಟು-ಬೆಳವಣಿಗೆ ಮತ್ತು ಇತಿಹಾಸವನ್ನು ಹೊಂದಿದ್ದು, ವಿವಿಧ ಪಂಥಗಳ ಮನೋವಿಜ್ಞಾನಿಗಳು ತಮ್ಮದೇ ಆದ ಸಿದ್ಧಾಂತಗಳನ್ನು ಮಂಡಿಸಿದ್ದಾರೆ. ಫ್ರಾಯ್ಡ್, ಯೂಂಗ್, ಏಡ್ಲರ್ ಇವರೇ ಮೊದಲಾದವರ ದೃಷ್ಟಿಯಲ್ಲಿನ ಮನೋವಿಜ್ಞಾನದ ಅಂಶಗಳು ನಾನು ಸಿದ್ಧಪಡಿಸಿರುವ "ಯಶವಂತ ಚಿತ್ತಾಲರ ಕತೆಗಳಲ್ಲಿ ಮನೋವೈಜ್ಞಾನಿಕತೆ" ಎಂಬ ಶೀರ್ಷಿಕೆಯಡಿಯಲ್ಲಿ ಚಿತ್ತಾಲರ ಕಥೆಗಳ ಪಾತ್ರಗಳಲ್ಲಿ, ಸನ್ನಿವೇಶಗಳಲ್ಲಿ, ವರ್ತನೆಗಳಲ್ಲಿ ಮನೋವಿಜ್ಞಾನವು ಹೇಗೆ ಅಡಕವಾಗಿದೆ ಎಂಬುದನ್ನು ತಿಳಿಸುವದೇ ಆಗಿದ್ದು, ಕತೆಗಳ ಹಂದರದಲ್ಲಿನ ಪಾತ್ರಗಳು ಹೇಗೆ ವರ್ತಿಸುತ್ತವೆ ಎಂಬುದನ್ನು ಮನೋವೈಜ್ಞಾನಿಕ ದೃಷ್ಟಿಯಿಂದ ಒಂದು ನೋಟವನ್ನು ಬೀರಲಾಗಿದೆ.

೩. ಯಶವಂತ ಚಿತ್ತಾಲರ ಜೀವನಪಥ

ಕೆಲವು ಲೇಖಕರು ತಮ್ಮನ್ನು ರೂಪಿಸಿದ ಹಾಗೂ ತಾವೇ ರೂಪಿಸಿದ ಸಾಹಿತ್ಯಕ್ಕೆ ಚಳವಳಿಯ ಗುಣ ಮತ್ತು ಪರಿಮಿತಿಗಳಿಗೆ ಬದ್ಧರಾಗಿ ಅದರ ಚೌಕಟ್ಟಿನಲ್ಲಿ ಅನನ್ಯ ಸಾಧನೆ ಮಾಡುತ್ತಾರೆ. ಇನ್ನು ಕೆಲವರು ಚಳವಳಿಗಳಿಂದ ಪೋಷಣೆ ಪಡೆದೂ ಅದರ ಸೀಮಿತಗಳನ್ನು ಮೀರಿ ಬೆಳೆಯುತ್ತಾರೆ. ತಮ್ಮ ಭಾಷೆಯ ಒಟ್ಟು ಸಾಹಿತ್ಯ ಪರಂಪರೆಯ ಭಾಗವಾಗಿ ಬಿಡುತ್ತಾರೆ. ಕನ್ನಡ ಕಥಾ ಸಾಹಿತ್ಯದ ಪ್ರಮುಖರಲ್ಲಿ ಒಬ್ಬರಾಗಿರುವ ಯಶವಂತ ಚಿತ್ತಾಲರು ಎರಡನೆಯ ಗುಂಪಿಗೆ ಸೇರಿದವರು. ನಮ್ಮ ಕಾಲದ ಜೀವನವನ್ನು ಕುರಿತಾದ ಪ್ರಬುದ್ಧ ಕಾಳಜಿಗಳು ಮತ್ತು ತಾವು ಆರಿಸಿಕೊಂಡ ಮಾಧ್ಯಮದ ಸಾಧ್ಯತೆಗಳನ್ನು ವಿಸ್ತರಿಸಬಲ್ಲ ಪ್ರತಿಭೆ ಅವರದಾಗಿದೆ.

ಸಾಹಿತಿಗಳ ಜೀವನವನ್ನು ಕುರಿತಾದ ಸ್ಥೂಲ ವಿವರಗಳು ಅವರ ಕೃತಿಗಳ ವ್ಯಾಖ್ಯಾನದ ಹೊಸ ಸಾಧ್ಯತೆಗಳಿಗೆ ದಾರಿ ಮಾಡಿಕೊಡುತ್ತದೆ. ಏಕೆಂದರೆ ಹನೇಹಳ್ಳಿ, ಮುಂಬಯಿಗಳಂಥ ಪ್ರದೇಶಗಳ ಭೌಗೋಳಿಕ ವಿವರಗಳಿಂದ ಹಿಡಿದು ಕಥೆ ಕಾದಂಬರಿಗಳ ಮೂಲದ್ರವ್ಯಗಳವರೆಗೆ ಅವರ ಬದುಕು-ಬರಹಗಳ ನಡುವೆ ಅನ್ಯೋನ್ಯ ಸಂಬಂಧ ಏರ್ಪಟ್ಟಿದೆ. ಹೀಗಾಗಿ ಮೊದಲು ಸಂಕ್ಷಿಪ್ತವಾಗಿ ಅವರ ಜೀವನಪಥವನ್ನು ಪರಿಚಯಿಸಲಾಗಿದೆ.

ಯಶವಂತ ಚಿತ್ತಾಲರು ೧೯೨೮ ರ ಆಗಸ್ಟ್ ಮೂರರಂದು ಉತ್ತರ ಕನ್ನಡ ಜಿಲ್ಲೆಯ ಗೋಕರ್ಣ ತಾಲ್ಲೂಕಿನ ಹನೇಹಳ್ಳಿಯಲ್ಲಿ ಹುಟ್ಟಿದರು. ಆಗ ಅದು ಮಹಾರಾಷ್ಟ್ರದ ದಕ್ಷಿಣ ತುದಿಯ ಜಿಲ್ಲೆ. ಆದರದು ಕೊಂಕಣಿಯನ್ನು ತಾಯಿನುಡಿಯಾಗಿ ಹೊಂದಿದ ಕುಟುಂಬ. ತಂದೆ ವಿಠೋಬಾ, ತಾಯಿ ರುಕ್ಮಿಣಿ: ಹನೇಹಳ್ಳಿ ಕುಮುಟಾ, ಧಾರವಾಡ, ಮುಂಬಯಿ ಮುಂತಾದ ಶಿಕ್ಷಣ ಪಡೆದ ಸ್ಥಳಗಳಾಗಲೀ ಕನ್ನಡ ಸಾಹಿತ್ಯದಲ್ಲಿ ವಿಶೇಷ ಆಸಕ್ತಿ ಹುಟ್ಟಿಸುವಂಥವಾಗಿರಲಿಲ್ಲ. ಆದರೆ ಅಣ್ಣಂದಿರಾದ ಕವಿ ಗಂಗಾಧರ ಚಿತ್ತಾಲರು, ಉತ್ತರ ಕನ್ನಡದ ಬುದ್ಧಿ ಜೀವಿ ಗೌರೀಶಕಾಯ್ಕಿಣಿಯವರು, ಗೆಳೆಯ ಶಾಂತಿನಾಥ ದೇಸಾಯಿಯವರು ಚಿತ್ತಾಲರ ಮೇಲೆ ದಟ್ಟ ಪ್ರಭಾವ ಬೀರಿದರು. ಧಾರವಾಡದ ಅಂದಿನ ವಾತಾವರಣದಲ್ಲೇ ಸಾಹಿತ್ಯಾಸಕ್ತಿಯು ತಾನೇ ತಾನಾಗಿತ್ತು. ತಮ್ಮ ಮೊದಲ ಪ್ರೇಮವಾದ ಚಿತ್ರಕಲೆಯಲ್ಲಿ ವಿಶೇಷ ಪರಿಣತಿ ಪಡೆಯಬೇಕೆಂಬ ಒಳ ಉದೇಶದಿಂದ ಮುಂಬಯಿಗೆ ಬಂದು ಕಲಾನಿಕೇತನದ ಸಂಜೆ ತರಗತಿಗಳಿಗೆ ಸೇರಿದ ಯಶವಂತರು ಕ್ರಮೇಣ ಎಂ.ಎನ್.ರಾಯ್ ಅವರ ವಿಚಾರಗಳ ಕಡೆಗೆ ಆಕರ್ಷಿತರಾದರು. 'ರ್‍ಯಾಡಿಕರ್ ಡೆಮೊಕ್ರೆಟಿಕ್ ಪಾರ್ಟಿಯ ಸದಸ್ಯತ್ವವನ್ನು ಪಡೆದರು. ನವಮಾನವತಾವಾದದ ಮಾರ್ಗವಾಗಿ ಮಾರ್ಕ್ಸ್, ಎರಿಕ್ ಫ್ರಾಂ. ಹಕ್ಲೀ, ಎಡಿಂಗ್‌ಟನ್, ಫ್ರಾಯ್ಡ್, ಎಡ್ಲರ್ ಮುಂತಾದ ಹಲವು ಧೀಮಂತರ ವಿಚಾರಗಳಿಗೆ ತಮ್ಮ ಮನಸ್ಸನ್ನು ಅನಾವರಣ ಮಾಡಿಕೊಂಡರು. ಇವುಗಳ ಜೊತೆಗೆ ತಮ್ಮ ಆಯ್ಕೆಯ ವಿಷಯವಾದ ಪ್ಲಾಸ್ಟಿಕ್ ತಂತ್ರವಿಜ್ಞಾನದಲ್ಲಿ ಪಡೆದ ಪದವಿಯು ಬೇಕಲೈಟ್ ಹೈಲಂ ಸಂಸ್ಥೆಯಲ್ಲಿ ಕೆಲಸ ದೊರಕಿಸಿಕೊಟ್ಟಿತು. ಆದೇ ಸಂಸ್ಥೆಯಲ್ಲಿ ಮೂವತ್ತು ವರ್ಷಗಳಿಗೂ ಮೀರಿದ ಸುದೀರ್ಘ ದುಡಿಮೆಯು ಆಧುನಿಕ ಜಗತ್ತಿನ ಸ್ವರೂಪವನ್ನೇ ನಿಯಂತ್ರಿಸುತ್ತಿರುವ ಬಂಡವಾಳಶಾಹಿ, ಕೈಗಾರಿಕಾ ಜಗತ್ತಿನ ನಿಕಟ ಪರಿಚಯವನ್ನು ತಂದುಕೊಟ್ಟಿತು.

ಹನೇಹಳ್ಳಿಯ ಹಸಿರು ತುಂಬಿದ ಪರಿಸರದಿಂದ ಸೃಜನಶೀಲ ಚೈತನ್ಯದ ಬುತ್ತಿ ಹೊತ್ತು ತಂದ ತರುಣನಿಗೆ ಮುಂಬಯಿಯೆಂಬ ನಗರ ರಾಕ್ಷಸನೊಂದಿಗೆ ಆದ ಮುಖಾಮುಖಿ ಹುಟ್ಟಿಸಿದ ತಲ್ಲಣಗಳು ಅವರ ಬರವಣಿಗೆಯ ಹಲವು ಕಾಳಜಿಗಳಿಗೆ ಕಾರಣವಾದವು. ವೈಯಕ್ತಿಕ ಜೀವನದಲ್ಲಿ ಹಾಗೂ ಉದ್ಯೋಗದಲ್ಲಿ ಅನುಭವಿಸಿದ ಹಲವು ದುರಂತಗಳು ಹಾಗೂ ಬಿಕ್ಕಟ್ಟುಗಳು ಅವರ ಬರವಣಿಗೆಯ ಸ್ವರೂಪವನ್ನು ನಿರ್ಧಾರ ಮಾಡಿದ ಸಂಗತಿಗಳಾದಂತೆಯೇ. ಅವೆಲ್ಲದರ ನಡುವಿನಿಂದ ಜೀವನ

ಶ್ರದ್ಧೆಯೇ ಅಡಿಗಲ್ಲಾದ ಆತ್ಮವಿಶ್ವಾಸವನ್ನೂ ತಂದುಕೊಟ್ಟವು. ಕನ್ನಡ ಪರಿಸರದಿಂದ ಬಹುದೂರದ ಮುಂಬಯಿಯ ಏಕಾಂತ ಅವರ ಕಾವ್ಯ ರಚನೆಗೆ ನೆರವಾದಂತೆಯೇ ಒಂದು ಬಗೆಯ ಒಂಟಿತನದ ಬೀಜಗಳನ್ನು ಬಿತ್ತಿದಂತೆ ತೋರುತ್ತದೆ. ಮೇಧಾವಿಯೊಬ್ಬನ ಅಂತರ್ಮುಖತೆ ಚಿತ್ತಾಲರ ಸ್ವಭಾವದ ಪ್ರಮುಖ ನೆಲೆ. ಇದು ಕೇವಲ ಸಾಹಿತ್ಯರಚನೆಗೆ ಅನಿವಾರ್ಯವಾದ ಅಂತರ್ಮುಖತೆಯಲ್ಲಿ ಬದಲಾಗಿ ಬಾಹ್ಯ ಜಗತ್ತನ್ನು ಅರಿತಾಗಲೂ ಅದರೊಂದಿಗೆ ಬಹುಮುಖೀ ಸಂಬಂಧಗಳನ್ನು ಬೆಳೆಸಿಕೊಳ್ಳಲು ಹಿಂಜರಿಯುವ ನಾಚುಕುಳಿ ಅಂತರ್ಮುಖತೆ. ಆದ್ದರಿಂದಲೇ ಅವರ ಸಾಹಿತ್ಯಾಸೃಷ್ಟಿಯ ಯಶಸ್ಸಿನ ಹಿಂದೆ ಇರುವುದು ಸೀಮಿತ ಅನುಭವದ ಸಾರ್ಥಕ ಬಳಕೆಯೇ ವಿನಾಃ ಸಮೃದ್ಧ ಅನುಭವದ ದುಂದುಗಾರಿಕೆಯಲ್ಲಿ ತನ್ನ ತೆಕ್ಕೆಗೆ ಬಂದ ಅನುಭವಗಳನ್ನು ಪ್ರತಿನಿರ್ಮಿತಿ, ಸಾಮಾನ್ಯೀಕರಣ, ಅಂತರಂಗ ಪರಿವೀಕ್ಷಣೆ ಮುಂತಾದ ಹತ್ತು ಹಲವು ಸಾಹಿತ್ಯಕ ಸಾಧನಗಳ ಮೂಲಕ ಅನನ್ಯವಾಗಿಸುವ ಕಲೆಯಲ್ಲಿ ಚಿತ್ತಾಲರು ನಿಷ್ಣಾತರು. ಅವರಿಗಿರುವ ವೈಚಾರಿಕ ಪರಿಣತಿ ಮತ್ತು ಮಾಧ್ಯಮ ನಿಷ್ಠೆಗಳ ನಡುವಿನ ಕರ್ಷಣವೇ ಅವರ ಬರವಣಿಗೆಯ ಜೀವಂತಿಕೆಗೆ ಕಾರಣವಾಗಿದೆ. ಸಾಹಿತ್ಯವನ್ನು ಒಂದು ಕಲಾಮಾಧ್ಯಮವಾಗಿ ಪರಿಗಣಿಸಿದಾಗ, ಅದರಿಂದ ಅನ್ಯ ಅಪೇಕ್ಷೆಗಳನ್ನು ಮಾಡಿದಾಗ ಮಾತ್ರ ಅದು ಮಾನವನ ಅನುಭವ ಲೋಕಕ್ಕೆ ತನ್ನದೇ ಆದ ಕಾಣಿಕೆ ನೀಡಬಲ್ಲುದೆಂಬ ಅಚಲವಾದ ನಂಬಿಕೆ ಅವರದು. ಸಾಹಿತ್ಯ ರಚನೆಯೆಂದರೆ ಈಗಾಗಲೇ ತಿಳಿದಿರುವುದನ್ನು ಹೇಳುವುದಲ್ಲ. ಬರೆಯುವುದರ ಮೂಲಕವೇ ಅನುಭವವನ್ನು ಅರ್ಥೈಸಿಕೊಳ್ಳುವ ಕ್ರಿಯೆಯೆಂದು ಅವರು ಹಲವು ಬಾರಿ ಹೇಳಿದ್ದಾರೆ.

ತಮ್ಮ ಸಾಹಿತ್ಯ ರಚನೆಯ ಪ್ರಕ್ರಿಯೆ ಮತ್ತು ಅಂತರಂಗಿಕ ಬದುಕಿನ ಬೆಳವಣಿಗೆಯ ಬಗ್ಗೆ ಚಿತ್ತಾಲರಷ್ಟು ಸಮೃದ್ಧ ವಿವರಗಳನ್ನು ಒದಗಿಸಿರುವ ಕನ್ನಡ ಸಾಹಿತಿ ಮತ್ತೊಬ್ಬರಿಲ್ಲ. ಈ ವಿವರಗಳಲ್ಲಿ ಗಣನೀಯವಾದ ಅಂಶ ಸೃಜನಶೀಲ ಕಥೆ-ಕಾದಂಬರಿಗಳಿಗಿಂತ ಭಿನ್ನವಾದ ಬರವಣಿಗೆಯಲ್ಲಿ ಹರಡಿಕೊಂಡಿದೆ. ಅವರ "ಸಾಹಿತ್ಯ ಸೃಜನಶೀಲತೆ ಮತ್ತು ನಾನು" ಎಂಬ ಕೃತಿಯಂತೂ ಸೃಜನಪ್ರಕ್ರಿಯೆಯ ನಿಗೂಢ ಅಂತರಂಗಕ್ಕೆ ಬೆಳಕಿಂಡಿಗಳನ್ನು ಕಟ್ಟಿಕೊಡುವ ಪ್ರಯತ್ನವನ್ನು ಮಾಡುವ ಅನನ್ಯ ಬರವಣಿಗೆ ಇಂಥ ಬರಹಗಳು ಚಿತ್ತಾಲರ ಕೃತಿಗಳ ವಿಶ್ಲೇಷಣೆ ಮೌಲ್ಯ-ಮಾಪನಗಳಿಗೆ ಎಷ್ಟರಮಟ್ಟಿಗೆ ಅನಿವಾರ್ಯ ನಂಬಿಕೆಗೆ ಅರ್ಹ ಎಂಬ ವಿವಾದಾಸ್ಪದ ಪ್ರಶ್ನೆಗಳನ್ನು ಬದಿಗಿರಿಸಿ ನೋಡಿದಾಗ ಕೂಡ ಅದರ ಸಾಂಸ್ಕೃತಿಕ ಮಹತ್ವನ್ನು ಅಲ್ಲಗಳೆಯಲಾಗುವುದಿಲ್ಲ. ಉದಾರಹಣೆಗೆ ಸಾಹಿತ್ಯಕ ವಾತಾವರಣದಲ್ಲಿ ಸಹಜವಾಗಿಯೇ ಆಗುವ ಬದಲಾವಣೆಗಳು, ಸಂವೇದನಾಶೀಲ ಸಾಹಿತಿಯೊಬ್ಬನ ಅಂತರಂಗದ ಸ್ವಾಸ್ಥ್ಯವನ್ನು ಕಲಕಿ ಅರ್ಥಪೂರ್ಣವಾದ ಹೊಸ ಹುಟ್ಟಿಗೆ ಕಾರಣವಾದುದರ ದಾಖಲೆಗಳು ಇಂಥ ಬರವಣಿಗೆಯಲ್ಲಿ ಸಿಗುತ್ತದೆ. ಮೈಯ ಬದುಕು ಮತ್ತು ಮನಸ್ಸಿನ ಬದುಕಿನಲ್ಲಿ ಆದ ಪರಿವರ್ತನೆಗಳು ಬರಣಿಗೆಯ ವಿಕಾಸದಲ್ಲಿ ಒಡಮೂಡಿರುವ ಬಗೆಯನ್ನು ಇಲ್ಲಿ ಖಚಿತವಾಗಿ ಗುರುತಿಸಬಹುದು.

೧೯೫೭ ರಲ್ಲಿ ಪ್ರಕಟವಾದ 'ಸಂದರ್ಶನ' ಎಂಬ ಕಥಾಸಂಕಲನದಿಂದ ಹಿಡಿದು ೧೯೯೦ ರ 'ಪುರುಷೋತ್ತಮ' ಕಾದಂಬರಿಯವರೆಗಿನ ಚಿತ್ತಾಲರ ವಿವಿಧ ಕೃತಿಗಳನ್ನು ಪರಿಶೀಲಿಸುವುದಕ್ಕಿಂತ ಮೊದಲು ಅವರ ಬರವಣಿಗೆಯ ಹಿಂದಿನ ಕೆಲವು ಪ್ರಮುಖ ಸಂಗತಿಗಳನ್ನು ಇಲ್ಲಿ ಹೆಸರಿಸಬಹುದು.

೧. ಅವರ ಬರವಣಿಗೆಯಲ್ಲಿ ಹನೇಹಳ್ಳಿಗೆ ವಿಶೇಷ ಮಹತ್ವವಿದೆ. ಅವರ ನೆನ್ನೆ-ಇಂದುಗಳ ಭೌತಿಕ ವಿವರಗಳು ಅಲ್ಲಿ ಇದ್ದ ವ್ಯಕ್ತಿಗಳು, ಅಲ್ಲಿನ ಹಲವು ಕುಟುಂಬಗಳು ಮುಂಬಯಿಯೊಂದಿಗೆ ಪಡೆದುಕೊಂಡ ಸಂಬಂಧಗಳು, ಹೀಗೆ ಹಲವು ರೀತಿಯಲ್ಲಿ ಲೇಖಕರು ಅದನ್ನು ಕಟ್ಟಕೊಡುತ್ತಾರೆ.

ಆದರೆ ಹನೇಹಳ್ಳಿ ಕೇವಲ ಅವರ ಕೃತಿಗಳಿಗೆ ಪ್ರಾದೇಶಿಕತೆಯ ಸ್ಪರ್ಶಕೊಡಲೆಂದು ಒಡಮೂಡುವುದಿಲ್ಲ. ಚಿತ್ತಾಲರೇ ಹೇಳುವಂತೆ: ೧" ಉತ್ತರ ಕನ್ನಡ ಜಿಲ್ಲೆ, ಆದರಲ್ಲೂ ನನ್ನ ಹುಟ್ಟೂರಾದ ಹನೇಹಳ್ಳಿ ಇವು ನನ್ನ ಮಟ್ಟಿಗೆ ಬರೇ ನೆಲದ ಹೆಸರುಗಳಲ್ಲ, ಬದಲಾಗಿ ನನ್ನ ಸಾಹಿತ್ಯದ ಹುಟ್ಟಿಗೆ ಕಾರಣವಾಗಿ, ಅದರ ಚೈತನ್ಯಕ್ಕೆ ನಿರಂತರವಾದ ಜೀವಸಲೆಯಾಗಿ ನಿಂತ ಮೂಲಭೂತವಾದ ಪ್ರೇರಣಶಕ್ತಿಗಳು ಆಗಿವೆಯೆಂದೂ ನಾನು ನಂಬುತ್ತೇನೆ..........ಇವುಗಳೆಲ್ಲ ನನ್ನ ಸಾಹಿತ್ಯ ಕೃತಿಗಳಲ್ಲಿ ಪಾತ್ರಗಳ ಜೀವಂತ ಉಸಿರಾಟಕ್ಕೆ ಅವಶ್ಯಕವಾಗಿ ಬಂದ ಭೌತಿಕ ಪರಿಸರದ ಅಂಶಗಳು ಮಾತ್ರವಲ್ಲ ಅದೇ ತಾನೇ ಕಣ್ಣು ಬಿಡುತ್ತಿದ್ದ, ಹೆಜ್ಜೆ ಇಡುತ್ತಿದ್ದ, ತಲೆಯೆತ್ತಿ ನಿಲ್ಲುವ ಹವಣಿಕೆಯಲ್ಲಿನ ಎಳೆಯ ಜೀವಕ್ಕೆ 'ಬೆಳೆ ಗಟ್ಟಿಯಾಗು ಅರಳು' ಎಂದು ಪ್ರೋತ್ಸಾಹವಿತ್ತ ಜೀವಂತ ಸಂಗತಿಗಳೂ ಆಗಿವೆಯೆಂದು ನಾನು ಭಾವಿಸಿದ್ದೇನೆ."೧. ಎಂದೆನ್ನುತ್ತಾರೆ.

ಆದರೆ ಚಿತ್ತಾಲರು ಹನೇಹಳ್ಳಿಯ ಭೂತವನ್ನು ವರ್ತಮಾನದೊಂದಿಗೆ ಹೋಲಿಸುವುದರ ಮೂಲಕ ಅದನ್ನು ಇಡೀ ಮನುಕುಲದಲ್ಲಿ ಸಂಭವಿಸಿರುವ ಅಸ್ತಿತ್ವದ ಬಿಕ್ಕಟ್ಟಿಗೆ ಪ್ರತಿಮೆಯಾಗಿ ಪರಿವರ್ತಿಸುತ್ತಾರೆ. ಆದ್ದರಿಂದಲೇ 'ಪುರುಷೋತ್ತಮ' ಕಾದಂಬರಿಯಲ್ಲಿ ನಾಯಕನ ಸಿದ್ಧಿಯ ಚರಮ ಕ್ಷಣವೆಂದರೆ ಅವನು ಹನೇಹಳ್ಳಿಗೆ ಮತ್ತೆ ಜೀವ ತುಂಬಿ ತುಳುಕಾಡುವುದೇ ಆಗಿದೆ. ಹೀಗೆ ವಾಸ್ತವ ಮತ್ತು ಕಲ್ಪನೆಗಳ ನಡುವಿನ ಗಡಿಗೆರೆಗಳನ್ನು ಅಳಿಸಿಬಿಡುವಂತೆ ಹನೇಹಳ್ಳಿಯನ್ನು ಕಂಡರಿಸುವುದರ ಮೂಲಕ ಚಿತ್ತಾಲರು ಆಧುನಿಕ ಪುರಾಣವೊಂದರ ನಿರ್ಮಿತಿಯಲ್ಲಿ ತೊಡಗಿದ್ದಾರೆ.

೨. ತಾನು ವಿಜ್ಞಾನದ ವಿದ್ಯಾರ್ಥಿಯೇ ವಿನಾ ಸಾಹಿತ್ಯವನ್ನು ಅಭ್ಯಾಸ ಮಾಡಿದವರಲ್ಲವೆಂಬ ಮಾತಿಗೆ ಚಿತ್ತಾಲರು ವಿಶೇಷವಾದ ಒತ್ತುಕೊಡುತ್ತಾರೆ. ಹೀಗೆಂದಾಗ ವಿಜ್ಞಾನವೊಂದೇ ಸತ್ಯವೆಂಬ ಭ್ರಮೆಯ ಬದಲು, ಸಾಹಿತ್ಯವನ್ನು ಕುರಿತಾದ ಇದುವರೆಗಿನ ನಿಲುವುಗಳಿಗೆ ಹೊಸದೊಂದು ಆಯಾಮಗಳನ್ನು ಸೇರಿಸಬಹುದೆಂದು ಅವರು ತಿಳಿಯುತ್ತಾರೆ. ಅವರ ಸೃಜನಶೀಲ ಕೃತಿಗಳ ಮೇಲೆ ಇಂಥದೊಂದು ಅಧ್ಯಯನದ ನೇರ ಪರಿಣಾಮ ಏನಾಗಿದೆಯೆಂದು ಹೇಳುವುದು ಕಷ್ಟ. ಅಂಥ ಪ್ರಭಾವವನ್ನು ಅವರು ನಿರಾಕರಿಸುತ್ತಾರೆ ಕೂಡ, ಆದರೂ ಡಾ.ಜಿ.ಎಸ್.ಆಮೂರ ಅವರು ಹೇಳುವಂತೆ ೨" ಚಿತ್ತಾಲರ ಕಥೆಗಳನ್ನು ಓದುವಾಗ, ವಿಮರ್ಶಿಸುವಾಗ, ಈ ಹಿನ್ನೆಲೆಯ ಅರಿವಿಟ್ಟುಕೊಳ್ಳುವುದು ಉಪಯುಕ್ತವಾಗಿದೆ. ಅವರಿಗೆ ಸ್ವಂತದ ಭಾವಪ್ರಪಂಚವಿದ್ದಂತೆ ವೈಚಾರಿಕ ಪ್ರಪಂಚವೂ ಇದೆ. ಆದರೆ ಅವರ ಬೌದ್ಧಿಕ/ತಾತ್ವಿಕ ಕಾಳಜಿಗಳು ಕಥೆಯ ಚೌಕಟ್ಟನ್ನು ಬಿಟ್ಟು ಎಂದೂ ಹೊರಚೆಲ್ಲುವುದಿಲ್ಲ. ಇದು ಅವರ ಸಾಹಿತ್ಯದ ಮುಖ್ಯ ವೈಶಿಷ್ಟ್ಯಗಳಲ್ಲೊಂದು" ೨

೩. ತಮ್ಮ ಬದುಕಿನ ಮಹತ್ವದ ಭಾಗವನ್ನು ಮುಂಬಯಿ ಮಹಾನಗರದ ಮುಖಹೀನ ನಾಗರೀಕತೆಯ ವಿಷಮತೆ ನಡುವೆ ಕಳೆದಿರುವುದು ಚಿತ್ತಾಲರ ಬರವಣಿಗೆಯ ಕೆಲವು ಚಹರೆಪಟ್ಟಿಗಳನ್ನು ತೀರ್ಮಾನಿಸಿದೆ 'ಶಿಕಾರಿ' ಯಂಥ ಕಾದಂಬರಿ ಕನ್ನಡದ ಬೇರಾದ ಲೇಖಕನಿಗೂ ಸಾಧ್ಯವಿಲ್ಲವೆನ್ನುವಷ್ಟರ ಮಟ್ಟಿಗೆ ಮುಂಬಯಿಗೆ ಸೇರಿದ ಸಕಲ ಸಂಬಂಧಗಳ ಕೇಂದ್ರವೂ ಹಣವೇ ಆಗಿರುವಂಥ ಜೀವನಕ್ರಮವನ್ನು ತೀರ ಹತ್ತಿರದಿಂದ ಕಂಡುಂಡು. ಅವರ ಬಗ್ಗೆ ಕಳೆದ ತೀವ್ರ ವಿಷಾದ ಹಾಗೂ ದ್ವೇಷದ ಫಲವಾಗಿ ಅವರ ಈ ದಶಕದ ಬರವಣಿಗೆ ಮೂಡಿ ಬಂದಿದೆ. ಆದರೆ ಆ ಮರುಳುಗಾಡಿನ ನಡುವೆಯೂ ವ್ಯಕ್ತಿಯ ಹಂತದಲ್ಲಿ ಪ್ರೀತಿಯ, ಸಾರ್ಥಕತೆಯ ಹೂಗಳು ಅರಳಬಹುದೆಂಬ ಅದಮ್ಯ ಆಶಾವಾದ ಪ್ರಕಟವಾಗಿದೆ.

---

೧. ಚಿತ್ತಾಲರ ಕಥೆಗಳು, ಪ್ರಜಾಪ್ರಿಂಟರ್ಸ್ ಪ್ರೈವೇಟ್ ಲಿಮಿಟೆಡ್ ೧೯೮೩ ಪುಟ.

೨. ಯಶವಂತ ಚಿತ್ತಾಲರ ಆಯ್ದಾ ಕಥೆಗಳು, ಬಾಪ್ಕೋ ಪ್ರಕಾಶನ ೧೯೭೦ ಪುಟ ೧೧೧.

೪. ದ್ರಾವಿಡ ಭಾಷೆಯಲ್ಲದ ಕೊಂಕಣಿ ಚಿತ್ತಾಲರ ಮಾತೃಭಾಷೆಯಾಗಿರುವುದರಿಂದ ಪದಕೋಶ ಹಾಗೂ ವಾಕ್ಯ ರಚನೆಯ ಹಂತದಲ್ಲಿ ಅನೇಕ ಹೊಸ ಅಂಶಗಳನ್ನು ಕನ್ನಡದ ತೆಕ್ಕೆಗೆ ತರುವ ಕೆಲಸದಲ್ಲಿ ಚಿತ್ತಾಲರು ಯಶಸ್ವಿಯಾಗುತ್ತಾರೆ. ಇವರ ಗದ್ಯಶೈಲಿಯನ್ನು ಎಚ್ಚರಿಕೆಯಿಂದ ಅಭ್ಯಾಸ ಮಾಡಿದಾಗ ಇಂಥ ಹಲವು ಸಂಗತಿಗಳು ಸ್ಪಷ್ಟವಾಗುವ ಸಾಧ್ಯತೆಯಿದೆ.

ತಮ್ಮ ಸಾಹಿತ್ಯ ಜೀವನದ ಮೊದಲ ಹಂತದಲ್ಲಿ ನವ್ಯಪಂಥಕ್ಕೆ ಸೇರಿದ ಕಥೆಗಾರರೆಂದೇ ಹೆಸರು ಮಾಡಿದ ಚಿತ್ತಾಲರು ಶಿಕಾರಿ ಕಾದಂಬರಿಯ ಪ್ರಕಟಣೆಯ ನಂತರ ತಮ್ಮ ಜನಪ್ರಿಯತೆಯ ಪರಿಧಿಯನ್ನು ಹಬ್ಬಿಸಿಕೊಂಡರು. ೧೯೮೩ ರಲ್ಲಿ ಬಂದ ಕೇಂದ್ರ ಸಾಹಿತ್ಯ ಆಕಾಡೆಮಿ ಪ್ರಶಸ್ತಿ ಮತ್ತು ೧೯೮೧ ರಲ್ಲಿ ಉತ್ತರ ಕನ್ನಡ ಜಿಲ್ಲೆಯ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪದವಿ ಇವರ ಪಾಲಿಗೆ ಬಂದಿರುವ ಗೌರವಗಳಲ್ಲಿ ಮುಖ್ಯವಾದವು. ಇವರ ಕಾದಂಬರಿ 'ಮೂರುದಾರಿ' ಚಲನಚಿತ್ರವಾಗಿ ಮೂಡಿ ಬಂದಿದೆ. ಬೇರೆ ಕೆಲವು ಕಥೆಗಳು ಚಲನಚಿತ್ರಗಳಾಗಿವೆ. ಇವರ ಬರವಣಿಗೆಯನ್ನು ಕುರಿತ ಹಲವು ಮುಖ್ಯ ಲೇಖನಗಳು ಯಶವಂತ ಚಿತ್ತಾಲ ಕೆಲವು ಅಧ್ಯಯನಗಳು ಎಂಬ ಕೃತಿಯಲ್ಲಿ ಸಮಾವೇಶವಾಗಿವೆ. ಅರವತ್ತು ಮೀರಿದ ಈ ವಯಸ್ಸಿನಲ್ಲೂ ಕವಿತೆಯಂಥ ಹೊಸ ಮಾಧ್ಯಮದಲ್ಲಿ ಕುತೂಹಲ ತಳೆದಿರುವ ಚಿತ್ತಾಲರು ಕೆಲವೇ ಲಯಬದ್ಧ ಸಾಲುಗಳನ್ನು ರಚಿಸಿದ್ದಾರೆ. ಅವರ ಅತ್ಯಂತ ಮಹತ್ವಾಕಾಂಕ್ಷೆಯ ಕಾದಂಬರಿಯಾದ 'ಪುರುಷೋತ್ತಮ'ದ ನಂತರ ಮತ್ತೊಂದು ಕಾದಂಬರಿ 'ಕೇಂದ್ರ ವೃತ್ತಾಂತ' ಹಾಗೂ 'ಮನುಷ್ಯನನ್ನು ಅರಿಯುವುದಕ್ಕೆ' ಎಂಬ ಸುದೀರ್ಘ ಪ್ರಬಂಧವೊಂದರ ರಚನೆಯಲ್ಲಿ ನಿರತರಾಗಿದ್ದಾರೆ.

೬. ಯಶವಂತ ಚಿತ್ತಾಲರ ಕಥೆಗಳು ಒಂದು ಕಿರುನೋಟ

'ಉತ್ತುಮಿ' ಚಿತ್ತಾಲರ ಮಹತ್ವದ ಕಥೆಗಳಲ್ಲೊಂದಾಗಿ ಕಾಣಸಿಗುತ್ತದೆ. ಲೇಖಕರು ಗೆಳೆಯರೊಡಗೂಡಿ ಚರ್ಚಿಸಿದ್ದು, ಅದೂ ಲೈಂಗಿಕ ವಿಚಾರವಾಗಿ ಆನಂತರ ಶಾಲೆಯ ದಿನಗಳಲ್ಲಿ ಬಸ್ತ್ಯಾಂವ, ಅಂತೋನೀ, ವೆಂಕಟರಮಣ ಮೊದಲಾದವರೊಡಗೂಡಿ ಉತ್ತುಮಿ ಮನೆಯ ಬಾಗಿಲ ಬಳಿ ಕೂಗಿದ್ದು, ತದನಂತರ ಲೇಖಕರನ್ನು ಕುರಿತು ಉತ್ತುಮಿ ಬೈದು ಬುದ್ಧಿಹೇಳಿ, ಮತ್ತೆ ಈ ಕಡೆಬಂದರೆ ತಂದೆಗೆ ತಿಳಿಸುವುದಾಗಿ ಬೆದರಿಸಿ ಕಳಿಸುವುದು ಅಂದು ಕಲ್ಯಾಣಿಯ ಕೆಂಪುಮಶಿದೌತಿಯ ಬಗೆಗೆ ಇದ್ದ ಆಸಕ್ತಿ ಕೊನೆಗೆ ಹೇಸಿಕೆ ಹುಟ್ಟಿಸುವಂತಹ ಸ್ಥಿತಿ ತಲುಪುವುದನ್ನು ಕಾಣಬಹುದಾಗಿದೆ. ಇಲಿ ಉತ್ತುಮಿಯ ತಾಯಹೃದಯ ಮತ್ತು ಅದನ್ನು ಗುರುತಿಸಿದ ಆ ಎಳೆಯ ಲೇಖಕನ ಮನಸ್ಸು ಅದ್ಭುತವೇ ಸರಿ.

ಈ ಕಥೆಯಲ್ಲಿ ಗಮನಿಸಬೇಕಾದ ಒಂದು ಸಂಗತಿಯೆಂದರೆ ಏಳೆಂಟು ವರ್ಷಗಳ ಬಾಲ್ಯದ ಈ ಪ್ರಸಂಗವನ್ನು ಲೇಖಕ-ಗೆಳೆಯರೊಡನೆ ಚರ್ಚಿಸುವುದು. ಆ ಕುರಿತು ಕತೆ ಬರೆಯುವುದು ಪ್ರೌಢವಯಸ್ಕರಾದ ಮೇಲೆಯೇ ಆದ್ದರಿಂದ ಲೇಖಕನ ಸಾಹಿತಿಕ್ಕೆ ಪ್ರಶ್ನೆ ಇಲ್ಲಿ ಎದ್ದು ಕಾಣುತ್ತದೆ.

'ಕಳ್ಳ ಗಿರಿಯಣ್ಣ' ಈ ಕಥೆಯಲ್ಲಿ ಚಿತ್ತಾಲರು ತೋರಿಸುವ ಸಮಾಜವು ಸಾವಯವ ಸಂಪ್ರದಾಯಬದ್ಧ ಸಮಾಜ ಅತ್ಯಂತ ಕಾಳಜಿಯಿಂದ, ಸತ್ಯನಿಷ್ಠೆಯಿಂದ, ತಿಳುವಳಿಕೆಯಿಂದ ಅವರು ಸೃಷ್ಟಿಸುತ್ತಾರೆ. ಆದರೆ ಈ ಸಮಾಜದ ಮೌಲ್ಯವ್ಯವಸ್ಥೆಯನ್ನಾಗಲೀ, ವರ್ಗವ್ಯವಸ್ಥೆಯನ್ನಾಗಲೀ, ಗಂಭೀರವಾಗಿ ಪ್ರಶ್ನಿಸುವ ಯಾವ ಕ್ರಿಯೆಯೂ ಇಲ್ಲಿ ನಡೆಯುವುದಿಲ್ಲ. ಗಿರಿಯಣ್ಣ ಕಳ್ಳ ಕುಂಬಳಕಾಯಿ ಕಳುವು ಮಾಡುತ್ತಾನೆ. ಆದರೆ ೧ "ಅದು ದೇವರಿಗೆ ಬಿಟ್ಟ ಕಾಯಿ, ಯಾರಿಗೂ ಮಾರಬೇಡ "೧ ಎಂದು ತಾಯಿ ಉಪದೇಶ ಮಾಡಿದಾಗ ಕಳುವು ಮಾಡಿದ ಕಾಯನ್ನು ವಾಪಸ್ಸು ಮಾಡುತ್ತಾನೆ.

ಈ ಕಥೆಯಲ್ಲಿ ಚಿತ್ತಾಲರು ತೋರಿಸುವ ಸಮಾಜ ಸಂಪ್ರದಾಯಬದ್ಧ ಸಮಾಜವಾದುದರಿಂದಲೇ ಬೆಳೆ ಕೊಯ್ಲು ಬರದ ತಕ್ಷಣ ಅದನ್ನು ಮೊದಲು ದೇವರಿಗೆ ಸಮರ್ಪಿಸುವುದು ಸಂಪ್ರದಾಯವೇ ಸರಿ. ಹಾಗೆಯೇ ದೇವರಿಗೆ ಬಿಟ್ಟ ಕಾಯನ್ನು ಕದ್ದು ಕೊಯ್ದರೆ ಕೆಟ್ಟದ್ದಾಗುತ್ತದೆಂಬ ನಂಬಿಕೆಯೂ ಅಂದರೆ ಈ ಕಥೆಯಲ್ಲಿನ ಕಳ್ಳ ಗಿರಿಯಣ್ಣನ ನಂಬಿಕೆಯೂ ಸಂಪ್ರದಾಯವೇ. ಆ ಹಿನ್ನೆಲೆಯಲ್ಲಿ ಬಂದ ಮನಃಸ್ಥಿತಿಯೇ ಆಗಿದೆ.

ಬೊಮ್ಮಿಯ ಹುಲ್ಲುಹೊರೆ :

ಈ ಕಥೆಯು ಯಶವಂತ ಚಿತ್ತಾಲರ ಮೊಟ್ಟ ಮೊದಲ ಕಥೆಯಾಗಿದ್ದು ೧೯೪೯ ರಲ್ಲಿ ಪ್ರಕಟವಾಯಿತು. ಕುತೂಹಲದ ಸಂಗತಿಯೆಂದರೆ ಅದರ ವಸ್ತು ಕೆಳವರ್ಗದವರ ಶೋಷಣೆಯಾಗಿದ್ದು ಬೊಮ್ಮಿ ಕೆಳವರ್ಗದವರ ಪ್ರತಿನಿಧಿಯಾಗಿ ನಿಂತರೆ, ಪಾರ್ವತಮ್ಮ ಶೋಷಣೆ ಮಾಡುವಂತ ಮೇಲ್ವರ್ಗದ ಪ್ರತಿನಿಧಿಯಾಗಿ ನಿಲ್ಲುತ್ತಾಳೆ. ಕಡೆಗೆ ಅಕ್ಕಿಯನ್ನು ಬೀಸುವಾಗಲೂ ಎಂಜಲು ಮಾಡಿಯಾಳು, ತೆಗೆದು ಬಚ್ಚಿಟ್ಟುಕೊಂಡಾಳು ಎಂದು ಅನುಮಾನಿಸುವಷ್ಟರ ಮಟ್ಟಿಗೆ ಪಾರ್ವತಮ್ಮ ಬೊಮ್ಮಿಯನ್ನು ನೋಡುತ್ತಾಳೆ. ಬಡತನದ ಬೇಗೆಯಲ್ಲಿ ನೊಂದವರಿಗೆ ಸಹನೆ ಹಕ್ಕು ಎಂಬಂತೆ ಎಲ್ಲವನ್ನು ಸಹಿಸುವ, ಬಂದಂತೆ ಸ್ವೀಕರಿಸುವ ಉದಾರ ಪಾತ್ರವಾಗಿ ಬೊಮ್ಮಿಯು ಚಿತ್ರಿತವಾಗಿದ್ದಾಳೆ.

---

೧. ಯಶವಂತಚಿತ್ತಾಲರ ಐವತ್ತೊಂದು ಕಥೆಗಳು: ಪುಟ ೨೦

ಒಂದು ತತ್ವದ ಸಲುವಾಗಿ: ಇದೊಂದು ಹಾಸ್ಯಭರಿತ ಕತೆಯಾದರೂ ಕಾಮತರು ಒಂದು ಬಿಲ್ಲಿಯನ್ನು ಕೊಡದೆ ಆಡುವ ತತ್ವದ ಮಾತುಗಳು, ತಿಮ್ಮಣ್ಣ ಆ ಬಿಟ್ಟಲಯು ಸಿಗುವವರೆಗೂ ಬಸ್ಸನ್ನು ಮುಂದೆ ಹೋಗಲು ಬಿಡದ ದಿಟ್ಟತನ, ಇವರಿಬ್ಬರ ಈ ಕಾದಾಟದಲ್ಲಿ ಲೇಖಕರೇ ಸೋತು, ತಿಮ್ಮಣ್ಣನಿಗೆ ಒಂದಿ ಬಿಲ್ಲಿಯನ್ನು ಕೊಡುವುದು ಎರಡೂ ಸಂದರ್ಭಗಳಲ್ಲಿ ಕಾಮತರು ತಿಮ್ಮಣ್ಣ ಒಂದೆಡೆಗೆ ನಿಂತರೆ ಲೇಖಕರೇ ಮತ್ತೊಂದೆಡೆ ನಿಲ್ಲುತ್ತಾರೆ. ಕೊನೆಗೆ ಲೇಖಕರೇ ಕತೆಯ ಅಂತಿಮ ಹಂತದಲ್ಲಿ ೧''ಅಂತೂ ಕೊನೆಗೊಮ್ಮೆ ೭-೩೦ ಕ್ಕೆ ಬಸ್ಸು ಹೊರಟಿತು. ಅರ್ಧ ಗಂಟೆಯವರೆಗೆ ತುಂಬಿದ ಬಸ್ಸನ್ನೇ ಹಿಡಿದು ನಿಲ್ಲಿಸಿದ ಆ ತೂತಿನ ಬಿಲ್ಲಿಯಲ್ಲಿ ಅಡಗಿದ್ದ ತತ್ವದ ಮಹಿಮೆಯನ್ನು ಕಂಡು ಬೆರಗಾದೆ''೧ ಎನ್ನುವಲ್ಲಿ ಕಾಮತರ ಒಂದು ಬಿಲ್ಲಿಯಲ್ಲಿ ಅಡಕವಾಗಿರುವ ತತ್ವವೇನೆಂಬುದನ್ನು ಕಾಣದೇ ಹೋಗುತ್ತಾರೆ.

ಗುಂಡಾಭಟ್ಟಡ ಮಡಿ: ಇದೊಂದು ಹಾಸ್ಯ ಮತ್ತು ವ್ಯಂಗ್ಯತೆಯನ್ನೊಳಗೊಂಡ ಕಥೆಯಾಗಿದ್ದು, ಗುಂಡಾಭಟ್ಟರು ತಾಯಿಯು ಹಾಕಿಕೊಟ್ಟ ಹಾದಿಯಲ್ಲಿಯೇ ನಡೆಯುವಾತ, ಪ್ರತಿಯೊಂದಕ್ಕೂ ಮಡಿಯ ಹೆಸರು ಅಟ್ಟಿ, ಆದರಲ್ಲಿಯೇ ಕಾರ್ಯೋನ್ಮುಖರಾಗಿ, ಕಡೆಗೆ ತಮ್ಮ ಮಡಿಗೆ ಧಕ್ಕೆಯಾಗುತ್ತದೆಂಬ ಕಾರಣಕ್ಕಾಗಿಯೇ ಬೇರೆ ಮನೆಯೊಂದನ್ನು ಕಟ್ಟಿಸಿ ಹೋದದ್ದನ್ನು ಕಾಣಬಹುದು. ಆದರೆ ಅವರ ತೋಟದಲ್ಲಿ ಮಾವು, ಹಲಸಿನ ಹಣ್ಣಿನ ಮರಗಳಿದ್ದು, ಅವುಗಳ ಆಸೆಯಂತೂ ಭಟ್ಟರಿಗೆ ಇದ್ದೇ ಇತ್ತು.

ಮಾವಿನ ಕಾಯಿಯನ್ನು ರಾತ್ರೋರಾತ್ರಿ ಎತ್ತಿ ತರಲು ಹೋಗಿ ಅಣೇಕರ ತೋಟ ಪ್ರವೇಶಿಸಿ ಅವರನ್ನು ಮಲುಟ್ಟಿ ಮೈಲಿಗೆಯಾಗಿ ಕಡೆಗೆ ಇಡೀ ರಾತ್ರಿ ಹೆಂಡತಿಯ ಸೀರೆಯೊದ್ದು ಮಲಗಿ ಕಡೆಗೆ ಮಗನೂ ಮೈಲಿಗೆಯಾಗಿ ಸರ್ವೋತ್ತಮನ ಬಾಯಿಗೆ ವಿಚಾರ ಮುಟ್ಟಿ ಆತ ಪ್ರಚಾರ ಮಾಡಲು ಗುತ್ತಿಗೆ ಪಡೆದವನಂತೆ ಪ್ರಚುರಗೊಳಿಸಿ ಕತೆಯುದ್ದಕ್ಕೂ ಹಾಸ್ಯ, ವ್ಯಂಗ್ಯ ಮತ್ತು ಸಂಪ್ರದಾಯ ಮೀರಿದ ಮನಃಸ್ಥಿತಿಗಳು ಕಾಣುತ್ತವೆ.

ತಪ್ಪಿದ ಗುರಿ : ಈ ಕಥೆಯ ಮೂಲಕ ಯಶವಂತ ಚಿತ್ತಾಲರು ಹೆಣ್ಣು ಹೆತ್ತವರುಅವರ ಜವಾಬ್ದಾರಿಯನ್ನು ಕಳೆದುಕೊಳ್ಳಲು ಜೊತೆಗೆ ಓದಿದ ಉತ್ತಮ ಗಂಡೇ ಬೇಕೆಂದು ಬಯಸಿ, ಆ ಮುಖೇನ ತನ್ನ ಮಗಳು ಸುಸಂಸ್ಕೃತ ಕುಟುಂಬವನ್ನು ಸೇರಬೇಕೆಂಬ ಬಯಕೆ. ಅದನ್ನು ಈಡೇರಿಸಲು ಕಾರ್ಯೋನ್ಮುಖವಾಗುವ ರೀತಿಯು ಈ ಕಥೆಯಲ್ಲಿ ವ್ಯಕ್ತವಾಗಿದೆ.

ಮುಕುಂದನ ದಾಕ್ಷಿಣ್ಯ : ಈ ಕಥೆಯಲ್ಲಿನ ಪ್ರಧಾನ ಪಾತ್ರವೇ ಮುಕುಂದ. ಈತ ಅತೀ ನಾಚಿಕೆಯ ಸ್ವಭಾವದವನು. ತನ್ನ ತಂದೆಯವರು ಎಲ್ಲಿಯಾದರೂ ಹೋಗಲು ಹೇಳಿದೆ ನಾಚಿಕೆ ಎಂಬ ಉತ್ತರ ನೀಡಿ, ಈ ನಾಚಿಕೆಯಿಂದಲೇ ಇಡೀ ಆಸ್ತಿ ಕಳಕೊಂಡು ಬಿಡ್ತೀಯ. ಬಳೆಗಾರ ಬರಲಿ, ನಿನಗೂ ಜೋಡಿ ಬಳೆಗಳನ್ನು ತೊಡಿಸುತ್ತೇನೆ ಎನ್ನುವಷ್ಟರ ಮಟ್ಟಿಗೆ ನಾಚಿಕೆಯ ಸ್ವಭಾವದವನು. ಕಡೆಗೆ ಮಾವನೊಡನೆ ಕುಳಿತು ಚಹಾ ಕುಡಿಯಲು ಅಂಜುವ ಆತ ತನ್ನ ನಾಚಿಕೆಯ ಸ್ವಭಾವದಿಂದಲೇ ಕ್ಷೌರಿಕ ಈರ ೨ ರೂಪಾಯಿ ದಕ್ಕಿಸಿಕೊಂಡಾಗಲೇ ಆತನಿಗೆ ಅರಿವಾಗುತ್ತದೆ. ಈ ಎಲ್ಲಾ ಅಂಶಗಳನ್ನು ಬಹು ಕುಸುರಿಯ ಕೆಲಸದಿಂದ ಈ ಕತೆಯಲ್ಲಿ ಯಶವಂತ ಚಿತ್ತಾಲರು ನೇಯ್ದಿದ್ದಾರೆ ಎಂದರೆ ಅತಿಶಯೋಕ್ತಿಯಾಗಲಾರದು.

---

೧. ಯಶವಂತ ಚಿತ್ತಾಲ: ಐವತ್ತೊಂದು ಕತೆಗಳು : ಪುಟ ೨೮

ಪೀಜಿ : ಈ ಕಥೆಯಲ್ಲಿ ತನಗಿಂತ ಎಷ್ಟೋ ವರುಷಗಳಿಂದ ಚಿಕ್ಕವನಾದ, ಒಮ್ಮೆ ತನ್ನ ವಿದ್ಯಾರ್ಥಿಯೂ ಆಗಿದ್ದ ಅರವಿಂದನ ಲಗ್ನದಲ್ಲಿ ತನ್ನ ಮನಃಶಾಂತಿಯನ್ನು ಕದಡಿಕೊಂಡ ಅನಂತುವಿನ ಮನಃಸ್ಥಿತಿ ತೊಳಲಾಟದ ಈ ಕತೆಯಲ್ಲಿ ಅತ್ಯುತ್ತಮವಾಗಿ ಅಭಿವ್ಯಕ್ತಿಗೊಂಡಿದೆ. ತನಗೂ ಅಂದು ಮುಂಬಯಿಯಲ್ಲಿ ಮನೆ ಸಿಕ್ಕಿದರೆ ತನ್ನ ಮತ್ತು ಸುಮತಿಯ ಮದುವೆ ಆಗಬಹುದಿತ್ತು ಎಂದು ತೊಳಲಾಡುತ್ತಾನೆ. ಆದರೂ ಅರವಿಂದ ಮತ್ತು ಆತನ ಹೆಂಡತಿಯು ಒಟ್ಟಿಗಿರುವುದು ಅನಂತುವಿನ ಆಸೆಯಾದರೂ ತನ್ನ ಮತ್ತು ಅರವಿಂದನ ನಡುವೆ ಬಂದು ನಿಂತ ಅರವಿಂದನ ಹೆಂಡತಿ, ಬೇರೆ ಮನೆ ಮಾಡಲು ಸೂಚಿಸುವುದು ಅನಂತುವಿನ ಮನದಲ್ಲಿ ಕೋಲಾಹಲವನ್ನು ಎಬ್ಬಿಸುತ್ತದೆ. ಪೇಯಿಂಗ್ ಗೆಸ್ಟ್ ಎಂಬುದನ್ನು ಪೀಜಿ ಎಂಬ ಶೀರ್ಷಿಕೆಯಡಿಯಲ್ಲಿ ಅತ್ಯಂತ ಮನೋಜ್ಞವಾಗಿ ಚಿತ್ರಿಸಿದ್ದಾರೆ.

ಸಂದರ್ಶನ : ಇದರ ಹೆಸರೇ ತಿಳಿಸುವಂತೆ ಮಾಧವನ ಸಂದರ್ಶನದ ಸುತ್ತಲೂ ಹೆಣೆದ ಕಥೆಯೇ ಸಂದರ್ಶನ. ಉತ್ತಮ ಉಡುಪಿನಿಂದಲೇ ಹೋದರೆ ಮಾತ್ರ ಕೆಲಸ ಎಂಬ ಮನಃಸ್ಥಿತಿ ಒಂದೆಡೆಯಾದರೆ, ಕೆಲಸ ಕೊಡುವುದು ಉಡುಪಿಗೇ ಎಂಬ ಪ್ರಶ್ನೆಯಂತೆ ನಡೆಯುವ ಅಂತೆಯೇ ಕೊನೆಗೆ ವೂಲನ್ ಕೋಟನ್ನು ತ್ಯಜಿಸುವ ಮಾಧವನ ಮನಃಸ್ಥಿತಿಯೂ ಬೇರೆಯೇ ಆಗಿ ನಿಲ್ಲುತ್ತದೆ. ಆದರೆ ವಿರುದ್ಧ ಮುಖದಲ್ಲಿರುವವರ ಏಕಮಾತ್ರ ಆಸೆಯೂ ಕೆಲಸ ಸಿಗಬೇಕೆಂಬುದೇ ಆಗಿತ್ತು. ಕೊನೆಗೂ ಮಾಧವ ಕೆಲಸ ದಕ್ಕಿಸಿಕೊಳ್ಳುತ್ತಾನೆ. ಆದರೆ ಉಡುಪಿನಿಂದಲ್ಲ ವ್ಯಕ್ತಿತ್ವದಿಂದ.

ಆಬೋಲೀನ: ಈ ಕಥೆಯ ಪ್ರಮುಖ ಪಾತ್ರದ ಹೆಸರು ಅಬೋಲಿನ. ಇದು ಕೊಂಕಣಿ ಭಾಷೆಯಲ್ಲಿ ಹೂವಿನ ಹೆಸರೂ ಹೌದು. ಆಟೋಲೀನ ಮತ್ತು ಸುಮತಿ ಸಹಪಾಠಿಗಳು. ೧೪ ವರ್ಷ ವಯಸ್ಸಿನವರು. ಪರಸ್ಪರ ಆತ್ಮೀಯರು. ಆದರೆ ಲೈಂಗಿಕ ಪ್ರಜ್ಞೆಯೇ ಇಲ್ಲದ ವಯಸ್ಸಿನಲ್ಲಿ ಗಂಡಸಿನ ಸ್ಪರ್ಶಕ್ಕೆ ಬಸುರಾಗುವಂತೆ ಮನವೇಲ ತಿಳಿಸಲಾಗಿ ಆತನ ಸ್ಪರ್ಶಕ್ಕೆ ಬಸುರಾಗಿರುವುದಾಗಿ ತಿಳಿದು ತೊಳಲಾಡುವ ಅತ್ಯಂತ ಮುಗ್ಧ ಮತ್ತು ತಲೆಬಾಗುವ ಪಾತ್ರ ಆಬೋಲೀನ. ಮನವೇಲ ಇಬ್ಬರು ಹೆಂಡಿರನ್ನು ಕಳೆದುಕೊಂಡವನಾದರೂ ಆಬೋಲೀನ ಜೀವನವನ್ನು ಹಾಳು ಮಾಡುವಂತ ನೀಚ. ಆತನ ಕಬಂಧ ಬಾಹುವಿನಲ್ಲಿ ಸಿಲುಕಿದ ಆಬೋಲೀನಳು ಸಾವಿನೊಂದಿಗೆ ಅಂತ್ಯವಾಗುವ ಕಥೆ ಮನಮೋಹಕವಾಗಿ ಮೂಡಿ ಬಂದಿದೆ.

ಸುಮತಿಯು ಮುಗ್ಧ ಮನಸ್ಸಿನ ಹುಡುಗಿಯೇ ಆದರೆ ಈಗ ಬೆಳೆದು ದೊಡ್ಡವಳಾಗಿ ಮದುವೆಯಾಗಿದ್ದಾಳೆ. ಅಂದಿನ ಆಬೋಲೀನಾಳ ಬಸುರಿಯಾಗುವುದು ಎಂದರೆ ಹೇಗೆ? ಎಂಬ ಪ್ರಶ್ನೆಗೆ ಸುಮತಿಯ ಬಳಿ ಉತ್ತರವಿದೆ. ಆದರೆ ಇಂದು ಆಬೋಲೀನಾ ಇಲ್ಲ. ಆದರೆ ಆಬೋಲೀನ್ ಹೊಟ್ಟೆ ನೋಡಿದಾಗಲೂ ಆಕೆಯ ನೆನಪಾಗುವ ಸಹೃದಯ ಪಾತ್ರವಾಗಿ ಚಿತ್ರಿತವಾಗಿದೆ.

ಮುದಿಹುಚ್ಚು: ೧"ಮುದಿಹುಚ್ಚು ಕತೆ ಅಗತ್ಯಕ್ಕಿಂತ ಸ್ವಲ್ಪ ಹೆಚ್ಚು ಉದ್ದವಾಯಿತೇನೋ ಅನಿಸುತ್ತದೆ. ಅಷ್ಟನ್ನು ಬಿಟ್ಟರೆ, ಒಂದು ನಿರ್ಮಲ ವ್ಯಕ್ತಿತ್ವವು ಅನಿರೀಕ್ಷಿತವಾಗಿ, ವಿನಾಕಾರಣ ದೌಷ್ಟ್ಯಕ್ಕೆ ಬಲಿಯಾದ ಬಗ್ಗೆ. ಮರುಕ, ಸಹಾನುಭೂತಿಗಳು ಓದುಗರ ಮನಸ್ಸನ್ನಾವರಿಸುತ್ತವೆ"೧ ಎಂಬುದು ಸತ್ಯವೇ ಸರಿ. ಮಂಜುನಾಥ ಶೆಟ್ಟಿಯವರು ಬದುಕಿ ಬಾಳಿದವರಾದರೂ ತಮ್ಮ ಬದುಕು ದುರಂತಕ್ಕೀಡಾಗಿ ತನ್ನ ಏಕಮಾತ್ರ ಪುತ್ರ ರಾಮಕೃಷ್ಣನನ್ನೂ, ಹೆಂಡತಿಯನ್ನೂ ಕಡೆಗೆ ಶ್ರೀಮಂತಿಕೆಯನ್ನೂ ಕಳೆದುಕೊಂಡು

---

೧. ಯಶವಂತ ಚಿತ್ತಾಲ: ಡಾ॥ಕೆ.ಎಲ್.ಗೋಪಾಲಕೃಷ್ಣಯ್ಯ:ಸಂ:ಡಾ॥ಪ್ರಧಾನ್‌ಗುರುದತ್ತ ಪು೧-೯೮

ಸುತ್ತಲಿನವರನ್ನೇ ತನ್ನವರೆಂದು ಭಾವಿಸಿದ ಮಂಜುನಾಥಶೆಟ್ಟಿಗೆ ಸುಶೀಲಳ ಮಗನೇ ರಾಮಕೃಷ್ಣನಂತೆ ಕಂಡು ನೇವಾಳವನ್ನು ಕೊಟ್ಟನಾದರೂ, ಆ ನಂತರ ಯೋಚಿಸಿ ಅಂತ್ಯಕ್ರಿಯೆಯ ಕಾರ್ಯಗಳಿಗೆ ಬೇಕಾಗುತ್ತದೆಂದು ತಿಳಿದು ಮತ್ತೆ ಕೇಳಲು ಹೋದಾಗ ಇಲ್ಲದ ಅಪವಾದಕ್ಕೆ ತುತ್ತಾಗಿ ಅದನ್ನು ಹೊತ್ತಿಯೇ ಸಾಯುತ್ತಾನೆ. ಇಲ್ಲಿ ಸತ್ಯವನ್ನು ಹೇಳಿದರೂ ನಂಬದ ಜನ ಸತ್ಯವೆಂದು ಸಾಧಿಸಲಾಗುವ ಮಂಜುನಾಥಶೆಟ್ಟಿ ಒಂದೆಡೆ ನಿಂತರೆ, ಸುಶೀಲಕ್ಕನ ಸುಳ್ಳನ್ನು ಸತ್ಯವೆಂದು ನಂಬುವ ಮತ್ತು ಸುಳ್ಳನ್ನು ಸತ್ಯವೆಂದೇ ಸಾಧಿಸುವ ಸುಶೀಲಕ್ಕ ಮತ್ತೊಂದೆಡೆ ನಿಲ್ಲುತ್ತಾರೆ.

ರಾಧಕ್ಕನ ಮನೋರಥ: ರಾಧಕ್ಕ ಒಂದು ಸಾಮಾನ್ಯ ಹೆಣ್ಣುಮಗಳು. ಆಕೆಗಿರುವ ಆಸೆ ಒಂದು ತನ್ನ ಮಗಳಾದ ಸುಮತಿಯ ವಿವಾಹ, ತಾನು ಅಡುಗೆಯವಳೆಂಬ ಕಾರಣಕ್ಕಾಗಿ ತನ್ನ ಮಗಳಿಗೆ ಮದುವೆಯಾಗುತ್ತಿಲ್ಲವೆಂಬ ನೋವು ರಾಧಕ್ಕನಿಗೆ ಮಾತ್ರವಲ್ಲ ಸುಮತಿಗೂ ಇದೆ. ಯಮುನೆಯೊಡನಿರುವ ಮನಸ್ತಾಪವನ್ನು ಮರೆತು ಆಕೆಯ ಮನೆಗೆ ಬಂದ ಗೋಪಾಲನಿಗಾಗಿ ಬಿಸಿಲಲ್ಲಿಯೇ ಕಾಯುವ ಆಕೆಯ ಮಗಳ ಮದುವೆಯ ಆಸೆ ಎಷ್ಟೆಂಬುದನ್ನು ತಿಳಿಯಬಹುದು. ಆಕೆಯ ಮನದಲ್ಲಿದ್ದ ಮಗಳ ಆಸೆ ಗೋಪಾಲ, ಯಮುನೆಯರು ಮಾತನಾಡುವ ಮಾತನ್ನು ಸಹೃದಯತೆಯಿಂದ ಬೇರೆಯದೇ ರೀತಿಯಲ್ಲಿ ಕನಸು ಕಾಣುತ್ತಾಳೆ. ಧಾರವಾಡದಿಂದ ಗೋಪಾಲನ ಪತ್ರದ ನಿರೀಕ್ಷೆಗೂ ಆಕೆ ಕಾಯಲು ಸನ್ನದ್ಧಳಾಗುವ ಮನಸ್ಸು ಆಕೆಯದು.

ಅಡ್ಡಬಿದ್ದ ಮರ: ಈ ಕತೆಯಲ್ಲಿ ಸುರೇಶನು ತಂದೆಯನ್ನು ತೀರಿಕೊಂಡ ನೋವು ಚ್ಲಾರ್‌ಚಾರ್ಮ್‌ನಲ್ಲಿ ಸತ್ತ ಮುದುಕ, ಮನೆಯ ಎದುರಿಗಿದ್ದ ಮರಬಿದ್ದಾಗ ಮರುಕಳಿಸುವ ಸೂಕ್ಷ್ಮ ಮನಸ್ಸಿನ ಸುರೇಶನಿಗೆ ತನ್ನ ಮದುವೆಗೆ ಅಡ್ಡಿಯಾದ ನಿರ್ಮಲೆ ಅಜ್ಜಿಯು ಸತ್ತ ನಂತರ ಆನಂದವೇ ಆಗುತ್ತದೆ. ಆದರೆ ಅದಕ್ಕಾಗಿ ಆತ ನೊಂದು ಕ್ಷಮೆ ಯಾಚಿಸುತ್ತಾನೆ. ಈ ಕತೆಯಲ್ಲಿನ ಮುಕ್ತ ಎಂಬ ಪಾತ್ರವು ಸುರೇಶನ ಬಳಿ ಒಂದು ಮರ ಖಾಲಿಯಾದ ನಂತರ ದಾರಿ ಸುಗಮವಾಯಿತೆಂದು ಹೇಳುವಾಗ, ನಿರ್ಮಲೆಯ ಅಜ್ಜಿಯು ತೀರಿಕೊಂಡ ಅನಂತರ ಇವರ ಮದುವೆಯೂ ಸುಗಮವಾಯಿತೆಂಬ ಸಂಕೇತ ಅಭಿವ್ಯಕ್ತವಾಗಿದೆ.

ಖಾಲಿಕೋಣೆ: ಈ ಕತೆಯು ಅತೀವ ಮನಸ್ಸಿಗೆ ಸಂಬಂಧಿಸಿದುದು ಇಲ್ಲಿನ ನಿರ್ಮಲೆಯು ತನ್ನ ವಯಸ್ಸಿನ ಮನೋಸ್ಥಿತಿಯನ್ನು ಹಿಡಿತದಲ್ಲಿಡಲಾಗದೆ, ತಾನು ಕಾಣದೇ ಇರುವ ಅನಂತುವನ್ನು ಅತೀವವಾಗಿ ಮೂರೇ ದಿನಗಳಲ್ಲಿ ಪ್ರೀತಿಸುತ್ತಾಳೆ. ಕುಮುದೆಯ ಬಾಯಿಂದ ಅನಂತುವಿನ ವಿಚಾರವನ್ನು ಕೇಳುವ ಮೊದಲೇ ಖಾಲಿಕೋಣೆಯಲ್ಲಿ ಅನಂತುವಿನೊಡನೆ ಕನಸು ಕಾಣುತ್ತಾಳೆ. ಕುಮುದೆಯಿಂದ ಅನಂತು ಸತ್ತ ವಿಚಾರವನ್ನು ತಿಳಿದು ಆತ ತನಗೆ ಸಂಬಂಧಿಕನೇ ಎಂದು ಒಪ್ಪಿಕೊಂಡು ಅಳುತ್ತಾಳೆ. ನಗಲು ಯತ್ನಿಸುತ್ತಳಾದರೂ ಆಕೆಗೆ ನಗಲಾಗದಷ್ಟು ನೋವಾಗಿರುತ್ತದೆ. ಕ್ಷಣ ಕ್ಷಣಕ್ಕೆ ಆಕೆಯ ಕಂಬನಿ ಮಾತ್ರ ಹೆಚ್ಚುತ್ತಿರುತ್ತದೆ.

ಅಪರಿಚಿತರು: ಈ ಕಥೆಯು ವಿಶೇಷವಾದುದು. ರಾಮಕೃಷ್ಣ ಜಾನಕಿಯರು ದುಡಿವ ದಿನಗಳಲ್ಲದೆ ರಜೆಯ ದಿನಗಳಲ್ಲೂ ಅತಿಥಿಗಳ ಸತ್ಕಾರ ಮಾಡಿಕೊಂಡು ನಿರಂತರವಾಗಿ ಸಿಕ್ಕ ಮೂರು ದಿನಗಳ ರಜೆಯನ್ನು ಸುಖವಾಗಿ ಕಳೆಯಲು ಬಯಸುವ ಸಾಮಾನ್ಯ ಜೋಡಿಗೆ ಅಡ್ಡಿಯಾಗಿ ಅಪರಿಚಿತರು ಪ್ರವೇಶವಾಗಿ ಆ ಸುಖಕ್ಕೂ ಅಡ್ಡಿಯಾಗುವ ಅದನ್ನು ಪ್ರತಿಭಟಿಸುವ ಸಂಕೇತವಾಗಿ ಸ್ಟೀಮ್‌ರೋಲರ್‌ಗೆ ವಿರೋಧ ಒಡ್ಡಿದ್ದ ಕಲ್ಲು ಸಾಮಾನ್ಯ ಕಲ್ಲಿನಂತೆ ಆಗಿಬಿಡುವ ಸಂಕೇತ ಇಲ್ಲಿ ಧ್ವನಿತವಾಗಿದೆ.

ಮಲ್ಲಿನಾಥ ಮತ್ತು ಗಾನಪ್ರಿಯ ಶಂಭುಶಾಸ್ತ್ರಿ:- ಈ ಎರಡೂ ಕತೆಗಳು ಹೆಚ್ಚು ಕಡಿಮೆ ಒಂದೇ ರೀತಿಯಾದವು. ತಮ್ಮನ್ನು ಗುರುತಿಸಿಕೊಳ್ಳುವ ತಮ್ಮ ತಪ್ಪನ್ನು ಒಪ್ಪಿಕೊಳ್ಳಲಾರದ ಪಾತ್ರಗಳಿವು. ಉಗಾಂಭಟ್ಟರು ತಾವು ಅತೀವ ಓದುವ ಆಸಕ್ತಿಯುಳ್ಳವರೆಂದು ಗುರುತಿಸಿಕೊಳ್ಳಲು ಹೋಗಿ ನಗೆಪಾಟಲಿಗೀಡಾಗುತ್ತಾರೆ. ಅಂತೆಯೇ ಶಂಭುಶಾಸ್ತ್ರಿಗಳು ಗಾನಪ್ರಿಯರೆಂದು ಹೆಸರಾದವರು. ಅವರು ಸುಗುಣಾಬಾಯಿಯವರ ಸಂಗೀತವನ್ನು ತುಂಬಾ ಕೇಳಿದ್ದೇನೆ. ಹಾಗೆ, ಹೀಗೆ ಎಂದೆಲ್ಲಾ ಹೇಳಿಕೊಂಡು ಕೊನೆಗೆ ಹಾಡಿದವರು ಸುಗುಣಾಬಾಯಿಯವರಲ್ಲ, ಅವರ ಅನುಪಸ್ಥಿತಿಯಲ್ಲಿ ಬೇರೆಯವರಿಂದ ಹಾಡಿಸಲಾಯಿತೆಂದಾಗ, ಅದಕ್ಕೇ ತನಗೆ ಎರಡನೇ ಹಾಡು ರುಚಿಸಲಿಲ್ಲ ಹಾಗಾಗಿ ನಿದ್ರೆ ಹತ್ತಿತೆಂದು ಪಲಾಯನವಾದಿಯಾಗುತ್ತಾನೆ. ಮಲ್ಲಿನಾಥ ಕತೆಯಲ್ಲಿನ ಭಟ್ಟರು ಹೊಗಳುಭಟ್ಟರೇ ಆಗಿ ಕಾಣಿಸಿಕೊಳ್ಳುತ್ತಾರೆ.

ಸೆರೆ ಮತ್ತು ಹಾವು: ಎರಡೂ ಕಾಮದ ವಸ್ತುವನ್ನಿರಿಸಿಕೊಂಡಿರುವ ಕತೆಗಳು. ಸೆರೆ ಕತೆಯಲ್ಲಿ ದೇವಿ ಮತ್ತು ಆಚಾರಿಯ ಹೆಂಡತಿಯಿಂದ ವಿಚಲಿತನಾದ ನಾಯಕ ಮನೆಯ ಮುರಿದ ಬಾಗಿಲು ಸರಿಮಾಡಲು ಬಂದವನು. ದೇವಿಯ ಸೆರೆಯಿಂದ ತಪ್ಪಿಸಿಕೊಳ್ಳಬೇಕೆಂದು ಮಾಡಿದ ಪ್ರಾಮಾಣಿಕ ಮತ್ತು ನಿಷ್ಠುರ ಪ್ರಯತ್ನವೆಲ್ಲವೂ ದೇವಿಯೊಂದಿಗೆ ಸಮಾಗಮ ಸುಖ ಪಡೆಯಬೇಕೆಂಬ ಆಸೆಯನ್ನು ದೃಢಗೊಳಿಸುತ್ತ ಹೋಗಿ ದೇವಿಯಲ್ಲಿ ಲೀನವಾಗುತ್ತಾನೆ. ಬ್ರಹ್ಮಚಾರಿಯೆಂದು ಭದ್ರವಾಗಿದ್ದ ಆತನ ಮನದ ಬಾಗಿಲು ತೆರೆದು ದೇವಿಯಲ್ಲಿ ಸೆರೆಯಾಗುತ್ತಾನೆ.

ಹಾವು: ಕತೆಯಲ್ಲಿಯೂ ನಾಯಕ, ಚಿಕ್ಕಪ್ಪ, ದೇವಿ ಈ ಪಾತ್ರಗಳ ನಡುವೆ ಹಾವು ಹಾಸುಹೊಕ್ಕಾಗಿದ್ದು ಕಾಮವೇ ಇಲ್ಲಿ ಪ್ರಧಾನ ಪಾತ್ರ ವಹಿಸುತ್ತದೆ. ಕಾಮದ ಬೇಗುದಿಯಲ್ಲಿ ಬೇಯುವ ಚಿಕ್ಕಪ್ಪ, ಅನಾರೋಗ್ಯ ಬಿಕ್ಕಟ್ಟು, ಚಿಕ್ಕಪ್ಪನ ಆಸೆ ತೀರಿಸಲೆಂದೇ ದೇವಿಯನ್ನು ಕೆಲಸಕ್ಕಿರಿಸಿದ್ದು ಹೆಂಡತಿಗೆ ಅನ್ಯಾಯ ಮಾಡದ ಚಿಕ್ಕಪ್ಪ, ದೇವಿಯ ಮೋಹಕ್ಕೊಳಗಾಗುವ ನಾಯಕ ದೇವಿಯಿಂದ ದೂರವೇ ಉಳಿಯುತ್ತಾನೆ. ಒಟ್ಟಾರೆ ಕಾಮದ ಸುತ್ತ ಇಡೀ ಪಾತ್ರಗಳು ಬೇಕು ಬೇಡವೆಂಬಂತೆ ಸುತ್ತುವುದನ್ನು ಕಾಣಬಹುದಾಗಿದೆ.

ಅದೃಷ್ಟ: ಸಾಮಾನ್ಯವಾದ ಕತೆಯಾದರೂ ರುಗ್ಣಶಯ್ಯೆಯಲ್ಲಿದ್ದ ನೀಲಕಂಠನ ಸುತ್ತಲೂ ಸುಳಿಯುವ ಮೃತ್ಯುವಿನ ವ್ಯಗ್ರ, ಅಸ್ಪಷ್ಟ, ಕರಾಳ ದರ್ಶನ, ಅವನ ಪ್ರಶ್ನೆಯ ಪಟಲದ ಮೇಲೆ ತೆರೆ-ತೆರೆಯಾಗಿ ಹಬ್ಬಿ, ಮಾತಿನ ತುಂತುರು ಹನಿಯಾಗಿ ಚಿಮ್ಮುವಂತೆ ನಿಯೋಜಿಸಿದ ಕತೆಗಾರನ ತಂತ್ರ ಅದ್ಭುತವಾದುದು. ಈ ಕತೆಯಲ್ಲಿ ಸಾವು ನೇರವಾಗಿ ಅನುಭವಕ್ಕೆ ಬರುವುದು ಪೊಕ್ಕ ಮತ್ತು ನೀಲಕಂಠನಿಗೆ ದೊಡ್ಡವರಿಗಲ್ಲ. ಪೊಕ್ಕನ ಅಣ್ಣನಿಗೆ ಸಾವು ಸಂಭವಿಸಿದರೆ, ನೀಲಕಂಠನಿಗೆ ಸಾವು ದೇವರ ಕೋಣೆಗೆ ಹೋಗುವ ಬಾಗಿಲ ಮೇಲ್ತುದಿಯಲ್ಲಿ ತಟ್ಟಿ ಹೊರ ಬರುತ್ತಾನೆ. ಪೊಕ್ಕ ತನ್ನ ಅಣ್ಣ ಹೋದ. ಆತ ತಿರುಗಿ ಬರುವುದಿಲ್ಲವಂತೆ ಎಂದು ಹೇಳುವಲ್ಲಿ ಆತನ ಮನೋಯಾತನೆ ಧ್ವನಿತವಾಗಿದೆ.

ಪಯಣ: ಇದು ಚಿತ್ತಾಲರ ಮೃತ್ಯು ಸಂಬಂಧವಾದ ಕತೆಗಳಲ್ಲಿ ಶ್ರೇಷ್ಠವಾದುದು. ಜೀವನದಂತೆ ಮರಣವೂ ಅತ್ಯಂತ ಸಹಜವಾದ, ನೈಸರ್ಗಿಕವಾದ ಘಟನೆ, ಅದರ ಕರೆ ಬಂದಾಗ ಯಾವ ಪ್ರತಿಭಟನೆ ಇಲ್ಲದೆ ಒಪ್ಪಿಕೊಳ್ಳುವುದು ಶಕ್ಯ. ಈ ಕತೆಯಲ್ಲಿ ಮೃತ್ಯು ಬಾಗಿಲಲ್ಲಿ ಹಣಕಿಕ್ಕಿ ಪಯಣಕ್ಕೆ ಸಿದ್ಧನಾಗಿರಲು ಹೇಳಿ ಹೋಗುವುದು, ಹೆಸರಿಲ್ಲದ ನಾಯಕ ಅದಕ್ಕೆ ಪ್ರತಿಕ್ರಿಯೆಯಾಗಿ ಯಾವುದೇ ಆಕ್ಷೇಪಣೆ ಇಲ್ಲದೆ ಆ ಕರೆಯ ಸಂಪೂರ್ಣ ಹಾಗೂ ತರ್ಕಬದ್ಧವಾದ ತಿಳಿವಿಲ್ಲದೆ ಯಾರು ಯಾತಕ್ಕಾಗಿ ಎಲ್ಲಿಗೆ ಕರೆದರು ಎಂಬ ಶಂಕೆಯೇ ಇಲ್ಲದ ತವಕದಿಂದ ಸಿದ್ಧನಾಗುವುದು.

ಆ ಆತಂಕದಲ್ಲಿ ಕಲಕತ್ತೆಯಲ್ಲಿನ ತನ್ನ ವಹಿವಾಟುಗಳೂ ಜಗತ್ತಿನಲ್ಲಿ ತನ್ನ ಜವಾಬ್ದಾರಿ ಇವುಗಳ ಅವಶ್ಯಕತೆಯನ್ನು ಅವನು ತಿರಸ್ಕೃತವಾಗಿ ಪರಿಗಣಿಸುವುದು. "ಮುಂದಿನ ನಿಮ್ಮ ಮುಕ್ಕಾಮು ಎಲ್ಲಿ?" ಎಂಬ ಹೋಟೆಲಿನ ಕೌಂಟರಿನ ರಿಜಿಸ್ಟರಿನಲ್ಲಿದ್ದ ಪ್ರಶ್ನೆಗೆ ಗೊತ್ತಿಲ್ಲ ಎಂದು ಬರೆಯುವುದು ಮುಂತಾದ ಅಂಶಗಳೆಲ್ಲ ಕಥೆ ಇಡಿಯಾಗಿ ಒಂದು ರೂಪಕವಾಗಲು ದುಡಿದಿದೆ ಬದುಕನ್ನು ಕುರಿತ ಕಾಳಜಿ ಈ ಕಥೆಯಲ್ಲಿ ಮಾತ್ರ ಕಂಡುಬರುತ್ತದೆ. ಸಾವಿನ ನೆನಪು ಮನಸ್ಸಿನಲ್ಲಿ ನೆಲೆನಿಂತರೆ ಮಾತ್ರ ಬದುಕನ್ನು ಕುರಿತ ಹಗುರ, ಕಷ್ಟ ಕೋಟಲೆಗಳನ್ನು ಎದುರಿಸಬಹುದಾದ ಧೈರ್ಯ ಒಮ್ಮೆಯೇ ಉಂಟಾಗುತ್ತದೆ.

ಛಲ: ಕತೆಯಲ್ಲಿ 'ಛಲ ಎಂದರೆ ಪದ್ದಕ್ಕ,-ಪದ್ದಕ್ಕ ಎಂದರೆ ಛಲ' ಎಂಬಂತೆ ಧ್ವನಿತವಾಗಿರುವುದನ್ನು ಕಾಣಬಹುದಾಗಿದೆ. ತನ್ನ ಗಂಡ ತನ್ನ ದಾಯಾದಿಗಳಿಗೆ ಮಾರಿದ ನೆಲವನ್ನಾಗಲೀ/ಪಕ್ಕದ ನೆಲವನ್ನಾಗಲೀ ಮತ್ತೆ ಕೊಂಡು ಮನೆ ಕಟ್ಟುವವರೆಗೆ ತಾನು ಬೆಂದ ಆಹಾರ ತಿನ್ನುವುದಿಲ್ಲವೆಂದು ಶಪಥಗೈದು ಅಂತೆಯೇ ಮಾಡಿ ತೀರುತ್ತಾಳೆ. ತನ್ನ ಮನೆ ಕಟ್ಟಲು ದಾಯಾದಿಗಳ ಮಗ ಕೂಡ ಹಣದ ಸಹಾಯ ಮಾಡಿರುವುದಾಗಿ ತಿಳಿದು ಅದನ್ನು ತನ್ನ ಮಗ ತಿರುಗಿ ಕೊಡುವವರೆಗೂ ಈ ಶಪಥ ಮುಂದುವರಿಯುತ್ತದೆ.

ಕತೆಯಾದಳು ಹುಡುಗಿ: ಈ ಕಥಾಸಂಕಲನದ ವಿಶೇಷತೆಯೆಂದರೆ ಕಥೆಯು ಆರಂಭವಾಗುವುದು 'ಬನ್ನಿ ಕುಳಿತುಕೊಳ್ಳಿ ಒಂದು ಕಥೆ ಹೇಳುತ್ತೇನೆ' ಎಂಬಂತೆಯೇ ಆರಂಭವಾಗುವುದು ವಿಶೇಷ **ಕತೆಯಲ್ಲಿ ಬಂದಾತ ಮನೆಗೂ ಬಂದು ಕದ ತಟ್ಟಿದ** ಕಥೆಯೂ ಇಂತದೇ ಮಾತಿನೊಂದಿಗೆ ಆರಂಭವಾಗುತ್ತದೆ. ಈ ಕಥೆಯಲ್ಲಿನ ಪ್ರಧಾನ ಪಾತ್ರ ವೋಮು. ಈ ಪಾತ್ರವನ್ನು ಲೇಖಕರು ತಮ್ಮ ಕಥೆಯಲ್ಲಿ ಚಿತ್ರಿಸಿರುತ್ತಾರೆ. ಅದೇ ಜೀವಂತ ಪಾತ್ರವು ಬಂದು ಲೇಖಕರ ಬಾಗಿಲು ತಟ್ಟಿ 'ನಾನು ನಿಮ್ಮ ಕಥೆಯಲ್ಲಿ ಬಂದ ಹುಡುಗ ವೋಮು ಸರ್ ಹರಿಜನರ ಹುಡುಗ' ಬಂದು ಪರಿಚಯಿಸಿಕೊಳ್ಳುತ್ತಾನೆ. ಆತನಿಗೆ ಇಡೀ ಲೇಖಕರ ದಿನಚರಿ ತಿಳಿದಿತ್ತು. ಲೇಖಕರು ಈತನು ನೀಡಿದ ಪತ್ರವನ್ನು ಕಥೆಯಿರಬೇಕೆಂದು ಭ್ರಮಿಸಿ ಅದನ್ನು ಓದಲು ಒಂದು ವಾರ ತಡೆ ಮಾಡುತ್ತಾರೆ. ಆ ನಂತರ ಪತ್ರ ಓದಿದಾಗ ತಿಳಿಯುತ್ತದೆ. ಆತ ತನ್ನಿಂದ ಸಹಾಯ ಬೇಡಿದ್ದನೆಂದು ಆತನ ಪತ್ರದಲ್ಲಿ 'ಸರ್! ನಿಮ್ಮ ಬಾಲ್ಕನಿಯಿಂದ ಕಾಣುವ ಲೋಕದಿಂದ ತೀರ ಬೇರೆಯಾದ ಒಂದು ಲೋಕವನ್ನು ನೋಡುವುದಿದ್ದರೆ ಇಲ್ಲಿ ಇಲ್ಲಿ ಈ ಯಾದಿಯಲ್ಲಿ ಹೇಳಿದ ಜಾಗಕ್ಕೆ ಬನ್ನಿ............' ಎಂಬಂತಿತ್ತು. ಆದರೆ ತಾನು ಆತ ಸಾಯುವ ಮುಂಚೆಯೇ ಪತ್ರವನ್ನು ಓದಿದ್ದರೂ ನನ್ನಿಂದಾವ ಸಹಾಯವೂ ಮಾಡಲಾಗದ ಸ್ಥಿತಿಯಲ್ಲಿ ತಾನಿದ್ದುದಾಗಿ ಪಲಾಯನವಾದಿಯಂತೆ ವರ್ತಿಸಿದ ಕತೆಗಾರರ ಪಾತ್ರ ತನ್ನ ವೋಮು ಸತ್ತಿಲ್ಲವೆಂದು ಆತ ಮರಳಿ ಬರುವವರೆಗೆ ಈ ಕಥೆ ಸಶೇಷ ಎಂದೇ ಕಥೆ ಮುಗಿಸುತ್ತಾರೆ. ಈ ಕಥೆಯು ಬಹಳ ಮನೋಜ್ಞವಾಗಿದೆ.

ಅಶ್ವತ್ಥಾಮನ್: ಕತೆಯಲ್ಲಿಯು ರಾಮಚಂದ್ರ ಕತೆಗಾರರಾಗಿ ಕಾಣಿಸುತ್ತಾರೆ. ಸಾತಕ್ಕ ಕಾಶಿಗೆ ಹೋಗಿ ಮರಣ ಹೊಂದಿದ ವಿಚಾರವನ್ನು ತಿಳಿದು ಮನನೋಯುತ್ತಾರೆ. ಪ್ರತೀ ಸಾವಿಗೂ ತಾನೇ ಕಾರಣ ಎಂಬ ಪಾಪ ಪ್ರಜ್ಞೆಯು ಇವರನ್ನು ಸದಾ ಕಾಡುತ್ತದೆ. ಈ ಪಾಪಪ್ರಜ್ಞೆಯು ಅಭಿವ್ಯಕ್ತವಾಗುವುದು ಅವರು ಇಡೀ ರಾತ್ರಿ ಬರೆದ ಕತೆಯ ಮೂಲಕ ತನ್ನ ಮನೆಕೆಲಸದ ಹುಡುಗ ವಾಸುವಿಗೆ ತನ್ನ ಬಗೆಗೂ ನಾಗಪ್ಪ ಎಂಬ ಪಾತ್ರದಡಿಯಲ್ಲಿ ಕತೆಯನ್ನು ಬರೆದಿರುವ ವಿಚಾರ ತಿಳಿದು ಅತೀವ ಆನಂದ ಹಾಗಾಗಿ ಆ ಕತೆಯನ್ನು ಕೇಳಲು ಬಹು ತವಕಗೊಂಡು ಕೇಳುತ್ತಾನೆ. ಆದರೆ ಪಾರ್ವತಿಯು ಗರ್ಭಿಣಿಯಾಗಲು ಕಾರಣವಾದ ರಾಮಚಂದ್ರರೇ ಅವಳ ಸಾವಿಗೆ ಕಾರಣಕರ್ತರಾಗಿ ಆಕೆಯು ಸತ್ತದ್ದು

ತನ್ನಿಂದ ಎಂಬ ಪಾಪಪ್ರಜ್ಞೆ ಇದ್ದು ಸಾತಕ್ಕನ ಸಾವಿನಲ್ಲೂ ಅದನ್ನು ಅನುಭವಿಸುತ್ತಾರೆ. ಇಡೀ ರಾತ್ರಿ ಕಥೆ ಬರೆಯುತ್ತಾರಾದರೂ ಎಲ್ಲವೂ ಗೀಚು ಗೀಚಾಗಿತ್ತೆ ಹೊರತು, ಯಾವುದೂ ಓದಲು ಕಷ್ಟವಿರಲಿಲ್ಲ. ಓದಲು ಸಿಗುವ ಕೆಲವು ಸಾಲುಗಳೂ ಕೂಡ ಪಾಪಪ್ರಜ್ಞೆಯ ಸಾಲುಗಳೇ ಆಗಿದ್ದವು. ಪಾರ್ವತಿಯ ಸಾವಿಗೆ ತಾನು ಆಕೆಯನ್ನು ಮದುವೆಯಾಗದಿರುವುದೇ ಕಾರಣವಾದ್ದರಿಂದ ಆಕೆ ಎಲ್ಲರ ಸಾವಿನಲ್ಲೂ ಆಕೆಯ ಸಾವಿನಿಂದಾದ ನೋವನ್ನೇ ಅನುಭವಿಸುವ ಸೂಕ್ಷ್ಮ ಮನಸ್ಥಿತಿಯಾಗಿ ಬಿಂಬಿತವಾಗಿದೆ.

ಮುಖಾಮುಖಿ: ಈ ಕತೆಯಲ್ಲಿನ ಲೇಖಕ ಹಳ್ಳಿಯನ್ನು ಬಿಟ್ಟು ನಗರ ಸೇರಿದವನು. ತನ್ನ ಬಾಲ್ಯದಲ್ಲಿ ಇಂದಿರಕ್ಕನ ಬಗೆಗೆ ಆದ ಕೆಲವು ಅನುಭವಗಳು ಈತ ದೊಡ್ಡವನಾದರೂ ಕಾಡುತ್ತಿರುತ್ತವೆ. ಇಂದಿರಕ್ಕನ ಗಂಡ ಇಂದಿರಕ್ಕನಿಗೆ ಇಷ್ಟವಿಲ್ಲದವ. ಕಾರಣ ಆಕೆಯು ಪೊತ್ತೆಮೀಸೆಯ ಮನುಷ್ಯನನ್ನು ಪ್ರೇಮಿಸುತ್ತಿದ್ದಳು. ಆದರೂ ಆತನೊಡನೆ ವಿವಾಹವಾಗಲಾಗದೆ ತನ್ನ ಗಂಡನಿಂದ ಯಾವ ಸುಖವನ್ನು ಪಡೆಯದೆ ಗಟ್ಟಿತನದ ಪಾತ್ರವಾಗಿ ಇಂದಿರಕ್ಕ ನಿಲ್ಲುತ್ತಾಳೆ. ಪೊತ್ತೆಮೀಸೆಯವ ಕತೆಗಾರನಿಗೆ ಇಂದಿರಕ್ಕನಿಗೆ ತಲುಪಿಸಲು ನೀಡಿದ ಚಿತ್ರವನ್ನು ಕತೆಗಾರ ಆಕೆಗೆ ತಲುಪಿಸದೇ ತಾನೇ ಓದಿ ಹರಿದು ಹಾಕುತ್ತಾನೆ. ಅಷ್ಟಕ್ಕೆ ಇಂದಿರಕ್ಕ ಆತನೊಡನೆ ಓಡಿಹೋಗಲು ತಯಾರಿದ್ದಳೆಂದು ಭ್ರಮಿಸಿ ಆಗುತ್ತಿದ್ದ ಅಪಾಯವನ್ನು ತಪ್ಪಿಸಿದವನಂತೆ ಕಾಣುತ್ತಾನೆ. ದೊಡ್ಡವನಾದ ನಂತರ ಅದೇ ಇಂದಿರಕ್ಕನ ಬಗೆಗೆ ಕತೆಯನ್ನು ಬರೆಯುತ್ತಾನೆ. ಅನಂತರ ಇವರಿಬ್ಬರ ಮುಖಾಮುಖಿಯಲ್ಲಿ ಎಲ್ಲವೂ ತಿಳಿಯುತ್ತದೆ.

ಉದ್ಧಾರ: ಕತೆಯ ಕೇಂದ್ರ ಪಾತ್ರ ಅಹಲ್ಯೆ. ರಾಮಾಯಣದ ಅಹಲ್ಯೆ ಶಾಪವಿಮೋಚನೆಗಾಗಿ ರಾಮನನ್ನು ಕಾಯುತ್ತಾ ಕುಳಿತರೆ ಈ ಕಥೆಯಲ್ಲಿನ ಅಹಲ್ಯೆಯು ತಾಯಿಯನ್ನು ಕಾಯ್ದು ಕುಳಿತಿದಾಳೆ. ಅತೃಪ್ತ ಕಾಮವು ಇಡೀ ಕತೆಯುದ್ದಕ್ಕೂ ಕೆಲಸ ಮಾಡುತ್ತದೆ. ಮದುವೆಯಾದ ಕೆಲವೇ ದಿನಗಳಿಗೆ ಬಿಟ್ಟುಹೋದ ಗಂಡ, ಆ ನಂತರದ ಕೆಲ ದಿನಗಳಲ್ಲಿ ಕೀರ್ತನಕಾರನಂತೆ ಬಂದ ಒಬ್ಬ ಆಕೆಯ ಮನೆಯಲ್ಲಿದ್ದು ಇಬ್ಬರೇ ಇದ್ದ ಕಾರಣ ಕಾರುತ್ತಾರೆ. ಈ ಎರಡೂ ಘಟನೆಗಳು ನಡೆಯುವ ಮುನ್ಸೂಚನೆ ಎಂಬಂತೆ ಕಪ್ಪು-ಕರಿನಾಯಿಯು ಬಾಗಿಲನ್ನು ಕೆರೆಯುತ್ತದೆ. ಮತ್ತೊಂದು ದಿನ ಅಮ್ಮನ ಅನುಪಸ್ಥಿತಿಯಲ್ಲಿ ನಾಯಿ ಬಾಗಿಲನ್ನು ಕೆರೆದದ್ದು ಕಿಟಕಿಯಲ್ಲಿ ಭಾವ ಉದ್ದುದ್ದ ಗಡ್ಡ, ಮೀಸೆ ಬಿಟ್ಟುಕೊಂಡು ತಮ್ಮ ಮನೆಯೆಡೆಗೆ ಬರುತ್ತಿದ್ದುದನ್ನು ಕಂಡು ತಾನು ಜಾರಿದ ದಿನದ ನೆನಪಾಗಿ ಆಕೆ ಆತ್ಮಹತ್ಯೆಗೆ ಶರಣಾಗುತ್ತಾಳೆ. ಇಲ್ಲಿ ಈಕೆಗೆ ಅಹಲ್ಯೆ ಎಂಬ ಹೆಸರಿದ್ದರೂ ಆಕೆಗೆ ಶಾಪ ವಿಮೋಚನೆಯೂ. ಇಲ್ಲ, ಆಕೆಯ ಉದ್ಧಾರವೂ ಇಲ್ಲ.

ಒಂದು ಹೆಸರಿನ ಕಥೆ : ಇಲ್ಲಿ ಲೇಖಕರು ಮಗುವಿಗೆ 'ಪುರುಷೋತ್ತಮ' ಎಂಬ ಹೆಸರಿಡಲು ಆಲೋಚಿಸಿರುತ್ತಾರೆ. ಕಾರಣ ಕ್ಯಾನ್ಸರ್‌ನಿಂದ ಸತ್ತ ಪುರುಷೋತ್ತಮ ಅವರಿಗಿನ್ನೂ ಸತ್ತಿಲ್ಲವೆಂಬಂತೆಯೇ ಭಾಸವಾಗುತ್ತದೆ. ಹಾಗಾಗಿಯೇ ಹೆಂಡತಿಯು ಪುರುಷೋತ್ತಮ ಸತ್ತ ಎಂದೊಡನೆಯೇ ಲೇಖಕರು ಸತ್ತಿಲ್ಲವೆನ್ನುತ್ತಾರೆ. ಆದರೆ ಹಾಗನ್ನಲು ಕಾರಣವೇನೆಂದು ಅವರಿಗೂ ತಿಳಿಯದ ಸಂಗತಿ. ಆದರೆ ಮಗುವಿಗೆ 'ಆನಂದ' ಎಂದು ಹೆಸರಿಡಲು ತೀರ್ಮಾನವಾದದ್ದು ತಿಳಿದ ತಕ್ಷಣವೇ 'ಪುರುಷೋತ್ತಮ ಸತ್ತ' ಮೊದಲ ಬಾರಿಗೆ ಸತ್ತ ಎನ್ನುತ್ತಾರೆ. ಇಡೀ ಕಥೆಯು ಒಂದು ಹೆಸರಿನ ಸುತ್ತ ಎಣೆದಿದ್ದರೂ ಸಮಾಜ ಮತ್ತು ವ್ಯಕ್ತಿಯ ಮನಃಸ್ಥಿತಿಗಳನ್ನು ಅರಿಯಲು ಇಲ್ಲಿ ಸಾಧ್ಯವಿದೆ.

ಅಪಘಾತ: ಅಪಘಾತದಲ್ಲಿ ಸತ್ತ ವ್ಯಕ್ತಿ ಯಾರು? ಎಂಬುದು ಖಚಿತವಾಗಿಲ್ಲದ ಸಮಯದಲ್ಲಿ ಮನಸ್ಸು ವ್ಯಕ್ತಪಡಿಸುವ ಸಂಕಟದ ಹೂರಣವೇ ಅಪಘಾತ ಕಥೆಯಲ್ಲಿದೆ. ಸತ್ತವನ ಕಿಸೆಯಲ್ಲಿ ಎಸ್.ಬಿ.ಕುಲ್ಕರ್ಣಿ ಎಂಬ ಹೆಸರಿನ ಪಾಸ್ ದೊರೆಯಿತು. ಆ ಹೆಸರಿನ ಆಧಾರದ ಮೇಲೆ ಮನೆಗೆ ಬಂದ ಪೋಲೀಸ್ ಪೇದೆಗೆ ಆಶ್ಚರ್ಯ ಕಾದಿತ್ತು. ಏಕೆಂದರೆ ಆ ಮನೆಯಲ್ಲಿ ಮೂವರು ಅಣ್ಣ-ತಮ್ಮಂದಿರ ಹೆಸರೂ ಎಸ್.ಬಿ.ಕುಲ್ಕರ್ಣಿ ಎಂದೇ, ಮೊದಲನೆಯವ ಸುರೇಶ, ವಿ.ಕುಲ್ಕರ್ಣಿ, ಎರಡನೆಯವ ಸುಭಾಷ್.ವಿ. ಕುಲ್ಕರ್ಣಿ, ಮೂರನೆಯದ ಸುಧಾಕರ, ವಿ.ಕುಲ್ಕರ್ಣಿ, ಇವರಲ್ಲಿ ಸತ್ತ ವ್ಯಕ್ತಿ ಯಾರೆಂಬುದು ನಿರ್ಧಾರವಾಗಿಲ್ಲದ ಸಮಯದಲ್ಲಿ ಅವರ ಮನೆಯವರ ಮಾನಸಿಕ ಕ್ಷೋಭೆಯ ಚಿತ್ರಣವೇ ಈ ಕಥೆ.

ಮಾತಿನಲ್ಲಿ ಬರಲೊಪ್ಪದ ದಾಸಣ್ಣ : ದಾಸಣ್ಣನು ವಿಧವೆ ಪ್ರಯಾಗಿಯನ್ನು ಅತೀವವಾಗಿ ಪ್ರೀತಿಸುತ್ತಿದ್ದ ಕಾರಣ ತನ್ನನ್ನು ಮದುವೆಯಾಗದಿದ್ದಲ್ಲಿ ತಾನು ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಪ್ರತಿಯಾಗಿ ಚೀಟಿ ಬರೆದು ಕಳಿಸಿದ್ದು, ಆ ಚೀಟಿಯನ್ನು ಕಥಾನಾಯಕ ತನ್ನಪ್ಪನಿಗೆ ಕೊಟ್ಟಿದ್ದು, ಅಲ್ಲಿಂದ ಅದು ಕಥಾನಾಯಕನ ಅಣ್ಣನಿಗೆ ತಲುಪಿ ಅವನೇ ದಾಸಣ್ಣ, ಪ್ರಯಾಗಿಯ ಮದುವೆ ಮಾಡಿಸಿದ್ದ. ಆದರೆ ಆ ಚೀಟಿಯನ್ನು ದಾಸಣ್ಣನಿಗೆ ತಲುಪಿಸದೆ ಇದ್ದದ್ದು ಮಾತ್ರ ಈ ಕಥಾನಾಯಕನೇ. ಇದೇ ಆತನ ಮನಸ್ಸಿನಲ್ಲಿನ ಕ್ಷೋಭೆಗೆ ಕಾರಣವಾಗಿತ್ತು. ದಾಸಣ್ಣನಿಗೆ ಇದು ತಿಳಿದಿರಲಿಲ್ಲ ಎಂಬ ಸಂಗತಿ ತಿಳಿದ ಕೂಡಲೇ ಈ ಕಥಾನಾಯಕ ನಿರುಮ್ಮಳನಾಗುತ್ತಾನೆ.

ಮೂರು ಭಾಗಗಳಿಂದ ಕೂಡಿದ್ದ ತುಸು ದೀರ್ಘವೆನಿಸಬಹುದಾದ ಕಥೆ ಹುಡುಕಾಟ, ಹಲವು ಆಕಸ್ಮಿಕಗಳಿಂದ ಕೂಡಿದ ಈ ಕಥೆಯ ಅಂತ್ಯ ಕೊನೆಯಿರದ ಹುಡುಕಾಟದಲ್ಲಿ ತೊಡಗಿಕೊಳ್ಳುತ್ತದೆ. ತೀರಾ ಚಿಕ್ಕಂದಿನಲ್ಲಿ ತನ್ನ ಮಗನೊಬ್ಬನನ್ನು ಕಳೆದುಕೊಂಡ ರಾವ್‌ಜೀಭಾಯಿ ತನ್ನ ೭೦ನೇ ವಯಸ್ಸಿನವರೆಗೂ ಕಳೆದುಹೋದ ಮಗನನ್ನು ಹುಡುಕುವ ಪರಿ ನಿಜಕ್ಕೂ ಆತನಿಗೆ ಬುದ್ಧಿಭ್ರಮಣೆಯಾಗಿರಬೇಕೆಂದು ಓದುಗರಿಗೆ ಅನ್ನಿಸುತ್ತದೆ. ಆದರೆ ಕತೆಯಲ್ಲಿ ನಾಲ್ಕಾರು ಬಾರಿ ತನ್ನ ಅಜ್ಜನನ್ನು ಹುಡುಕಿಕೊಂಡು ಬರುವ ಹುಡುಗ ರಾವ್‌ಜೀ ಭಾಯಿಯ ಮೊಮ್ಮಗನಾಗಿರಬಹುದೇ! ಎಂಬ ಸಂಶಯ ಮಾತ್ರ ಹಾಗೆಯೇ ಉಳಿಯುತ್ತದೆ.

ಕಣ್ಣಮುಂದೆಯೇ ಘಟಿಸಿದ ಸಾವನ್ನು ಕೂಡ ಒಂದು ದಿನ ಮರೆಯಬಹುದೇನೋ. ಆದರೆ ಎಲ್ಲೋ ಬದುಕಿ ಇದ್ದು ಎಂಥ ಕಠಿಣ ಪರಿಸ್ಥಿತಿಯಲ್ಲಿ ಹೊಟ್ಟೆಯ ಮಗು ದಿನಗಳೆಯುತ್ತದೆಯೋ ಎಂದು ತಾವು ಬದುಕಿರುವವರೆಗೂ ತಿಳಿಯಲಾಗದ ಪರಿಸ್ಥಿತಿ ಮಾತ್ರ ಮನಸ್ಸನ್ನು ಹುಚ್ಚಿನ ಅಂಚಿಗೆ ಒಯ್ದರೆ ಆಶ್ಚರ್ಯವಿಲ್ಲ ಎಂದೆನ್ನಬಹುದು.

ಚಕ್ರವ್ಯೂಹ : ಈ ಕಥೆಯಲ್ಲಿ ನಲವತ್ತೈದು ವರ್ಷ ದಾಟಿದ ಕಥಾನಾಯಕನು ಪಿ.ಎಚ್.ಡಿ. ಮಾಡುವ ಉದ್ದೇಶದಿಂದ ಅಮೇರಿಕೆಯ ವಿಹಾಕೆನ್ ಎಂಬ ನಗರದಲ್ಲಿದ್ದಾಗ ಅನುಭವಿಸಿದ ಲೈಂಗಿಕ ಆಕರ್ಷಣೆಯ ತುಮುಲ, ದ್ರೋಣಾಚಾರ್ಯರು ಒಡ್ಡುವ ಚಕ್ರವ್ಯೂಹವನ್ನು ಹೊಕ್ಕ ಅಭಿಮನ್ಯುವಿನ ಪರಿಸ್ಥಿತಿ ಕಥಾನಾಯಕನದು. ಇಲ್ಲಿ ಲೂಯಿಸಾಳ ಪ್ರೀತಿಗೆ ದ್ವಂದ್ವಾರ್ಥವಿರುವಂತಿದೆ. ಅವಳಿಂದ ತಪ್ಪಿಸಿಕೊಳ್ಳಬೇಕೆಂದು ಓಡಿದರೂ ಅಂತಿಮವಾಗಿ ಕಥಾನಾಯಕ ಅವಳಿಗೆ ವಶನಾಗುತ್ತಾನೆ. ಒಂದು ದೃಷ್ಟಿಯಿಂದ ನೋಡಿದರೆ, ವಿದೇಶೀ ನೆಲದಲ್ಲಿ ಏಕಾಂಗಿಯಾಗಿ ಅನಾಥಪ್ರಜ್ಞೆಯಿಂದ, ಕಾಮಲಾಲಸೆಯಿಂದ ಪರಿತಪಿಸುವ ನಾಯಕನನ್ನು ಹದಿನೈದು ಡಾಲರಿಗೆ ಸ್ವರ್ಗ ತೋರಿಸುತ್ತೇನೆಂದು ಮೈಮೇಲೆ ಬೀಳುವ ಬೆಡಗಿಯರಿಂದ ರಕ್ಷಿಸಿದ್ದು ಲೂಯಿಸಾಳ ಪ್ರೀತಿಯೇ.

ಬೀಗ ಮತ್ತು ಬೀಗದ ಕೈ : ಕೇಶವನ ದುರಂತವನ್ನು ಚಿತ್ರಿಸುವ ಕಥೆ ಇಲ್ಲಿ ಕೇಶವನ ದುರಂತ ಬರಿ ವೈಯಕ್ತಿಕವಾದುದಲ್ಲ. ವ್ಯಕ್ತಿಗಳ ಪರಸ್ಪರ ಸ್ಪಂದನಾರಾಹಿತ್ಯಕ್ಕೆ ಸಾಕ್ಷಿ. ತನ್ನೊಂದಿಗೆ ಇರುವ ಇತರರೊಡನೆ ಯಾವುದೇ ರೀತಿಯ ಸಂದರ್ಶನವೇರ್ಪಡಿಸುವುದರಲ್ಲಿ ಅಸಫಲನಾಗುವ ಕೇಶವ ಇದ್ದು ಸತ್ತಂತೆ. ಬೀಗ ಮತ್ತು ಬೀಗದ ಕೈ ಕತೆಯಲ್ಲಿನ ಸಂಕೇತ ವ್ಯಕ್ತಿ ಕೇಂದ್ರದಲ್ಲಿ ಮಾತ್ರವಲ್ಲದೆ ಸಾಮಾಜಿಕ ಕೇಂದ್ರದಲ್ಲಿಯೂ ನಿಜವಾಗುತ್ತದೆ. ವ್ಯಕ್ತಿ ಸಮಾಜದೊಂದಿಗೆ ಸಂವಾದ ಸಾಧಿಸಿಕೊಳ್ಳಲಾಗದ ದುರಂತ ದಾಖಲಾಗಿದೆ. ಕೇಶವ ತನ್ನ ಊರಿನಿಂದ ತಾಯಿ ಕೊಟ್ಟ ಬೀಗವನ್ನು ಬೊಂಬಾಯಿಗೆ ತಂದು ಸುರಕ್ಷಿತನೆಂದು ಭಾವಿಸಿದ್ದಾನೆ. ತನ್ನ ವ್ಯಕ್ತಿತ್ವದಲ್ಲಿಲ್ಲದ ಆತ್ಮವಿಶ್ವಾಸ ಇವನಿಗೆ ಕ್ರಮೇಣ ಹಲವಾರು ಅನುಭವಗಳ ಮೂಲಕ ಗೊತ್ತಾಗುತ್ತದೆ. ಬೀಗದ ಕೈ ಕಳೆದುಕೊಂಡು ಈತ ಸಾವನ್ನಪ್ಪುತ್ತಾನೆ. ಸಾಂಕೇತಿಕ ನೆಲೆಯಲ್ಲಿ ವ್ಯಕ್ತಿಯ ದುರ್ಬಲತೆಯನ್ನು ಕತೆಯು ಚಿತ್ರಿಸುತ್ತದೆ.

ಮುಂಬಯಿ ಮಹಾನಗರದ ಜೋಪಡಿಪಟ್ಟಿಗಳ ಜನರ ಬದುಕು, ಆಧುನಿಕ ಕೈಗಾರಿಕಾ ನಗರಗಳ ಸಾಮಾಜಿಕಾರ್ಥಿಕ ಸಮಸ್ಯೆಗಳು ಬಲಾಢ್ಯರಿಗೆ ಮಾತ್ರ ಬದುಕುವ ಹಕ್ಕು, ಇವೆಲ್ಲದರ ನಡುವೆ ಮಡಿಯುವ ಅಥವಾ ಮಡಿಯಬೇಕಾದ ಮಾನವೀಯ ಅಂತಃಕರಣಗಳ ದೃಷ್ಟಿಯಿಂದ ಕತೆಯಾದಳು ಹುಡುಗಿ. ಕತೆಯಲ್ಲಿ ಬಂದಾತ ಮನೆಗೂ ಬಂದು ಕದತಟ್ಟಿದ ಮೊದಲಾದವುಗಳ ಜೊತೆಗೆ ಸೇರಬಹುದಾದ ಕತೆ ಬೇನ್ಯಾ, ರೂಸೋವಿನ ಮಾತಿನೊಂದಿಗೆ ಕಥೆಯ ಆರಂಭವಾಗುತ್ತದೆ. ಮೊಟ್ಟ ಮೊದಲಬಾರಿಗೆ ಈ ನೆಲದ ತುಣುಕೊಂದನ್ನು ಆಕ್ರಮಿಸಿಕೊಂಡ ವ್ಯಕ್ತಿಯೊಬ್ಬನು ತನ್ನ ಮಾತನ್ನು ನಂಬುವಂತಹ ಮುಗ್ಧ ಜನರಿರುವುದನ್ನು ಕಂಡುಕೊಂಡ. ಇದು ನನ್ನದು ಎಂದು ಹೇಳಿದ. ಅವನೇ ನಿಜವಾಗಿ ನಾಗರೀಕ ಸಮಾಜದ ಮೂಲಪುರುಷ ಎಂಬ ಮಾತುಗಳಿಂದ ಆರಂಭವಾಗುತ್ತದೆ.

ಇಲ್ಲಿ ಬೇನ್ಯಾ ಕಣ್ಣುಗಳಲ್ಲಿ ಆಸೆಗಳಿವೆ. ಆದರಂತೆಯೇ ಇವರು ನೆಲೆಗೊಂಡಿರುವ ಪ್ರದೇಶದಲ್ಲಿಯೇ ಅಂಗವಿಕಲರ ಆಶ್ರಮ ನಿರ್ಮಿಸಲು ಆಲೋಚಿಸಿ ಕಾರ್ಯೋನ್ಮುಖರಾಗಿರುವ ಅನ್ಯದೇಶೀಯರಲ್ಲಿ ನಾಗರೀಕ ಮತ್ತು ಆಕ್ರಮಣಶೀಲತೆಗಳೆರಡೂ ಮನೆ ಮಾಡಿದೆವೆ. ಒಟ್ಟಾರೆ ಇಲ್ಲಿನ ಬೇನ್ಯಾ ಅದ್ಭುತವಾದ ಪಾತ್ರವಾಗಿದ್ದು ಈ ಕಥೆಯು ಬಹಳಷ್ಟು ಸಂವೇದನಾಶೀಲತೆಯನ್ನು ಒಳಗೊಂಡ ಕಥೆಯಾಗಿದೆ.

ಕಥೆಯಾದಳು ಹುಡುಗಿ: ಸಂವೇದನಾಶೀಲ ಸೃಷ್ಟಿಶೀಲ ಲೇಖಕ ಅನುಭವಿಸುವ ತೊಳಲಾಟದ ಪರಿಚಯವಾದ ಓದುಗರಿಗೆ ಈ ಕಥೆಯಲ್ಲಿ ಹೊಸದೊಂದು ಅನುಭವ ಊಹಾಲೋಕಕ್ಕೂ ವಾಸ್ತವಲೋಕಕ್ಕೂ ಇರುವ ಅಂತರವನ್ನು ನೋಡಿ ಲೇಖಕ ಇಲ್ಲಿ ಕೊರಗುವ ಪ್ರಶ್ನೆಯೇ ಇಲ್ಲ. ಕತೆಗಾರ ಮತ್ತು ಆತನ ಸೃಷ್ಟಿಲೋಕದ ನೇರವಾದ ಮುಖಾಮುಖಿಯೇ ಈ ಕತೆಯ ಕ್ರಿಯೆ.

ಈ ಕಥೆ ಒಂದು ಕಾಲಕ್ಕೆ ಮಗಳನ್ನು ಕಳೆದುಕೊಂಡ ತಂದೆಯೊಬ್ಬನ ವ್ಯಥೆ. ಹಾಗೂ ಈ ವ್ಯಥೆಯನ್ನು ಮಾನವ ಸಹಜ ವ್ಯಾಕುಲತೆಯಿಂದ ಇನ್ನೊಬ್ಬನಿಗೆ ಮುಟ್ಟಿಸಲು ಹೋದಾಗ ನೇರವಾಗಿ ಮುಟ್ಟಿಸುವುದೇ ಅಸಾಧ್ಯವಾಗಿ ನಿರೂಪಣೆ ಹಲವಾರು ರೀತಿಯಲ್ಲಿ ರೂಪಾಂತರಗೊಳ್ಳುವುದರ ಚಿತ್ರಣವಾಗಿದೆ.

೭. ಯಶವಂತ ಚಿತ್ತಾಲರ ಕಥೆಗಳಲ್ಲಿನ ಮನೋವೈಜ್ಞಾನಿಕ ಅಂಶಗಳು

ಉತ್ತುಮಿ: ಈ ಕಥೆಯ ಪ್ರಧಾನ ಪಾತ್ರದ ಹೆಸರು ಉತ್ತುಮಿ. ಕಥೆಗಾರನ ಬಾಯಿಯಲ್ಲೇ ಸ್ನೇಹಿತರೊಂದಿಗೆ ಚರ್ಚಿಸುವಾಗ ಹಲವು ಮನೋವಿಜ್ಞಾನಿಗಳು ಹೆಸರು ಮತ್ತು ವಿಚಾರಗಳು ಇಲ್ಲಿ ಚರ್ಚೆಗೆ ಬರುತ್ತವೆ. ೧ "ನಾವು ಐದಾರು ಮಂದಿ ಗೆಳೆಯರು ಮೊನ್ನೆ ಒಂದೆಡೆ ಕಲೆಗಾಗ ಮನಃ ಶಾಸ್ತ್ರದಂತಹ ಒಂದು ಗಹನವಾದ ವಿಷಯದ ಮೇಲೆ ಚರ್ಚೆಯಲ್ಲಿ ಸಿಕ್ಕಿಸಿಕೊಂಡೆವು. ಫ್ರಾಯ್ಡ್, ಯೂಂಗ್, ವಿಲ್ಯಮ್ ಜೇಮ್ಸ್, ಏಡ್ಲರ್ ಮೊದಲಾದವರ ಹೆಸರುಗಳನ್ನು ಮೇಲಿಂದ ಮೇಲೆ ಉಚ್ಚರಿಸಿ ಚರ್ಚೆಗೆ ಒಂದು ಬಗೆಯ ಶಾಸ್ತ್ರೀಯ ಮೆರುಗನ್ನು ತಂದವು"೧ ಎಂಬಲ್ಲಿ ಕಾಣಬಹುದು. ಅಂತೆಯೇ ಇಂದು ಪರಿಪಕ್ವಗೊಂಡ ಮನಸ್ಸು ಲೈಂಗಿಕತೆಯ ಬಗೆಗೆ ಮುಕ್ತವಾಗಿ ಈ ಕಥೆಯಲ್ಲಿ ಚರ್ಚಿಸುತ್ತದೆಯಾದರೂ, ಆ ಬಗ್ಗೆ ಏನೂ ಅರಿಯದ ಕುತೂಹಲದ ಮನಃಸ್ಥಿತಿ ಬಾಲ್ಯದಲ್ಲಿದದ್ದೂ ಕೂಡ ಇಲ್ಲಿ ಗೋಚರವಾಗುತ್ತದೆ.

೨ "ಕಲ್ಯಾಣಿ ಸೂಳೆಯ ಮಗಳು!
ಕಲ್ಯಾಣಿಯ ತಾಯಿ ಉತ್ತುಮಿ ಸೂಳೆ!
ಉತ್ತುಮಿಯ ತಂಗಿ ಚಿನ್ನಮ್ಮ ಸೂಳೆ!
ಸೂಳೆಯೆಂದರೆ ಏನು?
ಏನೋ...............
ಚಿನ್ನಮ್ಮ ವಾಸು!
ಅವರ ಸಂಬಂಧವೇನು?
ಏನೋ.............."೨

ಎಂದು ಹೇಳುವಲ್ಲಿ ಮುಗ್ಧಮನಸ್ಸಿನ ಒಳತೋಟಿಯು ಅರಿವಿಗೆ ಕಾಣದೆ ಸಿಗದು. ಪೂರ್ಣ ಅರಿವಿರದ ವಿಚಾರಗಳು ಅನುಮಾನಕ್ಕೆ ಮತ್ತು ಕುತೂಹಲಕ್ಕೆ ಎಡೆಮಾಡಿಕೊಡುವ ಮನಃಸ್ಥಿತಿ ಸಹಜವೇ ಸರಿ. ಹಾಗಾಗಿಯೇ ಇಲ್ಲಿ ೩ "ಏನೋ-ಏನೋ ಎಂಬ ಗಂಡು ಹೆಣ್ಣಿನ ಸಂಬಂಧದ ಅಸ್ಪಷ್ಟ, ಅಂಧುಕ, ಅರ್ಧ ಜಾಗೃತ ಪ್ರಶ್ನೆಯಲ್ಲಿ ನನ್ನ ಗೆಳೆಯರು ಕೇಳಿದ ಪ್ರಶ್ನೆಗೆ ಸಮರ್ಪಕವಾದ ಉತ್ತರವಿತ್ತೇ?"೩ ಎಂಬ ಪ್ರಶ್ನೆ ಒಡಮೂಡುತ್ತದೆ.

ಕಥೆಗಾರರೊಡಗೂಡಿ ಒಸ್ತ್ಯಾಂದ, ಅಂತೋನೀ, ವೆಂಕಟರಮಣರು ಉತ್ತುಮಿ ಮನೆಯ ಮುಂದೆ ಬಂದು ಕಥೆಗಾರನಿಂದ ೪"ಚಿನ್ನಮ್ಮ ಇಂದು ರಾತ್ರಿಗೆ ಬರ್ತೇವೆ,"೪ ಎಂದು ಹೇಳಿಸುವಾಗಲೂ ಅದರ ಪೂರ್ಣ ಅರಿವಿನ ಮನಃಸ್ಥಿತಿ ಅವರಿಗಿರಲಿಲ್ಲ. ಹಾಗಾಗಿಯೇ ಉತ್ತುಮಿ ಕಥೆಗಾರರನ್ನು ಹಿಡಿದು ಮತ್ತೆ ಈ ಕಡೆ ಬಂದರೆ ನಿಮ್ಮ ಅಪ್ಪನಿಗೆ ಹೇಳುತ್ತೇನೆ ಎಂದು ಹೇಳಿದಾಗ ಅಪ್ಪನೊಬ್ಬನಿಗೆ ಹೇಳದಿದ್ದರೆ ಸಾಕು ಎಂದು ಹೆದರುವ ಮನಃಸ್ಥಿತಿಯು ಕಾಣಸಿಗುತ್ತದೆ.

---

೧. ಯಶವಂತ ಚಿತ್ತಾಲ: ಐವತ್ತೊಂದು ಕತೆಗಳು: ಪುಟ ೧೧.

೨. ಅದೇ ಪುಟ–೧೨ ೩. ಅದೇ ಪುಟ – ೧೪ ೪. ಅದೇ ಪುಟ–೧೨

ಅಂತೆಯೇ ಉತ್ತುಮಿಯು ೧"ನಾವು ಕೀಳುಜನ, ಕೆಟ್ಟ ಜನ, ನಮ್ಮಂತಹವರ ಮನೆಯ ಬಾಗಿಲಲ್ಲಿ ನೀನು ಕಾಲಿಡಕೂಡದು"೧ ಎಂದು ಕಥೆಗಾರನಿಗೆ ಹೇಳುವಾಗ ಅವಳ ವೃತ್ತಿ ಕೀಳು ಎಂಬ ಮನೋಭಾವ ಅದರ ಹಿಂದಿರುವ ಅವಳ ನೋವಿನ ಸ್ಥಿತಿ ನಮಗರಿವಾಗದೇ ಇರದು. ಹಾಗಾಗಿಯೇ ಲೇಖಕರು ಉತ್ತಮಿಯ ಮನಃಸ್ಥಿತಿ ಮತ್ತು ಆಕೆಯ ಉತ್ತಮ ಗುಣಗಳನ್ನು ಕಂಡೇ ಉತ್ತುಮಿ ಎಂಬ ಹೆಸರಿಟ್ಟರೇನೋ ಎಂಬ ಭಾವನೆ ನನ್ನದು.

೨"ಅಂದು ಏನೂ ಅರಿಯದ ಒಬ್ಬ ಚಿಕ್ಕಬಾಲಕನ ಮುಂದೆ ಬರಿಯೇ ಅವನ ಒಳಿತನ್ನು ಬಯಸಿ ತಾನು ಕೀಳುಜನ, ತಾನು ಕೆಟ್ಟವಳು, ತನ್ನ ದಣಪೆಯಲ್ಲೂ ಅವನು ಕಾಲು ಇಡಕೂಡದು ಎಂದು ತನ್ನನ್ನು ತಾನೇ ಹಳಿದುಕೊಂಡ ಆ ಬಡ ವೇಶ್ಯೆಯಲ್ಲೂ ಒಬ್ಬ ತಾಯ ಹೃದಯವನ್ನು ಕಂಡು ಅವಳ ವಿಷಯವಾಗಿ ಪ್ರಕಟವಾಗಿ ಆದರ ವ್ಯಕ್ತಗೊಳಿಸುವ ಧೈರ್ಯ ಹುಟ್ಟಿದ್ದು ಮಾತ್ರ ಮೊನ್ನೆ ಮೊನ್ನೆಯೇ....."೨ ಎಂದು ಹೇಳುವಲ್ಲಿ ಉತ್ತುಮಿ ಹಾಗೂ ಲೇಖಕರಿಬ್ಬರ ಸಹೃದಯ ಮನಸ್ಸು ತೆರೆದಿಡುವುದು ಗೋಚರವಾಗುತ್ತದೆ.

ಉತ್ತುಮಿಯ ಮಗಳಾದ ಕಲ್ಯಾಣಿ ಕೆಂಪು ಮಸಿ ದೌತಿಯನ್ನು ಶಾಲೆಗೆ ತಂದಾಗ ಆ ಪುಟ್ಟ ಬಾಲಕನಿಗೆ ಅದರಲ್ಲಿ ಮೂಡಿದ ಆಸಕ್ತಿ ಆನಂತರ ಉತ್ತುಮಿಯ ಮನೆಯ ಬಳಿ ಬಂದು ೩"ರಾತ್ರೆಗೆ ಬರ್ತೇವೆ, ಏಕೆ? (ಕೆಂಪು ಮಸಿಯ ದೌತಿ ಎತ್ತಲೇ?)"೩ ಎನ್ನುವಲ್ಲಿನ ಮನಃಸ್ಥಿತಿ ಕೊನೆ-ಕೊನೆಗೆ ಆ ಬಣ್ಣವನ್ನು ನೋಡಿದರೆ ಹೇಸಿಕೆಯಾಗುವ ಸ್ಥಿತಿ ೪"ನನಗೆ ಇಂದು ಕೆಂಪು ಬಣ್ಣದ ಬಗ್ಗೆ ಇರುವ ಹೇಸಿಕೆಗೂ ಅಂದಿನ ಕೆಂಪು ಮಸಿಯ ದೌತಿಯ ಪ್ರಕರಣಕ್ಕೂ ಸಂಬಂಧವಿಲ್ಲ ತಾನೆ!"೪ ಎಂದು ಲೇಖಕರೇ ಹೇಳುವುದನ್ನು ನೋಡಿದರೆ ಆ ಕೆಂಪು ಮಸಿ ದೌತಿಮೊದಲು ಆಕರ್ಷಣೆ, ಆನಂತರ ಕುತೂಹಲ ತದನಂತರ ಹೇಸಿಕೆಯ ಭಾವನೆ ಮೂಡಿಸಿದ್ದು ಹಂತ-ಹಂತವಾಗಿ ಕಾಣಸಿಗುತ್ತದೆ. ಇಲ್ಲಿ ಮನಃಸ್ಥಿತಿಯ ವಿವಿಧ ಮಜಲುಗಳು ಆ ಕೆಂಪು ಮಸಿದೌತಿಯ ಸಂಕೇತದ ಮೂಲಕ ಕಾಣಸಿಗುತ್ತದೆ.

ಈ ಕಥೆಯಲ್ಲಿ ಗಮನಿಸಬೇಕಾದ ಒಂದು ಸಂಗತಿಯೆಂದರೆ ಏಳೆಂಟು ವರ್ಷಗಳ ಬಾಲ್ಯದ ಈ ಪ್ರಸಂಗವನ್ನು ಲೇಖಕ ಗೆಳೆಯರೊಡನೆ ಚರ್ಚಿಸುವುದು, ಆ ಕುರಿತು ಕತೆ ಬರೆಯುವುದು ಪ್ರೌಢ ವಯಸ್ಕರಾದ ಮೇಲೆ. ಆದ್ದರಿಂದ ಲೇಖಕನ ಸಾಹಿತ್ಯಕ ಪ್ರಜ್ಞೆ ಇಲ್ಲಿ ಎದ್ದು ಕಾಣುತ್ತದೆ.

ಚಿತ್ತಾಲರ ಈ ಉತ್ತುಮಿ ಕಥೆಯನ್ನು ಕುರಿತಂತೆ ೫" ಆ ಬಡ ವೇಶ್ಯೆಯಲ್ಲೂ ಒಬ್ಬ ತಾಯಿ ಹೃದಯವನ್ನು ಕಂಡು ಅವಳ ವಿಷಯವಾಗಿ ಆದರ ವ್ಯಕ್ತಪಡಿಸುವ ರೀತಿ ಮಾಸ್ತಿ ಸಂಪ್ರದಾಯದ ಕತೆಗಳಿಗೆ ಅನುಗುಣವಾಗಿಯೇ ಇದೆ."೫ ಎಂಬ ಮಾತು ಇಲ್ಲಿ ಉಲ್ಲೇಖಾರ್ಹ.

೧ಯಶವಂತ ಚಿತ್ತಾಲರ ಐವತ್ತೊಂದು ಕಥೆಗಳು: ಪುಟ-೧೪

೨. ಅದೇ ಪುಟ-೧೫

೩. ಅದೇ ಪುಟ-೧೩

೪. ಅದೇ ಪುಟ- ೧೪

೫. ಯಶವಂತ ಚಿತ್ತಾಲ- ಸಂ: ಡಾ||ಪ್ರಧಾನ್ ಗುರುದತ್ತ- ಪುಟ-೧೦೮

ಕಳ್ಳಗಿರಿಯಣ್ಣ: ಈ ಕಥೆಯಲ್ಲಿ ಯಶವಂತ ಚಿತ್ತಾಲರು ಎಲ್ಲಾ ಪಾತ್ರಗಳನ್ನೂ ಮಾನಸಿಕ ತುಮುಲಗಳನ್ನು ಒಳಗೊಂಡಂತೆಯೇ ಚಿತ್ರಿಸಿರುವುದು ವಿಶೇಷ. ಕಳ್ಳಗಿರಿಯಣ್ಣ ಸತ್ತ ವಿಚಾರ ಕೇಳಿ ಸ್ವತಃ ಲೇಖಕರಿಗೆ ತೊಳಲಾಡುವಂತಾಗುತ್ತದೆ. ಆ ಹಿನ್ನೆಲೆಯಲ್ಲಿಯೇ ಇಡೀ ಕಥೆ ಬಿಚ್ಚಿಕೊಳ್ಳುತ್ತದೆ. ಆತ ಕಳ್ಳನಾಗಿ ಮನೆಯ ಜವಾಬ್ದಾರಿಯಿಂದ ವಿಮುಖನಾದ್ದರಿಂದಲೇ ೧"ಅವನು ಸತ್ತಾಗ ಸ್ವತಃ ಅವನ ಹೆಂಡತಿ ಮಕ್ಕಳು ಅತ್ತರೋ ಇಲ್ಲವೋ ಎಂದು ಸಂಶಯಪಟ್ಟರೆ ಅದರಲ್ಲಿ ಏನೂ ಆಶ್ಚರ್ಯವಿಲ್ಲ"೧ ಎಂಬ ಮಾತು ಬರುತ್ತದೆ.

೨"ರಂಗವಿಲಾಸದೊಳಗಿನ ಬಿಸ್ಕೂಟು ಆಂಬೋಡೆಯ ಜೊತೆ ಒಂದು ಕಪ್ಪು ಚಹಾ ಹಾಗೂ ದಿನಕ್ಕೊಂದು ಕಟ್ಟು ಬೀಡಿ ಇದ್ದ ಹೊರತು ಗಿರಿಯಣ್ಣನಿಂದ ಬದುಕಿ ಉಳಿಯುವುದು ಶಕ್ಯವೇ ಇರಲಿಲ್ಲ."೨ ಹಾಗಾಗಿಯೇ ಗಿರಿಯಣ್ಣ ಹಾಲು ಹಾಕಿದರು ತಿಂಗಳ ಕೊನೆಗೆ ಹಣದ ವಸೂಲಿಗೆ ಆತನ ಹೆಂಡತಿಯೇ ಬರುತ್ತಿದ್ದುದು. ಇಲ್ಲಿ ಚಪಲ ಚೆನ್ನಗರಾಯನಾದ ಗಿರಿಯಣ್ಣನ ಮನಃಸ್ಥಿತಿ ಆತನ ಬಯಕೆಗಳ ಈಡೇರಿಕೆಗೆ ಹಣ ಸಿಗದಿದ್ದಾಗ ಕಳ್ಳತನವನ್ನು ಮಾಡುವ ಮನಃಸ್ಥಿತಿ ಸಂಸಾರದ ರಥ ಸಾಗಿಸಲು ಗಿರಿಯಣ್ಣನ ಹೆಂಡತಿ ಮಾಡುವ ಹಣ ಉಳಿಸುವ ಯತ್ನಗಳು ಎರಡೂ ಒಂದೇ ನಾಣ್ಯದ ಎರಡು ವಿರುದ್ಧ ಮನಃಸ್ಥಿತಿಗಳಲ್ಲಿ ಗೋಚರವಾಗುತ್ತವೆ.

ಕಳ್ಳಗಿರಿಯಣ್ಣನ ಹೆಂಡತಿಯು ಮಹಾಕಾಳಿಯ ಅವತಾರವೆಂದು ಹೇಳಿದ್ದರೂ ಆಕೆ ಹಾಗೆ ವರ್ತಿಸಲು, ಆಕೆಯ ಮನಃಸ್ಥಿತಿ ಅಷ್ಟು ಕಠೋರವಾಗಲು ಕಳ್ಳಗಿರಿಯಣ್ಣನ ತೆರೆಯ ಮರೆಯ ಆಟಗಳೇ ಕಾರಣವೆನ್ನಬಹುದು. ೩"ಅದು ದೇವರಿಗೆ ಬಿಟ್ಟ ಕಾಯಿ, ಯಾರಿಗೂ ಮಾರಬೇಡ ನೀನೇ ಮುರ್ಕುಂಡಿ ದೇವರಿಗೆ ಕೊಟ್ಟು ಕ್ಷಮೆ ಬೇಡಿ ಬಾ ಎಂದು ಹೇಳುವಲ್ಲಿ ಆ ತಾಯಿಯ ಸಹೃದಯ ಮನಃಸ್ಥಿತಿಯು ಇಲ್ಲಿ ಕಾಣಸಿಗುತ್ತದೆ.

೪"ಮೊದಲನೆಯ ಕಾಯಿಯ ರುಚಿ ಹತ್ತಿದ ಕಳ್ಳ ಈ ಎರಡನೆಯದನ್ನು ಬಿಡಲಿಕ್ಕಿಲ್ಲ. ಆದುದರಿಂದ ಈ ಎರಡು ದಿನ ನಾವು ದಿನವೂ ರಾತ್ರಿ ಕಾವಲಿನ ಮೇಲಿರಬೇಕು. ಕಳವು ಮಾಡುತ್ತಿರುವಾಗಲೇ ಅವನನ್ನು ಹಿಡಿಯಬೇಕು"೪ ಎಂದು ಹೇಳುವ ಅಂತೆಯೇ ಕಾರ್ಯೋನ್ಮುಖನಾಗುವ ಚಿಗಪ್ಪ ಮತ್ತು ಅವರ ಮನಸ್ಸಿನಲ್ಲಿಯೇ ಎಷ್ಟೋ ಸಲ ತಾನು ಒಂದು ಯಕಶ್ಚಿತ ಕಂಬಳಕಾಯಿಯ ಕಳವಿನ ಸಲುವಾಗಿ ಎಚ್ಚರ ಕುಳಿತಿದ್ದೇನೆ ಎಂಬ ಅರಿವು ಬಂದು ನಕ್ಕಿದ್ದೂ ಉಂಟಂತೆ. ಈ ಎರಡೂ ಮನಃಸ್ಥಿತಿಗಳೂ ವೈರುದ್ಯವಾದವುಗಳೇ ಚಿಗಪ್ಪನ ಒಂದು ಮನಸ್ಸು ಕಳ್ಳನನ್ನು ಹಿಡಿದು ಶಿಕ್ಷಿಸಬೇಕೆಂದು ಬಯಸಿದರೆ, ಮತ್ತೊಂದು ಮನಸ್ಸು ಯಕಶ್ಚಿತ ಕುಂಬಳ ಕಾಯಿಯನ್ನು ಕಾಯುತ್ತಿರುವುದಾಗಿ ಅಪಹಾಸ್ಯ ಮಾಡುತ್ತದೆ. ಇಲ್ಲಿ ಒಂದೇ ಮನಸ್ಸಿನ ಎರಡು ವಿರುದ್ಧ ಮುಖಗಳನ್ನು ಗ್ರಹಿಸಲು ಸಾಧ್ಯ.

ತಾಯಿಯ ಮನಸ್ಸು ಕಳ್ಳಗಿರಿಯಣ್ಣ ದೇವರಿಗೆ ಬಿಟ್ಟ ಕಾಯಿಯನ್ನು ಕದ್ದದ್ದರಿಂದ ಆತನಿಗೆ ಕೇಡಾಗುವುದನ್ನು ತಪ್ಪಿಸಬೇಕೆಂದು ಬಯಸಿದರೆ, ಚಿಗಪ್ಪನ ಮನಸ್ಸು ಕಳ್ಳನನ್ನು ಮತ್ತೆ ಹಿಡಿದು ತಾವೇ ಶಿಕ್ಷೆ ನೀಡಬೇಕೆಂದು ಬಯಸುವ ವಿರುದ್ಧ ಮುಖ/ಮನಸ್ಸಿನ ಎರಡು ಪಾತ್ರಗಳಲ್ಲಿ ಕಾಣಸಿಗುತ್ತವೆ.

---

೧. ಯಶವಂತ ಚಿತ್ತಾಲರ ಐವತ್ತೊಂದು ಕತೆಗಳು: ಪುಟ-೧೬

೨. ಅದೇ ಪುಟ-೧೬

೩. ಅದೇ ಪುಟ-೨೦

೪. ಅದೇ ಪುಟ-೨೦

ಬೊಮ್ಮಿಯ ಹುಲ್ಲುಹೊರೆ: ಈ ಕಥೆಯೇ ಚಿತ್ತಾಲರ ಮೊಟ್ಟ ಮೊದಲ ಕಥೆ. ಅವರೇ ಹೇಳುವಂತೆ ೧"ವಿಜ್ಞಾನದ ವಿದ್ಯಾರ್ಥಿಯಾದ್ದರಿಂದ ಸಾಹಿತ್ಯಕ್ಕೂ ನನಗೂ ಕೂಡಿಬಾರದ, ನಂಟು ಎಂದು ಮನಸ್ಸಿನಲ್ಲಿ ಆಳವಾಗಿ ಬೇರೂರಿದ ಒಂದು ಆತಂಕ, ಅದರಿಂದಾಗಿ ಹುಟ್ಟಿದ ಅಧೈರ್ಯ, ದೂರವಾಗಲು ಬಹಳ ವರ್ಷಗಳೇ ಬೇಕಾದುವು. ಆದ್ದರಿಂದಲೇ ಬೊಮ್ಮಿಯ ಹುಲ್ಲುಹೊರೆಯನ್ನು ಬರೆದಾಗ ಅದನ್ನು ಗೆಳೆಯರಿಗಾಗಲೀ, ಅಣ್ಣಂದಿರಿಗಾಗಲೀ ತೋರಿಸುವ ಧೈರ್ಯ ಆಗಲೇ ಇಲ್ಲ. ಯಾರಿಗೂ ತೋರಿಸದೆ ರಾ.ವೆ.ವಾಲಗಳ್ಳಿಯವರು ಸಿರ್ಸಿಯಿಂದ ಹೊರಡಿಸುತ್ತಿದ್ದ ಸಚೇತನ ಎಂಬ ವಾರಪತ್ರಿಕೆಗೆ ಕಳಿಸಿಬಿಟ್ಟೆ. ಗುಟ್ಟಿನಲ್ಲಿ ಮುಂದಿನ ಎಂಟೇ ದಿನಗಳಲ್ಲಿ ನನ್ನ ಕತೆ ಪ್ರಕಟವಾಗಿತ್ತಷ್ಟೆ"೧

ಬೊಮ್ಮಿಯ ಹುಲ್ಲುಹೊರೆಯನ್ನು ಅಪೇಕ್ಷಿಸಿ, ಆಕೆಯ ಪೂರ್ವಜರೂ ತಮಗೇ ನೀಡುತ್ತಿದ್ದರೆಂದು ಹೇಳಿ ಪಾರ್ವತಮ್ಮ ಹುಲ್ಲುಹೊರೆಯನ್ನು ಪಡೆಯುತ್ತಾಳಾದರೂ ಆಕೆ ಬೊಮ್ಮಿಗೆ ಇದ್ದ ಬಡತನದ ಸದುಪಯೋಗವನ್ನು ಪಾರ್ವತಮ್ಮ ಪಡೆಯುತ್ತಾಳೆ.

೨ "ಇಷ್ಟು ಅಕ್ಕಿ ಬೀಸಿಕೊಡ್ತಿಯೋ ಏನು ಅಂತ ಕೇಳಬೇಕೆಂದು ಮಾಡಿದ್ದೆ".

"ಈಗ ಹೊತ್ತು ಬಂತ್ರಾ, ನಾಳೆ ಬಂದು ಬೇಕಾದರೆ ಬೀಸಿಕೊಡ್ತಿದ್ದೆ......"

"ನಾಳೆಗಾದರೆ ಆ ಪರಮೇಶ್ವರಿ ಬೀಸಿಕೊಡ್ತೇ ಹೇಳ್ಯಾದೆ"

"ರೊಕ್ಕಾ ಏನು ಕೊಡ್ತೀರಿ?"

"ಮತ್ತೇನು ರೊಕ್ಕವೆ?" ಅನ್ನಾ ಏನು ಪುಕ್ಕಟೆ ಬರ್ತದೆಯೇ? ಗನಾSS ಇಷ್ಟು ಇದೆ. ಚಲೋ ಉಪ್ಪಿನಕಾಯಿ ಕೊಡ್ತೆ."೨ ಎಂದು ಹೇಳುವ ಪಾರ್ವತಮ್ಮನ ಅಧಿಕಾರಯುತ ಶ್ರೀಮಂತಿಕೆಯ ಬಲದಿಂದ ಬಂದ ಮಾತುಗಳೇ ಆಗಿವೆ. ಆದರೆ ಬೊಮ್ಮಿಯ ೩ "ಹುಂ ಕೊಡ್ಬಾ-ನಿಮ್ಮ ಮಾತು ಮುರೀಲಿಕ್ಕೆ ಬರೋದಿಲ್ಲ."೩ ಎನ್ನುವ ನುಡಿಗಳು ಅವಳ ಬಡತನ ಆ ಹಿಂದಿನ ಆಕೆಯ ಮನದಲ್ಲಿರುವ ನೋವಿನ, ಆ ಮುಖೇನ ದಕ್ಕಿದಷ್ಟೇ ಸಾಕೆನ್ನುವ ಭಾವವು ಕಾಣಸಿಗುತ್ತದೆ.

ಆದರೂ ಪಾರ್ವತಮ್ಮ ಪರಮೇಶ್ವರಿಯೊಡನೆ ಬೊಮ್ಮಿಗೆ ಎರಡಾಣೆ ಕೊಟ್ಟ ಮೇಲೆ ಅನ್ನ ಆಸೆಯನ್ನು ನೀಡಿದೆ ಎಂದು ಔದಾರ್ಯವಂತಳಂತೆ ಸುಳ್ಳಾಡುತ್ತಾಳೆ. ಆದರೆ ಸಹೃದಯತೆ ಇರುವ ಪರಮೇಶ್ವರಿಯು ಬೊಮ್ಮಿಯೂ ಒಳ್ಳೆಯವಳೆ ಅವಳಿಗೆ ಕೊಟ್ಟಿದ್ದು ತಪ್ಪಿಲ್ಲವೆಂದುನುಡಿಯುತ್ತಾಳೆ. ಇಲ್ಲಿ ಪಾರ್ವತಮ್ಮ ಮತ್ತು ಪರಮೇಶ್ವರಿ ಇಬ್ಬರೂ ವಿರುದ್ಧ ಮುಖದವರಾಗಿ ನಿಲ್ಲುತ್ತಾರೆ.

ಅಕ್ಕಿ ಬೀಸಲು ಹೊರಟ ಬೊಮ್ಮಿಗೆ ಅದು ದೇವರಿಗೆ ಎಂಜಲು-ಗಿಂಜಲು ಮಾಡಬೇಡ, ನಿನಗೆ ಬೇಕಾದರೆ ಆನಂತರ ನುಚ್ಚು-ಗಿಚ್ಚು ಕೊಡೋಣ ಎಂದೆನ್ನುತ್ತಾಳೆ. ಅಲ್ಲಿ ಬೊಮ್ಮಿಗೆ ಆಕೆಯ ಆಂತರ್ಯದ ಮನಕ್ಕೆ ಪೆಟ್ಟಾಗುವ ಸಾಧ್ಯತೆಗಳ ಅರಿವೂ ಪಾರ್ವತಮ್ಮಳಿಗೆ ಆಗದು. ಆದರೆ ಬಡತನವನ್ನು ಬೆನ್ನಿಗೇರಿಸಿಕೊಂಡು ನಡೆಯುತ್ತಿರುವ ಬೊಮ್ಮಿಗೆ ಅದನ್ನು ಸಹಿಸಿ ಸಾಗುವ ಮನಃಸ್ಥಿತಿಯೇ ಹೊರತು ಪ್ರತಿಭಟಿಸುವ ಪಾತ್ರ ಅವಳದಲ್ಲ.

---

೧. ಯಶವಂತ ಚಿತ್ತಾಲರ ಐವತ್ತೊಂದು ಕತೆಗಳು: ಪುಟ-೬೫೩

೨. ಅದೇ ಪುಟ-೨೩. ೩. ಅದೇ ಪುಟ-೨೩

ಒಂದು ತತ್ವದ ಸಲುವಾಗಿ: ಈ ಕತೆಯಲ್ಲಿ ಅರ್ಧ ಗಂಟೆಯವರೆಗೆ ತುಂಬಿದ ಬಸ್ಸನ್ನೇ ಹಿಡಿದು ನಿಲ್ಲಿಸಿದ ಆ ತೂತಿನ ಬಿಲ್ಲಿಯಲ್ಲಿ (ಸುಮಾರು ೧೯೫೦-೧೯೭೦ ರವರೆಗೆ ಚಲಾವಣೆಯಲ್ಲಿದ್ದು, ಈಗಿನ ೧.೫ ಪೈಸೆಗೆ ಸಮಾನವಾದ ಕಾಲಾಣೆ ಮಧ್ಯ ತೂತು ಇದ್ದ ತಾಮ್ರದ ನಾಣ್ಯ) ಅಡಗಿದ್ದ ತತ್ವದ ಮಹಿಮೆಯನ್ನು ಕಂಡು ಕತೆಗಾರರು ಬೆರಗಾಗಿದ್ದಾರೆ.

೧"ಅಲ್ಲರಾ, ಇದು ಒಂದು ಬಿಲ್ಲಿ ಪ್ರಶ್ನೆ ಅಲ್ಲರಾ, ನೀವೇ ನೋಡಿ, ಇಂತಾ ಬಿಲ್ಲಿ ನಾನೆಷ್ಟು ನೋಡಲಿಲ್ಲ. ಅದೊಂದು ತತ್ವದ ಪ್ರಶ್ನೆರಾ"೧ ಎಂದು ಹೇಳುವಲ್ಲಿ ಕಾಮತರ ತತ್ವ. ಆ ಮಾತಿನ ಹಿಂದಿರುವ ನಾನೇಕೆ ಸೋಲಬೇಕು? ಎಂಬ ಹಿರಿತನವು ಕಾಣಸಿಗುತ್ತದೆ. ಆದರೆ ಬಿಲ್ಲಿ ಸಿಗದೆ ಬಸ್ಸು ಮುಂದೆ ಬಿಡಲು ತಯಾರಿಲ್ಲದ ತಿಮ್ಮಣ್ಣ ಇಬ್ಬರ ಸಂಭಾಷಣೆಯು ನೆಗೆಪಾಟಲಾಗಿ ಕಾಣಸಿಗುತ್ತದೆ. ಈ ಎರಡೂ ಪಾತ್ರಗಳ ಮನಃಸ್ಥಿತಿ ಎಲ್ಲರೆದುರು ತಾವು ಸೋಲಬಾರದೆಂಬ ಒಣಪ್ರತಿಷ್ಠೆ ಕಾಣಸಿಗುತ್ತದೆ. ಆದರೆ ಲೇಖಕರು ತಾವು ಹೋಗುತ್ತಲಿರುವ ಕೆಲಸಕ್ಕೆ ತಡವಾಗುತ್ತದೆಂಬ ಕಾರಣಕ್ಕೆ ಬಸ್ಸು ತಲುಪುವ ಮುಂಚೆಯೂ ದೋಣಿಯವನಿಗೆ ಹೆಚ್ಚು ರೊಕ್ಕ ಕೊಟ್ಟಿದ್ದಲ್ಲದೆ, ಬಸ್ಸು ತಡೆಹಿಡಿದ ತಿಮ್ಮಣ್ಣನಿಗೆ ಕಾಮತರ ಪರವಾಗಿ ತಾವೇ ಒಂದು ಬಿಲ್ಲಿಯನ್ನು ಕೊಡುತ್ತಾರೆ. ಕಾಮತರರದು ತಡವಾದರೂ ತನ್ನ ತತ್ವವನ್ನು ಮೀರಿ ಬಿಲ್ಲಿ ಕೊಡಬಾರದೆಂಬ ಹಟದಿಂದ ಕಳೆದ ಬಾರಿ ಬಂದಿದ್ದ ಸಿನಿಮಾಗೂ ತನ್ನ ಮೊಮ್ಮಗನಿಗೆ ಬಿಲ್ಲಿ ಕೊಟ್ಟಿಲ್ಲವೆಂದು ಸಮರ್ಥಿಸಿಕೊಳ್ಳುವ ಮನಃಸ್ಥಿತಿಯವರಾದರೆ ಲೇಖಕರದು ಕಾಮತರ ಅರಿವಿಗೇ ಬಾರದಂತೆ ತಿಮ್ಮಣ್ಣನಿಗೆ ಬಿಲ್ಲಿ ನೀಡಿ ಮುಂದೆ ಸಾಗುವಂತೆ ವಿರುದ್ಧ ಮುಖಗಳಲ್ಲಿ ಪರಸ್ಪರ ಕಾಣಸಿಗುತ್ತಾರೆ.

೨"ಮುದುಕ ಕಾಮತರು ಅತಿ ಸಾವಧಾನದಿಂದ ತಮ್ಮ ಕವಳದ ಚಂಚಿಯಂತಹ ಉದ್ದವಾದ ನಾಣ್ಯಗಳ ಚೀಲವನ್ನು ಹೊರತೆಗೆದು, ನಾಜೂಕಿನಿಂದ ಅದರ ಬಾಯಿಗೆ ಕಟ್ಟಿದ ದಾರ ಬಿಚ್ಚಿ, ಒಳಗೆ ಕೈಹಾಕಿ ತಮಗೆ ಬೇಕಾದ ನಾಣ್ಯವೇ ಕೈಗೆ ಸಿಗುವುದಿಲ್ಲವಲ್ಲ ಎಂಬ ಭಾವವನ್ನು ಮೋರೆಯ ಮೇಲೆ ಮೂಡಿಸಿ, ಹಲವು ನಿಮಿಷಗಳವರೆಗೂ ಹುಡುಕಾಡಿ ಕೊನೆಗೂ ಸಿಕ್ಕಿತಲ್ಲ ಎಂಬಂತೆ ಒಂದಾಣೆಯನ್ನು ಹೊರತೆಗೆದು ಹೂಂ ಹಿಡಿಯೋ ರೊಕ್ಕಾ ಎಂದು ಕೈ ಮುಂದೆ ಮಾಡುವುದು, ತಿಮ್ಮಣ್ಣ ಮತ್ತು ರಾಮಕಾಮತರ ವಾದವಿವಾದ ಇವೆಲ್ಲ ನಗೆಯುಕ್ಕಿಸುತ್ತವೆ. ಒಂದು ತತ್ವದ ಸಲುವಾಗಿ ಹೇಳಿ ಕೇಳಿ ಒಂದು ವ್ಯಂಗ್ಯ ಚಿತ್ರ, ಅದರ ನವಿರಾದ ಹಾಸ್ಯದ ಮುಗುಳಿನ ಅಡಿಗೆ ಮುಳ್ಳಿನ ಮೊನೆಯೂ ಇದೆ. ಆದರೆ ಈ ಮುಳ್ಳಿಗೆ ನಂಜಿಲ್ಲ. ಉರಿಯಿಲ್ಲ. ಆ ತೂತಿನ ಬಿಲ್ಲಿಯಲ್ಲಡಗಿದ್ದ ತತ್ವದ ಮಹಿಮೆಯನ್ನು ಕಂಡು ಬೆರಗಾದೆ. ಇದು ಅಂಥ ಮೊನೆ ಮಾತು ಎಂದಿದ್ದಾರೆ ಗೌರೀಶ ಕಾಯ್ಕಿಣಿ."೨

ಗುಂಡಾಭಟ್ಟರ ಮಡಿ: ಈ ಕಥೆಯು ಹಾಸ್ಯದ ಹೊನಲನ್ನು ಬೀರುವ ಕಥೆಯಾಗಿದ್ದು, ಸಂಪ್ರದಾಯದ ಜಡ್ಡುಗಟ್ಟಿದ ಸಮಾಜದ ಮತ್ತೊಂದು ಮುಖವೂ ಎಳೆ ಎಳೆಯಾಗಿ ಬಿಚ್ಚಿಕೊಳ್ಳುತ್ತದೆ.

---

೧. ಯಶವಂತ ಚಿತ್ತಾಲರ ಐವತ್ತೊಂದು ಕತೆಗಳು: ಪುಟ-೨೯

೨. ಯಶವಂತ ಚಿತ್ತಾಲ-೭೦: ಪ್ರಧಾನಗುರುದತ್ತ ಪುಟ -೨೦

೧"ಕೋಳಿಯ ಪಿಷ್ಟವನ್ನು ಮುಟ್ಟಿದರೆಂದು ಒಂದು ಸಲ, ನಾಯಿಯ ಬಾಲ ತಾಗಿದಂತಾಯಿತೆಂದು ಒಂದು ಸಲ, ಹಿತ್ತಲಲ್ಲಿ ಬಿದ್ದ ಹಳೇ ವಸ್ತ್ರದ ಚಿಂದಿ, ಮುಟ್ಟಿದರೆಂದೊಂದು ಸಲ ಹೀಗೆ ಹಲವು ಸಲ ಸಗಣೀ ನೀರಿನ ಮೊರೆ ಹೋಗುವುದರಲ್ಲಿಯೇ ಅವರ ದಿನದ ಮುಕ್ಕಾಲು ಪಾಲು ವ್ಯಯವಾಗುತ್ತಿತ್ತು."೧ ಎನ್ನುವಲ್ಲಿ ಸಂಪ್ರದಾಯ ಶರಣತೆ ಮತ್ತು ಹಿಂದಿನಿಂದ ಬೆಳೆಸಿಕೊಂಡು ಬಂದ ರೂಢಿಗಳನ್ನು ಮುರಿಯಲು, ಮುರಿದು ಮುಂದೆ ಸಾಗಲು ಸಾಧ್ಯವಾಗದ ಮನಃಸ್ಥಿತಿಯು ಗೋಚರವಾಗುತ್ತದೆ.

ಭಟ್ಟರು ಮಾವಿನಹಣ್ಣುಗಳು ಬಿದ್ದಿದ್ದನ್ನು ಒಯ್ಯಲು ರಾತ್ರೋರಾತ್ರಿಯೇ ತಮ್ಮ ತೋಟಕ್ಕೆ ಬಂದಾಗ ೨"ಭಟ್ಟರು ಹಣ್ಣು ಬಿದ್ದ ಸದ್ದಿಗೇ ಮೋಹಿತರಾಗಿ ಆಗೇರರ ಹಿತ್ತಲೆಂಬುದನ್ನೂ ಮರೆತು ಅತ್ತ ಧಾವಿಸಿದರು. ಹಣ್ಣು ಇವರ ವಶವಾಯಿತು. ಉಬ್ಬಿಹೋದರು. ಕೈತುಂಬ ಹಣ್ಣು. ಆದರೆ ಮರುಕ್ಷಣ ತಮ್ಮ ಕೈ ಆ ಆಗೇರ ಮುರ್ಕುಂಡಿಯ ಕೋಸನ ಕೈಯಲ್ಲಿದ್ದುದನ್ನು ಕಂಡು ಬೆಚ್ಚಿಬಿದ್ದರು. ಏನ್ರಾ ಭಟ್ಟರೇ ಮುಟ್ಟಿಬಿಟ್ರಲ್ಲಾ? ಅಯ್ಯೋ ಮೈಲಿಗೆಯಾಯ್ತು. ಹೋಗಿ ಮೀಯಬೇಕಾಯ್ತಲ್ಲ? ಪಾಪ ನಮ್ಮ ಹಿತ್ತಲಿಗೆ ಯಾಕೆ ಕಾಲಿಡಬೇಕೋ? ಎಂದ ಕೋಸ, ಅಲ್ಲಿಯೇ ಅವನ ಕುತ್ತಿಗೆ ಹಿಚುಕಿ ಕೊಂದುಬಿಡಲೇ ಎನ್ನುವಷ್ಟು ಸಿಟ್ಟು ಬಂದಿತ್ತು ಭಟ್ಟರಿಗೆ"೨ ಎಂಬ ಮಾತಿನಲ್ಲಿ ಭಟ್ಟರು ತಮ್ಮನ್ನು ಮುಟ್ಟಿಸಿಕೊಳ್ಳದವರು ಹಣ್ಣಿಗಾಗಿ ಬಂದಿದ್ದಾರೆ ಎಂಬ ಆಗೇರರ ವ್ಯಂಗ್ಯದ ಹಿಂದೆ ಅವರ ಮನಸ್ಸಿಗಾದ ನೋವು, ಆ ಮೂಲಕ ಅವರು ಪಟ್ಟ ಹಿಂಸೆ, ಯಾತನೆಗಳ ಅರಿವಾಗುತ್ತದೆ.

ಇಲ್ಲಿ ಆಗೇರರನ್ನು ಮುಟ್ಟಿಸಿಕೊಂಡರೆ ಭಟ್ಟರಿಗಾಗುವ ಮೈಲಿಗೆ ಅಸಹ್ಯ ಆದರೆ ಅವರ ಹಿತ್ತಲಲ್ಲಿಯೇ ಬಿದ್ದ ಹಣ್ಣನ್ನು ಮಾತ್ರ ಬಿಡಲು ಒಲ್ಲದ ಮನಃಸ್ಥಿತಿಯು ಇಲ್ಲಿ ಗೋಚರವಾಗುತ್ತದೆ. ಇಂತಹ ಉತ್ಕಟ ಸ್ಥಿತಿಯನ್ನು ನೋಡಿಯೇ ಅಕ್ಕಿಯ ಮೇಲೆ ಆಸೆ, ನೆಂಟರ ಮೇಲೆ ಪ್ರೀತಿ ಎಂಬ ಗಾದೆ ಮಾತು ಹುಟ್ಟಿರುವುದೆಂಬುದನ್ನು ಮರೆಯುವಂತಿಲ್ಲ.

ಇಲ್ಲಿ ಭಟ್ಟರ ತಾಯಿ, ಭಟ್ಟರು, ಭಟ್ಟರ ಹೆಂಡತಿ ಎಲ್ಲರೂ ತಮ್ಮವರು ಪಾಲಿಸಿಕೊಂಡು ಬಂದು ಮಡಿವಂತಿಕೆಯ ಸಂಪ್ರದಾಯವನ್ನು ಮುಂದುವರಿಸುತ್ತಿರುವ ಪ್ರತಿನಿಧಿಗಳೇ ಹೊರತು ಬೇರೇನಿಲ್ಲ. ಮಾವಿನ ಕಾಯಿಗಳನ್ನು ಎತ್ತಿತರಲು ತೋಟಕ್ಕೆ ಹೋದ ಭಟ್ಟರಿಗೆ ಆಗೇರರ ತೋಟದಲ್ಲಿ ಬಿದ್ದ ಹಣ್ಣುಗಳನ್ನು ಎತ್ತಿ ತರುವ ಆಸೆ, ಆಸೆಯಂತೂ ಇದೆ. ಆದರೆ ಅದಕ್ಕೆ ಹಿಂದಿನವರು ಹಾಕಿಕೊಟ್ಟ ದಾರಿ (ಕಟ್ಟಳೆಯನ್ನು ಮೀರಲಾಗುತ್ತಿಲ್ಲ, ಇಲ್ಲಿ ಭಟ್ಟರ ಮನೋವೈಫಲ್ಯವೂ ಅಂದರೆ ಏಕಚಿತ್ತತೆ ಇಲ್ಲದ ಮನಃಸ್ಥಿತಿ ಕಾಣಸಿಗುತ್ತದೆ.

೩"ಗುಂಡಾಭಟ್ಟರು ಮುಟ್ಟಾದ ಕತೆಯನ್ನು ಹೆಂಡತಿ ಊರಲ್ಲಿಲ್ಲದಾಗ ಅವಳ ಸೀರೆಯುಟ್ಟು ಹಾಲು ಕರೆಯಲು ಹೋಗಿ ಎಮ್ಮೆಯಿಂದ ಒದೆಸಿಕೊಂಡು ಫಜೀತಿ ಪಟ್ಟ ಪ್ರಸಂಗವೊಂದನ್ನು ಕುರಿತು ಗೊರೂರು ರಾಮಸ್ವಾಮಿ ಅಯ್ಯಂಗಾರರು ಬರೆದ ನಮ್ಮ ಎಮ್ಮೆಗೆ ಮಾತು ಬರುವುದೇ, ಕಥೆಯನ್ನು ಇಲ್ಲಿ ನೆನಪು ಮಾಡಿಕೊಳ್ಳಬಹುದು. ಚಿತ್ತಾಲರ ಕಥೆಯ ವಿಡಂಬನೆ ಮಾತ್ರ ಅಲ್ಲಿಗಿಂತ ತೀಕ್ಷ್ಣವಾಗಿದೆ.

---

೧. ಯಶವಂತ ಚಿತ್ತಾಲ : ಸಂ: ಪ್ರಧಾನ್ ಗುರುದತ್ತ-ಪುಟ-೨೯

೨. ಅದೇ ಪುಟ-೩೧ ೩. ಅದೇ ಪುಟ-೨೭

ಚಿತ್ತಾಲರ ಮೊಟ್ಟಮೊದಲ ಸಂಗ್ರಹ 'ಸಂದರ್ಶನ'ದಲ್ಲಿಯೇ ಪ್ರಕಟವಾದ ಈ ಕತೆಯನ್ನು ಕುರಿತು- ಗುಂಡಾಭಟ್ಟರ ಮಡಿ, ಇದೊಂದು ವ್ಯಂಗ್ಯ ಕಥೆ. ಮಡಿತನದ ವಿಡಂಬನೆಯ ವಿಕರಾಳ ಚಿತ್ರವಿದು, ಕತೆಯನ್ನು ಪ್ರಸ್ತುತಗೊಳಿಸುವ ಪ್ರಸ್ತಾವಿಕ ಹರಟೆಯೂ ಸುಸಂಗತವಾಗಿ ಕೂಡಿಬಂದಿದೆ. ಗುಂಡಾಭಟ್ಟರ ಮಡಿಯ ಕತೆ ಚಾದಂಗಡಿಯ ಸರ್ವೋತ್ತಮನ ಬಾಯಿಗೆ ಸಿಕ್ಕಿ ಪಡೆದ ಅಕಲ್ಪಿತ ತಿರುವು ಅದರ ವ್ಯಂಗ್ಯಕ್ಕೆ ತಕ್ಕ ವಕ್ರತೆಯನ್ನು ನೀಡಿದೆ ಎಂದಿದ್ದಾರೆ. ಗೌರೀಶ ಕಾಯ್ಕಿಣಿಯವರು"೩.

೧"ಅಯ್ಯೋ ಮುಟ್ಟಿದೆಯೇನೋ? ತಡೆ, ನನಗೆ ಮುಟ್ಟಬೇಡ ಏ ತಡಿಯೋ ಅಲ್ಲೇ ನಿಲ್ಲು,೧" ಎಂದು ಗುಂಡಾಭಟ್ಟರ ಹೆಂಡತಿ ಮಗುವಿಗೆ ಹೇಳುವಲ್ಲಿ ಸಂಪ್ರದಾಯವನ್ನು ಕಾಪಾಡುವ ಮನಃಸ್ಥಿತಿ ೨"ಸ್ನಾನ ಮಾಡಿದರೂ ಜನಿವಾರ ಬೇಕೆ ಬೇಕು. ಈ ನಡುರಾತ್ರಿಯಲ್ಲಿ ಜನಿವಾರ ಎಲ್ಲಿಂದ ತರುವುದು?೨" ಎನ್ನುವ ಗುಂಡಾಭಟ್ಟರ ಮಾತಿನಲ್ಲಿಯೂ ಸಂಪ್ರದಾಯ ಮೀರದ ಮನಃಸ್ಥಿತಿ. ಅದಕ್ಕಾಗಿ ಇಡೀ ರಾತ್ರಿ ಹೆಂಡತಿಯ ಸೀರೆ ಹೊದ್ದು ಪಡಸಾಲೆಯ ಮೇಲೆ ಮಲಗುವ ಮನಃಸ್ಥಿತಿಯು ಆತನಿಗಿರುವುದನ್ನು ಗಮನಿಸಲೇಬೇಕಾದ ಅಂಶವಾಗಿದೆ.

ತಪ್ಪಿದ ಗುರಿ:- ಈ ಕತೆಯಲ್ಲಿ ಚಿತ್ತಾಲರು ಮನಮೋಹಕವಾಗಿ ಮುಕ್ತಾಳ ತಾಯಿಯ ಪಾತ್ರದ ಮುಖೇನ ಹೆಣ್ಣು ಹೆತ್ತವರ ಮನೋಯಾತನೆ, ಹೇಗಾದರೂ ಉತ್ತಮ ಹುಡುಗನಿಗೆ ಮದುವೆ ಮಾಡಿ ಜವಾಬ್ದಾರಿಯಿಂದ ಮುಕ್ತರಾಗಬೇಕೆಂಬ ಬಯಕೆಯು ಹೇಗೆ ಕಾರ್ಯೋನ್ಮುಖವಾಗುವಂತೆ ಮಾಡುತ್ತದೆಂಬುದನ್ನು ಚಿತ್ರಿಸಿದ್ದಾರೆ.

ಮನೆಗೆ ಬಂದವನು ಮೋಹನನೋ/ದೇವೇಂದ್ರನೋ ಎಂಬ ಪರಿವೆಯೂ ಇರದ ಮುಕ್ತಾಳ ತಾಯಿಯು ಅಜ್ಜಿಯು ಹೇಳಿದಂತೆ ಮೋಹನನೇ ಬಂದಿರುವನೆಂದು ತಿಳಿದು ತನ್ನ ಮಗಳಾದ ಮುಕ್ತಾಳ ಬಗೆಗೆ ಹೊಗಳಿಕೆಯ ಹಲವು ಮಾತುಗಳನ್ನಾಡುತ್ತಾಳೆ. ಬಂದವನು ಮೋಹನನೆಂದು ತಿಳಿದು, ತನ್ನ ಮಗಳು ಮೆಟ್ರಿಕ್ ತನಕ ಓದಿದ್ದಾಳೆ. ೩"ಈಗಿನ ಕಾಲದ ಹುಡುಗರು ಕಲಿಯದ ಹೆಣ್ಣಿನ ಕಡೆ ನೋಡುತ್ತಾರೆಯೇ!೩" ಎಂದು ಹೇಳಿ ತನ್ನ ಮಗಳು ಓದಿದ್ದಾಳೆಂದು ತಿಳಿಸಿ ಕಸೂತಿಯ ಕೆಲಸವೂ ಆಕೆಗೆ ಗೊತ್ತೆಂದು ತಿಳಿಸಿ ಆ ಮುಖೇನ ಇವಳು ಎಲ್ಲವನ್ನು ಬಲ್ಲಳೆಂದು ತಿಳಿಸಿ ಬಂದವನು ಮೋಹನನೇ ಎಂಬ ಅರಿವಿನಿಂದ ಆತನು ಮುಕ್ತಾಳನ್ನು ಒಪ್ಪಲೇಬೇಕೆಂಬ ಆತುರ, ಜೊತೆಗೆ ತನ್ನ ಮಗಳಿಗೆ ನಿನ್ನಂತಹ ಓದಿದ ಗಂಡೇ ಬೇಕೆಂದು ಪದೇ ಪದೇ ಹೇಳುವಲ್ಲಿ ಆಕೆಯ ಮನತೋಟಿಯ ಅರಿವಾಗದೆ ಇರದು.

೪"ಅವನು ಮೋಹನನ ಅಣ್ಣ. ಅವನಿಗೆ ಲಗ್ನವಾಗಿ ಒಂದು ಮಗುವಾಗಿದೆ"೪ ಎಂದು ಮುಕ್ತಾ ಹೇಳಿದಾಗ ಆಕೆಯ ತಾಯಿಗೆ ಆದ ನೋವು ಅಷ್ಟಿಷ್ಟಲ್ಲ. ಅದರ ಹಿಂದೆ ತನ್ನ ಮಗಳನ್ನು ಮೋಹನ ಒಪ್ಪಿಕೊಳ್ಳಲಿ ಎಂದು ಮಾಡಿದ ಯತ್ನಗಳೆಲ್ಲವೂ ವಿಫಲವಾದಂತೆನಿಸಿ ನೊಂದು ನುಡಿಯುತ್ತಾಳೆ. ಆದರೆ ಇಲ್ಲಿ ಆಕೆಯ ಮನಃಸ್ಥಿತಿ ಅರಿಯಬೇಕು. ಅಂತೆಯೇ ಮುಕ್ತಾಳ ಮನಸ್ಸಿನಲ್ಲಿ ಮೋಹನ ಗಾಢವಾಗಿಯೇ ನಿಂತಿದ್ದುದು ಆಕೆಯ ಮಾತಿನಿಂದ ಅರಿವಿಗೆ ಬರುತ್ತದೆ.

---

೧. ಯಶವಂತ ಚಿತ್ತಾಲ ಐವತ್ತೊಂದು ಕತೆಗಳು: ಪುಟ-೩೨

೨. ಅದೇ ಪುಟ-೩೦ ೩. ಅದೇ ಪುಟ-೩೫ ೪. ಅದೇ ಪುಟ-೩೮

ಮುಕುಂದನ ದಾಕ್ಷಿಣ್ಯ:- ಈ ಕಥೆಯಲ್ಲಿ ಯಶವಂತ ಚಿತ್ತಾಲರು ಮನೋಜ್ಞವಾಗಿ ಪಾತ್ರಗಳ ಒಳತೋಟಿಯನ್ನು ಚಿತ್ರಿಸುತ್ತಾರೆ. ಜೋಶಿಯವರ ಅಳಿಯನಾದ ಮುಕುಂದ ತುಂಬಾ ನಾಚಿಕೆಯ ಸ್ವಭಾವದವನು. ಹಾಗಾಗಿಯೇ ಆತನನ್ನು ಎಲ್ಲರೂ ಚೇಷ್ಟೆ ಮಾಡಿದ್ದುಂಟು. ೧"ಮುಕುಂದ ಶಾರದೆಯನ್ನು ತೋರಿಸಿದ ದಿನವೇ ಏನೂ ಅಡೆತಡೆ ಇಲ್ಲದೇ ಲಗ್ನವಾಗಲು ಒಪ್ಪಿದುದೂ ಅವನ ದಾಕ್ಷಿಣ್ಯದ ಪರಿಣಾಮ ಅಲ್ಲ ತಾನೆ ಎಂದು ಅವನ ಗೆಳೆಯರು ಚೇಷ್ಟೆ ಮಾಡಿದ್ದೂ ಉಂಟು೧". ಈ ರೀತಿಯ ಸ್ನೇಹಿತರ ಮಾತುಗಳು ಮುಕುಂದನ ನಾಚಿಕೆಯ ಸ್ವಭಾವವನ್ನು ಮತ್ತು ದಾಕ್ಷಿಣ್ಯದ ರೀತಿಯನ್ನು ಆ ಮುಖೇನ ಆತನ ಮನಃಸ್ಥಿತಿಯನ್ನು ತಿಳಿಸುತ್ತವೆ. ೨"ಇಲ್ಲಪ್ಪಾ ನನ್ನ ಕಡೆಯಿಂದ ಸಾಧ್ಯವಿಲ್ಲ. ನನಗೆ ಅಲ್ಲಿ ಹೋಗಲು ನಾಚಿಕೆಯಾಗುತ್ತದೆ ಅನ್ನುತ್ತಿದ್ದ ಮುಕುಂದನಿಗೆ ತಂದೆ ಸಿಟ್ಟೆಗೆದ್ದು ಎದ್ದಾಗ ನಾಚಿಕೆ, ಕೂತಾಗ ನಾಚಿಕೆ ನಾಳೆ ಆ ಬಳೆಗಾರ ಬಂದಾಗ ಅಕ್ಕನ ಜೊತೆಗೆ ನಿನಗೂ ಎರಡು ಜೋಡುಬಳೆ ತೊಡಿಸಿಬಿಡುತ್ತೇನೆ ನೋಡು"೨ ಎಂದು ಗದರಿಸುತ್ತಿದ್ದರು. ಅಂದರೆ ಮುಕುಂದನಿಗೆ ಬೇರೆಯವರ ಮನೆಗೆ ಹೋಗಲೂ ನಾಚಿಕೆಪಡುವಂತಹ ಸ್ವಭಾವದವನು. ಹಾಗಾಗಿಯೇ ಇಂತಹ ಮನಃಸ್ಥಿತಿಯಿಂದಲೇ ಆತ ಮಾವನೊಡನೆ ಚಹಾ ಕುಡಿಯಲೂ ಹಿಂದು-ಮುಂದು ನೋಡುತ್ತಾನೆ. ಕಡೆಗೆ ಈರನ ಅಂಗಡಿಗೆ ಹೋದರೂ ತನಗೇ ಮಾಡಬೇಕಾಗಿರುವುದು ಬರಿಯ ಶೇವಿಂಗ್ ಹೊರತು ಕಟಿಂಗ್ ಅಲ್ಲ ಎಂದು ಹೇಳಲೂ ಮುಜುಗರ ಪಡುವ ವ್ಯಕ್ತಿತ್ವ ಈತನದು. ಹಾಗಾಗಿಯೇ ಮುಕುಂದನ ತಂದೆ ೩"ನೀನು ಭಿಡೆ ಭಿಡೆಯೆಂದು ಒಂದು ದಿನ ನಿನ್ನ ಮನೆ ಮಾರು ಕಳಕೊಳ್ತೀ ನೋಡು"೩ ಎಂದು ಬೈದಿದ್ದರು. ಪ್ರತಿಯೊಂದಕ್ಕೂ ಹಿಂದು-ಮುಂದುನೋಡುವ ಮನಃಸ್ಥಿತಿ ಆತನದು. ಇದಕ್ಕೆ ಆತನ ಪರಿಸರ, ಆತನ ಆಲೋಚನೆಗಳು ಆತನ ಸೃಷ್ಟಿಗೆ ಕಾರಣವಾದ ವಂಶವಾಹಿನಿಗಳು ಕೂಡ ಕಾರಣವಿರಬಹುದು.

ಇನ್ನು ಈರ ಮುಕುಂದನ ಮನೆತನದ ಉದಾರತೆಯ ಮಾತು ತೆಗೆದು ಅಜ್ಜನೋಡಿ ರಾಯರೇ ಬಹಳ ಒಳ್ಳೇ ಮಂದಿ ಎಂದು ಹೇಳಿ ಆಮೂಲಕ ತನಗೆ ದೀಪಾವಳಿಯ ಉಡುಗೊರೆಯಾಗಿ ಏನಾದರೂ ಕೊಡುವಂತೆ, ತಾನು ಮಾಡಿದ ಕಟಿಂಗ್/ಶೇವಿಂಗ್‌ಗೆ ಎಂದು ಹಣ ಬೇಡವೆಂದು ಮುಕ್ತವಾಗಿಯೇ ಹೇಳುವಲ್ಲಿ ಆತನ ಜಾಣತನವಿದೆ. ಆದರೆ ಒಲ್ಲದ ಮನಸ್ಸಿನಿಂದ ಚಿಲ್ಲರೆಯಿಲ್ಲದ ಕಾರಣ ೨ ರೂಪಾಯಿಯ ನೋಟನ್ನಿತ್ತು ಬಂದು ಆತನ ಕೂದಲು ನೋಡಿ ನಗಲಾರಂಭಿಸಿದ ಹೆಂಡತಿಯ ಮುಂದೆ ಆರಾಣೆ ಕೊಟ್ಟೆನೆಂಬುದಾಗಿ ಸುಳ್ಳಾಡುತ್ತಾನೆ. ೪"ಅಂತೂ ಆರಾಣೆಯಲ್ಲೇ ಕೂದಲಿನ ಕೆಲಸ ಮುಗಿಯುತ್ತದೆ ಎಂದು ಇನ್ನೂ ಕೂದಲು ಬೆಳೆಯದೇ ಇದ್ದರೂ ಹೋಗಿದ್ದಿರೇನೋ?"೪ ಎಂದು ಹೆಂಡತಿಯಿಂದ ನಗೆಗೀಡಾಗುತ್ತಾನೆ. ಇಲ್ಲಿ ಮುಕುಂದನ ಮನಃಸ್ಥಿತಿಯು ನಾಚಿಕೆಯ ಸ್ವಭಾವದ್ದು. ಎಲ್ಲದಕ್ಕೂ ಹಿಂದು-ಮುಂದು ನೋಡುವಂತದ್ದಾದರೆ ಶಾರದೆಯದು ಎಲ್ಲರನ್ನು ನಕ್ಕು ನಗಿಸುವ ಮುಗ್ಧ ಸ್ವಭಾವದ ಹೆಣ್ಣುಮಗಳು. ಆದರೆ ಆಕೆಯ ಗಂಡನಿಗೆ ನಕ್ಕು ಗೊತ್ತಿಲ್ಲ. ೫"ಯಾರು ನಗಲು ಅರಿಯರೋ ಅವರೇ ನಗೆಗೀಡಾಗುತ್ತಾರೆ ತಾನೇ,"೫ ಎಂದು ಹೇಳುವಲ್ಲಿ ಮುಕುಂದನ ಮನಃಸ್ಥಿತಿಯು ಕಾಣಸಿಗುತ್ತದೆ.

---

೧. ಯಶವಂತ ಚಿತ್ತಾಲ ಐವತ್ತೊಂದು ಕತೆಗಳು : ಪುಟ-೩೧ ೨.ಅದೇ ಪುಟ-೩೯

೩. ಅದೇ ಪುಟ-೪೭ ೪. ಅದೇ ಪುಟ-೪೯ ೫. ಅದೇ ಪುಟ-೫೦

ಅಂತೆಯೇ ಜೋಷಿಯವರು ಮುಂಬಯಿಯಿಂದ ಮೊದಲ ದೀಪಾವಳಿಗೆಂದು ಮಾಡಿಕೊಳ್ಳುವ ಸಿದ್ಧತೆಗಳು ಹಾಲು, ಪೇಪರ್, ಕೇರಮ್ ಬೋರ್ಡ್, ಎಲ್ಲ ಸಿದ್ಧತೆಗಳೂ ಬಹು ಸಹಜವಾಗಿದ್ದು, ಎಲ್ಲರ ಮನೆಯಲ್ಲಿಯೂ ಅಳಿಯಂದಿರಿಗೆ ದೊರೆಯುವಂತಹ ಸಾಮಾನ್ಯ ಆತಿಥ್ಯದ ಸಹಜ ಮಾವನಾಗಿ ಜೋಷಿಯವರಿಲ್ಲಿ ನಿಲ್ಲುತ್ತಾರೆ. ಹಾಲಿನವನಿಗೆ ಈ ಒಂದು ತಿಂಗಳು ನಿನ್ನ ಎಮ್ಮೆಗೆ ಹೆಚ್ಚು ನೀರು ಕುಡಿಯಲು ಹೇಳಬೇಡ ಎನ್ನುವಲ್ಲಿ ಈತನ ಕಾಳಜಿ, ಹಾಲಿನವನ ಬದುಕಿನ ರೀತಿಯ ಅರಿವಾಗುತ್ತದೆ.

ಪೀಜೀ:- ಯಶವಂತ ಚಿತ್ತಾಲರು ಪೇಯಿಂಗ್ ಗೆಸ್ಟ್/Paying Guest ಗೆ ಸಂವಾದಿಯಾಗಿ ಪೀಜೀ ಎಂದು ಹೇಳುತ್ತಾರೆ. ಈ ಕಥೆಯ ಪ್ರಧಾನ ಪಾತ್ರವಾಗಿ ನಿಲ್ಲುವವನು ಅನಂತ. ಇದೇ ಅತೀವ ಮನೋಯಾತನೆಗೆ ಒಳಗಾಗುವ ಪಾತ್ರ. ಕಂಡಕ್ಟರನು ಈತನನ್ನು ಬಸ್ಸಿನಲ್ಲಿ ಕೂರಿಸಿಕೊಳ್ಳದ ಕಾರಣಕ್ಕಾಗಿ ಆತನನ್ನು ೧"ಅವನ ಅಪ್ಪನ ಗಂಟು ಹೋಗುತ್ತಿತ್ತೆ? ಹೊರಟು ನಿಂತ ಬಸ್ಸನ್ನು ಗಂಟೆ ಹೊಡೆದು ನಿಲ್ಲಿಸಿ ತನ್ನನ್ನು ಇಳಿಸಿದನಲ್ಲ! ಜಗತ್ತೇ ನಿಷ್ಕರುಣಿ೧" ಎನಿಸಿತು ಎನ್ನುವಲ್ಲಿ ಆತನ ಮನಸ್ಸು ಸಹಜ ಸರ್ವೇ ಸಾಮಾನ್ಯ ಮನುಷ್ಯನ ಮನಸ್ಸೇ ಆಗಿ ಕಾಣಸಿಗುತ್ತದೆ.

೨"ತನಗಿಂತ ಎಷ್ಟೋ ವರುಷಗಳಿಂದ ಚಿಕ್ಕವನಾದ ಒಮ್ಮೆ ತನ್ನ ವಿದ್ಯಾರ್ಥಿಯೂ ಆಗಿದ್ದ ಈ ಅರವಿಂದನ ಲಗ್ನದಲ್ಲಿ ತನ್ನ ಮನಃಶಾಂತಿ ಏಕೆ ಕದಡಬೇಕು? ಅರವಿಂದನ ವಿಷಯದಲ್ಲಿ ತನಗೆ ಅಸೂಯೆಯೆ? ಮದುವೆಯನ್ನೇ ಮಾಡಿಕೊಳ್ಳಲಾರೆನೆಂದು ಮನಃಪೂರ್ವಕವಾಗಿಯೇ ನಿಶ್ಚಯಿಸಿದ್ದ ತನ್ನಲ್ಲಿ ಅಸೂಯೆ ಹುಟ್ಟುವ ಮಾತೆಲ್ಲಿ ಬಂತು?"೨ ಅಂದರೆ ಅನಂತುವಿಗೆ ಅಸೂಯೆಯಂತೂ ಇಲ್ಲ. ಆದರೆ ತಾನು ಸಮತಿಯನ್ನು ಮದುವೆಯಾಗದೇ ಹೋದುದರ ಬಗೆಗೆ ಮನದಾಳದಲ್ಲಿ ನೋವಿದೆ. ಹಾಗಾಗಿಯೇ ಆತನು

೩"ಮನೆ ಸಿಕ್ಕಿದ್ದರೆ ಸುಮತಿ ಇಂದು ತನ್ನ ಹೆಂಡತಿಯಾಗುತ್ತಿದ್ದಳೆ?
ತಾನು-ಸುಮತಿ!
ಆಗಬಹುದಿತ್ತೇ ಸುಮತಿಯೊಡನೆ ತನ್ನ ಲಗ್ನ?
ಯಾರು ಬಲ್ಲರು?"೩ ಎಂಬಲ್ಲಿ ಆತನಿಗೆ ಮುಂಬಯಿಯಲ್ಲಿ ಮನೆ ಸಿಗದ ಕಾರಣ ಮದುವೆಯಾಗಲಿಲ್ಲ ಎಂಬ ನೋವಿದೆ. ಅಂತೆಯೇ ಅತಿಯಾಗಿ ಬರುತ್ತಿದ್ದ ಮಾವನವರ ಪತ್ರಗಳು ಕಡೆಗೆ ವಿರಳವಾಗಿ ಕಟ್ಟಕಡೆಗೆ ಸುಮತಿಯ ವಿವಾಹದ ಆಹ್ವಾನ ಪತ್ರಿಕೆಯೊಂದಿಗೆ ಕೊನೆಗೊಂಡಿದ್ದರ ಬಗೆಗೆ ಯಾತನೆ ಇದೆ.

ತನಗೂ ಮನೆ ಸಿಕ್ಕಿದರೆ ಮದುವೆಯಾಗುತ್ತಿತ್ತೇನೋ? ಎಂಬ ನೋವಿನಿಂದ ತಾನು ನಡೆಯುತ್ತಿದ್ದ ಹಾದಿಯಲ್ಲಿಯೇ ಚಲಿಸುತ್ತಲಿದ್ದ ಜನರನ್ನೆಲ್ಲಾ ಕಂಡು ಈ ಎಲ್ಲ ಜನರಿಗೆ ಮನೆಗಳಿವೆಯೇ? ಎಷ್ಟೆಲ್ಲ ಜನರಿಗೆ ಮನೆ ಒದಗಿಸಿದ ಈ ಮುಂಬಯಿ, ತನಗೊಬ್ಬನಿಗಷ್ಟೇ... ಎನ್ನುವಲ್ಲಿ ಆತನ ಮನಸ್ಸಿಗಾದ ನೋವು, ಹಾಗೆ ನೊಂದುನುಡಿಯಲು ಕಾರಣವಾದ ಅಂಶ ಎಲ್ಲವೂ ವೇದ್ಯವಾಗುತ್ತದೆ.

---

೧. ಯಶವಂತ ಚಿತ್ತಾಲ ಐವತ್ತೊಂದು ಕತೆಗಳು : ಪುಟ-೩೧

೨. ೨.ಅದೇ ಪುಟ-೩೨ ೩. ಅದೇ ಪುಟ-೩೪

ಆ ದಿನ ರಾತ್ರಿ ಅರವಿಂದ, ಆತನ ಹೆಂಡತಿ ಬಾಲ್ಕನಿಯ ರೂಮಿನಲ್ಲಿ ಮಲಗುತ್ತಾರೆ. ಹಾಗಾಗಿ ತಾನು ಅವರು ಮಲಗಿದ ನಂತರವೇ ಹೋಗುವುದು ಸರಿ. ಆದರಿಂದ ಯಾರಿಗೂ ತೊಂದರೆಯಾಗದೆಂಬ ಕಾಳಜಿ ಆತನದಾದರೂ ತನಗೂ ಮದುವೆಯ ಆಸೆ, ಕನಸು ಇದ್ದರೂ ಏನೂ ಆಗಲಿಲ್ಲವೆಂಬ ಯಾತನೆ ಕತೆಯುದ್ದಕ್ಕೂ ಕಾಣಸಿಗುತ್ತದೆ. ೧"ಅರವಿಂದನಿಗೆ ನೌಕರಿ ದೊರೆತ ಎರಡೇ ತಿಂಗಳಲ್ಲಿ ಆಕಸ್ಮಾತ್ತಾಗಿ ಒಂದು ದಿನ ಮದುವೆಯ ಸಂಬಂಧ ಹೇಳಿ ಬಂದು ಮದುವೆಯೂ ಆಗಿಬಿಟ್ಟಿತಲ್ಲ! ಪರರ ಜೀವನದಲ್ಲಿ ಇಂತಹ ಸಂಗತಿಗಳು ಸಹಜವಾಗಿ ಎಷ್ಟು ತೀವ್ರಗತಿಯಲ್ಲಿ ನಡೆಯುತ್ತವೆ! ತಾನು ಮಾತ್ರ ಇದ್ದಲ್ಲೇ ಹಣ್ಣಾಗುತ್ತಿದ್ದೇನೆ. ಇದ್ದಂತೆಯೇ ಒಣಗುತ್ತಿದ್ದೇನೆ ಎನಿಸಿತು ಆತನಿಗೆ"೧ ಎಂಬಲ್ಲಿ ಎಲ್ಲರಿಗೂ ಕಾಲ ಕಾಲಕ್ಕೆ ಆಗಬೇಕಾದದ್ದರ ಬಗೆಗೆ ಆಸೆ ಕನಸುಗಳಿರುತ್ತವೆ. ಆಸೆ ಪಟ್ಟಿದ್ದು ಆಗದಿದ್ದಾಗ ಮಗುವು ಅತ್ತು ದುಃಖ ಕಡಿಮೆ ಮಾಡಿಕೊಂಡರೆ, ದೊಡ್ಡವರು ಆತ್ಮವಿಶ್ವಾಸವನ್ನೇ ಕಳೆದುಕೊಳ್ಳುವ, ತಾನು ನತದೃಷ್ಟ ಆದರೆ ಇತರರೆಲ್ಲರೂ ಅದೃಷ್ಟವಂತರೆಂಬ ಸಿನಿಕತೆಯುಂಟಾಗುತ್ತದೆ. ಇಲ್ಲಿನ ಅನಂತುವಿನ ಪಾತ್ರವೂ ಅಂತಹುದೇ ಆಗಿದೆ.

ಅನಂತುವಿನಂತ ಎಷ್ಟೋ ಪಾತ್ರಗಳು ತಮ್ಮ ದುಃಖವನ್ನು ಇತರರಿಗೆ ಹೇಳಿಕೊಳ್ಳುವುದು ಸಹಾನುಭೂತಿಯನ್ನೇ ಬಯಸಿ ಎಂಬುದು ಮನೋವೈಜ್ಞಾನಿಕ ಸತ್ಯವೂ ಹೌದು. ಅಂತೆಯೇ ಅನಂತುವೂ ತನ್ನ ನೋವನ್ನು ತನ್ನ ಸ್ನೇಹಿತನೊಡನೆ ಹೇಳಿಕೊಂಡಾಗ ಈತನ ಅಭಿಮಾನವನ್ನು ಕೆರಳಿಸಲೆಂದೇ ಆತ ಆಡಿದ ಮಾತುಗಳಲ್ಲಿ ಉಲ್ಲೇಖಾರ್ಹ.

೨"ನೀನು ನಿನ್ನ ಜನ್ಮದಲ್ಲಿ ಒಮ್ಮೆಯಾದರೂ ನಗುತ್ತ, ಹರುಷದಿಂದ ಮಾತನಾಡಿದ್ದೀಯಾ? ಮುಖತಃ ನೀನೊಬ್ಬ ದೊಡ್ಡ ಅಂಜುಬುರುಕ, ಅಳುಬುರುಕ, ನಿನ್ನಲ್ಲಿ ಇಲ್ಲದುದು ಬಾಳನ್ನು ಎದುರಿಸಲು ಬೇಕಾದ ಆತ್ಮವಿಶ್ವಾಸ ಹಾಗೂ ಉತ್ಸಾಹ, ಮನೋವಿಜ್ಞಾನದ ಭಾಷೆಯಲ್ಲಿ ಹೇಳಬೇಕಾದರೆ ನೀನೊಬ್ಬ ದುಃಖಪ್ರಿಯ ಜೀವಿ - Masochistic Soul ಹೀಗೆಯೇ ನಡೆದಲ್ಲಿ ನೀನು ಇದ್ದಲ್ಲೇ ಹಣ್ಣಾಗುತ್ತಿ-ಇದ್ದಂತೆಯೇ ಒಣಗುತ್ತೀ ನೋಡು"೨ ಎಂದು ಅನಂತುವಿನ ಸ್ನೇಹಿತ ಆತನನ್ನು ಮೇಲೆತ್ತುವ ಕ್ರಿಯೆಯಲ್ಲಿ ತೊಡಗುತ್ತಾನೆ. ಸಹಜವಾಗಿ ಸೋತ ಜನಗಳಿಗೆ ಬೇಕಾಗಿರುವುದು ಬರಿಯ ಸಹಾನುಭೂತಿಯಲ್ಲ, ಬರಿಯ ಸಹಾನುಭೂತಿಯೇ ದೊರೆಯುತ್ತಾ ಹೋದಂತೆ ಆತನ ನಿರೀಕ್ಷೆಯೂ ಅದರೆಡೆಗೆ ಸಾಗುತ್ತದೆಯೇ ಹೊರತು ಮೇಲೇಳುವ ಕ್ರಿಯೆಯೆಡೆಗಲ್ಲ.

ಅರವಿಂದನ ರೂಮಿನ ದೀಪನಂದಿದ ನಂತರದಲ್ಲಿನ ಬಳೆಗಳ ಕಿಂಕಿಣಿ ಮಾತಿನ ಗುಜು-ಗುಜು ಕೇಳುತ್ತಲಿದ್ದ ಅನಂತು ಆನಂತರ ಅವನಿಗೇ ತಿಳಿಯದಂತ ಕೆಟ್ಟ ಕುತೂಹಲ ಅವನನ್ನು ತನ್ನ ಹಾಸಿಗೆಯಿಂದ ಹೊಡೆದೆಬ್ಬಿಸಿ.....

೩"ಬಾ ಇಲ್ಲಿ ಬಾ, ಕಿವಿ ಹಚ್ಚು, ಕೇಳು ಎಂದಿತು. ಆ ಬದಿಯಲ್ಲಿ ಮಲಗಿ ಸುಖಿಸುತ್ತಿದ್ದ ನವದಂಪತಿಗಳ ಏಕಾಂತದ ಸಂಭಾಷಣೆಯನ್ನು ಅನಾಗರೀಕ ಕಿವಿಗಳ ಹೆದರಿಕೆಯಿಲ್ಲದೆ ಹೊರಟ ಮಾತನ್ನು

"ತುಸು ಮೆಲ್ಲಗೆ ಮಾತನಾಡಬಾರದೆ?"

"ನಾಳೆಯೇ ಹೇಳುತ್ತೀರಲಿಲ್ಲ ಹಾಗಾದರೆ?"

೧.ಯಶವಂತ ಚಿತ್ತಾಲ ಐವತ್ತೊಂದು ಕತೆಗಳು: ಪುಟ –೫೬

೨. ಅದೇ ಪುಟ–೫೬ ೩. ಅದೇ ಪುಟ–೫೮

"ಏನೆಂದು?"

"ಬೇರೆಯೆಡೆ ರೂಮು ಹಿಡಿಯಲು"

"ಅವನಿದ್ದರೆ ತೊಂದರೆಯೆ?"

ತೊಂದರೆಯಲ್ಲ..... ಏನೋ ಸಂಕೋಚ...... ಮೇಲಾಗಿ ಇದ್ದುದೊಂದು ಬಾಲ್ಕನಿ ಆರಾಮಾಗಿ ಕೂಡ್ರೋಣ ಎಂದರೆ....."೩ ಈ ಎಲ್ಲಾ ಮಾತುಗಳನ್ನು ಆಲಿಸಿದ ಅನಂತನ ಸ್ಥಿತಿ ಮತ್ತಷ್ಟು ಯಾತನಾಮಯವಾಯಿತು. ಆತ ಅರವಿಂದನಿಗೆ ಮದುವೆಯಾಗಿ ತಾನೊಬ್ಬನೇ ಆದೆನೆಂಬ ನೋವಿತ್ತೇ ಹೊರತು, ಈ ಮನೆಯಿಂದಲೂ ತಾನು ದೂರಾಗುತ್ತೇನೆಂಬ ಪರಿವೆಯೂ ಆತನಿಗಿರಲಿಲ್ಲ. ಆ ಮಾತುಗಳನ್ನಾಲಿಸಿದ ಆ ಕ್ಷಣ ಆತನಿಗೆ ೧"ಕಣ್ಣುತುಂಬಿ ಬಂದುವು. ಎಂದೋ ಕಳಕೊಂಡ ಅಪ್ಪ-ಅಮ್ಮಂದಿರ ಚಿತ್ರ ಕಣ್ಣ ಮುಂದೆ ಕಟ್ಟಿ ಸಣ್ಣ ಮಗುವಿನಂತೆ ಅತ್ತುಬಿಟ್ಟ.
ತಾನಿಂದು ಈ ಜಗತ್ತಿನಲ್ಲಿ ಅನಾಥ!
ತಾನಿಂದು ಯಾರಿಗೂ ಬೇಡಾಗಿದ್ದೆ!"೧ ಎಂಬ ಯಾತನೆಯಿಂದ ಬಳಸುತ್ತಾನೆ.

ಸಂದರ್ಶನ:- ಮಾಧವನು ಸಂದರ್ಶನಕ್ಕೆ ಹೊರಟು ಆ ಮೂಲಕ ವಿಜೇತನಾಗಿ ಬರುವ ವಿಚಾರವನ್ನು ಆತನ ಸುತ್ತ ಹೆಣೆದಿರುವ ವಿಶಿಷ್ಟ ಕತೆ ಸಂದರ್ಶನ, ಹಾಗಾಗಿಯೇ ಗೌರೀಶ ಕಾಯ್ಕಿಣಿಯವರು ಮುನ್ನುಡಿಯಲ್ಲಿ ೨"ಮನೋಧರ್ಮವನ್ನೇ ಪ್ರಧಾನವಾಗಿಟ್ಟು, ಅದನ್ನೇ ಸಾಧನವಾಗಿಟ್ಟು ಬರೆದ ಕತೆಗಳಲ್ಲಿ ಈ ಮೂರು ಪೀಜೀ, ಮುಕುಂದನ ದಾಕ್ಷಿಣ್ಯ ಮತ್ತು ಸಂದರ್ಶನ ಈ ಮೂರೂ ಕತೆಗಳಿಗೂ ಉತ್ತಮ ಕೃತಿಗಳನ್ನು ಕನ್ನಡದಲ್ಲಿ ನಾನಂತೂ ಕಂಡಿಲ್ಲ"೨ ಎಂದಿದ್ದಾರೆ.

ಸಂದರ್ಶನ ಮಾಧವನ ಇಂಟರ್‌ವ್ಯೂವಿನ ಕಥೆ. ತನ್ನ ಕಥನತಂತ್ರದ ನಾವೀನ್ಯ ಪ್ರಾವಿಣ್ಯಗಳಿಂದಲೇ ಇದು ನಮ್ಮ ಚಿತ್ತವನ್ನು ಛೇಧಿಸುತ್ತದೆ. ಮಾಧವನ ಬಾಳಿನ ಮಹಾಪರ್ವಣಿಯ ಕತೆ ಇದು- ಅಲ್ಲ, ಆ ಕುರಿತು ಮಾಧವನ ಮನಸ್ಸಿನ ಕ್ರಿಯೆ -ಪ್ರತಿಕ್ರಿಯೆಗಳ ನಿಕಟ ಚಿತ್ರ. ಈ ಕೃತಿಯಲ್ಲಿ ಕತೆಗಾರನ ಕಲೆಯ ಜಾಗೃತಿ ಮತ್ತು ಚಾತುರ್ಯ ಇವೆರಡೂ ಸರಿಸಾಟಿಯಾಗಿ ಕೆಲಸ ಮಾಡಿವೆ. ವಿಚಾರ ಮಾಡಿ ನೋಡಿದರೆ ಕ್ಷುಲ್ಲಕ ವಿಷಯ-ಡ್ರೆಸ್ಸಿನಲ್ಲಿ ಏನಿದೆ? ಆದರೆ ಅಣ್ಣನಲ್ಲಿ ಆಚಾರ, ಮಮತೆ, ನೆರಮನೆಯ ಅನಂತರಾಯರ ಆಗ್ರಹದ ಹಂಗು, ಅಮೇರಿಕನ್ ಕಂಪನಿಯ ಚಾಕರಿಯ ಅಗತ್ಯ. ತನ್ನನ್ನೇ ತಾನು ಮಾರಿಕೊಳ್ಳಬೇಕಾಗಿ ಬಂದ ಇಂದಿನ ಕ್ರಿಯಾತ್ಮಕ ಸಾಮಾಜಿಕ ಪರಿಸ್ಥಿತಿಯ ಫಲವಾಗಿ ತನ್ನ ದರ್ಶನೀಯ ವ್ಯಕ್ತಿತ್ವಕ್ಕೂ ಪೇಟೆಯ ದರವೇರಿದ ಅಮಾನುಷ ಅವಶ್ಯಕತೆ, ಇದೆಲ್ಲದರಿಂದ ಆ ಊಲನ್ ಕೋಟಿಗೆ, ಆ ಡ್ರೆಸ್ಸಿನ ಕ್ಷುಲ್ಲಕ ವಿಷಯಕ್ಕೆ ಜೀವನ-ಮರಣದ ಮಹತ್ವ ಬಂದಿದೆ! ಈ ಮಹತ್ವ ಈ ವಿಷಯಕ್ಕೆ ಬಂದದ್ದು ಮಾಧವನ ವೇದನಾವಿಹ್ವಲ ಭಾವನಾಚಪಲ ಬಂಧುವತ್ಸಲ ಹೃದಯದ ವಿಶಿಷ್ಟತೆಯ ಮೂಲಕ, ಈ ಕತೆ ಆ ಹೃದಯದ ಸಂದರ್ಶನ, ಜೊತೆಗೆ ಲೇಖಕನ ಪ್ರಯೋಗವಿಜ್ಞಾನದ ಅಂತರ್ದರ್ಶನ.

ತನ್ನದಲ್ಲದ ಆ ಕೋಟನ್ನು ಧರಿಸುವ ಆಸೆ ಮಾಧವನದಲ್ಲವಾದರೂ, ಹೇಗಾದರೂ ತಮ್ಮನಿಗೆ ಕೆಲಸ ದಕ್ಕಿಸಿಕೊಡಬೇಕೆಂಬ ಆಸೆ ಅಣ್ಣನಿಗೆ. ಅದಕ್ಕಾಗಿಯೇ ಡ್ರೆಸ್ಸು ಹಾಳಾಗಬಾರದೆಂದು ಮೂರನೇ ವರ್ಗದ ನೂಕು ನುಗ್ಗುವಿನಲ್ಲಿ ತಮ್ಮನನ್ನು ಕಳಿಸದೆ ಫಸ್ಟ್ ಕ್ಲಾಸಿನಲ್ಲೇ ಹೋಗು ಎಂದು ಕಳಿಸಿದ್ದ ಮಾಧವನ ಮನಸ್ಸು ಅತೀವ ಸೂಕ್ಷ್ಮತೆಯದ್ದು. ಹಾಗಾಗಿಯೇ ಎಲ್ಲವನ್ನೂ ಅತೀ ವಿವೇಚನೆಯಿಂದ ನೋಡುತ್ತಾನೆ.

೧.ಯಶವಂತ ಚಿತ್ತಾಲ ಐವತ್ತೊಂದು ಕತೆಗಳು: ಪುಟ –೩೪ ೨. ಅದೇ ಪುಟ–೬೨೧

೧"ತನ್ನ ಅಣ್ಣ ಕಳೆದ ೧೫ ವರುಷಗಳ ನೌಕರಿಯಿಂದ ಒಮ್ಮೆಯೂ ಪಡೆಯಲಾಗದ ಈ ಡ್ರೆಸ್ಸನ್ನು ತನ್ನ ಈ ಸಂದರ್ಶನದ ಸಲುವಾಗಿಯೇ ಮಾಡಿಸುವುದು ಶಕ್ಯವೇ? ತರವೇ?"೧ ಎಂದು ಆಲೋಚಿಸುತ್ತಾನೆ. ಹಾಗಾಗಿಯೇ ಈತ ಪರರಿಂದ ಎರವಲು ತಂದಾದರೂ ಊಲನ್ ಸೂಟನ್ನು ಧರಿಸಿ ಸಂದರ್ಶನಕ್ಕೆ ಹೋಗಬೇಕು ಎನ್ನುವಷ್ಟು ಉಡುಪಿಗೆ ಮಹತ್ವ ಕೊಡಲು ಅವನು ಸಿದ್ಧನಿರಲಿಲ್ಲ. ಆದರೂ ಮನುಷ್ಯನಿಗೆ ಆಸೆಯೆಂಬುದು ಮನದಲ್ಲಿ ನೆಲೆಸಿರುತ್ತದೆ. ಎಂಬುದಕ್ಕೆ ೨"ತನಗೂ ವೂಲನ್ ಸೂಟಿನಲ್ಲಿ ತಾನು ಹೇಗೆ ಕಾಣುತ್ತೇನೆ ಎಂದು ನೋಡುವ ಕುತೂಹಲ ಇಲ್ಲದಿರಲಿಲ್ಲ"೨ ಎಂಬ ಮಾತು ಸಾಕ್ಷೀಭೂತವಾಗಿದೆ.

ಬೋರಾ ಆಡಿದ ಮಾತುಗಳು ೩"ಮಾರುವ ಎತ್ತುಗಳನ್ನು ಸಿಂಗರಿಸಬೇಕೇ? ಇದೆಂತಹ ಮಾತು ಒಡೆಯ! ಮಾರುವ ವಸ್ತು ಚಂದವಿದ್ದಷ್ಟು ಒಳ್ಳೆಯದಲ್ಲವೇ? ಎರಡು ಸಲ ಝುಳ-ಝುಳ ತೊಳೆದು, ಕೊರಳಿಗೆ ಮಾಲೆಹಾಕಿ ಕೊಂಬುಗಳಿಗೆ ಗೊಂಡೆ ಕಟ್ಟಿ ಸಿಂಗರಿಸಿದರೇನೇ ಯಾರದಾದರೂ ಕಣ್ಣಿಗೆ ಹೋದಾವು. ಈ ಹೈದಗಳು ಎಂದಿದ್ದ ಬೋರ ನಗುತ್ತ, ತನ್ನನ್ನು ಆಗಿನಿಂದ ನೋಡುತ್ತಿದ್ದ ಈ ಜನರ ಕಣ್ಣುಗಳಲ್ಲಿ ಮೂಡಿದ ಭಾವಕ್ಕೆ ಇದೇ ಅರ್ಥವಿರಬಹುದು. ಸಂತೆಯಲ್ಲಿ ಮಾರಿಕೊಳ್ಳಲು ಸಿಂಗರಿಸಿಕೊಂಡು ಬಂದ ಆ ಎತ್ತುಗಳನ್ನು ನೋಡಬಂದವರ ಕಣ್ಣುಗಳಲ್ಲಿಯ ಭಾವ? ಮಾಧವ ಅತೀವ ಅಸ್ವಸ್ಥಗೊಂಡ. ಮಾರುವ ವಸ್ತು ಚಂದವಿದ್ದಷ್ಟು ಒಳ್ಳೆಯದಲ್ಲವೇ? ಇದೇ ಅರ್ಥವೇ ತನ್ನ ಈ ಕೋಟಿಗೆ, ತನ್ನ ಈ ಟಾಯ್‌ಗೆ? ತನ್ನ ಪರ್ಸನಾಲಿಟಿಗೆ"೩ ಎಂಬ ಮಾಧವನ ತೊಳಲಾಟ ಬೋರನ ಮಾತುಗಳನ್ನು ತನ್ನ ಪರಿಸ್ಥಿತಿಗೆ ತಾಳೆಹಾಕಿ ನೋಡುವ ಮನಃಸ್ಥಿತಿ ಕಾಣಸಿಗುತ್ತದೆ.

ತನಗೆ ಸೇಲ್ಸ್‌ಮನ್ ಆಗುವ ತುಡಿತ ಆತನಿಗಿರದ ಕಾರಣ ಆ ವೃತ್ತಿಯಿಂದ ದೂರವಿರಲು ಪ್ರಯತ್ನಿಸಿದರೂ ಫಲವೀಯಲಿಲ್ಲ. ೪"ಆ ಎಲ್ಲ ಗೊಂದಲದಲ್ಲೂ ಮಾಧವನಿಗೆ ತಾನು ಹಿಂದೆ ಓದಿ ಮೆಚ್ಚಿದ ಮನೋವಿಜ್ಞಾನಿ ಎಡ್ಲರನ ಮಾತು ನೆನಪಾಯಿತು. ನಾವು ಯಾವ ಒಂದು ಮನಸ್ಥಿತಿ ಯಲ್ಲಿರುತ್ತೇವೋ ಆ ಮನಸ್ಥಿತಿಯನ್ನು ಸಮರ್ಥಿಸುವಂತಹ ಸಂಗತಿಗಳನ್ನು ನೆನೆಯುತ್ತೆವೆ, ಅನುಭವಿಸುತ್ತೇವೆ. ಈ ಮನೋವೈಜ್ಞಾನಿಕ ಸತ್ಯವು ಅವನ ಪ್ರತ್ಯಕ್ಷ ಅನುಭವಕ್ಕೆ ಬಂದುದು ಗ್ರ್ಯಾಂಟ್ ರೋಡಿನ ಅತ್ಯಂತ ಜನದಟ್ಟಣೆಯ ಚಟುವಟಿಕೆಯ ಪೇಟೆಯೊಳಗಿಂದ ಹಾಯುವಾಗ, ಇಕ್ಕೆಲಗಳಲ್ಲಿ ಲೆಕ್ಕವಿಲ್ಲದಷ್ಟು ಸಣ್ಣ ಸಣ್ಣ ಅಂಗಡಿಗಳು,ಫೂಟ್‌ಪಾರ್ಥಿನ ಮೇಲೂ ಸಣ್ಣಪುಟ್ಟ ವಸ್ತುಗಳನ್ನು ಮಾರುವ ಹುಡುಗರು ಒದರುತ್ತಿದ್ದರು. ತಮ್ಮ ತಮ್ಮ ವಸ್ತುಗಳ ಗುಣವಿಶೇಷಗಳನ್ನು ಹೊಗಳುತ್ತ"೪ ಎಂಬ ಮಾತು "ದೃಷ್ಟಿಯಂತೆ ಸೃಷ್ಟಿ" ಎಂಬ ನುಡಿಯನ್ನು ನೆನಪಿಗೆ ತರುತ್ತದೆ.

ಮಾಧವ ತನಗೆ ಅರಿವಿಲ್ಲದಂತೆಯೇ ಸರದಿಯಂತೆ ಸಂದರ್ಶನಕ್ಕೆ ಹೊರಟಾಗ ತನ್ನ ಸರದಿಯು ಬರುವಾಗಲೇ ತಾನು ಕುಳಿತ ಕುರ್ಚಿಯ ಬೆನ್ನಿಗೆ ಮೊದಲೇ ತನ್ನ ಕೋಟು ಕಳಚಿ ತೂಗುಹಾಕಿ ಸಂದರ್ಶನ; ಮುಗಿಸಿ ಬರುತ್ತಾರೆ. ಆದರೆ ಕೊನೆಗೆ ೫"ಅಯ್ಯೋ ತಾನು ಇದೇನು ಮಾಡಿದೆ! ಬಾಯಿಗೆ ಬರಲಿದ್ದ ತುತ್ತನ್ನು ತಾನೇ ಕೈಯಾರೆ ಚೆಲ್ಲಿಕೊಟ್ಟೆನಲ್ಲ,ಸಂಪ್ರದಾಯಕ್ಕೆ ಸಲ್ಲದ ಡ್ರೆಸ್ಸಿನಲ್ಲಿ ಹೋಗಿ ಉದ್ಧಟ ಉತ್ತರ ಕೊಟ್ಟಮೇಲೂ ಆರಿಸಿಬರುವುದುಂಟೇ? ಈಗ ಹಳಹಳಿಸಿ ಉಪಯೋಗವೇನು? ಎಲ್ಲವೂ ಮುಗಿದುಹೋದ ಮೇಲೆ?"೫ ಎಂದು ಪಶ್ಚಾತ್ತಾಪ ಪಡುತ್ತಾನೆ.

೧. ಯಶವಂತ ಚಿತ್ತಾಲ ಐವತ್ತೊಂದು ಕತೆಗಳು: ಪುಟ -೬೦ ೨. ಅದೇ ಪುಟ-೬೦
೩. ಅದೇ ಪುಟ-೬೨ ೪. ಅದೇ ಪುಟ- ೬೩ ೫. ಅದೇ ಪುಟ-೬೬

ತನಗೆ ಇಲ್ಲಿಯವರೆಗೆ ಶಿಕ್ಷಣ ಕೊಟ್ಟು ತನ್ನ ಕಾಲ ಮೇಲೆ ತಾನು ನಿಲ್ಲುವಂಥ ಯೋಗ್ಯತೆಯನ್ನು ಗಳಿಸಿದ ಹಾಗೂ ಹಾಗೆ ನಿಂತು ಅಂತಹ ಶಕ್ತಿಯಿಲ್ಲದ ಇನ್ನು ಹಲವರಿಗೆ ನೆರವಾಗುವ ಶಕ್ತಿಯುಳ್ಳ, ಒಬ್ಬ ಸ್ವತಂತ್ರ ವ್ಯಕ್ತಿಯಾಗುವ ಒಂದು ಅನುವು ತಂದುಕೊಟ್ಟಾಗ ಅದನ್ನು ತಾನೇ ತನ್ನ ಗರ್ವದಿಂದ ಧಿಕ್ಕರಿಸಿ ಅಣ್ಣನಿಗೆ ಅನ್ಯಾಯ ಬಗೆದಿದ್ದೇನೆ. ಅಣ್ಣನಿಗೆ ಅನ್ಯಾಯ! ಎಂಬ ಮನೋಯಾತನೆ ಆತನಿಗಾಗುತ್ತದೆ. ಕೊನೆಗೆ ತಾನು ಆ ವೂಲನ್ ಕೋಟನ್ನು ಧರಿಸಿದ್ದನ್ನು ಕಳಚಿದ ಸಲುವಾಗಿಯೇ ಕೆಲಸ ಕಳೆದುಕೊಂಡೆನೆಂದು ಮನನೊಂದು ತಾನು ಮಾಡಿದ ತಪ್ಪನ್ನು ತನ್ನ ಅಣ್ಣನೆದುರು ಒಪ್ಪಿಕೊಳ್ಳುವುದಾಗಿ ಮನಸ್ಸು ಮಾಡಿ ಮನೆಗೆ ಹೋಗುತ್ತಿದ್ದಂತೆಯೇ ಅತ್ತಿಗೆ ಅಣ್ಣಂದಿರಿಂದ ಆನಂದದಾಯಕ ಮಾತುಗಳು ಬಂದು ಮನಸ್ಸು ತುಂಬಿ ಬರುತ್ತದೆ.

೧"ಕಂಪನಿಯು ಅನೇಕ ಬಗೆಯ ಔಷಧಗಳನ್ನು ರಾಸಾಯನಿಕಗಳನ್ನು ಮಾರುತ್ತದೆಯೆಂದು ತಿಳಿದಿದ್ದ ಮಾಧವ ತನ್ನ ಕನಸಿನಲ್ಲಿ ಕಾಣುವುದು ಸೃಷ್ಟಿಯ ಹೊಟ್ಟೆಯಲ್ಲಿ ಕುದಿಯುವ ಲಾವಾರಸವನ್ನು ಕೇಳಿಸಿಕೊಳ್ಳುವುದು. ಆ ರಸದ ಕುದಿಯಿಂದ ಹುರುಪಳಿಸಿ ಬೆಂದ ಕೋಮಲ ಜೀವ ಕಿಟಾರನೆ ಕಿರುಚುವುದನ್ನು, ಇದೆಲ್ಲ ಮಾಧವನ ಸುಪ್ತಪ್ರಜ್ಞೆಯ ಸಾಂಕೇತಿಕ ಅಭಿವ್ಯಕ್ತಿಯೆಂದು ಭಾವಿಸಬಹುದಾದರೂ ಆ ಕಂಪನಿಯು ಮಾರುವ ಔಷಧಿಗಳೆಲ್ಲ ವಿಷಪ್ರಾಯವಾದವು ಎಂಬ ತೀರ್ಮಾನಕ್ಕೆ ಬರಲು ಕತೆಯಲ್ಲಿ ಸಾಕಷ್ಟು ಆಧಾರಗಳಿವೆಯೇ? ಇಂಥ ಕೆಲವು ಸಂದೇಹಗಳು ಉಳಿದೇಬಿಡುತ್ತವೆ"೧.

ಆಬೋಲೀನ:

ಕೊಂಕಣಿ ಭಾಷೆಯಲ್ಲಿ ಅಬ್ಬಲ ಹೂವಿಗೆ ಆಬೋಲಿಂ ಎನ್ನುತ್ತಾರೆ. ಆಬೋಲೀನ ಹೆಸರು ಈ ಹೂವಿನ ಹೆಸರಿನಿಂದಲೇ ಬಂದಿರಲಿಕ್ಕಿಲ್ಲವಷ್ಟೆ ಎನ್ನುತ್ತಾಳೆ. ಕಥೆಯ ನಿರೂಪಕಿ ಸುಮತಿ ಕಥೆ ನಡೆದ ಕಾಲಕ್ಕೆ ಸುಮತಿ ಆಬೋಲೀನಳ ಜೊತೆಗಾತಿ, ಈಗ ಕತೆಗಾರರ ಪತ್ನಿ, ತನ್ನ ನೆಚ್ಚಿನ ಅಬ್ಬಲ ಹೂವು ಕೊಳ್ಳುವಾಗೆಲ್ಲ ಸುಮತಿಗೆ ಆಬೋಲೀನಳ ನೆನಪು ತಪ್ಪದೇ ಬರುತ್ತದೆ. " ಅಬ್ಬಲಿಗೆ ವಾಸನೆಯಿಲ್ಲದ ಹೂ- ಅಲ್ಲ ವಾಸನೆ ಹೊರಚೆಲ್ಲದ ಹೂ (ಏಕೋ ನಿರ್ಗಂಧ ಕುಸುಮದ ಕಲ್ಪನೆಯೇ ನನಗೆ ಸಹಿಸದು) ಆಬೋಲೀನಳು ಒಳ ಮನಸ್ಸಿನ ಹುಡುಗಿ, ಒಳ ವಿಚಾರದ ಹುಡುಗಿ- ಈ ವಾಸನೆ ಕೊಡದ ಅಬ್ಬಲಿಗ ಹೂವಿನಂತೆ"೨ ಎಂಬ ಮಾತಿನಲ್ಲಿ ಆಬೋಲೀನಳ ವ್ಯಕ್ತಿತ್ವ ಅರಿವಾಗುತ್ತದೆ.

ಆಬೋಲೀನಳು ಮನವೇಲನ ಮೋಸದ ಜಾಲಕ್ಕೆ ಸಿಲುಕಿ ಮಾನಸಿಕ ತೊಳಲಾಟದಲ್ಲಿ ಬೇಯುತ್ತಾಳೆ. ಈ ಬೇಗೆ ತಾನು ಬಸುರಿಯಲ್ಲ ಎಂಬ ಸತ್ಯ ನಾದಿನಿಯಿಂದ ತಿಳಿಯುವವರೆಗೂ ಮುಂದುವರೆಯುತ್ತದೆ. ಆದರೆ ಆ ನೆಮ್ಮದಿ ಕೊನೆಯವರೆಗೂ ಉಳಿಯದೆ ಬಾವಿಯಲ್ಲಿ ಆಕೆ ಸಾವನ್ನಪ್ಪುವಂತೆ ಮಾಡುತ್ತದೆ.

೩ " ಸುಮತೀ ಮಕ್ಕಳು ಹೇಗೆ ಹುಟ್ಟುತ್ತವೆ ಗೊತ್ತಿದೆಯೇ ?"

ಬಸುರಾದರೆ ಹೇಗೆ ತಿಳಿಯುತ್ತದೆಯೇ?"

ನೋಡು-ನೋಡು ನಾನು ಬಸುರಿಯೇ?" ೩ ಎಂಬೆಲ್ಲಾ ಆಬೋಲಿನಳ ಮಾತಿನಲ್ಲಿ ಮನೋಯಾತನೆ ಇದೆ ಲೈಂಗಿಂಕ ಶಿಕ್ಷಣದ ಅರಿವು ಆ ವೇಳೆಗಾಗಲೇ ಅಂದರೆ ೧೪ ವರ್ಷದ ಮಕ್ಕಳಿಗಾಗಲೇ ತಿಳಿಯದ ಸಂಗತಿಯಾದ್ದರಿಂದ ತನ್ನ ಸಹಪಾಠಿಯಾದ ಸುಮತಿಯನ್ನು ಕೇಳಿ ತಾನು ಗರ್ಭಿಣಿಯೇ? ಎಂದು ಖಚಿತಪಡಿಸಿಕೊಳ್ಳುವ ತೊಯ್ದಾಟ ಇದೆ.

೧.ಯಶವಂತ ಚಿತ್ತಾಲ: ಡಾ॥ಕೆ.ಎಲ್.ಗೋಪಾಲಕೃಷ್ಣಯ್ಯ : ಸಂ;ಡಾ॥ಪ್ರಧಾನ್ ಗುರುದತ್ತ:ಪುಟ ೩೫ .

೨. ಯಶವಂತ ಚಿತ್ತಾಲ : ಐವತ್ತೊಂದು ಕತೆಗಳು : ಗೀತಾಬುಕ್‌ಹೌಸ್ : ಪುಟ ೭೨ /೩. ಅದೇ ಪುಟ ೭೨ ೩. ಅದೇ ಪುಟ-೭೬

ಅಂತೆಯೇ ಸುಮತಿಯೂ ಅದೇ ವಯಸ್ಸಿನವಳಾದ್ದರಿಂದ ೧" ಈಗ ಯಾಕೇ ಆ ಪ್ರಶ್ನೆ? ಇನ್ನೂ ಲಗ್ನವೂ ಆಗಿಲ್ಲ. ಇವಾಗಲೇ ಮಗುವಿನ ಆಸೆಯೇ? ಮಕ್ಕಳು ಹೇಗೆ ಹುಟ್ಟುತ್ತವೆನ್ನುವುದರ ಕಲ್ಪನೆ ಇರದಿದ್ದರೂ ಲಗ್ನದ ಮೊದಲು ಮಕ್ಕಳು ಹುಟ್ಟುವುದು ಮಹಾಪಾಪ. ದೊಡ್ಡ ಅನರ್ಥ ಎಂಬುದರ ಅಂಥುಕ ಅರಿವು ಇತ್ತು."೧ ಎಂಬ ಸುಮತಿಯ ಮಾತಿನಲ್ಲೂ ಅಬೋಲೀನಳಲ್ಲಿ ಕಾಣಸಿಗುವ ಅಜ್ಞಾನ, ಮುಗ್ಧತೆ ಮತ್ತು ಸಮಾಜದ ಮನಸ್ಸು ಕೆಲಸ ಮಾಡುವ ರೀತಿಯಾಗಿ ಕಾಣಸಿಗುತ್ತದೆ.

ಅಪ್ಪ ಮತ್ತು ತಮ್ಮನ ಜೊತೆಗಿದ್ದ ಮುಗ್ಧ ಬಾಲಕಿಯೊಡನೆ ಆಗಲೇ ಇಬ್ಬರು ಹೆಂಡಿರನ್ನು ನೀಗಿಕೊಂಡಿದ್ದ ಮನವೇಲನೆಂಬ ಧೂರ್ತನ ಸಲುಗೆಯಿಂದಿರುತ್ತಾನೆ. ಒಂದು ದಿನ ಚಕ್ರೇಶ್ವರನ ದೇವಾಲಯದ ಪಡಸಾಲೆಯಲ್ಲಿ ಮನವೇಲ ಅಬೋಲೀನಳನ್ನು ಬಲಾತ್ಕಾರದಿಂದ ಅಪ್ಪಿ ಮುತ್ತುಕೊಟ್ಟು "೨ ಈಗಲಾದರೂ ಒಪ್ಪುತ್ತೀಯೋ ಇಲ್ಲವೋ ನನ್ನನ್ನು ಮದುವೆಯಾಗಲು? ನನ್ನ ಎಂಜಲು ನಿನ್ನ ತುಟಿಯಲ್ಲಿದೆ. ಈಗ ನೀನು ಬಸುರಾಗುತ್ತಿ "೨ ಎಂದೇಳುವ ಮಾತು ಅಬೋಲೀನಳ ತಲ್ಲಣಕ್ಕೆ ಕಾರಣವಾಗುತ್ತದೆ.

೩ " ಒಂದು ಕ್ಷಣ ತಡೆ ಅಬೋಲೀನ್ .....ನೋಡು ಯಾರಾದರೂ ಕೇಳಿದರೆ ನನ್ನ ಹೆಸರು ಹೇಳಬೇಡ, ದಮ್ಮಯ್ಯ ......ಎರಡು ತಿಂಗಳೆಂದೂ ಹೇಳಬೇಡ .... ಬೇಗ ಏನಾದರೂ ...... ಅದೇ! ಯಾರೋ ಬಂದರು ....''೩ ಎಂದು ಮನವೇಲ ಕಾಣೆಯಾಗುತ್ತಾನೆ. ಈ ಎಲ್ಲಾ ಮಾತುಗಳು ಅಬೋಲೀನಳ ಮನದಲ್ಲಿ ಕೆಲಸ ಮಾಡುತ್ತವೆ. ತನಗೆ ತಪ್ಪಿನ ಅರಿವಿಲ್ಲದಿದ್ದರೂ ತಂದೆಯೆದುರು ತಪ್ಪೆಂದು ಒಪ್ಪಿಕೊಳ್ಳುವ ಮುಗ್ಧ ಮನೋವೃತ್ತಿ ಆಕೆಯದು.

ಪಾದ್ರಿಗಳಿಗೆ ತಾನು ಆಕೆಯನ್ನು ಇಷ್ಟಪಟ್ಟಿಲ್ಲ. ಅಬೋಲೀನಳೇ ಈತನನ್ನು ಮೋಹಿಸಿರುವುದಾಗಿ ಪಾದ್ರಿಯು ಹೇಳಲಾಗಿ ಮದುವೆಗೆ ಒಪ್ಪಿರುವುದಾಗಿ ಮನವೇಲ ನಾಟಕವಾಡುತ್ತಾನೆ. ಆದರೆ ಇವೆಲ್ಲವೂ ಮನವೇಲ ಹೂಡಿದ ದೊಡ್ಡ ಕಪಟನಾಟಕ. ಈ ಕಪಟದಿಂದ ತಾವು ಮೋಸ ಹೋಗಿದ್ದೇವೆ-ಮೋಸಹೋಗುವಷ್ಟು ಅಜಾಗರೂಕತೆ ಅಲ್ಲ, ಮೌಢ್ಯ ತೋರಿಸಿದ್ದೇವೆ ಎನ್ನುವ ಅರಿವು ಪಾದ್ರಿಗೆ ಬರುವ ಹೊತ್ತಿಗೆ ಮಾತ್ರ ಪರಿಸ್ಥಿತಿ ಎಲ್ಲರ ಕೈ ಮೀರಿತ್ತು. ಆಬೋಲೀನ ನಮ್ಮನ್ನೆಲ್ಲ ತೊರೆದು ನಡೆದು ಬಿಟ್ಟಿದ್ದಳು. ತನ್ನ ತವರುಮನೆಗೆ ತನ್ನ ತಾಯ ಬಳಿಗೆ !

ತಮ್ಮ ಹುಡುಗ ಅಬೋಲೀನಳನ್ನು ಈ ರೀತಿಯಾಗಿ ಮದುವೆಯಾದ್ದದು ಮನವೇಲನ ಮನೆಯವರಾರಿಗೂ ಸಮ್ಮತವಿರಲಿಲ್ಲ. ಆದರೆ ಇದೆಲ್ಲದರೆ ತಪ್ಪನ್ನು ಅವನ ಮೇಲೆ ಹೊರಿಸಲೂ ಅವರು ಸಿದ್ಧರಿರಲಿಲ್ಲ. ಅವನು ಏನೆಂದರೂ ಗಂಡಸು, ಹೆಂಡಂದಿರನ್ನು ಕಳಕೊಂಡವ. ಇವಳು ಹೆಣ್ಣು ಇವಳಿಗೆ ಬುದ್ಧಿ ಇರಬೇಡವೇ? ಎಲ್ಲ ತಪ್ಪು ಇವಳದೇ ಎನ್ನುವಂತಿತ್ತು ಅವರ ವರ್ತನೆ ಹೂವಿನ ಹೆಸರಿನ -ಹೂವಿನಂತಹ ಹೆಣ್ಣು ಜೀವವೊಂದು ಅರಳುವ ಮೊದಲೇ ಮಣ್ಣು ಕೂಡಿದ ಮೇಲೆ? ಸುಖ ಬಯಸಿ ಬಂದ ಜೀವ ಸುಖ ಕಾಣುವ ಮೊದಲೇ ಕಣ್ಣು ಮುಚ್ಚಿದ ಮೇಲೆ? ಎಂಬಂತೆ ಆಬೋಲೀನಳ ಅಂತ್ಯವಾಗುತ್ತದೆ.

---

೧. ಯಶವಂತ ಚಿತ್ತಾಲ : ಐವತ್ತೊಂದು ಕತೆಗಳು: ಗೀತಾಬುಕ್ ಹೌಸ್ : ಪುಟ ೭೬ ೨. ಅದೇ ಪುಟ ೮೦.
೩. ಅದೇ ಪುಟ ೮೧

೧ “ ಆಬೋಲೀನ ಕತೆಯ ವಿಶೇಷತೆ ಅದರ ಸಂಯಮಿತ ಅಭಿವ್ಯಕ್ತಿಯಲ್ಲಿದೆ. ಮತ್ತು ಆ ಸಂಯಮ ಸಕಾರಣವಾಗಿದೆ. ಒಂದು ಹನಿ ರಕ್ತ ಬಿದ್ದರೆ ಎಲ್ಲಿ ಅಮೃತಶಿಲೆಯಂತಹ ದೇಹದ ಕಾಂತಿ ಕಲಂಕಿತವಾದೀತೋ ಎಂದು ಹೆದರಿ ಅಥೆಲ್ಲೋ ಡೆಸ್ಡಿಮೊನಾಳನ್ನು, ರೇಶಿಮೆಯ ತಲೆದಿಂಬಿನಿಂದ ಹಿಚುಕಿ ಕೊಂದನಂತೆ. ಅದರಂತೆ ನಿಷ್ಪಾಪ ಜೀವಿಯಾದ ಆಬೋಲೀನಳ ದುರಂತಕತೆಯ ಮೇಲೆ ಒಂದಾದರೂ ರಕ್ತದ ಹನಿ ಬಿದ್ದಿಲ್ಲ. ಮನವೇಲನ ಚುಂಬನ, ದೀವರ ಹೆಂಗಸರ ಕಳ್ಳನೋಟ, ಯಾರಾರೋ ಹಬ್ಬಿಸಿದ್ದ ಸುದ್ದಿ, ತಂದೆಯ ಕರುಳ ಮಿಡಿತ, ಪಾದ್ರಿಯ ಅನುಕಂಪ ತನ್ನದೇ ಅಂತರಂಗದ ಭಯ, ಮುಗ್ಧ ಕುತೂಹಲ ಮತ್ತು ಇವೆಲ್ಲವುಗಳಲ್ಲಿ ವ್ಯಕ್ತವಾದರೂ ಅಗಮ್ಯವಾದ ದೈವ- ಇವೆಲ್ಲ ಅವಳ ಸಾವಿಗೆ ಕಾರಣವಾಗುತ್ತದೆ. ಇಷ್ಟಾದರೂ ಅಂಥದ್ದೇನೂ ನಡೆದಿಲ್ಲವೇನೋ ಎಂಬಂತೆ ವಾತಾವರಣ ಸ್ತಬ್ಧವಾಗಿದೆ. ಚಕ್ರಖಂಡೇಶ್ವರನ ಹಿಂದಿನ ಗದ್ದೆಗಳು, ಕೈತಾನನ ಎಣ್ಣೆಯ ಗಾಣ, ಅಂಗಳದಲ್ಲಿಯ ಹರಟೆ ಇವೆಲ್ಲ ಎಂದಿನಂತೆಯೇ ಇವೆ. ಆಬೋಲೀನ ತನ್ನ ಸೆರಗಿನಲ್ಲಿಯ ಕೆಂಡವನ್ನು ಒಂದು ಕಿಡಿ ಕೂಡ ಚೆಲ್ಲದ ಹಾಗೇ ಕಟ್ಟಿಕೊಂಡು ಹೊರಟು ಹೋಗುತ್ತಾಳೆ. ಬರವಣಿಗೆಯಲ್ಲಿಯ ಅದ್ಭುತ ಸಂಯಮ ಇಂತ ಧಾರುಣತೆಯ ಪರಿಣಾಮವನ್ನು ಹುಟ್ಟಿಸುತ್ತದೆ. ಆ ಸಂಯಮವೇ ಈ ಕತೆಯನ್ನು ಹತ್ತಾರು ಅಪಾಯಗಳಿಂದ ಸಂರಕ್ಷಿಸಿದೆ. ಭಾವನೆಗಳ ಬಣ್ಣ ಸ್ವಲ್ಪ ಹೆಚ್ಚಾಗಿದ್ದರೂ (ಉದಾಹರಣೆಗೆ ಸುಮತಿಯ ಮನೆಯವರ ಸಹಾನುಭೂತಿ) ಕತೆಯ ರೂಪ ಕದಡಿ ಹೋಗಿ ದುರಂತ ಅಸಹ್ಯವಾಗುತ್ತಿತ್ತು. ಆಬೋಲೀನಳ ವಯಸ್ಸು ಇನ್ನಷ್ಟು ಹೆಚ್ಚಾಗಿದ್ದು, ಅವಳ ಜಗತ್ತಿನ ಜ್ಞಾನ ಬೆಳೆದಿದ್ದರೆ ಮನವೇಲನ ಪಾತ್ರ ಸೃಷ್ಟಿ ಅಸಂಭವವಾಗುತ್ತಿತ್ತು. ಶುದ್ಧ ಹುಂಬನಾದ್ದರಿಂದ ಇದಕ್ಕಿಂತ ಜಾಣ್ಮೆಯುಳ್ಳ ಮೋಸಗಾರಿಕೆ ಅವನಿಂದ ಸಾಧ್ಯವಾಗುತ್ತಿರಲಿಲ್ಲ. ಈಗಿದ್ದ ಪರಿಸ್ಥಿತಿಯಲ್ಲಿ, ಸನ್ನಿವೇಶಗಳ ಜೋಡಣೆಯಲ್ಲಿ ಹಳ್ಳಿಗರ ಮುಗ್ಧ ಪ್ರತಿಕ್ರಿಯೆಗಳಲ್ಲಿ ಎಲ್ಲಿಯೂ ಬದಲಾವಣೆ ಸಾಧ್ಯವಿಲ್ಲ ಎಂಬಂತೆಯೇ ಇಲ್ಲಿಯ ಬರವಣಿಗೆಯಿದೆ. ಈ ಕತೆಯಲ್ಲಿನ ಗಾಳಿ, ಬೆಳಕು, ಕತ್ತಲೆಗಳು ಕೂಡ ಆ ಲೋಕದವೇ ಎಂಬಷ್ಟು ವೈಶಿಷ್ಟ್ಯದಿಂದ ಕೂಡಿಕೊಂಡಿವೆ. ಕಲೆ ತನ್ನ ನಿಶ್ಚಿತವಾದ ಸತ್ಯವನ್ನು ಮುಟ್ಟುವುದಿದ್ದರೆ ಇಂಥ ಅಸಿಧಾರಾವ್ರತವನ್ನು ಅನುಸರಿಸಬೇಕಾಗುತ್ತದೆ. ಈ ಸಂಗ್ರಹದ ಎಲ್ಲ ಕತೆಗಳಲ್ಲಿ ಅಂಥ ಪರಿಶ್ರಮದ ರಚನಾಕ್ರಮವನ್ನು ಕಾಣಬಹುದಾಗಿದೆ”೧ ಎಂದು ಕೀತಿರ್ನಾಥಕುರ್ತಕೋಟಿಯವರು ಮುನ್ನುಡಿಯಲ್ಲಿ ಹೇಳಿದ್ದಾರೆ.

ಮುದಿಹುಚ್ಚು :- ಹೇಗಿದ್ದವರು ಹೇಗಾಗುತ್ತಾರೆ ಎಂದು ಹೇಳುವುದು ಕಷ್ಟ. ಬ್ರಹ್ಮಲಿಖಿತ ಹೇಗಿರುತ್ತದೆಯೋ ಯಾರು ಬಲ್ಲರು? ಎಂಬಂತೆ ಮಂಜುನಾಥಶೆಟ್ಟಿಯ ಜೀವನ. ಹಾಗಾಗಿಯೇ ಬೆಲೆ ಬಾಳುವ ವಸ್ತುಗಳು ಬಡವರ ಸ್ವಂತದ್ದೇ ಆದರೂ ಅದನ್ನು ನಂಬುವ ಪರಿಸ್ಥಿತಿಯಲ್ಲಿ ಸಮಾಜ ಇರುವುದೇ ಅಪರೂಪವೇ ಸರಿ. ಹಣದ ಶ್ರೀಮಂತಿಕೆಯ ಅಹಂಕಾರದಲ್ಲಿ ಮೆರೆಯುತ್ತಲಿದ್ದ ಸುಶೀಲಕ್ಕಳ ಮನಸ್ಸು ಮಂಜುನಾಥಶೆಟ್ಟಿಯು ಸುಭಾಷನನ್ನು ಪ್ರೀತಿಯಿಂದ ಮಾತನಾಡಿಸಿದರೂ ೨“ಇಷ್ಟೆಲ್ಲಾ ಮಕ್ಕಳಿರುವಾಗ ತನ್ನ ಮಗನ ಮೇಲೇ ಇಷ್ಟೊಂದು ಮಮತೆ ತೋರಿಸುವ - ಈ ಭಿಕ್ಷುಕನಂತೆ ಕಾಣುವ- ಮುದುಕ ಆಚಾರಿ (ಬಡಿಗ) ಕಳ್ಳನಿರಲಿಕ್ಕಿಲ್ಲವಷ್ಟೆ?೨” ಎಂದು ಕೆಟ್ಟದಾಗಿ ಆಲೋಚಿಸುವ ಮನಸ್ಸು ಆಕೆಯದು.

---

೧. ಯಶವಂತ ಚಿತ್ತಾಲ : ಐವತ್ತೊಂದು ಕತೆಗಳು: ಮುನ್ನುಡಿ ಕೀರ್ತಿನಾಥ ಕುರ್ತಾಕೋಟಿ-ಪುಟ-೬೨೮

೨. ಯಶವಂತ ಚಿತ್ತಾಲ: ಐವತ್ತೊಂದು ಕತೆಗಳು: ಪುಟ-೯೭

೧"ನಾನೂ ಮೊದಲೊಮ್ಮೆ ಒಳ್ಳೆಯ ದಿನಗಳನ್ನು ನೋಡಿದವನೇ ರಾಯರೇ, ಬೆಳಗಾವಿಯಲ್ಲಿ ದೊಡ್ಡ ಸರಾಫ್ ಅಂಗಡಿಯಿತ್ತು. ಅಜ್ಜ-ಮುತ್ತಜ್ಜರ ಕಾಲದಿಂದಲೂ ನಡೆದು ಬಂದ ವ್ಯವಹಾರ, ಒಳ್ಳೇ ಭರಭರಾಟೆಯಿಂದಲ್ಲದಿದ್ದರೂ ಉತ್ತಮ ರೀತಿಯಲ್ಲಿ ನಡೆದಿತ್ತು. ಆದರೆ ನನ್ನ ದುರ್ದೈವ. ಒಮ್ಮೆ ವ್ಯಾಪರಕ್ಕೆಂದು ಮುಂಬಯಿಗೆ ಹೊರಟಾಗ ಅಂಗಡಿಗೆ ಬೆಂಕಿ ಬಿತ್ತು. ಅಂಗಡಿ ಮತ್ತು ಮನೆ ಒಂದೇ ಆಗಿತ್ತು. ಕೇರಿಯ ಜನರು ಪ್ರಯತ್ನಪಟ್ಟು ಬೆಂಕಿಯನ್ನೇನೋ ನಂದಿಸಿದರು. ಆದರೆ ಆ ಹೊತ್ತಿಗೆ ಮನೆಯಲ್ಲಿ ಸಿಕ್ಕಿಕೊಂಡ ಬಂಗಾರ ಮುತ್ತುಗಳ ಜೊತೆಗೆ ಮುತ್ತಿನಂತಹ ನನ್ನ ಮಗ..........."೧ ಎಂದು ನೊಂದು ನುಡಿಯುವ ಮಂಜುನಾಥಶೆಟ್ಟಿಯ ಮಾತು ಆ ನೋವು, ಶ್ರೀಮಂತಿಕೆ ನೆನೆಯಲು ಸುಶೀಲಕ್ಕ ಕಾರಣಳಾಗುತ್ತಾಳೆ. ಮತ್ತೊಂದೆಡೆ ಆತನ ಮನೋವೇದನೆಯೂ ಅರ್ಥವಾಗುತ್ತದೆ.

ಮಂಜುನಾಥಶೆಟ್ಟಿಯನ್ನು ಕಳ್ಳನೆಂದು ಸಂಭೋಧಿಸುವ ಸುಶೀಲಕ್ಕಳ ಮಗ ಸುಭಾಷನನ್ನು ತನ್ನ ಮಗ ರಾಮಕೃಷ್ಣನನ್ನು ಕಾಣುವಂತ ಸಹೃದಯ ಈ ಮಂಜುನಾಥಶೆಟ್ಟಿ ಹಾಗಾಗಿಯೇ ರಾಮಕೃಷ್ಣನಿಗೆಂದು ತಂದಿಟ್ಟಿದ್ದ ನೇವಾಳವನ್ನು ತಂದು ೨"ರಾಮಕೃಷ್ಣ ಹಾಕಿ ಓಡಾಡಿದ್ದನ್ನು ನೋಡುವ ಭಾಗ್ಯ ನನ್ನ ಹಣೆಯಲ್ಲಿರಲಿಲ್ಲ. ರಾಮಕೃಷ್ಣನ ನೆನಪನ್ನು ಅಷ್ಟಾಗಿ ತಂದ ಚಿಕ್ಕ ಸುಭಾಷನಾದರೂ ಹಾಕಿಕೊಂಡದ್ದನು ನೋಡಿ ಸಂತೋಷಪಡುವಾ ಎಂದು ಇದನ್ನು ತಂದೆ ಇಗೊಳ್ಳಿ೨" ಎಂದು ಕೊಡುತ್ತಾನೆ. ಕೊನೆಗೆ ಆ ನೇವಾಳವನ್ನು ತಿರುಗಿ ಕೇಳಲು ಬಂದಾಗ ಯಃಕಶ್ಚಿತವಾಗಿ ತೋರುವ ಈ ಬಡ ಆಚಾರಿಯನ್ನು ಕುರಿತು ಈತ ಕಳ್ಳನಿರಬಹುದು ಎಂದು ಸಂಶಯ ವ್ಯಕ್ತಪಡಿಸಿ ಈಗ ಅದೇ ಆಚಾರಿಯಿಂದ ಈ ನೇವಾಳವನ್ನು ಸ್ವೀಕರಿಸಿದಳು ಎನ್ನಿಸಿಕೊಳ್ಳುವಷ್ಟು ನಾಚಿಕೆಯಿಲ್ಲದವಳಲ್ಲ. ಸುಶೀಲಕ್ಕ! ಹಾಗಾಗಿಯೇ ಅದು ತನ್ನದೆಂದು ಆತ ಸುಳ್ಳು ಹೇಳುತ್ತಿದ್ದಾನೆಂದು ಹೇಳುತ್ತಾಳೆ. ಇಲ್ಲಿ ಪ್ರತಿಷ್ಠೆಯ ಪ್ರಶ್ನೆ ಇವಳದಾದರೆ ಆತನ ಯಾತನೆಯ ಅರಿವು ಈಕೆಗಿಲ್ಲ.

ನೇವಾಳ ತನ್ನದೆಂದು ಹೇಳಲು ಹೊರಟ ಮಂಜುನಾಥಶೆಟ್ಟಿಗೆ ಅಲ್ಲಿದ್ದವರು

೩"ಎಲ್ಲ ಬಿಟ್ಟು ಈ ದಂಧೆಗೆ ಬಂದಿರೋ"

"ಮನೆಯಲ್ಲಿ ಇದೊಂದೇ ನೇವಾಳವಿತ್ತೋ ಇನ್ನೂ ಇದ್ದಾವೋ? ಇದ್ದರೆ ನನಗೂ ಒಂದು ತಂದು ಕೊಡು"೩. ಎಂದು ಲೇವಡಿ ಮಾಡುವ ಮನಸ್ಸುಗಳ ಒಳ ಸತ್ಯತೆಯ ಮಂಜುನಾಥಶೆಟ್ಟಿಯ ಮನೋಯಾತನೆಗೆ ಬೆಲೆಯಾದರೂ ಎಲ್ಲಿ ಸಿಕ್ಕೀತು? ೪"ನೀವು ಏನು ಬೇಕಾದರೂ ಅನ್ನಿ. ಮಂಜುನಾಥಶೆಟ್ಟಿಯವರಿಗೆ ಇತ್ತಿತ್ತ ಒಂದು ಬಗೆಯ ಮುದಿಹುಚ್ಚು ಹಿಡಿದಂತಿದೆ. ಇಲ್ಲವಾದರೆ ಇಂತಹ ಕೆಲಸಕ್ಕೆ ಅವರೆಂದೂ ಕೈ ಹಾಕುವವರೇ ಅಲ್ಲ."೪ ಎಂದು ಸಾಂತಯ್ಯ ಬಾಪ್ಪಾ ನುಡಿದರು. ಹೀಗೆ ಮಂಜುನಾಥಶೆಟ್ಟಿಯವರು ನಿಜವಾದದ್ದನ್ನೇ ಹೇಳಿದರು ನಂಬುವ ಮನಃಸ್ಥಿತಿಗಳಿರಲಿಲ್ಲ. ಬದಲಿಗೆ ಮುದಿಹುಚ್ಚು, ಸಾಯುವಾಗ ಏಕೀ ಅಪವಾದವನ್ನೊತ್ತರು! ಎಂಬೆಲ್ಲಾ ಮಾತುಗಳು ಕೇಳಿಸತೊಡಗಿದವು.

ಲೇಖಕರು ಹನೇಹಳ್ಳಿಯ ಪರಿಚಯವನ್ನು/ಅನುಭವವನ್ನು ಇಲ್ಲಿ ಕತೆಯಾಗಿ ಬಿಚ್ಚಿಟ್ಟಿದ್ದಾರೆ. ಹಾಗಾಗಿಯೇ ೫"ಸುಮಾರು ಒಂದು ವರುಷದ ಮೊದಲು ನಮ್ಮ ಕೇರಿಯವಳೇ ಆದ ಆಬೋಲೀನ ಎಂಬ ಕ್ರಿಶ್ಚನ್ ಹುಡುಗಿಯೊಬ್ಬಳು ಸ್ವತಃ ಗಂಡನಾದವನಿಂದಲೇ ದುಷ್ಟ ಅಪವಾದಕ್ಕೆ ಗುರಿಯಾಗಿ ಬಾವಿಯಲ್ಲಿ ಹಾರಿ ಜೀವ ಕೊಟ್ಟಾಗ ನಾಲ್ಕು ದಿನ ಮಾತನಾಡಿ ಬಾಯತಿಂಡಿ ತೆಗೆದುಕೊಂಡದ್ದಷ್ಟೇ ಬಂದಿತು. ಆನಂತರ ವರುಷವಿಡೀ ಸಪ್ಪಗೆ ಬಿದ್ದ ಜನ ಮತ್ತೆ ಚೇತರಿಸಿ ಅಬ್ಬಾ ಮುದುಕನೇ! "೫. ಎಂದಿತು.

೧. ಯಶವಂತ ಚಿತ್ತಾಲ : ಐವತ್ತೊಂದು ಕತೆಗಳು: -ಪುಟ-೯೯. ೨. ಅದೇ ಪುಟ -೧೦೦ ೩. ಅದೇ ಪುಟ-೧೦೫
೪. ಅದೇ ಪುಟ-೧೦೬ ೫. ಅದೇ ಪುಟ- ೧೦೮.

ಮಂಜುನಾಥಶೆಟ್ಟಿಯವರ ಬಗ್ಗೆ ಬಾಯಿಗೆ ಬಂದಂತೆ ಆಡಿಕೊಂಡಿತು. ಅಂದರೆ ಸಮಾಜದ ಮನಃಸ್ಥಿತಿಯನ್ನು ಇಲ್ಲಿ ಅರಿಯಬಹುದು. ಅಂದರೆ ಮೌನವಾಗಿರುವ ಸಮಾಜದ ಬಾಯಿಗೆ ಮಾತನಾಡಲು ವಿಚಾರ ಬೇಕಷ್ಟೆ. ಅದು ಯಾವುದಾದರೂ ಸರಿಯೇ. ಆ ಜನವೇ ಮಂಜುನಾಥಶೆಟ್ಟಿಯು ಸತ್ತ ನಂತರ ೧"ಪುಣ್ಯಾತ್ಮ..... ಸಾಯುವ ಮೊದಲು ಇಲ್ಲದ ಅಪವಾದಕ್ಕೆ ಒಳಗಾದ. ಅಂದು ಆ ಜಂಭದ ಹೆಣ್ಣು ಇಲ್ಲಿ ಬರದೇ ಇದ್ದಿದ್ದರೆ..... ಇವರ ಹೆಸರನ್ನು ಕೆಡಿಸಲಿಕ್ಕೆಂದೇ ಬಂದಿದ್ದಳೇನೋ...... ಏನೆಂದರೂ ವಯಸ್ಸು ದಾಟಿದವ. ಅಂದು ಯಾರೋ ಅಂದಹಾಗೆ ಮುದಿಹುಚ್ಚು ಹಿಡಿದಿತ್ತೇನೋ. ಇಲ್ಲವಾದರೆ ಅಂತಹ ಸಣ್ಣ ಕೆಲಸಕ್ಕೆ ಕೈ ಹಾಕುವವರೇ ಅವರ....? ಜನರ ಔದಾರ್ಯಕ್ಕೆ ಪೂರ ಬಂದಿತ್ತು.........."೧ ಎಂಬಂತೆ ಇದ್ದಾಗ ಬದುಕಲು ಬಿಡದೆ,; ಹೋದಾಗ ಪುಣ್ಯಾತ್ಮ ಎಂದು ಸಂಬೋಧಿಸುವ ಸಮಾಜದ ಮನೋಸ್ಥಿತಿ ಇಲ್ಲಿ ಕಾಣಸಿಗುತ್ತದೆ.

ಆಬೋಲೀನ ಮತ್ತು ಮುದಿಹುಚ್ಚು ೨"ಈ ಎರಡೂ ಕತೆಗಳಲ್ಲಿ ಸಂಭವನೀಯ ದುರಂತವನ್ನು ತಪ್ಪಿಸಬಹುದಾಗಿದ್ದ ಪಾತ್ರಗಳು ತೀರ ಎಳೆಯ ವಯಸ್ಸಿನ ಮುಗ್ಧರು. ಹಿರಿಯರೆದುರು ಮಾತಾಡುವ ಧೈರ್ಯವಿಲ್ಲದವರು, ಆಗಿರುತ್ತಾರೆ. ಇಲ್ಲಿವೆ. ಸಜ್ಜನರು ದುಷ್ಟಶಕ್ತಿಗಳ ಎದುರು ಮೂಕರೂ, ಅಸಹಾಯಕರೂ ಆಗಿಬಿಡುತ್ತಾರೆ. ಪ್ರಾಯಶಃ ಇದು ಚಿತ್ತಾಲರು ಬದುಕಿನಲ್ಲಿ ಕಂಡ ವೈಚಿತ್ರವೂ ಇರಬಹುದು. ಕತೆಯ ನಿರೂಪಕ/ಕಿ ಪ್ರೌಢಸ್ಥಿತಿಯನ್ನು ತಲುಪಿ ವಿವೇಚಿಸಿದಾಗ, ತಾವು ನಿರ್ವಹಿಸಬೇಕಾಗಿದ್ದ ಜವಾಬ್ದಾರಿಯ ಅರಿವು ಮುಖ್ಯವಾಗುತ್ತದೆ. ನಿರೂಪಕ/ಕಿಯ ನೋವಿನ ಅರಿವನ್ನು ಯಥೋಚಿತವಾಗಿ ಸಾಹಿತ್ಯ ಮಾಧ್ಯಮದಲ್ಲಿ ಅಭಿವ್ಯಕ್ತಿಸಿ, ಸಹೃದಯದ ಸಂವೇದನೆಯನ್ನು ಜಾಗೃತಗೊಳಿಸುವುದೇ ಚಿತ್ತಾಲರು ತಮ್ಮ ಸೃಷ್ಟಿಶೀಲತೆಯಿಂದ ನಿರೀಕ್ಷಿಸುವ ಪ್ರತಿಫಲವಿರುವಂತೆ ತೋರುತ್ತದೆ. ಚಿತ್ತಾಲರ ಮನಸ್ಸಿನಲ್ಲಿ ಎಂದಿನಿಂದಲೂ ಮನೆ ಮಾಡಿದ. ಮಾನವ ಜೀವಿಯ ಯಾತನೆ ಎಂಬ ಒಂದು ತಾತ್ವಿಕ ಚಿಂತನೆಯನ್ನು ಪ್ರತಿಮೆ, ಪ್ರತೀಕಗಳ ಸಂಕೀರ್ಣ ಬಂಧದ ಮೂಲಕ ವ್ಯಕ್ತಪಡಿಸುವ ಪ್ರಯತ್ನವನ್ನು ಮುಂದಿನ ಹಲವು ಕೃತಿಗಳಲ್ಲೂ ಕಾಣಬಹುದು. ಕರ್ಕೆಗಾರ್ಡ್ ಅಂತಹ ಅಸ್ತಿತ್ವವಾದಿ ಚಿಂತಕರನ್ನು ಅಭ್ಯಾಸ ಮಾಡಿದ ಮೇಲೆ ಇದೇ ವಿಷಯಕ್ಕೆ ಸಂಬಂಧಿಸಿದಂತೆ ಅವರು ಬರೆದ ಪ್ರಬಂಧ 'ಮನೆಯಬಾಲ್ಕನಿ', 'ಅರಬೀ ಸಮುದ್ರ', 'ಕರ್ಕೆಗಾರ್ಡ್ ಮತ್ತು ನಾನು' ಎಂಬುದು ಅಲ್ಲಿನ ಒಂದು ಉದ್ದರಣ ಹೀಗಿದೆ. "There goes the symbol of the human condition on this planet. helpless and naked and utterly vulnarable."೨ ಎಂಬ ಮಾತುಗಳು ಅರ್ಥಪೂರ್ಣವೇ ಸರಿ.

ರಾಧಕ್ಕನ ಮನೋರಥ: ಇದೊಂದು ಅದ್ಭುತವಾದ ಹಾಗೂ ಅತೀ ಸಹಜವಾದ ಕತೆಯಾಗಿದೆ. ರಾಧಕ್ಕನಿಗೆ ತನ್ನ ಮಗಳಾದ ಸುಮತಿಯ ಮದುವೆ ಮಾಡುವುದೇ ಜೀವನ ಮತ್ತು ಅದೇ ಜೀವನದ ಗುರಿಯಾಗಿದೆ. ಹಾಗಾಗಿ ಸಿಕ್ಕ-ಸಿಕ್ಕಿದವರೊಡನೆ ತನ್ನ ಮಗಳ ಮದುವೆ ವಿಚಾರ ಪ್ರಸ್ತಾಪ ಮಾಡುತ್ತಿದ್ದಳು. ಸುಮತಿ ೨೦ ವರ್ಷ ವಯಸ್ಸಿನ ಹುಡುಗಿ ಕನ್ನಡ ಮುಲಕೀ ಪರೀಕ್ಷೆ ಪಾಸಾಗಿ ತಮ್ಮ ಊರಿನ ಹೆಣ್ಣು ಮಕ್ಕಳ ಶಾಲೆಯಲ್ಲೇ ಶಿಕ್ಷಕಿಯಾಗಿದ್ದಾಳೆ. ಹಾಗಾಗಿಯೇ ಅಕೆ ಅಮ್ಮನ ತೊಯ್ದಾಟ ನೋಡಿ. ೩"ಅಮ್ಮಾ, ಇನ್ನು ಮುಂದೆ ನನ್ನ ಲಗ್ನದ ಮಾತನ್ನು ಸಿಕ್ಕ ಸಿಕ್ಕವರ ಮುಂದೆ ತೆಗೆಯಬೇಡಮ್ಮ, ನನಗೆ ಲಗ್ನವೇ ಬೇಡ, ಹೆಗಾದರೂ ಇಷ್ಟೆಲ್ಲ ಕಷ್ಟಪಟ್ಟು ನನ್ನನ್ನು ಕಲಿಸಿ, ನನ್ನ ಕಾಲಮೇಲೆ ನಾನು ನಿಲ್ಲುವಂತೆ ಮಾಡಿದ್ದೀ, ನನಗೀಗ ಮದುವೆಯ ಅವಶ್ಯಕತೆಯಾದರೂ ಏನು?"೩

---

೧. ಯಶವಂತ ಚಿತ್ತಾಲ : ಐವತ್ತೊಂದು ಕತೆಗಳು: -ಪುಟ-೧೦೯

೨. ಯಶವಂತ ಚಿತ್ತಾಲ:ಡಾ।ಕೆ.ಎಲ್.ಗೋಪಾಲಕೃಷ್ಣಯ್ಯ ಸಂ: ಪ್ರಧಾನ್‌ಗುರುದತ್ತ ಪುಟ-೯೮

೩. ಯಶವಂತಚಿತ್ತಾಲ ಐವತ್ತೊಂದು ಕಥೆಗಳು: ೧೧೩

ಎನ್ನುತ್ತಿದ್ದಳು. ಈ ಮಾತಿನಹಿಂದೆ ಅಡಗಿದ್ದ ಮಗಳ ಮನೋವೇದನೆಯನ್ನು ಆ ತಾಯ ಅಂತಃಕರಣ ಅರಿಯದೇ ಇರಲಿಲ್ಲ. ಅವಳ ದುಗುಡ ಇನ್ನೂ ಹೆಚ್ಚಿತು. ಹೀಗೇ ನಡೆದಲ್ಲಿ ಮಗಳೆಲ್ಲಿ ಸನ್ಯಾಸಿನಿಯಾಗುತ್ತಾಳೋ ಎಂದು ಆಲೋಚಿಸುತ್ತಿದ್ದಳು. ರಾಧಕ್ಕ.

೧"ಹೆಣ್ಣಿಗೆಂದಾದರೂ ಮದುವೆಯಾಗದೇ ಇರುವುದು ಶಕ್ಯವಿದೆಯೇ?"೧ ಎಂದು ರಾಧಕ್ಕ ಹೇಳುವ ಮಾತಿನಲ್ಲಿ ಹೆಣ್ಣಿಗೆ ಮದುವೆ ಅನಿವಾರ್ಯ ಎಂಬ ಮನಃಸ್ಥಿತಿಯನ್ನು ಕಾಣಬಹುದು. ಸುಮತಿಗೆ ಮದುವೆಯಾಗುವ ಆಸೆಯಿತ್ತಾದರೂ, ತಾಯಿಯ ಪಡಪಾತ ನೋಡಲಾಗದ ಅತೀವವಾಗಿ ನೋಯುತ್ತಿದ್ದಳು. ತಮ್ಮನ್ನು ಕೀಳಾಗಿ ನೋಡುತ್ತಲಿದ್ದ ಸಮಾಜವನ್ನು ಶಪಿಸುತ್ತಿದ್ದಳು. ೨"ಅಮ್ಮನ ಸಮಾಧಾನಕ್ಕೆಂದಾದರೂ ಆದಷ್ಟು ಬೇಗ ಲಗ್ನ ಆಗಬೇಕು ಅನಿಸುತ್ತದೆ. ಆದರೆ ಆಗಬೇಕು ಹೇಗೆ? ನನಗೆ ಹೇಳಿಕೊಳ್ಳುವಂತಹ ರೂಪವಿದೆಯೇ? ಇಂದಿನ ಕಲಿತ ತರುಣರಿಗೆ ಮುಲಕಿಯಾದವರು ಕಣ್ಣಿಗೆ ಹೋಗುತ್ತಾರೆಯೇ? ಇಷ್ಟಕ್ಕೂ ಕೇಳಿದಷ್ಟು ವರದಕ್ಷಿಣೆ ಕೊಡುವ ತ್ರಾಣವಾದರೂ ಇದೆಯೇ? ಹೇಳಿ ಕೇಳಿ ಅಡುಗೆಯವಳು ಮಗಳು!"೨ ಎಂಬ ಆಕೆಯ ಮಾತಿನಲ್ಲಿ ಊರ ಜನರು ತಮ್ಮಿಬ್ಬರ ಬಗ್ಗೆ ತೋರುತ್ತಿದ್ದ ಅನಾದರದ ಬಗ್ಗೆ ತೀವ್ರವಾದ ತಿರಸ್ಕಾರ. ನೋವು ಆ ಮಾತುಗಳಲ್ಲಿ ಮೊತ್ತವಾಗಿ ಮೂಡಿದ್ದವು.

ಪದ್ಮಾವತಿ ಎಂಬ ಅದೇ ಊರಿನ ಹುಡುಗಿ ಸುಮತಿಯಷ್ಟು ಸುಂದರಳಲ್ಲ ಅಷ್ಟು ಓದಿಯೂ ಇಲ್ಲ. ಆದರೂ ಒಳ್ಳೆಯ ಹುಡುಗ ಸಿಕ್ಕಿದ್ದಾನೆ. ನಮಗೆ ಇಲ್ಲವಲ್ಲ ಎಂಬ ನೋವು ರಾಧಕ್ಕನದು.

ತನ್ನ ಮಲತಂಗಿ ಯಮುನೆಯ ಮನೆಗೆ ಬರುವ ಗೋಪಾಲನನ್ನು ತನ್ನ ಮನೆಗೆ ಊಟಕ್ಕೆ ಕಳಿಸುವಂತೆ ರಾಧಕ್ಕ ಯಮುನೆಯ ಮನೆಗೋಗಿ ಕೇಳಿದರೂ ಆಕೆ ವ್ಯಂಗ್ಯವಾಗಿ ಮನನೋಯುವಂತೆ ಮಾತನಾಡಿದರೂ ಪರಮೇಶ್ವರಿಯಿಂದ ಗೋಪಾಲ ಬಸ್ಸಿಗೆ ಹೋಗುವ ಸುದ್ದಿ ತಿಳಿದು ಆತ ಬರುವ ಹಾದಿಯಲ್ಲಿಯೇ ತಾನು ಊಟಕ್ಕೆ ಕರೆಯಲಾಗದಿದ್ದರೂ ಮಾವಿನ ಹಣ್ಣನ್ನಾದರೂ ಕೊಡುವ ಆಸೆಯಿಂದ ದಾರಿಯಲ್ಲಿ ಉರಿಬಿಸಿಲಿನಲ್ಲಿ ಕಾಯ್ದು ನಿಲ್ಲುತ್ತಾಳೆ. ಆಕೆಯ ಮನದಲ್ಲಿ ತನ್ನ ಮಗಳ ಮದುವೆಯ ಹೊರತಾಗಿ ಬೇರೇನೂ ಇಲ್ಲ. ಹಾಗಾಗಿ ಆಕೆಗೆ ಯಾವ ಕಷ್ಟವೂ ಬರುವುದಿಲ್ಲ.

ಯಮುನೆಯೂ ಗೋಪಾಲನೊಡಗೂಡಿ ಬಸ್‌ಸ್ಟ್ಯಾಪಿಗೆ ಬರುವುದನ್ನು ನೋಡಿ ಮಾವಿನ ಹಣ್ಣುಗಳನ್ನು ಬೀಳಿಸಿ ಅವುಗಳನ್ನು ಎತ್ತಿಕೊಳ್ಳುತ್ತಿರುವಂತೆ ನಟಿಸುತ್ತಾಳೆ. ಆಗ ೩"ಹೋಗ ಹೋಗುವಾಗ ಗೋಪಾಲ ರಾಧಕ್ಕನೆಡೆ ಹಿಂತಿರುಗಿ ನೋಡಿ ಯಮುನೆಯನ್ನು ಕೇಳಿದ! ಆ ಮುದುಕಿ ಯಾರು? ಎಲ್ಲೋ ನೋಡಿದಂತೆ ಅನಿಸುತ್ತದೆ ಈ ಪ್ರಶ್ನೆಗೆ ಯಮುನೆಯೂ ಹಿಂತಿರುಗಿ ನೋಡಿ ಅಂದಳು.

ಓ! ಅವಳೇ? ಇಲ್ಲಿಯವಳೇ ತುಂಬ ಬಡವಳು. ಹಣ್ಣು ಗಿಣ್ಣು ಮಾರಲಿಕ್ಕೆ ಬಂದಿರಬೇಕು..... ಅಹುದೇ? ನೋಡಿದರೇಕೋ ಪಾಪ ಎನಿಸುತ್ತದೆ"೩. ಎಂದು ಗೋಪಾಲ ಮತ್ತೊಮ್ಮೆ ಹಿಂತಿರುಗಿ ನೋಡಿ ಹೋಗುತ್ತಾನೆ. ಇಲ್ಲಿ ಗೋಪಾಲನ ಸಹೃದಯ ಮನಃಸ್ಥಿತಿ ಜೊತೆಗೆ ಯಮುನೆಯ ದುಷ್ಟ ಮನಸ್ಸು ಗೋಚರವಾಗುತ್ತದೆ.

---

೧. ಯಶವಂತ ಚಿತ್ತಾಲ : ಐವತ್ತೊಂದು ಕತೆಗಳು: -ಪುಟ-೧೧೩ ೨. ಅದೇ ಪುಟ-೧೧೪

೩. ಅದೇ ಪುಟ-೧೧೭

ಆದರೆ ರಾಧಕ್ಕನಿಗೆ ಆಕೆಯ ಮನಸ್ಸಿನಲ್ಲಿ ಹಲವು ಆಲೋಚನೆ ಬೆಳೆದು ಕನಸು ತುಂಬಿದ ಅವಳ ಮನಸ್ಸು ತನ್ನದೇ ಆದ ರೀತಿಯಲ್ಲಿ ಅವಳಿಗೆ ಅರ್ಥ ಕಲ್ಪಿಸಿತು.

೧ "ಆ ಕಟ್ಟೆಯ ಬಳಿಯಲ್ಲಿ ನಿಂತ ಮುದುಕಿ ಯಾರು ಯಮುನತ್ತಿಗೆ? .... ಎಲ್ಲೋ ನೋಡಿದ ಮೋರೆ....... "

"ಅವಳೇ? ನನ್ನ ಮಲತಂಗಿ ರಾಧಕ್ಕನ ನೆನಪುಂಟೇ?"

"ರಾಧಕ್ಕ? ಆಂ? ಅರೆ ನೀನು ಮೊದಲೇ ಏಕೆ ಹೇಳಲಿಲ್ಲ? ಅವಳು ಈ ಊರಿನಲ್ಲಿದದ್ದು ನನಗೆ ಗೊತ್ತೇ? ಇರಲಿಲ್ಲ, ಹೋಗಿ ಭೇಟಿಯಾಗಿ ಬರುತ್ತಿದ್ದೆ......."

"ಇರಲಿ, ಈಗ ಹೇಗಾದರೂ ತಿಳಿಯಿತಲ್ಲ ಅವಳು ಈ ಊರಿನಲ್ಲಿದ್ದು ....ಧಾರವಾಡಕ್ಕೆ ಹೋದಮೇಲೆ ಪತ್ರ ಬರೆಯಬೇಕು ತಪ್ಪದೇ ...."

" ಕನಸಿನ ಹಕ್ಕಿ ತಿರುಗಿ ಗರಿಗೆದರಿ ಹಾರಿತ್ತು ಗಗನದಲ್ಲಿ ಮೇಲಕ್ಕೆ..........ಮೇಲಕ್ಕೆ ಹೋದಮೇಲೆ ಪತ್ರವನ್ನಾದರೂ ಬರೆಯಬೇಕು"- ಇದು ಕನಸೇ ನನಸೇ? ನೆಲಬಿಟ್ಟು ಬಹುದೂರ ನಡೆದ ರಾಧಕ್ಕನ ಮನಸ್ಸು ಇದನ್ನು ನಿರ್ಧರಿಸುವ ಸ್ಥಿತಿಯಲ್ಲಿರಲಿಲ್ಲ ...."೧ ಎಂದು ರಾಧಕ್ಕನ ಮನಸ್ಸು ಕನಸು ಕಾಣತೊಡಗಿತು. ಆಕೆಯ ಮನಸ್ಸು ಒಳ್ಳೆಯದನ್ನೇ ಆಲೋಚಿಸುತ್ತಿತ್ತು. ಹಾಗಾಗಿ ಒಳ್ಳೆಯ ಸಂಭಾಷಣೆಯಾದಂತೆ ಕನಸು ಕಂಡಳು. ಕಡೆಗೆ ಮನೆಗೆ ಸಂತೋಷದಿಂದ ಒಂದು ಮಗಳಿಗೆ ಧಾರವಾಡದಿಂದ ಪತ್ರ ಬರಲು ಎಷ್ಟು ದಿನಗಳು ಬೇಕೆಂದು ಕೇಳುತ್ತಾಳೆ. ಧಾರವಾಡದಲ್ಲಿ ಯಾರಿದ್ದಾರೆ? ನಿನಗೆ ಪತ್ರ ಬರೆಯುವವರು? ಎಂಬ ಮಗಳ ಪ್ರಶ್ನೆಗೆ ಎರಡು ದಿನ ತಡೆ ನೀನೇ ನೋಡುವಿಯಂತೆ ಯಾರ ಪತ್ರವೆಂದು ಎಂದು ಆಸೆ ಬೆರೆತ ಆ ಹೃದಯ ಕಾಣುವ ಕನಸು-ಆಕೆಯ ಮನಸ್ಸು, ಎಲ್ಲವೂ ಅದ್ಭುತವೇ ಸರಿ. ಆಕೆಯ ಕನಸು ಕಾಣುವ ಕಣ್ಣುಗಳಲ್ಲಿ ಇದ್ದದ್ದು ಬರಿಯ ತನ್ನ ಮಗಳ ಮದುವೆಯೊಂದೇ ....

ಅಡ್ಡ ಬಿದ್ದ ಮರ :- ಈ ಕತೆಯ ಕೇಂದ್ರ ಪಾತ್ರವಾಗಿ ಕಾಣಿಸುವುದು ಸುರೇಶನೇ ಆದರೂ ಆತನ ಮನೆಯೆದುರು ಬಿದ್ದಿದ್ದ ಮರ ಆತನ ಎಲ್ಲಾ ಕತೆಯನ್ನು ಬಿಚ್ಚಿಡುವ ಸಂಕೇತವಾಗಿ ಕಾಣಸಿಗುತ್ತದೆ. ಸುರೇಶನ ಮನೆಯೆದುರು ಬಿದ್ದ ಮರದ ಚಕ್ರಾಕಾರದ ಬುಡದಿಂದ ಸುತ್ತು ಹೊರಬಿದ್ದ ದೊಡ್ಡ-ದೊಡ್ಡ ಬೇರುಗಳನ್ನು ನೋಡಿದಾಗ ಸುರೇಶನ ಕಣ್ಣ ಮುಂದೆ ತಪ್ಪದೇ ಅಂದು ಪ್ಲಾಟ್‌ಫಾರ್ಮಿನ ಮೇಲೆ ನೋಡಿದ ಆ ಹೆಣದ ಪಾದಗಳು ಸ್ಪಷ್ಟವಾಗಿ ನಿಂತವು. ಅಂದು ಅದನ್ನು ನೋಡಿದಾಗಿನ ಭಾವನೆಗಳೇ ತಿರುಗಿ ಮೊಳೆತುಬಂದು ಜೀವ ಕಳವಳಿಸಿತು. 'ನಿರ್ಗತಿಕ ಹೆಣ' ಎಂಬಂತೆ ಇಲ್ಲಿ ಸುರೇಶನ ಮನೋಸ್ಥಿತಿಯನ್ನು ತಿಳಿಯಲು ಸಾಧ್ಯವಿದೆ. ಬಿದ್ದ ಮರವನ್ನು ಕಂಡವರೆಲ್ಲ ಹೀಗೆ ಒಂದಲ್ಲ ಒಂದು ರೀತಿಯಲ್ಲಿ ತಮ್ಮ ಅನಿಸಿಕೆಗಳನ್ನ ಅಭಿವ್ಯಕ್ತಿಗೊಳಿಸಿದ್ದು ವಿಶೇಷ.

೧: ಯಶವಂತ ಚಿತ್ತಾಲ : ಐವತ್ತೊಂದು ಕತೆಗಳು : : ಪುಟ ೧೧೮

೧"ಅಯ್ಯೋ! ಇಷ್ಟು ದಿನ ಈ ಜಾಗಕ್ಕೆ ತಂಪು ನೆರಳು ಕೊಟ್ಟು ನಿಂತ ಮರ ...." ಹಾಳಾಗಲಿ ! ಇನ್ನು ಆ ಮ್ಯುನಿಸಿಪಾಲಿಟಿಯವರು ಬಂದು ಇದರ ಹೆಣ ಹೊರುವವರಿಗೆ ಈ ರಸ್ತೆ ಬಂದಾದಂತೆಯೇ ..."

"ಅಡ್ಡಿಯಿಲ್ಲ, ರಸ್ತೆಯ ಮೇಲೆ ಬಿತ್ತು ಯಾರು ಇಲ್ಲದಾಗಲೇ ......"

"ಹೀಗೆ ರಸ್ತೆಯ ಮೇಲೇ ಬಿದ್ದು ಇಷ್ಟೆಲ್ಲ ಜನರಿಗೆ ತೊಂದರೆ ಕೊಡುವುದಕ್ಕಿಂತ ಆ ಬದಿಗೆ ಇಷ್ಟೊಂದು ದೊಡ್ಡ ಆಟದ ಬಯಲು- ಅಲ್ಲಿ ಬಿದ್ದು ಸತ್ತರೆ ಇದರ ಅಪ್ಪನ ಗಂಟು ತೀರುತ್ತಿತ್ತೇ ...... "೧ ಎಂಬ ಜನರ ವಿಚಿತ್ರ ಮಾತುಗಳನ್ನು ಗಮನಿಸಿದಾಗ ಸಮಾಜದಲ್ಲಿನ ವಿವಿಧ ಮನಃಸ್ಥಿತಿಗಳ ಅರಿವಾಗುತ್ತದೆ. ಈ ವಿಚಿತ್ರ ಮಾತುಗಳ ಹಿನ್ನೆಲೆಯಲ್ಲಿ ಆ ಮರವನ್ನು ನೋಡುತ್ತಿದ್ದಂತೆ ಸುರೇಶನ ಮನ ಒಂದು ಬಗೆಯ ಕಳವಳದಿಂದ, ದುಃಖದಿಂದ, ಸಹಾನುಭೂತಿಯಿಂದ ತುಂಬಿ ಬಂತು. ಇದನ್ನು ಗಮನಿಸಿದಾಗ ಸುರೇಶನ ಸೂಕ್ಷ್ಮ ಮನಃಸ್ಥಿತಿಯನ್ನು ಅರಿಯಬಹುದು.

ಸುರೇಶ ನಿರ್ಮಲೆಯ ಅಂತರ್ಜಾತೀಯ ವಿವಾಹವು ಆಕೆಗೆ ತಿಳಿಯ ಕೂಡದು, ಸಾಯುವ ಮೊದಲೇಕೆ ಅವಳ ಮನಸ್ಸನ್ನು ನೋಯಿಸಬೇಕು? ಎಂದು ನಿರ್ಮಲೆಯ ಅಜ್ಜಿಯು ಸಾಯುವ ತನಕ ಅವರ ಮದುವೆ ನೆರವೇರದು. ಆದರಿಲ್ಲಿ ಸುರೇಶನಿಗೆ ಮುದಿಜೀವ ಸಾಯುತ್ತದೆಂದರೆ ಮನ ನೋಯುತ್ತದೆ, ಪ್ಲಾಟ್‌ಫಾರ್ಮನಲ್ಲಿ ಸತ್ತ ಮುದುಕ ತನ್ನ ಮನೆಯ ಎದುರು ಸತ್ತ ಮುದಿಮರ, ನಿರ್ಮಲೆಯ ಅಜ್ಜಿ ಸತ್ತ ನಂತರ ಮದುವೆ ಎಂದರೆ ಆತನ ಜೀವ ತಲ್ಲಣಿಸುತ್ತದೆ. ಸುರೇಶನ ಗೆಳೆಯ ಮಧು ಹಿಂದೊಮ್ಮೆ ಹೇಳಿದಂತೆ ಮುದುಕರ ಸಾವಿಗೆ ತನ್ನಿಂದ ಆಗುವ ಈ ಪ್ರತಿಕ್ರಿಯೆಗಳಲ್ಲಿ ಅನಾರೋಗ್ಯದ ಛಾಯೆ ಇದೆಯೇ?...........ಎಂಬಂತೆ ಅವನ ಮನ ಕಾತರಗೊಳ್ಳುತ್ತದೆ. ಸುರೇಶನಿಗೆ ಕನಸಿನಲ್ಲಿ ಮುದುಕನ ಮುಖ ಮತ್ತು ಪಾದಗಳ ನೆನಪು ಪದೇ-ಪದೇ ಬೀಳುತ್ತಿದ್ದುದನ್ನು ಮಧು ಎಂಬ ಸ್ನೇಹಿತನಿಗೆ ಹೇಳಿದಾಗ ಮಧು ನಿನ್ನ ತಂದೆಯಾದರು ಬಹಳ ದುಷ್ಟರಿದ್ದರೇ? ಎಂದು ಕೇಳಲಾಗಿ ಸುರೇಶ ಮಧುವಿಗೆ ಜೀರುತ್ತಾನೆ ಮಧು. ನನ್ನ ಮಾತಿನಿಂದ ನಿನಗೆ ನೋವಾದರೆ ನನ್ನನ್ನು ಕ್ಷಮಿಸು, ನಾನೇನು ದೊಡ್ಡ ಮನೋವಿಜ್ಞಾನಿಯಲ್ಲ. ಆದರೆ ಇಷ್ಟಂತು ನಿಜ: ನೀನು ಈಗ ಹೇಳಿದ್ದೆಲ್ಲವನ್ನು ಕೇಳಿದರೆ ಮುದುಕರ ಸಾವಿಗೆ ನಿನ್ನಿಂದ ಆಗುವ ಈ ಅತಿರೇಕದ, ಅವಿವೇಕದ ಪ್ರತಿಕ್ರಿಯೆಗಳಲ್ಲಿ ಅಷ್ಟೇ ಏಕೆ, ಬರಿಯ ಆಟಕ್ಕೆಂದು ಹೇಳಿದ ನನ್ನ ಇಂದಿನ ಸಣ್ಣ ಮಾತಿನಿಂದ ಕೂಡ ನಿನಗಾದ ನೋವಿನಲ್ಲಿ ನಿಶ್ಚಿಯವಾಗಿ ಅನಾರೋಗ್ಯದ ದಟ್ಟ ಛಾಯೆ ಇದೆ ......"೧ ಎಂದಿದ್ದನ್ನು ಇಲ್ಲಿ ಗಮನಿಸಬೇಕು.

ತನಗೆ ಕನಸಿನಲ್ಲಿ ಬರುತ್ತಿದ್ದ ಮುದುಕನ ಮುಖ ಮತ್ತು ಪಾದಗಳೆರಡೂ ತನ್ನ ತಂದೆಯವು ತನ್ನ ತಂದೆಯನ್ನು ಸುಖವಾಗಿ ನೋಡಿಕೊಳ್ಳುವ ಆಸೆಯಿಂದ ಕೆಲಸ ಸೇರಿದ ನಂತರ ಕರೆಸಿಕೊಳ್ಳುವ ವೇಳೆಗೆ ತಂದೆ ಸತ್ತ ಸುದ್ದಿ ಬಂದು, ತಾನು ತಲುಪುವ ವೇಳೆಗೆ ತಂದೆಯ ದೇಹ ರುದ್ರಭೂಮಿಯಲ್ಲಿ ಕಟ್ಟಿಗೆಯ ಮೇಲಿರುತ್ತದೆ. ೨" ಕಟ್ಟಿಗೆಯಿಂದ ಹೊರಬಿದ್ದ ಹೆಣದ ರಕ್ತಹೀನ ಬೆಳ್ಳಗಿನ ಪಾದಗಳು ! ಅಪ್ಪನ ಪಾದಗಳು ! ತನ್ನ ಸುಖಕ್ಕಾಗಿ ಅವಲಕ್ಕಿ, ಚುರಮುರಿಯ ಮೊಟ್ಟೆಯನ್ನು ಹೊತ್ತು ತಿರುಗಿದ ಅಪ್ಪನ ಪಾದಗಳು- ಆ ಚಿಕ್ಕ ಪಾದಗಳು ......" ೨ ತನ್ನನ್ನು ಮೇಲೆ ತರಲು ತನ್ನ ತಂದೆಯು ಮಾಡಿದ ತ್ಯಾಗದ ಅರಿವು ಆ ಬಗೆಗಿನ ಕೃತಜ್ಞತಾ ಭಾವವಿರುವುದು ಇಲ್ಲಿ ಅರಿವಿಗೆ ಬರುತ್ತದೆ. ಸುರೇಶನ ಜೀವನದಲ್ಲಿ ನಡೆದ ಅಂದಿನ ಆ ಘಟನೆ ಯಾವ ಮುದಿ ಜೀವದ ಸಾವಿನಲ್ಲೂ ಅಪ್ಪನ ಸಾವನ್ನೇ ಕಂಡು ಅಳುವಷ್ಟು ಸೂಕ್ಷ್ಮಗೊಂಡಿತ್ತು ಆತನ ಹೃದಯ.

---

೧. ಯಶವಂತಚಿತ್ತಾಲ : ಐವತ್ತೊಂದು ಕತೆಗಳು: ಪುಟ ೧೨೦ ೨. ಅದೇ ಪುಟ-೧೨೫

ತನ್ನ ಹಾಗೂ ನಿರ್ಮಲೆಯ ಲಗ್ನ ತಾನು ಈವರೆಗೂ ಕಂಡಿರದ ಯಾವಳೋ ಒಬ್ಬ ಹಣ್ಣು-ಹಣ್ಣು ಮುದುಕಿಯ ಸಾವಿನ ಮೇಲೆ ಅವಲಂಭಿಸಿದೆ ಎಂಬ ಮಾತು ತಿಳಿದ ದಿನವೇ ಸುರೇಶ ಅಸ್ಪಷ್ಟವಾದ ಕಳವಳದ ಭಾವನೆಗೆ ಒಳಗಾಗಿದ್ದ. ಆದರೆ ಸುರೇಶನಿಗೆ ಬಂದ ತಂತಿಯನ್ನು ಒಡೆದು ನೋಡಿದಾಗ

೧ " ಅಜ್ಜಿ ತೀರಿಕೊಂಡಳು? "

" ತೀ ರಿ-ಕೊಂ – ಡ-ಳು ?? "೧ ಎಂಬ ಸುದ್ದಿಯನ್ನು ನೋಡುತ್ತಿರುವಾಗಲೇ ಏನೋ ಆನಂದದ ಸುದ್ದಿಯೆಂಬಂತೆ ಜೀವ ಹರುಷಗೊಂಡಿತ್ತು. ಅಯ್ಯೋ ಇದು ಹೀಗೇಕೆ ? ......ಏಕೆ? ತಾನು ಅಷ್ಟೊಂದು ಅಸಂಸ್ಕೃತನೇ? ದುಷ್ಟನೇ? ಎಂದು ಸುರೇಶ ಹಳಹಳಿಸಿದ ತಂದೆಯ ಸಾವನ್ನೇ ಬಯಸಿದನೋ ಎನ್ನುವಷ್ಟು, ನೋವಿನಿಂದ ಪರಿತಪಿಸಿದ ಮರುಕ್ಷಣ, ನಿಂತಲ್ಲೇ ತಾನು ಈವರೆಗೆ ಕಂಡಿರದ ಈತ ಕಣ್ಮರೆಯಾದ ಆ ಹಿರಿಜೀವವನ್ನು ನನೆದ ತನ್ನ ತಪ್ಪನ್ನು ಒಪ್ಪಿಕೊಂಡ ಕ್ಷಮೆ ಬೇಡಿದ ಅವಳ ಆತ್ಮಕ್ಕೆ ಶಾಂತಿ ಕೋರಿದ.

ಅಜ್ಜಿ ತೀರಿಕೊಂಡಾಗ ಮನಸ್ಸು ಉಲ್ಲಸಿತವಾಗಲು ಕಾರಣ ಆತನ ಮನದ ಆಳದಲ್ಲಿ ಗೌಪ್ಯವಾಗಿದ್ದ ಮದುವೆಯ ಆಕೆಯು ನೆರವೇರುತ್ತದೆಂಬ ಖುಷಿಯು ಇತ್ತು. ಇಲ್ಲಿ ಸಾಮಾನ್ಯ ಮನುಷ್ಯ ಆಸೆಯಲ್ಲಿ ಸುಖಿಸುವಂತೆ ಸುರೇಶ ಕಾಣುತ್ತಾನೆ. ಅಂತಿಮವಾಗಿ ಮುಕ್ತಿ ಒಂದು ಮರವೆಲ್ಲ ಹೊತ್ತುಕೊಂಡು ಹೋದ ನಂತರ ದಾರಿ ಸುಗಮವಾಯಿತು ಎಂದು ಹೇಳಿಸುವಾಗ ಲೇಖಕರು ಜಾಣ್ಮೆ ಮರೆದಿದ್ದಾರೆ. ಅಜ್ಜಿಯು ಸತ್ತ ನಂತರ ಮದುವೆಯು ಸಾರಗವಾಯಿತು ಎಂಬ ಮಾತನ್ನು ಆ ಮಾತಿನಲ್ಲಿ ಹುದುಗಿನೆಟ್ಟಿರುವುದು ಕಾಣಸಿಗುತ್ತದೆ.

ಖಾಲಿ ಕೋಣೆ : ಕತೆಯನ್ನು ನೋಡುವುದಾದರೆ ಇಲ್ಲಿನ ಕೇಂದ್ರ ಪಾತ್ರ ನಿರ್ಮಲೆ ಈಕೆ ತನ್ನ ಅಕ್ಕ ಸುಶೀಲೆಯ ಮನೆಗೆಂದು ಮುಂಬಯಿಗೆ ಬಂದವಳು ಆಕೆಯು ರಸ್ತೆಯ ಬದಿಯ ದೊಡ್ಡ ಕಿಟಕಿಯ ಹತ್ತಿರ ಖುರ್ಚಿಯಲ್ಲಿ ಕುಳಿತು ಭಾವ ಸಮಾಧಿಯಲ್ಲಿ ಮುಳುಗಿದ ನಿರ್ಮಿಲೆ ಹಗಲು-ಗನಸು ಕಣುವವಳು. ಆಕೆಯ ಹಗಲು-ಗನಸಿನಲ್ಲಿ ಅನಂತು ಬಂದಿದ್ದ ಆಕೆಯು ಮುಂದಿನ ಕಟ್ಟಡಗಳಲ್ಲಿಯ ಪಾರಿವಾಳದ ಗೂಡುಗಳಲ್ಲೂ ಏನನ್ನೋ-ಯಾರನ್ನೋ ಅರಸುತ್ತಾಳೆ.

ಪಕ್ಕದ ಖಾಲಿಕೋಣೆಗೆ ಅನಂತ ಎಂಬ ಯುವಕ ಅದೂ ಮನ್ಮಥ ರೂಪಿನಂತ ಯುವಕ ಬರುತ್ತಾನೆಂದು ತಿಳಿದ ನಂತರ ಮೂರೇ ದಿನಗಳಲ್ಲಿ ಆತ ತನ್ನ ಸುತ್ತ ಎಂಬಂತೆ ಕನಡು ಕಾಣುವ ಆಕೆಯ ಕಂಗಳಲ್ಲಿ ಆಕೆಯ ಮನಸ್ಸಿನಲ್ಲಿ ಆಕೆಯ ವಯಸ್ಸು ಕೆಲಸ ಮಾಡಿರುತ್ತದೆ.

ನಿರ್ಮಲೆಯ ಸ್ನೇಹಿತೆ ಕುಮುದ ೨" ನಿಮ್ಮ ಬದಿಯ ಖಾಲಿಕೋಣೆ ಇಲ್ಲವೆ? ಅಲ್ಲಿ ನಿಲ್ಲಲು ....."೨ ಎಂದಾಗ ನಿರ್ಮಲೆಯ ಕುತೂಹಲ ಅಷ್ಟಿಷ್ಟಲ್ಲ ನಿನಗೂ ಆ ವಿಚಾರ ತಿಳಿದಿದೆಯೇ? ಎಂಬ ಕುಮುದಳ ಪ್ರಶ್ನೆಗೆ ೩ " ನನ್ನ ಅನಂತನ ಬಗ್ಗೆ ನನಗಲ್ಲದೇ ಇನ್ನಾರಿಗೆ ಗೊತ್ತಾದೀತೆ? ಹುಚ್ಚೀ ! ಆದರೆ ಇದೆಲ್ಲದರ ಬಗ್ಗೆ ನಿನಗೇನು ಗೊತ್ತೇ? ನಿನಗೆ ಹೇಗೆ ಗೊತ್ತೆ? ಹೇಳೇ ಹೇಳೇ - ಹಾಗೇನು ಮಿಕ ಮಿಕ ನೋಡುತ್ತೀಯೇ? .... "೩ ಎಂಬಂತೆ ಒಂದರ ಹಿಂದೊಂದು ಮೂಕ ಪ್ರಶ್ನೆಗಳು ನಿರ್ಮಲೆಯ ಮುಖದಲ್ಲಿ ಮಿಂಚಿ ಮಾಯವಾಗಿ ನಿನಗೇನು ಗೊತ್ತಿಲ್ಲವೆಂದು ಮೌಖಿಕವಾಗಿ ನುಡಿಯುತ್ತಾಳೆ. ಆದರೆ ಆಕೆಯು ಮೂರು ದಿನಗಳಲ್ಲಿ ಆತನನ್ನು ಕಂಡಿಲ್ಲ ಆದರೂ ಆತನನ್ನು ತನಗರಿವಿಲ್ಲದಂತೆಯೇ ಪ್ರೇಮಿಸುತ್ತಿದ್ದಾಳೆ. ಅದಕ್ಕೆ ಕಾರಣ ಅವಳ ವಯಸ್ಸು ಮತ್ತು ಮನಃಸ್ಥಿತಿಯೂ ಹೌದೆಂದರೆ ತಪ್ಪಾಗಲಾರದು.

೧. ಯಶವಂತ ಚಿತ್ತಾಲ : ಐವತ್ತೊಂದು ಕತೆಗಳು: : ಪುಟ ೧೨೯ ೨. ಅದೇ ಪುಟ ೧೨೮೩. ೩. ಅದೇ ಪುಟ ೧೨೮

ಕುಮುದಳು ಮುಂದುವರೆದು ಆತನಿಗೆ ಖಾಯಿಲೆಯ ನಿಮಿತ್ತ ಇಲ್ಲಿಗೆ ಕರೆತರುವವರಿದ್ದರು. ಆದರೆ ಆಕೆ ತೀರಿಕೊಂಡ ಎಂದು ಹೇಳಿದ ತಕ್ಷಣ ನಿರ್ಮಲೆಯ ಜಗತ್ತಿನಲ್ಲಿ ಬೆಳಕಿಗೆ ಅರ್ಥವಿಲ್ಲದಂತಾಗುತ್ತದೆ. ಆತನನ್ನು ನೋಡದೆಯೇ ಅವನು ತನ್ನವನೇ ಎಂದು ಪ್ರೀತಿಸುವ ಮುಗ್ಧ ಹುಡುಗಿ ನಿರ್ಮಲೆಯ ಮನಸ್ಸು ಕೂಡ ನಿರ್ಮಲವೇ ಹಾಗಾಗಿಯೇ ಆತ ತೀರಿಕೊಂಡ ಸುದ್ದಿ ತಿಳಿದ ನಂತರದ ನಿರ್ಮಲೆಯನ್ನು ಕುಮುದ ಅನಂತು ನಿಮ್ಮ ಸಂಬಂಧಕನೇ? ಎಂದು ಪ್ರಶ್ನಿಸಲು ನಿರ್ಮಲೆಯು ಹೌದೆಂದು ತಲೆಯಾಡಿಸುತ್ತಾಳೆ. ಅಲ್ಲಿ ಆಕೆಯ ದುಃಖಕ್ಕೆ ಕಾರಣವೇನೆಂದು ಕುಮುದ ಪ್ರಶ್ನಿಸುವಳೆಂದು ಅದಕ್ಕೆ ಉತ್ತರ ನೀಡಿದ್ದಾಳೆ. ಜೊತೆಗೆ ಆತ ತನ್ನವನ್ನೇ ಎಂದು ಭ್ರಮಿಸಿದ್ದ ನಿರ್ಮಲೆಗೆ ಆತನ ದುರಂತತೆ ಕೇಳಿ ಸಹಿಸಲಾಗದಷ್ಟು ಸಹಜ ಮನಃಸ್ಥಿತಿ ಆಕೆಯದು.

ಮೂರು ದಿನಗಳ ಹಿಂದೆ ತಾನು ಅನಂತನ ವಿಷಯವಾಗಿ ಕೇಳಿದ ಮಾತುಗಳ ಸಂದರ್ಭ ಈಗ ತಿಳಿದಿತ್ತು. ಕುಮುದಳ ಮನೆಯವರಿಂದ ಅನಂತನ ಬೇನೆಯ ಕತೆಯನ್ನು ಕೇಳಿದ ಹೆಂಗಸೊಬ್ಬಳು ಇನ್ನೊಬ್ಬಳಿಗೆ ಅದನ್ನು ವಿವರಿಸಬೇಕು. ಕಳೆದ ಹದಿನೈದು ದಿನಗಳಿಂದ ಖಾಲಿಕೋಣೆ ತನ್ನಲ್ಲಿ ಕಲ್ಪನೆಗಳ ಅಮಲಿನಲ್ಲೇ ಇದ್ದ ತಾನು ಮಾತ್ರ ಬಿಟ್ಟು-ಬಿಟ್ಟು ಕೇಳಿದ ಆ ಮಾತುಗಳಲ್ಲಿ ತನಗೆ ಪ್ರಿಯವಾದ ಸಂದೇಶವನ್ನು ಓದಿರಬೇಕೆಂದು ತಾನೆ ನಗಲು ಯತ್ನಿಸುವ ಆಕೆಯ ವೇದನೆ ಅತೀವವೇ ಸರಿ. ಆಕೆಯು ನಗಲು ಯತ್ನಿಸಿದಷ್ಟು ಅವಳ ಕಣ್ಣುಗಳಲ್ಲಿ ನೀರೇ ಉಕ್ಕಿ-ಬರುತ್ತಿತ್ತು.

೧ "ಅನಂತನ ಸಾವಿನಿಂದ ತನ್ನ ಕಣ್ಣುಗಳಲ್ಲಿ ಇದೇಕೆ ನೀರು?
ಅನಂತನಿಗೂ ತನಗೂ ಸಂಬಂಧವೇ? ಏನು ಸಂಬಂಧ?
ಅನಂತ ನಿಜಕ್ಕೂ ಸತ್ತನೇ? ತನ್ನ ಮನ್ಮಥನಂಥ ಅನಂತ?
ತನ್ನ ಮನಸ್ಸಿನ ಗರ್ಭದಲ್ಲಿ ಹುಟ್ಟಿ ತನ್ನ ಅಂಗಾಂಗಗಳನ್ನು ವ್ಯಾಪಿಸಿ ಈಗ ತನ್ನನ್ನು ಮೀರಿ ನಿಂತ ಈ ಅನಂಗ ಅನಂತನು ಸಾಯುವುದು ಶಕ್ಯವೇ?"೧ ಎಂಬಲ್ಲೇ ಪ್ರಶ್ನೆಗಳಿಗೆ ಅವಳ ಬಳಿಯಲ್ಲಿಯೇ ಉತ್ತರವಿರಲಿಲ್ಲ. ಆಕೆಗೆ ತನ್ನ ಕಂಬನಿಯ ಅರ್ಥ ತನಗೇ ಆಗಲಿಲ್ಲ. ಆದರೆ ಕ್ಷಣ ಕ್ಷಣಕ್ಕೆ ಅವಳ ಕಂಬನಿ ಮಾತ್ರ ಹೆಚ್ಚುತ್ತಲಿತ್ತು. ಕಾರಣ ಅವಳಿಗೇ ಅರಿವಿಲ್ಲದಂತೆ ಅನಂತುವಿನೊಡನೆ ಅವಳಿಗೆ ಮಾನಸಿಕ ಸಂಬಂಧವೊಂದು ಗಟ್ಟಿಯಾಗಿತ್ತು. ಇತ್ತ ಕೊನೆಗೂ ಖಾಲಿಯಾಗಿಯೇ ಉಳಿದ ಆ ಬದಿಯ ಕೋಣೆ ಇದೆಲ್ಲವನ್ನೂ ನೋಡಿಯೂ ನೋಡದಂತೆ, ಇದಕ್ಕೂ ತನಗೂ ಸಂಬಂಧವೇ ಇಲ್ಲವೆಂಬಂತೆ ನಿರ್ವಿಕಾರವಾಗಿ ನಿಂತುಕೊಂಡಿತ್ತು. ಈ ಕತೆಯಲ್ಲಿ ನಿರ್ಮಲೆಯ ಮಾನಸಿಕ ಸಂಬಂಧ ಕಾಣದ ಅನಂತುವಿನೊಡನೆ ಭದ್ರವಾಗಿದ್ದು ಅತಿರೇಕವಾದರೂ ಆ ವಯಸ್ಸಿನ ಮನಃಸ್ಥಿತಿಗೆ ಸಹಜವೇ ಸರಿ.

ಅಪರಿಚಿತರು: ಕತೆಯನ್ನು ನೋಡುವುದಾದರೆ ರಾಮಕೃಷ್ಣ ಜಾನಕಿಯರು ತುಂಬ ಹಿತವಾದ ಜೀವನ ಸಾಗಿಸುತ್ತಲಿದ್ದವರು. ಇಬ್ಬರೂ ನೌಕರಿಗೆ ಹೋಗುವರಾದ್ದರಿಂದ ಅತೀವ ಕಿರಿ-ಕಿರಿ ಉಳಿದ ರಜಾ ದಿನಗಳಲ್ಲೂ ಅನಪೇಕ್ಷಿತರ ಆಗಮನದಿಂದ ಅವರು ಸತ್ಕಾರಕ್ಕಾಗಿಯೇ ರಜಾದಿನಗಳನ್ನು ಕಳೆದು ನೊಂದವರು ರಾಮಕೃಷ್ಣ ಜಾನಕಿ ಪಾತ್ರಗಳು ಗಂಡ ಹೆಂಡಿರಿಬ್ಬರೂ ಹೊರಗೆ ದುಡಿಯುವವರ ಸಮಸ್ಯೆಗಳನ್ನು ಎತ್ತಿತೋರಿಸುವ ಪ್ರತಿನಿಧಿತ್ವದ ಪಾತ್ರಗಳು.

ಒಟ್ಟಿಗೇ ಸಿಕ್ಕ ನಿರಂತರ ಮೂರುದಿನಗಳ ರಜೆಯನ್ನು ಆನಂದವಾಗಿ ಕಳೆಯುವ ಆ ಯುವ ಜೋಡಿಯ ಆಸೆಯು ಸಹಜವೇ ಸರಿ. ಹಾಗಾಗಿ ಆ ರಜೆಯ ದಿನದ ಆರಂಭದಲ್ಲಿ ರಸ್ತೆಯ ಒಂದು ಭಾಗವನ್ನು ಸರಿಮಾಡಲು ಬಂದ ಸ್ಟೀಮರೋಲರದ ಗದ್ದಲವೂ ಅವರಿಗೆ ಹಿತವೆನಿಸಿತು.

೧. ಯಶವಂತ ಚಿತ್ತಾಲ : ಐವತ್ತೊಂದು ಕತೆಗಳು: : ಪುಟ ೧೪೦

ಆದರೆ ಜಾನಕಿಯು

೧ "ಅವರು ನಮ್ಮಲ್ಲೇ ಬರುತ್ತಿದ್ದಾರೆ"

" ಅದೋ ! ಅವರಿಗೆ ಕಾಣುತ್ತಾರೆ"೧ ಎಂದು ಅತಿಥಿಗಳು ಅಂದೂ ಬರಲಿರುವುದರ ಮುನ್ಸೂಚನೆಯನ್ನು ಕೊಡುತ್ತಾಳೆ. ಆದರೆ ರಾಮಕೃಷ್ಣ ಇಲ್ಲವೆಂಬಂತೆ ನಿರಾಕರಿಸುತ್ತಾನೆ. ಆದರೆ ಆಕೆಯ ಊಹೆಯು ಸತ್ಯವೇ ಆಗುತ್ತದೆ.

೨ "ಆದಾಗ ಕೆಳಗೆ ಕಾಂಪೌಡಿನ ಗೇಟು ತೆರೆದ ಸದ್ದು ಕೇಳಿ ಬಂದು ಅದರ ಹಿಂದೆಯೇ ಯಾರೋ, ಸಾವಿತ್ರೀ ಸದನ ಇದುವೇನೆ? ಎಂದು ಕೇಳಿದ್ದು ಕೇಳಿಸಿತು. ಸ್ಫುಟವಾದ ಗಂಡು ದನಿಯ ಪ್ರಶ್ನೆ ಮರುಕ್ಷಣ ಮೇಲೆ ಹೋಗುವ ದಾರಿಯೆಲ್ಲಿ? ಎಂಬ ಹೆಣ್ಣುದನಿಯ ಪ್ರಶ್ನೆ ಕೇಳಿಸಿತು. ಇನ್ನು ಕ್ಷಣಕಾಲ ಬಿಟ್ಟು ಮಾಳಿಗೆಯ ಮೆಟ್ಟಿಲುಗಳ ಮೇಲೆ ಸ್ಪಷ್ಟವಾದ ಹೆಜ್ಜೆಗಳು...... ಖಟ್, ಖಟ್, ಖಟ್ ಎಂದು ಮೇಲೆ ಬರುತ್ತಿದ್ದವು. ಜಾನಕಿ ಕಿವಿ ನಿಗುರಿಸಿ ಶ್ವಾಸೋಛ್ಛಾಸ ನಿಲ್ಲಿಸಿ ಕೇಳುತ್ತಿದ್ದಳು. ಒಳ ಮನಸ್ಸಿನಲ್ಲೇ ಅವರು ಏರಿಬಂದ ಮೆಟ್ಟಿಲುಗಳನ್ನು ಎಣಿಸುತ್ತಿದ್ದಳು. ಎಣಿಸುತ್ತಿದ್ದಂತೇ ಅವಳ ಮೋರೆ ವಿವರ್ಣವಾಗತೊಡಗಿತು. ಭೀತಿ, ಕಾತರಗಳು ಮೊತ್ತವಾಗಿ ಮೂಡಿದ ಕಂಗಳೆಡರೂ ಕೋಣೆ ಕದದ ಮೇಲೆ ಊರಿದ್ದವು."೨ ಎಂಬ ಅವರ ಚಲನ-ವಲನ ವೀಕ್ಷಣೆಯಲ್ಲಿ ಮತ್ತೆ ಯಾರಾದರೂ ಬಂದಾರೆಂಬ ನೋವು, ಯಾತನೆ ಇದ್ದಿದ್ದನ್ನು ಕಾಣಬಹುದು.

೩"ಚಿತ್ತಾಲರ ಇನ್ನಿತರ ಕತೆಗಳಂತೆಯೇ ಅಪರಿಚಿತರು ವಿನಲ್ಲಿ ಕೂಡ ಮನೋವೈಜ್ಞಾನಿಕ ಸಿದ್ಧಾಂತಗಳ ಪ್ರಭಾವವಿರುವುದು ಸ್ಪಷ್ಟವಿದೆ. ಈ ದೃಷ್ಟಿಯಿಂದ ನೋಡಿದಾಗ ಕಥಾನಾಯಕ ರಾಮಕೃಷ್ಣ ಹಲವು ದಿನಗಳಿಂದ ಸತತವಾಗಿ ನಡೆಸಬೇಕಾಗಿ ಬಂದ ಅತಿಥಿ ಸತ್ಕಾರದಿಂದ ರೋಸಿಹೋಗಿ, ನಿರ್ವಿಣ್ಣನಾಗಿ ಅಪರಿಚಿತರ ಎದುರಿಗೆ ಅಸಹಾಯಕನೂ ಅವರ ಆಜ್ಞಾನುಸಾರ ವರ್ತಿಸುವವನೂ ಆಗುತ್ತಾನೆ. ಅಂತರಂಗದಲ್ಲೇ ಕುದಿಯುತ್ತ ಷಂಡ ಕೋಪವನ್ನು ಅನುಭವಿಸುತ್ತಾನೆ. ಅಂದು ರಾತ್ರಿ ಚೆನ್ನಾಗಿದ್ದೆ ಮಾಡಿ ಎದ್ದು, ಹೆಂಡತಿಯ ಮುದ್ದು ಮುಖವನ್ನು ಚುಂಬಿಸಿ ಉಲ್ಲಸಿತನಾದ ಮೇಲೆ ಬಾಲ್ಕನಿಗೆ ಬಂದು ನಿಂತಾಗ, ಹಿಂದಿನ ದಿನವೇ ನೆನಪು ಬಂದರೂ ಈಗ ಮೊದಲಿನಂತೆ ದಿಗಿಲುಗೊಳ್ಳುವುದಿಲ್ಲ. ಬೀದಿಯ ಕಡೆಗೆ ನೋಡುತ್ತ ನಿಂತಾಗ ಅಲ್ಲಿ ಕಾಣುವ ಸ್ಟೀಮ್ ರೋಲರ್, ತಾನು ಈವರೆಗೆ ಅನುಭವಿಸಿದ ಕೆಂಗನಸುಗಳಿಗೆ ಒಂದು ಸಂಕೇತವಾಗುತ್ತದೆ. ಆದ್ದರಿಂದಲೇ ಸ್ಟೀಮ್‌ರೋಲರ್‌ಗೆ ಪ್ರತಿರೋಧವನ್ನೊಡ್ಡಲು ಯತ್ನಿಸಿದರೂ ಅದರ ಕೆಳಗೆ ಸಿಕ್ಕಿ ನುಜ್ಜು-ಗುಜ್ಜಾಗುವ ಕಲ್ಲಿನ ಬಗೆಗೆ ಅವನಿಗೆ ಸಹಾನುಭೂತಿಯಿದೆ. ಹೀಗೆ ತನ್ನ ಸುಪ್ತಚಿತ್ತದ ಒತ್ತಡಗಳನ್ನು, ಸಂಕೇತಗಳ ರೂಪದಲ್ಲಿ ಹೊರಗೆ ತಂದುಕೊಂಡು ವಿಶ್ಲೇಷಿಸುವಿಕೆ ಒಂದು ರೀತಿಯ ಮಾನಸಿಕ ಚಿಕಿತ್ಸೆಯೂ ಹೌದು. ಇದು ಎರಿಕ್ ಬರ್ನ್ ಮತ್ತು ಫ್ರೆಡ್ರಿಕ್ ಪರ್ಲ್ಸ್‌ರವರು ಪ್ರತಿಪಾದಿಸುವ ವರ್ತನಾಚಿಕಿತ್ಸೆಗೆ ಅನುಗುಣವಾಗಿದೆ.

ಮಾರುತಿ ಶಾನುಭಾಗ ಅವರು ಈ ಕಥೆಯ ಬಗ್ಗೆ ಬರೆಯುತ್ತ ಅಪರಿಚಿತರು ಕತೆಯಿಂದ ಕರಗತ ಮಾಡಿಕೊಂಡ ತಂತ್ರ ಚಿತ್ತಾಲರನ್ನು ಶಿಖರಕ್ಕೇರುವಂತೆ ಮಾಡುತ್ತದೆ. ಈ ಕಥೆ ಅಡ್ಡಬಿದ್ದ ಮರದಂತೆ ಮನೋವಿಶ್ಲೇಷಣಾತ್ಮಕ ಚಿಕಿತ್ಸೆಯ ಮಾದರಿಯೊಂದನ್ನು ಸಾಹಿತ್ಯದಲ್ಲಿ ಪಡಿನುಡಿಸುವ ಪುಸ್ತಕೀಯ ಬರಹವಲ್ಲ. ಅನುಭವನ ಅನನ್ಯತೆಯನ್ನು ಸೆರೆ ಹಿಡಿಯುವ ಕಳಕಳಿಯಲ್ಲಿ ಶಬ್ಧಮಾಧ್ಯಮವನ್ನು ಹೂಡಿ, ಬರಹದ ಅರ್ಥವಂತಿಕೆಯನ್ನು ಒಂದು ಸೀಮೆಯಿಂದ ಇನ್ನೊಂದು ಎತ್ತರಕ್ಕೆ ತೂರಿಬಿಡುವ ಒಂದು ಅತ್ಯಂತ ಗಮನಾರ್ಹವಾದ ಉದಾಹರಣೆಯಾಗಿದೆ ಎಂದಿದ್ದಾರೆ."೩

೧. ಯಶವಂತ ಚಿತ್ತಾಲ : ಐವತ್ತೊಂದು ಕತೆಗಳು: : ಪುಟ ೧೪೨ ೨. ಆದೇ ಪುಟ-೧೪೩

೩. ಯಶವಂತ ಚಿತ್ತಾಲ : ಡಾ॥ಕೆ.ಎಲ್.ಗೋಪಾಲಕೃಷ್ಣಯ್ಯ: ಸಂ: ಪ್ರಧಾನ್ ಗುರುದತ್ತ ಪುಟ-೪೧

ಚಿತ್ತಾಲರೇ ಮುನ್ನುಡಿಯಲ್ಲಿ ೧"ನನ್ನ ಕತೆಗಳ ಆರಂಭದ ದಿನಗಳಲ್ಲಿ ಮಾಸ್ತಿ ಕಾರಂತ ಹಾಗೂ ಪುಟ್ಟಪ್ಪ ಅವರ ಗಾಢ ಪ್ರಭಾವಕ್ಕೆ ಒಳಗಾಗಿಯೇ ಬರೆದನಾದರೂ ಅಪರಿಚಿತರು ಕತೆ ಬರೆಯುವ ಹೊತ್ತಿಗೆ ಅನೇಕ ಪಾಶ್ಚಾತ್ಯ ಕತೆಗಾರರ, ಕಾದಂಬರಿಕಾರರ ಕೃತಿಗಳ ಪರಿಚಯ ನನಗಾಗಲೇ ಆಗಿತ್ತು. ಅವರಲ್ಲಿ ಮೋಪಾಸಾ, ಜೆಕಾಬ್ ಹೆಮ್ಮಿಂಗ್‌ವೇ, ಸ್ಟೀಫಾನ್‌ಝ್ವೈಂಗ್, ಸ್ಟ್ಯಾನ್‌ಬೆಕ್, ದಾಸ್ತಾವ್ಸ್ಕೀ, ಇವರು ಮುಖ್ಯ. ಕಾಫ್ಕಾ ಕಮೂರನ್ನು ಓದಿಕೊಂಡದ್ದು ಅಪರಿಚಿತರು ಕತೆ ಬರೆದ ನಂತರವೇ.

ದಾಸ್ತಾವ್ಸ್ಕೀಯ "ಕ್ರ್ಯಾಮ್ ಆಂಡ್ ಪನಿಶ್‌ಮೆಂಟ್" ದ ವಿಚಿತ್ರವಾಗಿ ಗುಂಗು ಹಿಡಿಸುವ, ಸುಲಭವಾಗಿ ಹಿಡಿತ ಸಡಿಲಿಸಿದ ನಿಗೂಢ ವಾತಾವರಣ ಸೃಷ್ಟಿ ಆಗಿನ ದಿನಗಳಲ್ಲಿ ನನ್ನ ಮನಸ್ಸಿನ ಮೇಲೆ ಗಾಢವಾದ ಪರಿಣಾಮ ಮಾಡಿದ ಸಂಗತಿಗಳಲ್ಲೊಂದಾಗಿತ್ತು. ಅಪರಿಚಿತರು ಕತೆಗಳಲ್ಲಿ ಬರುವ ಮಾಳಿಗೆಯ ಮೆಟ್ಟಿಲುಗಳ ಮೇಲೆ ಖಟ್, ಖಟ್, ಖಟ್ ಎಂದು ಕೇಳಿಸುವ ಹೆಜ್ಜೆಗಳ ಸದ್ದು ಹಾಗೂ ಅದರ ಸುತ್ತಲೂ ಬಿಗಿಗೊಳ್ಳುವ ವಾತಾವರಣ ಇವು ಮೇಲೆ ಹೇಳಿದ ಪರಿಣಾಮಕ್ಕೆ ಋಣಿಯಾಗಿದೆಯೆಂಬ ಅನುಮಾನ ನನ್ನದು"೧. ಎಂದಿದ್ದಾರೆ.

ಮಲ್ಲಿನಾಥ: ಕತೆಯನ್ನು ನೋಡುವುದಾದರೆ ಹಳ್ಳಿಯ ಪುರೋಹಿತ ಬ್ರಾಹ್ಮಣ ಉಗ್ಗಾಭಟ್ಟರು ತಮಗೆ ಕನ್ನಡ ಕಥೆಗಳನ್ನು ಅದರಲ್ಲೂ ವಿನೋದಾತ್ಮಕ ಕತೆಗಳನ್ನು ಓದುವುದರಲ್ಲಿ ಅಪಾರ ಅಭಿರುಚಿ ಆಸಕ್ತಿಗಳಿವೆಯೆಂದು ಪಕ್ಕದ ಮನೆಗೆ ಹೊಸದಾಗಿ ಬಂದು ನೆಲೆಸಿದ್ದ ನಿವೃತ್ತ ಕ್ಯಾಪ್ಟನ್ ಗಂಗೊಳ್ಳಿಯವರೊಡನೆ ಜಂಬ ಕೊಚ್ಚಿಕೊಳ್ಳುತ್ತಾರೆ. ಗಂಗೊಳ್ಳಿಯವರು ಗೊರೂರು ರಾಮಸ್ವಾಮಿ ಅಯ್ಯಂಗಾರರ ಪುಸ್ತಕ ಕೊಂಡೊಯ್ಯಲು ಪೂರ್ಣ ಸ್ವಾತಂತ್ರ್ಯ ನೀಡಲಾಗಿ ಅಯ್ಯಂಗಾರ ಎಂದು ಹೆಸರು ಕಂಡೊಡನೆ ಕೊಂಡೊಯ್ದ ಉಗ್ಗಾಭಟ್ಟರು ಎಲ್ಲರ ಆಸಕ್ತಿಯನ್ನು ತನ್ನೆಡೆ ಸೆಳೆಯುವ ಮಲ್ಲಿನಾಥ ಅಂದರೆ ಹೊಗಳುಭಟ್ಟರು.

ಪುಸ್ತಕವನ್ನು ಓದಿ ಗಂಗೊಳ್ಳಿಯವರ ಮನೆಗೆ ಬಂದು ಎಲ್ಲರ ಗಮನ ತನ್ನತ್ತಲೇ ಸೆಳೆಯಲೆಂಬಂತೆ ಬಂದು ೨"ನೀವು ಕೊಟ್ಟ ಪುಸ್ತಕ ಮಾತ್ರ ತುಂಬ ಒಳ್ಳೆಯದು ನೋಡಿರಿ. ಏನು ಶೈಲಿ, ಏನು ಭಾಷೆ! ಏನು ತಾನೆ! ಛೇ ಇನ್ನೂ ಓದಿರಲಿಲ್ಲ ನೋಡಿ, ನಾನು ಅಂತಹ ಕತೆಗಳನ್ನು ನಕ್ಕು-ನಕ್ಕು ಇನ್ನೂ ಹೊಟ್ಟೆ ನೋಯುತ್ತಿದೆ. ಭೇಷ್! ಬರೆದರೆ ಹಾಗೆ ಬರೆಯಬೇಕು"೨ ಎಂದು ಎಲ್ಲರನ್ನು ತಮ್ಮೆಡೆಗೆ ಆಕರ್ಷಿಸಿ ಮನೆಗೆ ಹೊರಟರು.

ಅವರೇ ಹುಬ್ಬುಗಂಟಿಕ್ಕಿ ಓದುತ್ತಿದ್ದರಾದರೂ ಗಂಗೊಳ್ಳಿಯವರ ಮುಂದೆ ಪ್ರಶಂಸೆಗೊಳಗಾಗಬೇಕೆಂಬ ಮನಃಸ್ಥಿತಿ ಆತನದು. ಆ ರಾತ್ರಿ ಗಂಗೊಳ್ಳಿಯವರಿಗೆ ತಾವು ಮೆಚ್ಚಿದ ದೊರೆಸ್ವಾಮಿ ಅಯ್ಯಂಗಾರರು ಭಾಷಾಂತರಿಸಿದ ರಶಿಯನ್ ವಾರ್ ಸ್ಟೋರೀಸ್‌ನ ಕನ್ನಡ ಅನುವಾದವನ್ನು ಮತ್ತೊಮ್ಮೆ ಓದುವ ಆಸೆಯಾಯಿತು. ಹಾಗಾಗಿ ಅದು ಭಟ್ಟರ ಬಳಿ ಇರುವುದನ್ನು ತಿಳಿಸಿ ಅವರಿಂದ ತರಿಸಿ ತಮ್ಮ ಕುತೂಹಲವನ್ನು ತಡೆಯಲಾರದೆ ಅವರು ಹುಡುಕುತ್ತಿದ್ದುದು ಅದರಲ್ಲಿನ ಮೂರನೆ ಕತೆಯನ್ನು ಭಟ್ಟರು ಓದಿ ನಕ್ಕು ನಕ್ಕು ಹುಣ್ಣಾಗಿಸಿಕೊಂಡ ಕಥೆ ಲುಷ್ಯಂಕಾ ಗಂಗೊಳ್ಳಿಯವರು ಬಿದ್ದು ಬಿದ್ದು ನಗಹತ್ತಿದರು. ಅಯ್ಯೋ ಮಾರಾಯ ಈ ಕತೆಯನ್ನು ಓದಿ ನಕ್ಕು ಹೊಟ್ಟೆ ನೋಯಿಸಿಕೊಂಡೆಯಾ? ಎಂಥ ಸಾಹಿತ್ಯ ರಸಿಕನಪ್ಪ ನೀನು ಎಂದುಕೊಂಡರು.

೧. ಯಶವಂತ ಚಿತ್ತಾಲ : ಐವತ್ತೊಂದು ಕತೆಗಳು: : ಪುಟ ೬೫೫ ೨. ಅದೇ ಪುಟ-೧೫೭

ಇಲ್ಲಿ ತಾನು ಅತೀ ಬುದ್ಧಿವಂತ ಎಂದು ಎಲ್ಲರೆದುರು ಪ್ರದರ್ಶಿಸಹೊರಟ ಭಟ್ಟರು ನಗೆಪಾಟಲಿಗೆ ಗುರಿಯಾಗುತ್ತಾರೆ. ತಾನು ಎಲ್ಲ ಬಲ್ಲವನೆಂದು ಹೊಗಳಿಸಿಕೊಳ್ಳಬೇಕೆಂಬ ಮನಃಸಾಕ್ಷಿಯು ಹಲವರಲ್ಲಿರುತ್ತದೆ. ಅಂತಹವರ ಪ್ರತಿನಿಧಿ ಭಟ್ಟರು.

ಗಾನಪ್ರಿಯ ಶಂಭೂಶಾಸ್ತ್ರಿ: ಕತೆಯೂ ಹೆಚ್ಚು ಕಡಿಮೆ ಮಲ್ಲಿನಾಥ ಕಥೆಯನ್ನೇ ಹೋಲುತ್ತದೆ. ಶಂಭೂಶಾಸ್ತ್ರಿಗಳು ತಮಗೆ ಶಾಸ್ತ್ರೀಯ ಸಂಗೀತ ಕೇಳುವುದರಲ್ಲಿ ವಿಮರ್ಶಿಸುವುದರಲ್ಲಿ ಅಪಾರ ಪರಶ್ರಮವುಂಟೆಂದು ಜಂಬ ಕೊಚ್ಚಿಕೊಂಡು ನಾಡಹಬ್ಬದ ಸಂಗೀತ ಕಛೇರಿಗೆ ಕತೆಗಾರರನ್ನು ತಮ್ಮೊಡನೆ ಕರೆದುಕೊಂಡು ಹೋಗುತ್ತಾರೆ. ತಾವು ಕೇಳಿಸಿಕೊಳ್ಳುತ್ತಿರುವುದು ಸುಪ್ರಸಿದ್ಧ ಗಾಯಕಿ ಸುಗುಣಬಾಯಿಯವರ ಹಾಡುಗಾರಿಕೆಯನ್ನೇ ಎಂದು ತಿಳಿದು ಹಲವು ಬಾರಿ ಮಧ್ಯೆ ಮಧ್ಯೆ ಭೇಷ್ ಎಂದು ಉದ್ಗಾರವೆತ್ತುತ್ತಾರೆ. ಸುಗುಣಾಬಾಯಿಯವರ ಹಾಡುಗಾರಿಕೆಯನ್ನು ತಾವು ಅಸಂಖ್ಯಾತ ಬಾರಿ ಕೇಳಿ ಕೇಳಿ ಆಕೆಯ ಧಾಟಿಯನ್ನು ಹೃದ್ಗತ ಮಾಡಿಕೊಂಡಿರುವುದಾಗಿ ಹೇಳಿಕೊಳ್ಳುತ್ತಾರೆ.

ಆದರೆ ಗಾಯನ ಗೋಷ್ಠಿ ಮುಗಿದ ಮೇಲೆ ತಿಳಿಯುತ್ತದೆ. ಆ ದಿನ ಕಾರಣಾಂತರಗಳಿಂದ ಸುಗುಣಬಾಯಿಯವರಿಗೆ ಬರಲು ಸಾಧ್ಯವಾಗಿರಲಿಲ್ಲ ಎಂಬುದು. ಆಕೆಯ ಬದಲಾಗಿ ಶೋಭಾದೇವಿಯೆಂಬ ಸಾಮಾನ್ಯ ದರ್ಜೆಯ ಗಾಯಕಿಯೊಬ್ಬಳನ್ನು ಕರೆತಂದು ಕಛೇರಿ ನಡೆಸಿದುದಾಗಿ ಕಾರ್ಯದರ್ಶಿ ಪ್ರಕಟಿಸಿ ಶ್ರೋತೃಗಳ ಕ್ಷಮೆ ಕೋರುತ್ತಾನೆ. ಶಂಭೂಶಾಸ್ತ್ರಿಗಳು ಬಹಳ ಹೊತ್ತು ತಗ್ಗಿಸಿದ ತಲೆಯನ್ನು ಮೇಲೆತ್ತಲಿಲ್ಲವಾದರೂ ತಮ್ಮ ಸುತ್ತಿನವರೆಲ್ಲ ಹೊರಟು ಹೋದರೆಂಬುದನ್ನು ಖಚಿತಪಡಿಸಿಕೊಂಡು ಹೇಳಿದ್ದರು. ೧"ನನಗೆ ಆಗಲೇ ಸಂಶಯ ಬಂದಿತ್ತು. ಯಾಕೆಂದರೆ ಆ ಎರಡನೆ ಹಾಡನ್ನು ನಾನೆಷ್ಟೋ ಸಲ ಕೇಳಿದ್ದೇನೆ. ಆದರೆ ಇಂದೇಕೋ ನನಗೆ ಅಷ್ಟು ಸೇರಲಿಲ್ಲ. ಇಲ್ಲವಾದರೆ ನನಗೆ ಹಾಗೆ ನಿದ್ದೆ ಬರುತ್ತಿತ್ತೇ?"೧ ಇತ್ಯಾದಿಯಾಗಿ.

ಅಂದಿನಿಂದ ಈಚೆಗೆ ಶಾಸ್ತ್ರಿಗಳು ಗಾಯನದ ಬಗ್ಗೆ ಮಾತನಾಡುವುದನ್ನು ಕತೆಗಾರ ಕೇಳಿಲ್ಲವಂತೆ. ಇಲ್ಲಿ ಶಂಭೂಶಾಸ್ತ್ರಿಗಳೂ ಕೂಡ ತಮ್ಮ ತಪ್ಪನ್ನು ಒಪ್ಪದೇ ಪಲಾಯನವಾದಿಯಾದ ಮನಃಸ್ಥಿತಿ ಕಾಣಸಿಗುತ್ತದೆ.

ಸೆರೆ: ಮನಸ್ಸಿನ ಮೂಲೆಯಲ್ಲೇಲ್ಲೋ ಅಡಗಿಸಿಕೊಂಡಿದ್ದ ಆಸೆಗೆ ತಕ್ಕ ಪರಿಸ್ಥಿತಿ ಮತ್ತು ವಾತಾವರಣಗಳು ನಿರ್ಮಾಣಗೊಂಡಾಗ ಅಂತಃಸತ್ವದ ಗಟ್ಟಿತನವಿಲ್ಲದೆ ಅನ್ಯರ ವ್ಯಕ್ತಿತ್ವ ಇಲ್ಲವೆ ಆದರ್ಶಗಳನ್ನು ತನ್ನದಾಗಿಸುವ ಪ್ರಯತ್ನ ವಿಫಲಗೊಳ್ಳುತ್ತದೆನ್ನುವುದನ್ನು ಸಾಬೀತು ಮಾಡಬೇಕೆನ್ನುವ ಚಿತ್ತಾಲರ ಉದ್ದೇಶ 'ಸೆರೆ' ಕಥೆಯ ಮೂಲಕ ಸಾಧಿಸಿದೆ. ಹೊನ್ನಪ್ಪಾಚಾರಿಯ ಹೆಂಡತಿಯ ಕಣ್ಣುಗಳನ್ನು ಮತ್ತು ದೇವಿಯ ತೊಡೆ, ಎದೆಗಳನ್ನು ಮೆಲುಕು ಹಾಕುತ್ತಿದ್ದ ಬರ್ಮಚಾರಿ ಒಡೆದಿರ ಮನಸ್ಸಿನಲ್ಲಿ ದೇವಿ ಗಲಭೆ ಎಬ್ಬಿಸಿ ಒಡೆದಿರನ್ನು ಸಂಪೂರ್ಣವಾಗಿ ಸೆರೆ ಹಿಡಿಯುವ ಸಂದರ್ಭದಲ್ಲಿ ಇದು ನಡೆಯುತ್ತದೆ. ಒಂದು ಕಡೆ ಬರ್ಮಚಾರಿ ಒಡೆದಿರು ಮದುವೆಯಾಗದೆ ಇರುತ್ತೇನೆಂದು ಘನ ಪ್ರತಿಜ್ಞೆಯನ್ನು ಗೈದು ನಿತ್ಯಜೀವನದಲ್ಲಿ ಅದನ್ನು ಜಾರಿಗೆ ತರಲು ಮತ್ತು ರುಜುವಾತುಗೊಳಿಸಲು ಅಸಾಧ್ಯವಾಗುವುದರಿಂದ ಅದು ಆದರ್ಶವಾಗಿ ಅಸಹಜವಾಗಿ ಮತ್ತು ಸೋಗು ಆಗಿ ನಿಲ್ಲುತ್ತದೆ. ಇನ್ನೊಂದು ಕಡೆ ಮೈಯಲ್ಲಿ ಪ್ರಾಯತುಂಬಿ ಮುಸುಮುಸು ಎನ್ನುತ್ತಿದ್ದ ದೇವಿಯೊಡನೆ ಸಮಾಗಮ ಸುಖ ಪಡೆಯಬೇಕೆಂಬ ತೀವ್ರ ಆಸೆ ಪ್ರಾಯಭರಿತ ಒಡೆದಿರಿಗೆ ಸಹಜವಾಗುತ್ತದೆ. ಸಹಜ ಮತ್ತು ಅಸಹಜಗಳ ನಡುವೆ ಸಂಘರ್ಷ ಉಂಟಾಗಿ ಯಾವುದು ಸರಿ, ಯಾವುದು ತಪ್ಪು ಎನ್ನುವ ದ್ವಂದ್ವ

೧. ಯಶವಂತ ಚಿತ್ತಾಲ : ಐವತ್ತೊಂದು ಕತೆಗಳು: : ಪುಟ ೧೬೪

ಪ್ರಶ್ನೆಗೆ ಒಡೆದಿರು ಗುರಿಯಾದಾಗ ಎನ್ನುವ ಸಾರ್ವಕಾಲಿಕ ಸತ್ಯದ ಶೋಧನೆ ಮಾಡಲು ಸೆರೆ ಕತೆಯ ಮೂಲಕ ಪ್ರಯತ್ನಿಸಿದ್ದಾರೆ ಚಿತ್ತಾಲರು. ನಮ್ಮ ಸುತ್ತ-ಮುತ್ತಲೂ ಒಳಗೊಂದು ಹೊರಗೊಂದು ವ್ಯಕ್ತಿತ್ವದ ಅಂದರೆ ಒಳಗೆ ಹೆಣ್ಣಿನ ಸಮಾಗಮ ಸುಖದ ಆಸೆ, ಹೊರಗೆ ಮಾತ್ರ ಬ್ರಹ್ಮಚರ್ಯದ ಸೋಗು ಹಾಕಿದ ಬರ್ಮಚಾರಿ ಒಡೇದಿರನೇಕರು ಕಾಣಿಸುವುದರಿಂದ ಬರ್ಮಚಾರಿ ಒಡೆದಿರು ಇಂಥ ಇಬ್ಬಗೆಯ ವ್ಯಕ್ತಿತ್ವವನ್ನು ಪಡೆದ ಜನರ ಸಂಕೇತವಾಗಿ ನಿಲ್ಲುತ್ತಾರೆ.

[೧]"ಮೃತ್ಯು ಪ್ರಜ್ಞೆಯ ಹಿನ್ನೆಲೆಯಲ್ಲಿ ಕಥಾನಾಯಕನ ಅಸಹಜ ಸಹಜ ಪ್ರವೃತ್ತಿಗಳಲ್ಲಿ ಉಂಟಾಗುವ ಆಂದೋಲನವೇ ಈ ಕತೆಗೆ ವೈಚಾರಿಕ ತಳಹದಿಯನ್ನು ಒದಗಿಸುತ್ತದೆ. ಮೃತ್ಯುಪ್ರಜ್ಞೆಯ ಕೇಂದ್ರ ವ್ಯಕ್ತಿಯಾದ ಸೋದರತ್ತೆ ಮದುವೆಯಾದ ಎರಡು ವರ್ಷಗಳಲ್ಲೇ ಗಂಡನನ್ನು ಕಳೆದುಕೊಂಡು ಬೋಳಿಯಾಗಿ ಅತೃಪ್ತ ಕಾಮ ವಾಸನೆಯಿಂದ ನವೆ-ನವೆದು ಕೆಟ್ಟ ಗಳಿಗೆಯಲ್ಲಿ ಸಾಯುವುದರಿಂದ ಮನೆ ಬಿಡಬೇಕಾಗುತ್ತದೆ. ಈ ಬಿಟ್ಟ ಹಳೆಯ ಮನೆಯಲ್ಲಿ ಪ್ರಸ್ತುತಃ ಭೋಗಾಸಕ್ತಿ ಸಹಜವಾಗಿದ್ದ ಆದರೆ ಬ್ರಹ್ಮಚರ್ಯದ ಆದರ್ಶ ಆಕರ್ಷಗಳಿಗೆ ಸಿಕ್ಕು ಒಳಗೊಳಗೆ ಕೊರಗುತ್ತಿದ್ದ ತರುಣ ಕಥಾನಾಯಕ, ಕಥಾನಾಯಕ ದಿಟ್ಟ ಹಳೆ ಮನೆಯ ಕತ್ತಲಲ್ಲಿ ಮನೋನಿಗ್ರಹಕ್ಕಾಗಿ ಪರದಾಡುತ್ತಿರುವಾಗ, ಚಡಪಡಿಸುತ್ತಿರುವಾಗ ಈ ಬಿಟ್ಟ ಹಳೆ ಮನೆಯ ಹೊರಜಗಲಿಯ ಮೇಲೆ ಒಲೆಹೂಡಿದ ಮದುವೆಯಾದ ಕೆಲವು ದಿನಗಳಲ್ಲೇ ಗಂಡ ಓಡಿಹೋದುದರಿಂದ ಅತೃಪ್ತ ಕಾಮವಾಸನೆಯಿಂದ ನವೆಯುತ್ತಿರುವ ಮತ್ತು ಭೋಗ ಕುತೂಹಲಿಯಾದ ದೇವಿ ಇಲ್ಲಿ ಈ ಮೂವರೂ ಅಸಂತೃಪ್ತರೇ. ಈ ಮೂವರ ಸಂಬಂಧವನ್ನು ಕಲ್ಪಿಸಿದ್ದು ಕತೆಯ ಬೆಳವಣಿಗೆಯ ದೃಷ್ಟಿಯಿಂದ ಗಮನಾರ್ಹವಾಗಿದೆ. ಕತೆಯ ನೇಯ್ಗೆಯಲ್ಲಿ ಇದು ಅನಿವಾರ್ಯ ಅಂಗವಾಗಿದೆ. ಸೋದರತ್ತೆ ಸತ್ತ ವೇಳೆ ಕೆಟ್ಟದಾಗಿತ್ತೆಂದು ಒಬ್ಬ ಹಳೆಯ ಮನೆ, ಮೂರುಸಂಜೆಯ ಹೊತ್ತಿನಲ್ಲಿ ಮನೆತುಂಬ ಹಬ್ಬಿಕೊಂಡ ಮಬ್ಬುಗತ್ತಲೆ, ತಿಂಗಳಿಡೀ ಕದಗಳನ್ನೆಲ್ಲ ಮುಚ್ಚಿಕೊಂಡು ಗಾಳಿಯಾಡದ ಮನೆಯಲ್ಲಿ ನೆರೆನಿಂತ ಎಂತಹದೋ ಹಳಿತ ವಾಸನೆ, ಕಾಲಿಟ್ಟಲ್ಲೆಲ್ಲ ಧೂಳು, ತಾನಿದ್ದ ಪರಿಸ್ಥಿತಿಯ ಅರಿವು ಈಗ ಆಯಿತೆನ್ನುವಂತೆ ಸ್ಟೂಲಿನ ಮೇಲೆ ಕುಳಿತಲ್ಲೇ ನಡುಗಿದ. ಇಷ್ಟೆಲ್ಲ ಆದದ್ದು ಆ ಹಾಳು ದೇವಿಯಿಂದ. ಹಿಂದಿಲ್ಲ ಮುಂದಿಲ್ಲದ ಹುಡುಗಿ ಧುತ್ ಎಂದು ಅಂಗಳದಲ್ಲೇ ಪ್ರಕಟವಾಗಿ ಮಾತನಾಡಿಸಿದ ಅವಳಿಗೆ ಹೆದರಿಯೇ ಅಲ್ಲದೆ ತಾನು ಇಲ್ಲಿಗೆ ಬಂದು ಸಿಕ್ಕಿಕೊಂಡದ್ದು ಆತಿ ಇಲ್ಲದ ವೈಯಾರದ ಹೆಣ್ಣು ಹೊಪ್ಪಾಚಾರಿಯ ಹೆಂಡತಿ-ದೇವಿಯ ಬಗ್ಗೆ ಮಾತನಾಡುತ್ತ ಹಾಗೆ ಮುಗುಳುನಕ್ಕಿರದಿದ್ದರೆ ಇಷ್ಟೆಲ್ಲಾ ಆಗುತ್ತಿರಲಿಲ್ಲವೇನೋ. ಇಲ್ಲಿ ತನ್ನ ವ್ರತನಿಷ್ಠೆ ಭಂಗಗೊಂಡಿತೆನ್ನುವ ಭೀತಿ ಕಥಾನಾಯಕನಿಗಿದೆ. ತನ್ನ ವ್ರತನಿಷ್ಠೆಗೆ ಯಾವುದೇ ರೀತಿಯಿಂದ ಚ್ಯುತಿ ಬರಬಾರದೆಂದು ವಿಷಯಾಸಕ್ತ ವಾತಾವರಣ ಮತ್ತು ಸನ್ನಿವೇಶಗಳಿಂದ ದೂರವಿಡಲು ಬಯಸುವ ಅವನಿಗೆ ಆಖೈರಾಗಿ ಮನುಷ್ಯ ಸಹಜವಾದ ಕಾಮಕ್ಕೆ ಆಸರೆಯನ್ನು ಹೆಣ್ಣಿನೊಡನೆ ಪಡೆಯುವುದು ಅನಿವಾರ್ಯವಾಗುತ್ತದೆ."[೧]

ಕಥೆಯ ಬೆಳವಣಿಗೆಯಿರುವುದು ದ್ವಂದ್ವ ಸೆಳೆತಕ್ಕೆ ಒಳಗಾದ ಕಥಾನಾಯಕನಲ್ಲಿ. ಇಕ್ಕಟ್ಟಿನ ತಿಳುವಳಿಕೆ ಬೆಳೆಯುವುದರಲ್ಲಿ ಪರಸ್ಪರ ವಿರುದ್ಧ ಆಕರ್ಷಣೆಗಳ ವಿಪರೀತ ಒತ್ತಡಕ್ಕೆ ಬಲಿಯಾದ ಸಂದರ್ಭದಲ್ಲಿ ಆಖೈರಾಗಿ ಯಾವುದು ನೈಜವೋ ಸತ್ಯವೋ ಮತ್ತು ಸಹಜವೋ ಅದರೊಂದಿಗೆ ಒಪ್ಪಂದ ಮಾಡಿಕೊಳ್ಳುವುದರಲ್ಲಿ, ಪ್ರಪ್ರಥಮವಾಗಿ ಸ್ವೀಕರಿಸಿದ ಆದರ್ಶದಿಂದ ಪಲಾಯನ ಮಾಡುವುದರಲ್ಲಿ ವಂಶಪ್ರಜ್ಞೆಯ ತೀವ್ರ ಕಾಳಜಿಯಿಂದ ಕೊರಗುತ್ತಿದ್ದ ತಾಯಿ ಪಿತೃಪಕ್ಷದಲ್ಲಿ ಶ್ರಾದ್ಧ

೧. ಯಶವಂತ ಚಿತ್ತಾಲ : ಐವತ್ತೊಂದು ಕತೆಗಳು: : ಪುಟ ೬೯೭

ನಡೆಸಲು ಬಂದ ಪುರೋಹಿತ ಭಟ್ಟರೊಡನೆ ಬಿಚ್ಚಿದ ತನ್ನ ಮದುವೆಯ ಪುರಾಣ ಕೇಳಿ ಕಿಡಿ ಕಿಡಿಯಾಗಿ ಹಳೇಮನೆಯ ರಿಪೇರಿಗೆಂದು ಹೋದ ಕಥಾನಾಯಕ ಮನೆಯ ಹಿತ್ತಲಲ್ಲಿ ದೇವಿಯನ್ನು ಕಂಡು ವಿಚಲಿತನಾಗುತ್ತಾನೆ. ಗರಗಸ ತರಲು ಹೊನ್ನಪ್ಪಾಚಾರಿಯ ಮನೆಗೆ ಹೋದಾಗ ಹೊನ್ನಪ್ಪಾಚಾರಿಯ ಹೆಂಡತಿಯ ಕಣ್ಣುಗಳು, ವರ್ತನೆಯಿಂದ ವಿಚಲಿತನಾಗಿ ಬಾಗಿಲು ಸರಿಮಾಡಲು ಬಂದವನು ಮೊಳೆ ಹೊಡೆದು ರಿಪೇರಿ ಕೆಲಸ ನಡೆಸಿದ ಕಥಾನಾಯಕನ ಹರಕು-ಮುರುಕು ಮನದ ಬಾಗಿಲನ್ನು ಒಡೆದು ಒಳಹೊಕ್ಕ ದೇವಿಯನ್ನು ಹೊರಕ್ಕೆ ಹಾಕಲು ಆಗದು. ಅವನ ಮನಸ್ಸಿನ ಒಳಕ್ಕೆ ನಿಧಾನವಾಗಿ ಹಳೆಮನೆಯ ಹೊರಗಿದ್ದ ದೇವಿ ಹೇಗೆ ಒಳಬರುತ್ತಿದ್ದಾಳೆ ಮತ್ತು ಬ್ರಹ್ಮಚಾರಿಯಾಗಿಯೇ ಉಳಿಯಬೇಕೆನ್ನುವ ಬರ್ಮಚಾರಿ ಒಡೆದಿರ ಆದರ್ಶ ವಿಚಾರ ನಿದನಧಾನವಾಗಿ ಹೇಗೆ ಹೊರಗೆ ಹೋಗುತ್ತಿದೆ ಎನ್ನುವುದನ್ನು ಪರಿಣಾಮಕಾರಿಯಾಗಿ ಸೃಷ್ಟಿಸಲು ಚಿತ್ತಾಲರು ನಿರ್ಮಿಸುವ ವಾತಾವರಣ, ಸನ್ನಿವೇಶ, ದುಡಿಸಿಕೊಂಡ ಭಾಷೆ ಮತ್ತು ಉಪಯೋಗಿಸಿಕೊಂಡ ಸಂಕೇತಗಳು ಕಥೆಯ ನೇಯ್ಗೆಯಲ್ಲಿ ಅನಿವಾರ್ಯವೆಂಬಂತೆ ಸೇರಿಕೊಂಡಿದೆ.

ದೇವಿಯ ಸೆರೆಯಿಂದ ತಪ್ಪಿಸಿಕೊಳ್ಳಬೇಕೆಂದು ಮಾಡುತ್ತಿರುವ ಪ್ರಾಮಾಣಿಕ ಮತ್ತು ನಿಷ್ಠುರ ಪ್ರಯತ್ನವೆಲ್ಲವೂ ದೇವಿಯೊಂದಿಗೆ ಸಮಾಗಮ ಸುಖ ಪಡೆಯಬೇಕೆಂಬ ಆಸೆಯನ್ನು ಬಲವತ್ತರಗೊಳಿಸುತ್ತ, ದೃಢಗೊಳಿಸುತ್ತ ಹೋಗುತ್ತದೆ. ಇಲ್ಲಿ ಅದುಮಿಟ್ಟ ಬಯಕೆಗಳು ಹೇಗೆ ಪುಟಿದೇಳುತ್ತವೆ ಎಂಬ ಅಂಶ ಗೋಚರವಾಗುತ್ತದೆ. ಕೋತಿ ಮನೆಯೊಳಗೆ ಹೊಕ್ಕಾಗ ದೇವಿ ಬೈದ ಮಾತುಗಳು ಈತನ ಕಿವಿಗೆ ಬೀಳುತ್ತವಾದರೂ ಆತನ ಮನದಲ್ಲಿದ್ದ ಸತ್ತ ಮನೆಯ ಬಗೆಗಿನ ಭಯ ಕೋತಿ ನೋಡಿದಾಗ ಸೋದರತ್ತೆಯ ದೆವ್ವವೆಂಬಂತೆ ಭ್ರಮಿಸುತ್ತಾನೆ. ಇವೆಲ್ಲ ಹುದುಗಿಸಿಟ್ಟ ಕಾಮದ ಪ್ರಚೋದನೆಯೇ ಸರಿ.

ಹಾವು : ೧"ಕತೆಯಲ್ಲಿ ಬರುವ ಮೂರು ಪಾತ್ರಗಳ ಮಾನಸಿಕ ಅಸ್ವಸ್ಥತೆ ಹಾಗೂ ಕಾಮದ ಭಯವನ್ನು ಚಿತ್ರಿಸಲು ಚಿತ್ತಾಲರು ಮತ್ತೆ ಹಾವಿನ ಸಂಕೇತವನ್ನೇ ಆಶ್ರಯಿಸುತ್ತಾರೆ. ಸಂಕೇತದ ಅರ್ಥ ಆಯಾಮಗಳು ಸಾಂದರ್ಭಿಕವಾಗಿ ಬೆಳೆಯುವುದಿಲ್ಲವಾದ್ದರಿಂದ ಕೃತಕತೆ ಹೊಡೆದು ಕಾಣುತ್ತದೆ. ಹಾವಿನ ಹೆದರಿಕೆಯಿಂದ ಚಿಕ್ಕಪ್ಪ-ಚಿಕ್ಕಮ್ಮನನ್ನು ದೂರ ಇಟ್ಟರೆ, ಚಿಕ್ಕಪ್ಪ ಜನ ಅನ್ನಬಹುದಾದ ಮಾತಿಗೆ ದೇವರು ಮೆಚ್ಚುವ ಕೆಲಸದಲ್ಲಿ ಎನ್ನುವ ಹೊರಮನಸ್ಸಿನ ಭೀತಿಗೆ ಹೆದರಿ ದೇವಿಯನ್ನು ದೂರ ಇಡುತ್ತಾರೆ. ನಾಯಕ ದೇವಿಯ ನಿರೋಗ ಮನಸ್ಸಿಗೆ ಅಂಜಿ ಅವಳಿಂದ ದೂರ ಇರುವ ಪ್ರಯತ್ನ ಮಾಡುತ್ತಾನೆ. ಈ ಮೂವರೂ ತಮ್ಮ ಭೀತಿಯಿಂದಲೇ ನಿದ್ದೆ ಮಾಡಲಾಗದೆ (ನಿದ್ದೆ ಆರೋಗ್ಯವಂತ ಮನಸ್ಸಿನ ಒಂದು ಲಕ್ಷಣ) ಒಬ್ಬೊಬ್ಬರಾಗಿ ಮಾಳಿಗೆಯ ಮೇಲೆ ಹೋಗಿ ಮಲಗುತ್ತಾರೆ. ಇಂಥ ಜೋಡಣೆಯ ಹಿಂದೆ ಒಳ್ಳೆ ಕಸುರಿ ಕೆಲಸ ಇದ್ದರೂ ಅದು ಒಟ್ಟಾರೆಯಾಗಿ ಅನುಭವದ ಅರ್ಥವನ್ನು ಸಾದರಪಡಿಸುವಲ್ಲಿ ವಿಫಲವಾಗಿದೆ."೧

ಹಾವು ಕತೆಯಲ್ಲಿ ಕಾಮದ ಸಂಕೇತವೇ ಧ್ವನಿತವಾಗಿರುವುದನ್ನು ಕಾಣಬಹುದಾಗಿದೆ. ಚಿಕ್ಕಪ್ಪನಿಗೆ ಕಾಮ ಮುಖ್ಯ. ಹಾಗಾಗೆಯೇ ಚಿಕ್ಕಮ್ಮನಿಂದ ಆಗದ ಕಾರಣ ಉತ್ತಮಿಯ ಮನೆಗೆ ಹೋಗುವ ಸಾಹಸವನ್ನು ಮಾಡಿದರೂ ಹಿಂದಿರುತ್ತಾನೆ. ಆದರೆ ಆತನಲ್ಲಿ ಹೆಂಡತಿಗೆ ಮೋಸ ಮಾಡಬಾರದೆಂಬ ಮನಃಸ್ಥಿತಿ ಇದೆ. ಕಥಾನಾಯಕ ದೇವಿಯ ದೈಹಿಕ ಸೌಂದರ್ಯ ನೋಡುತ್ತಾನಾದರೂ ತಾನು ಮಾಡಿದ ತಪ್ಪಿನ ಬಗೆಗೆ ಪಶ್ಚಾತ್ತಾಪ ಪಡುತ್ತಾನೆ. ಆದರೆ ಕಾಮ ಎಂಬುದು ತಮಗರಿವಿಲ್ಲದಂತೆ ಹಾವಿನಂತೆ ಸರಸರನೆ ಹರಿದುಬಿಡುತ್ತದೆಂಬುದಿಲ್ಲಿ ಧ್ಯೋತಕ.

೧.ಯಶವಂತ ಚಿತ್ತಾಲ : ಐವತ್ತೊಂದು ಕತೆಗಳು: : ಪುಟ ೬೮೮

೧"ಆಟದಲ್ಲಿ ಮೂರು ಭಾಗಗಳಿವೆ.

೧ ಸೆರೆ, ಹಾವು,

೨. ಅದೃಷ್ಟ. ಆಟ, ಪಯಣ,

೩. ಛಲ,

ಭಾಗ-೧ ರ ವಸ್ತು ಕಾಮವಾದರೆ, ಭಾಗ-೨ ರ ವಸ್ತು ಮೃತ್ಯು ಹಾಗೂ ಭಾಗ-೩ರ ವಸ್ತು ಮೃತ್ಯು ಸದೃಶವಾದ ವಿಕೃತ ಜೀವನ ಪ್ರವೃತ್ತಿ.

ಭಾಗ-೧ ರಲ್ಲಿ ಸೆರೆ ಅತ್ಯಂತ ಸಾರ್ಥಕ ಕೃತಿಯಾದರೆ ಹಾವು ಸಾಧಾರಣ ಕತೆಯಾಗಿದೆ. ಹಾವು ಕತೆಯಲ್ಲಿ ಮೂಲ ಸನ್ನಿವೇಶ, ಚಿಕ್ಕಪ್ಪ, ಚಿಕ್ಕಮ್ಮ, ದೇವಿ, ನಾಯಕ ಇವರನ್ನು ಸಾಂಕೇತಿಕವಾಗಿ ಬಂಧಿಸಿದ ಹಾವಿನ ಕತೆ. ಅತ್ಯಂತ ಸಮರ್ಪಕವಾಗಿ ಬಂದಿದೆ. ನಿಜ. ಆದರೆ ಚಿತ್ತಾಲರು ಅಲ್ಲಿರುವ ಸಮಸ್ಯೆಗೆ ಬರೇ ಕಲಾತ್ಮಕ ಪರಿಹಾರ ಕೊಡುತ್ತಾರೆಯೇ ಹೊರತು (ಕಥಾನಾಯಕ ಊರು ಬಿಟ್ಟು ಹೋಗಿಬಿಡುತ್ತಾನೆ) ಆ ಪರಿಹಾರ ಮಾನಸಿಕ ಪರಿಹಾರವಾಗಿ ಪರಿಣಮಿಸುವುದಿಲ್ಲ. ಸೆರೆಯಲ್ಲಿ ಕಲಾತ್ಮಕ ಹಾಗೂ ಮಾನಸಿಕ ಪರಿಹಾರಗಳು ಒಂದಕ್ಕೊಂದು ಸೇಂದ್ರಯಾಗಿ ಬೆಸೆದುಕೊಂಡದ್ದೇ ಅದರ ಯಶಸ್ಸಿಗೆ ಕಾರಣವಾಗಿದೆ."೧ ಎಂದು ಡಿ.ವಿ.ಶಂಕರ್‌ರವರು ಅಭಿಪ್ರಾಯ ಪಟ್ಟಿದ್ದಾರೆ.

ಸೆರೆಯಲ್ಲಿ ವಿನ್ಯಾಸವಾದ ವಸ್ತುತಂತ್ರಗಳೇ ಹಾವಿನಲ್ಲೂ ಪುನಃ ಪುಟಿದು ತಲೆದೋರುತ್ತವೆ. ಕತೆಯಲ್ಲಿ ಘಟನೆಗಳಿಲ್ಲವೆಂದಾಗಲೀ! ಘರ್ಷಣೆಯ ಕೋಲಾಹಲಗಳಿಲ್ಲವೆಂದಾಗಲೀ ಯಾರೂ ಗೊಣಗುವುದಿಲ್ಲ. ಆದರೆ ಆಕರ್ಷಕವಾಗಿ ಸುತ್ತಿ ಸುತ್ತಿ ಹರಿಯುವ ಹಾವನ್ನು ಕಂಡು ಮೊದಲು ನಾವು ವಿಸ್ಮಯಗೊಂಡರೂ ಇದು ಅದೇ ಹಳೆಯ ಬುಟ್ಟಿಯಲ್ಲಿಟ್ಟ ಆದೇ ಹಳೆಯ ಹಾವು ಎಂದು ಗೊತ್ತಾದಾಗ ನಮ್ಮ ಪಾಲಿಗೆ ಕತೆಯ ತಂತು ಕಿರುಗುಟ್ಟುತ್ತದೆ.

ಅದೃಷ್ಟ : ಸಾಮಾನ್ಯವಾದ ಕತೆಯಾದರೂ ರುಗ್ಣಶಯ್ಯೆಯಲ್ಲಿದ್ದ ನೀಲಕಂಠನ ಸುತ್ತಲೂ ಸುಳಿಯುವ ಮೃತ್ಯುವಿನ ವ್ಯಗ್ರ, ಅಸ್ಪಷ್ಟ ಕರಾಳ ದರ್ಶನ, ಅವನ ಪ್ರಜ್ಞೆಯ ಪಟಲದ ಮೇಲೆ ತೆರೆ-ತೆರೆಯಾಗಿ ಹಬ್ಬಿ. ಮಾತಿನ ತುಂತುರುಹನಿಯಾಗಿ ಚಿಮ್ಮುವಂತೆ, ನಿಯೋಜಿಸಿದ ಕತೆಗಾರನ ತಂತ್ರ ಅದ್ಭುತವಾದುದು.

ಮನುಷ್ಯನ ಚಿತ್ರಕ್ಕೆ ಅತೀವವಾದ ಮತ್ತು ಅವನ ಬೌದ್ಧಿಕತೆಗೆ ನಿಲುಕದ ಗಾಢವಾದ ಕೆಲವೇ ಸತ್ಯಗಳಲ್ಲಿ 'ಸಾವು' ಪ್ರಮುಖವಾದುದು. ಈ ದೃಷ್ಟಿಯಿಂದ ಚಿತ್ತಾಲರು ಈ ವಸ್ತುವಿನತ್ತ ಗಮನ ಹರಿಸುವುದು. ಅದನ್ನು ಕಲಾತ್ಮಕವಾಗಿ ಕಂಡರಿಸಿರುವುದು ಶ್ಲಾಘ್ಯ.

ಸಾವು ಅಪರಿಹಾರ್ಯವಾದ ಹುಟ್ಟಿನೊಂದಿಗೆ ಬೆನ್ನಟ್ಟಿ ಬರುವ ಭೂತ. ಅನಪೇಕ್ಷಿತವಾದರೂ ಅನಿವಾರ್ಯ. ಇದು ಮನುಷ್ಯನನ್ನು ಆಕಸ್ಮಿಕವಾಗಿ / ಅನಿರೀಕ್ಷಿತವಾಗಿ ಕೂಡ ಆಕ್ರಮಿಸಬಹುದು. ಅದೃಷ್ಟ ಕತೆಯಲ್ಲಿ ಸಾವು ಪೊಕ್ಕನ ಅಣ್ಣನಿಗೆ ಅನಿರೀಕ್ಷಿತವಾದದ್ದು.

ಅದೃಷ್ಟ ಕತೆಯಲ್ಲಿ ಸಾವು ನೇರವಾಗಿ ಅನುಭವಕ್ಕೆ ಬರುವುದು ಪೊಕ್ಕ ನೀಲಕಂಠನಿಗೆ, ದೊಡ್ಡವರಿಗಲ್ಲ. ನೀಲಕಂಠನಿಗೆ ಸಾವು ದೇವರ ಕೋಣೆಗೆ ಹೋಗುವ ಬಾಗಿಲ ಮೇಲ್ಬದಿಯಲ್ಲಿ ಮಸುಕು ಮಸುಕಾಗಿ ತೋರುವ ಎಂತಹುದೋ ಬಿಳಿಯ ಕಲೆಯಲ್ಲಿ ಮೊನ್ನೆ ಸತ್ತುಹೋದ ಅಣ್ಣನ ಮೋರೆ ಅಸ್ಪಷ್ಟವಾಗಿ ಕಂಡಂತಾಯಿತು ಎನ್ನುವ ಮಾತುಗಳಲ್ಲಿ ಕಾಣಿಸಿದರೆ, ಈ ಚಿತ್ರ ಹಿರಿಯರ ಮಾತಿನ ಪ್ರಭಾವದಿಂದ ಬೇರೆ ರೂಪ ತಾಳುತ್ತದೆ.

೧. ಯಶವಂತ ಚಿತ್ತಾಲ : ಐವತ್ತೊಂದು ಕತೆಗಳು: : ಪುಟ ೬೯೨

೧"ಅಮ್ಮನ ದನಿಯಲ್ಲಿ ಕಾತರವಿತ್ತು. ಮೋರೆ ಕೆಂಪು ಕೆಂಪು ಕಾಣಿಸುತ್ತದೆ ಎಂದಂತೆ ಕೇಳಿಸಿತು. ದೇವರ ಕೋಣೆಯ ಬಾಗಿಲ ಮೇಲಿನ ಕಲೆ ಈಗ ತುಸು ಕೆಂಪಗಾದಂತೆ ಕಂಡಿತು. ಹಾಗೆ ಒಡನಾಡಿಗಳ ಮಾತಿನಿಂದಲೂ ಸಾವು ಬೇರೆಯ ರೂಪದಲ್ಲಿ ಕಾಣುತ್ತದೆ. ಪೊಕ್ಕ ಸಿದ್ದಿಜನರ ಪರಕಾಯ ಪ್ರವೇಶದ ಬಗ್ಗೆ ಮಾತನಾಡುತ್ತ ಸಿದ್ದಿಯೊಬ್ಬ ಹುಲಿಯಾದುದನ್ನು ಹೇಳಿದಾಗ, ಸಾವು ಅರೆ! ಅರೆ! ಅರೆ! ಬಣ್ಣ ಬಣ್ಣ ಬಣ್ಣ ಹುಲಿಯ ಪಟ್ಟೆಗಳಲ್ಲವೆ ಅವು! ಹುಲಿಯ ಹಾಗೆ ಗರ್ಜಿಸುತ್ತಾನಲ್ಲ ಪೊಕ್ಕ....."೧ ಎನ್ನುವ ಚಿತ್ರದಲ್ಲಿ ಕಾಣುತ್ತದೆ. ಈ ಕತೆಯಲ್ಲಿ ಇನ್ನೊಂದು ವಿಶೇಷ ಎಂದರೆ ಸಾವು ಇಲ್ಲಿ ಬಹುಮಟ್ಟಿಗೆ ಶ್ರಾವಣ ಪ್ರತಿಭೆಯ ಮುಖಾಂತರವೇ ನಿರೂಪಿತವಾಗಿರುವುದು.

ಪೊಕ್ಕನು ತನ್ನ ಅಣ್ಣನು ಮರಳಿ ಬಂದಿರುವುದಾಗಿ ತಿಳಿಸಲಾಗಿ ನೀಲಕಂಠನಲ್ಲಿಯೂ ದೂರದಲ್ಲಿ ವಿದ್ಯಾಭ್ಯಾಸಕ್ಕೆಂದು ಹೋಗಿರುವ ತನ್ನ ಅಣ್ಣಂದಿರನ್ನು ನೋಡುವ ಆಸೆಯಾಗುತ್ತದೆ. ಆದರೆ ಈತನ ಖಾಯಿಲೆ ಗುಣವಾಗುವ ತನಕ ಅವರು ಬಾರದಂತೆ ತಂದೆ-ತಾಯಿಗಳು ಎಚ್ಚರ ವಹಿಸುತ್ತಾರೆ. ಆದರೆ ತನಗೂ ಅಣ್ಣಂದಿರನ್ನು ನೋಡುವ ಆಸೆ ನೀಲಕಂಠನಿಗಾದದ್ದು ಪೊಕ್ಕನ ಅಣ್ಣ ಬಂದ ನಂತರವೇ ಇಲ್ಲಿ ನೀಲಕಂಠನ ಮನಃಸ್ಥಿತಿಯನ್ನರಿಯಲು ಸಾಧ್ಯವಿದೆ.

ಅಂತೆಯೇ ಪೊಕ್ಕ ತನ್ನ ಅಣ್ಣ ಸತ್ತದ್ದನ್ನು ನೀಲಕಂಠನಿಗೆ ಹೇಳುತ್ತಾ

೨"ಅಣ್ಣಹೋದ"

"ಅವನು ತಿರುಗಿ ಬರುವುದಿಲ್ಲವಂತೆ"೨, ಎಂಬಲ್ಲಿ ಆತನ ಮಾನಸಿಕ ಯಾತನೆಯನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಿದೆ.

ನನ್ನ ದೃಷ್ಟಿಯಿಂದ ಚಿತ್ತಾಲರ ಮೃತ್ಯುಕತೆಗಳಲ್ಲಿ ಪಯಣ ಶ್ರೇಷ್ಠವಾದದ್ದು ಜೀವನದಂತೆ ಮರಣವೂ ಅತ್ಯಂತ ಸಹಜವಾದ ನೈಸರ್ಗಿಕವಾದ ಘಟನೆ, ಆದರ ಕರೆ ಬಂದಾಗ ಯಾವ ಪ್ರತಿಭಟನೆ ಇಲ್ಲದೆ ಒಪ್ಪಿಕೊಳ್ಳುವುದು ಶಕ್ಯ. ಕೆಲ ಜನರಿಗಂತೂ ಅತ್ಯಂತ ಸುಲಭ ಎಂಬ ಒಂದು ತಾತ್ವಿಕ ಧ್ವನಿ ಈ ಕತೆಯಲ್ಲಿದೆ. ಮರಣದಕರೆ ಹಾಗೂ ಅದನ್ನೊಪ್ಪಿಕೊಂಡು ನಾಯಕ ಸಿದ್ಧನಾಗುವ ರೀತಿ. ಇವುಗಳ ನಿರೂಪಣೆಯಲ್ಲಿ ಸಾಂಕೇತಿಕತೆ ಹಾಗೂ ವಾಸ್ತವಿಕತೆಗಳನ್ನು ಸೇಂದ್ರಿಯವಾಗಿ ಹೆಣೆದ ಕೌಶಲ್ಯ ಬೆರಗುಗೊಳಿಸುವಂತಹದು. ಪಯನದಲ್ಲಿ ಸಂಕೇತಗಳೇ ವಾಸ್ತವರೂಪ ಧಾರಣಮಾಡುತ್ತದೆ. ಎಂದಿದ್ದಾರೆ ಶಾಂತಿನಾಥ ದೇಸಾಯಿಯವರು.

ಸಾವು: ಅಪರಿಹಾರ್ಯವಾದ ಹುಟ್ಟಿನೊಂದಿಗೆ ಬೆನ್ನಟ್ಟಿಬರುವ ಭೂತ ಅನಪೇಕ್ಷಿತವಾದರೂ ಅನಿವಾರ್ಯ, ಇದು ಮನುಷ್ಯನನ್ನು ಆಕಸ್ಮಿಕವಾಗಿ/ಅನಿರೀಕ್ಷತವಾಗಿ ಕೂಡ ಆಕ್ರಮಿಸಬಹುದು. ಪಯಣದಲ್ಲಿ ಹೆಸರಿಲ್ಲದ ನಾಯಕನಿಗದು ಅವ್ಯಕ್ತ ರೀತಿಯಲ್ಲಿ ಕರೆಯುವ ಅಪ್ರತ್ಯಕ್ಷ ಶಕ್ತಿ.೩ " ಅದೃಷ್ಟ ಆಟ, ಪಯಣ ಈ ಮೂರು ಕತೆಗಳ ಪೈಕಿ ಪಯಣ ಶ್ರೇಷ್ಠವಾದದ್ದು ಮತ್ತು ಪ್ರಾತಿನಿಧಿಕವಾದುದು. ಒಮ್ಮೊಮ್ಮೆ ನಮ್ಮ ಸಂವೇದನೆಗೆ ನಿಲುಕದ ಅನುಭವಗಳು ವಿವರಿಸಲು ಮಾತಿನ ತೆಕ್ಕೆಗೆ ಒಗ್ಗದ ಘಟನೆಗಳು ಸಂಭವಿಸುವ ಸಾಧ್ಯತೆ ಇದೆ. ಅಂಥ ಒಂದು ರೀತಿಯ ಸಾವಿನ ರಹಸ್ಯ ಆಕ್ರಮಣದ ಸಮರ್ಥ ಚಿತ್ರಣ ಈ ಕತೆ "೩ ಎಂದು ಟಿ.ಎನ್.ನಾಗರಾಜಶೆಟ್ಟಿಯವರು ಹೇಳಿದ್ದಾರೆ.

---

೧. ಯಶವಂತ ಚಿತ್ತಾಲ : ಐವತ್ತೊಂದು ಕತೆಗಳು: : ಪುಟ ೧೮೫

೨. ಆದೇ ಪುಟ-೧೮೮ ೩. ಆದೇ ಪುಟ-೭೦೪

ಅಸ್ಪಷ್ಟ ಕರೆಯೊಂದಕ್ಕೆ ಬದ್ಧನಾಗಿ, ಅವ್ಯಕ್ತ ಭೀತಿಭಾವಗಳಿಗೆ ಪಕ್ಕಾಗಿ ಗೂಢಶಕ್ತಿಯೊಂದರ ಹಿಡಿತಕ್ಕೆ ಸಿಕ್ಕಿ, ಆಕಸ್ಮಿಕವಾಗಿ ಸಾವನ್ನಪ್ಪುವ ಟ್ರಾವಲಿಂಗ್ ಸೇಲ್ಸ್‌ಮನ್ ಒಬ್ಬನ ಅಂತ್ಯಕಾಲದ ಉತ್ಕಟ ನಿರೂಪಣೆ ಎಲ್ಲ ವಿವರಗಳನ್ನು ನಿರ್ದಿಷ್ಟ ಗುರಿಯಲ್ಲೇ ಪೇರಿಸುತ್ತ ತುತ್ತ-ತುದಿಗೊಯ್ದು ಒಂದು ಸ್ವರೂಪಕ್ಕೆ ಮುಟ್ಟಿಸುವ ಇಡಿಯಾಗಿ ಶಿಲ್ಪವನ್ನು ಕಡೆದು ನಿಲ್ಲಿಸುವ ಧಾರಣ ಸಾಮರ್ಥ್ಯ ಚಿತ್ತಾಲರಿಗೆ ಸಿದ್ಧಿಸಿದೆ ಇದು ಈ ಕತೆಯಲ್ಲೂ ಕಾಣಿಸಿಕೊಳ್ಳುತ್ತದೆ.

ಬಂದ ಭಾಗ್ಯಕ್ಕೆ ಒದಗಿದ ವಿಪತ್ತಿಗೆ ನಿಷೇಧವನ್ನು ಒಡ್ಡದ ಇಲ್ಲದ ಒಂದು ವಿಧೇಯ ಚೈತನ್ಯವಾಗಿ ಇಲ್ಲಿ ನಾಯಕ ಕಾಣಿಸಿಕೊಳ್ಳುತ್ತಾನೆ. ಅವನಿಗೆ ಯಾವುದೇ ಹೆಸರಿಲ್ಲದಿರುವ ಅಂಶ ಗಮನೀಯ. ಅವನು ಯಾರೇ ಆಗಿರಬಹುದು ಎನ್ನುವುದನ್ನು ಇದು ಸೂಚಿಸುತ್ತದೆ. ಸಾವಿನ ನಿಗೂಢ ಆವಿರ್ಭಾವದ ಜೊತೆಯಲ್ಲೇ ಅವನ ವ್ಯಕ್ತಿತ್ವವೂ ವ್ಯಕ್ತವಾಗುವುದರಿಂದ ಮತ್ತು ಅವನು ಒಪ್ಪುತ್ತಲೇ ಎಲ್ಲಾ ಚಟುವಟಿಕೆಗಳನ್ನು ಮುಂದುವರಿಸುವುದರಿಂದ ಕತೆ ಗಟ್ಟಿತನವನ್ನು ಕಾಪಾಡಿಕೊಳ್ಳುತ್ತದೆ. ಸಾವಿನ ಸಿದ್ಧತೆಯಲ್ಲಿ ಭರದಿಂದ ತಯಾರಾಗುವ ನಾಯಕ ಕೊನೆಗೆ ಸಾವಿಗೆ ತುತ್ತಾಗಿ ತನಗರಿವಿಲ್ಲದ ರೀತಿಯಲ್ಲೇ ಅದನ್ನು ಸಮರ್ಥಿಸುತ್ತಾರೆ. ಸಿದ್ಧತೆಯ ಕಾಲದ ಅವನ ಧೈರ್ಯ ಭಯ, ನೋವು, ನಗೆ, ಎಚ್ಚರಸ್ಥಿತಿ, ಸುಪ್ತ ಮುಂತಾದ ದ್ವಂದ್ವಗಳು ಕತೆಯ ಗಂಭೀರತೆಯನ್ನು ಉಳಿಸಿಕೊಳ್ಳುತ್ತವೆ. ಸಾವನ್ನು ಪಯಣದೊಂದಿಗೆ ಸಮೀಕರಿಸುವ ಇಲ್ಲಿನ ರೀತಿ ಅಪೂರ್ವ ಕೇಂದ್ರ ಪ್ರಜ್ಞೆಯ ಮೂಲಕ ಸಮಗ್ರ ಪರಿಣಾಮ ಬೀರುವುದರಲ್ಲಿ ಪಡೆದಿರುವ ಸಾಫಲ್ಯ ಮೆಚ್ಚುವಂಥದ್ದು.

ಇಲ್ಲಿ ಮೃತ್ಯು ಬಾಗಿಲಲ್ಲಿ ಹಣಕಿಕ್ಕಿ ಪಯಣಕ್ಕೆ ಸಿದ್ಧನಾಗಿರಲು ಹೇಳಿ ಹೋಗುವುದು. ಹೆಸರಿಲ್ಲದ ನಾಯಕ ಅದಕ್ಕೆ ಪ್ರತಿಕ್ರಿಯೆಯಾಗಿ ಯಾವುದೇ ಆಕ್ಷೇಪಣೆ ಇಲ್ಲದೆ ಆ ಕರೆಯ ಸಂಪೂರ್ಣ ಹಾಗೂ ತರ್ಕಬದ್ಧವಾದ ತಿಳಿವಿಲ್ಲದೆ ಯಾರು ಯಾತಕ್ಕಾಗಿ ಎಲ್ಲಿಗೆ ಕರೆದರು ಎಂಬ ಶಂಕೆಯೇ ಇಲ್ಲದೆ ತವಕದಿಂದ ಸಿದ್ಧವಾಗುವುದು. ಆ ಆತಂಕದಲ್ಲಿ ಕಲಕತ್ತೆಯಲ್ಲಿನ ತನ್ನ ವಹಿವಾಟುಗಳು ಜಗತ್ತಿನಲ್ಲಿ ತನ್ನ ಜವಾಬ್ದಾರಿ ಇವುಗಳ ಆವಶ್ಯಕತೆಯನ್ನು ಅವನು ತಿರಸ್ಕಾರಯುತವಾಗಿ ಪರಿಗಣಿಸುವುದು. ೧ " ಮುಂದಿನ ನಿಮ್ಮ ಮುಕ್ಕಾಮು ಎಲ್ಲಿ? ೧" ಎಂಬ ಹೋಟೆಲಿನ ಕೌಂಟರಿನಲ್ಲಿದ್ದ ರಿಜಿಸ್ಟರಿನಲ್ಲಿನ ಪ್ರಶ್ನೆಗೆ ಗೊತ್ತಿಲ್ಲ ಎಂದು ಬರೆಯುವುದು ಮುಂತಾದ ಅಂಶಗಳೆಲ್ಲ ಕತೆ ಇಡಿಯಾಗಿ ಒಂದು ರೂಪಕವಾಗಲು ದುಡಿದಿವೆ. ಸಾವಿನ ಸ್ವರೂಪ ಅದರ ಮಿತವಾದ ಮಾತಿನ ಕರೆ ಇವೆಲ್ಲವುಗಳ ಚಾಲಕಶಕ್ತಿಯಾಗಿದೆ. ನಾಯಕ ಪ್ರತಿಪಾದಕನಾಗಿದ್ದಾನೆ. ಇಲ್ಲಿ ಸಾವು ತನ್ನೆಲ್ಲಾ ನಿಗೂಢತೆಯನ್ನು ಕಾಪಾಡಿಕೊಂಡು ತನ್ನತನವನ್ನು ನಿರೂಪಿಸುತ್ತದೆ.

ಬದುಕನ್ನು ಕುರಿತ ಕಾಳಜಿ ಈ ಕತೆಯಲ್ಲಿ ಮಾತ್ರ ಕಂಡುಬರುತ್ತದೆ. ಸಾವಿನ ನೆನಪು ಮನಸ್ಸಿನಲ್ಲಿ ನೆಲೆನಿಂತರೆ ಮಾತ್ರ ಬದುಕನ್ನು ಕುರಿತ ಹಗುರ, ಕಷ್ಟ-ಕೋಟಲೆಗಳನ್ನು ಎದುರಿಸಬಹುದಾದ ಧೈರ್ಯ ಒಮ್ಮೆಯೇ ಉಂಟಾಗುತ್ತದೆ. ಈ ಕತೆಯ ನಾಯಕ ಉದ್ದಕ್ಕೂ ಬಂದದ್ದಕ್ಕೆ ರಾಜಿ ಮಾಡಿಕೊಳ್ಳುವ ಸ್ವಭಾವದವನು. ಇನ್ನೆಲ್ಲ ಚಟುವಟಿಕೆಗಳ ರೂಪರೇಷೆಗಳನ್ನು ಯಾವಾಗಲೂ ಬೇರೆಯವರೇ ನಿಶ್ಚಿಯಿಸುತ್ತಾರೆ. ಅದೂ ತನ್ನ ಹಿತಕ್ಕೂ ಎಂಬ ನಂಬುಗೆಯಿಂದಲೇ ತಾನು ಅವುಗಳಿಗೆ ಪ್ರತೀಕಾರ ಮಾಡಿ ಅವರನ್ನೇಕೆ ನಿರಾಶೆಗೊಳಿಸಲಿ ..... ಎನ್ನುವ ಮೆತ್ತನೆಯ ಮನುಷ್ಯ ಸ್ಪಷ್ಟವಾಗಿ ಕತೆಗಾರರೇ ಒಂದೆಡೆ ಹೇಳುವಂತೆ ಪ್ರತಿಭಟನೆಗೆ ಅರ್ಥವೇ ಇಲ್ಲವೆಂಬುದು ಅವನ ಜೀವನದ ತತ್ವಜ್ಞಾನವಾಗಿತ್ತು. ಆದರೆ ಪಯಣದ ಕರೆ ಬಂದ ಮೇಲೆ ಅವನ ನಡವಳಿಕೆ ಇಡಿಯಾಗಿ ಬದಲಾಗುತ್ತದೆ. ಮೊದಲ ಬಾರಿಗೆ ಅವನು ಸ್ವಂತ ತೀರ್ಮಾನವನ್ನು-ಬಾಸ್‌ನ ಮಾತನ್ನೂ ಉಲ್ಲಂಘಿಸಿ ಪಯಣ ಹೊರಡುವ ನಿರ್ಧಾರವನ್ನು ತೆಗೆದುಕೊಳ್ಳುತ್ತಾನೆ. ಅದಕ್ಕಾಗಿ ತಾನೇ ಸ್ವತಃ ಎಲ್ಲವನ್ನು ಸಿದ್ಧಪಡಿಸಿಕೊಳ್ಳುತ್ತಾನೆ. ಅಡೆತಡೆಗಳೆಲ್ಲವನ್ನೂ ಕ್ರಮವಾಗಿ ನಿವಾರಿಸಿಕೊಳ್ಳುತ್ತಾನೆ. ಈ ಕತೆಯ ಸಿದ್ಧಿಯಲ್ಲಿ ಈ ಅಂಶವೂ ಸೇರಿಕೊಳ್ಳುತ್ತದೆ.

೧. ಯಶವಂತ ಚಿತ್ತಾಲ: ಐವತ್ತೊಂದು ಕತೆಗಳೂ::ಪುಟ ೧೯೧

ಆಟ : ಕತೆಯಲ್ಲಿ ಗಮನಿಸಬೇಕಾದ ಅಂಶ ಎಂದರೆ ಬೆಳಕು-ಕತ್ತಲಿನ ಆಟ ಪಾತ್ರಗಳು, ಘಟನೆಗಳು, ಸಂವೇದನೆಯ ಒಟ್ಟಿಗೆ ಬರುವ ವಿಚಾರದ ತುಣುಕುಗಳು ಈ ಎಲ್ಲ ಬೆಳಕು-ಕತ್ತಲಿನ ಸಂಧಿ ಸಮಯದಲ್ಲಿ ಕಂಡೂ ಕಾಣದ ಹಾಗೆ ಅಥವಾ ಕಂಡೂ ಮರೆಯದ ಹಾಗೆ ಮನಸ್ಸಿನಲ್ಲಿ ಉಳಿದುಕೊಳ್ಳುವ ರೀತಿ, ಬುಡಣಸಾಬರು ದೀಪ ಹಚ್ಚುವ ಹೊತ್ತಿಗೇ, ಮನೆ ಬಿಟ್ಟು ಹೊರಡುತ್ತಾರೆ. ಹೊರಗೆ ಬರುವ ಹೊತ್ತಿಗೆ ಹಾದಿಯಲಿ ಕತ್ತಲೆಯ ಭೀತಿಯನ್ನು ಕಳೆಯಲು ಯಕ್ಷಗಾನದ ಧಾಟಿಯಲ್ಲಿ ಅಲಲ ಲಲಲ ಕೇಇ ಹಾ ಎಂದು ಒಳಗಿನ ಜೀವದ ಬೆಳಕನ್ನು ಚಿಮ್ಮುತ್ತ ಓಡುವ ಪರಶುರಾಮಭಟ್ಟರ ಮಗ ನಾಗೇಶ. ಇಸ್ಪೀಟಿನ ಆಟದ ಆಸೆಗಾಗಿ ನರಸಿಂಹ ಅಂಗಡಿ ಮುಚ್ಚಿರಬೇಕು ಎಂದುಕೊಂಡ ಮನವೇಲನ ದಣಪೆ ದಾಟುತ್ತಿದ್ದಾಗ ಮನೆಯ ಜಗಲಿಯ ಮೇಲೆ ಕಂದೀಲಿನ ಬೆಳಕನ್ನು ನೋಡಿ ಅಷ್ಟರಲ್ಲೇ ಸಮಾಧಾನ ಗಾಡಿಯ ಹಗ್ಗವನ್ನೋ ಮತ್ತೇನನ್ನೋ ಎಡವಿ ಹೌಹಾರಿ ಹುರುಪಿನಿಂದ ರಾಗ ಹಾಡುತ್ತ ಏನು ಕಡಕಡಾಟ ಝುಗಝುಗಾಟ ನೋಡಿ ಎಂದು ಸರ್ರನೆ ಮರೆಯಾಗುವ ಕೇಶವ ಪೈರ ಮಗ ಮಾಧವ ಎಲ್ಲೋ ದೂರದಲ್ಲಿ ಕಪ್ಪಿನ ಗುಪ್ಪೆಯಂತೆ ನಿಂತ ಮನೆಯಲ್ಲಿ ದೀಪ ಕಲಾಯಿತರ ಕರೀಮಸಾಬನ ಮನೆಯಲ್ಲಿ ನೆಲದಲ್ಲಿ ಬಿಲತೆಗೆದು ಹುಗಿದ ಬೆಂಕಿ ಆಡಿನ ತೊಗಲ ತಿದಿಯನ್ನೊತ್ತಿ ಕೆಣಕಿದಾಗ ಭುಸ್ ಎಂದು ಹೊರಬಂದು ಕೆಂಪು ನಾಲಗೆ ಚಾಚಿದಾಗ, ಹತ್ತಿರದ ಗಿಡಮರಗಳೆಲ್ಲ ಒಮ್ಮೆ ಕೆಂಪಾಗಿ ಮರಗಳಿಗೆ ವಿಷವೇರಿದಂತೆ ಕಪ್ಪಾದುದನ್ನು ನೋಡುತ್ತ ಮುಂದೆ ಸಾಗಿದಾಗ, ಆಡಲೀ ಆಡಲೀ ಆಡುವ ವಯಸ್ಸೇ ಅವರದು. ಇನ್ನೊಮ್ಮೆ ಮಿಂಚು ಕತ್ತಲೆಯನ್ನು ಕೊರೆದಾಗ ಗಾಳಿ ಹೊಕ್ಕ ಮಣಕದ ಹಾಗೆ ನೆಗೆದಾಡುತ್ತ ಉತ್ಸಾಹದಿಂದ ಬುಡಣಸಾಬರೂsss ಬಹಳ ಮುದುಕರು. ಮಳೆಯು ಬಂದರೂ ಹೊರಗೆ ಹೊರಟರೂ ಎಂದು ಹಾಡುತ್ತಾ ಹೋಗುವ ಸಾಂತಯ್ಯರ ಸರ್ವೋತ್ತಮ, ಗಣಪಯ್ಯರ ಅಂಗಡಿಯ ಲಾಟೀನಿನ ಮಂದ ಬೆಳಕಿನತ್ತ ಸೋsss ಮಳೆ ಬಂತೋ ಮಳೆರಾಯ ಕೊಡೆ ತಾರೋsss .... ಎಂದು ಹಾಡುತ್ತಾ ಕುಣಿಯುತ್ತ ಹೋಗುವ ಗಣಪಯ್ಯನ ತಮ್ಮನ ಮಗ ವಿಠಲ.

ಹುತ್ತ, ಹಾವು, ಹಗ್ಗ, ಭುಶ್ ಎಂದು ಕೆಂಪು ನಾಲಗೆ ಚಾಚುವ ತಿದಿಯ ಬೆಂಕಿ ಮೃತ್ಯುವಿನ ಪ್ರತಿರೂಪದಂತೆ ಕಾಣುವ ಕರ್ರಗೆ ಕಂಬಳಿ ಕೊಪ್ಪೆ ಹಾಕಿ ಕೈಲಿ ಹಗ್ಗ ಹಿಡಿದ ಮನುಷ್ಯ- ಈ ವಿವರಗಳ ಜೊತೆಜೊತೆಗೆ ಹಾಡಿನ ಕುಣಿತದ ಹುರುಪಿನ ಜೀವನ ಚಿತ್ರಗಳು ಒಂದು ಜೀವದೊಡಲಲ್ಲೆ ನಿರ್ಜೀವಗೊಳಿಸುವ ಬದುಕನ್ನು ಅದು ಗೂಢವಾಗಿಯೇ ಉಳಿಸಿ ಹೋಗುವ ಬೆಕ್ಕಸಗೊಂಡ ತಲೆಬುರುಡೆಯನ್ನು ನಮ್ಮ ಮುಂದಿಟ್ಟು ದೇವರ ಆಟದ ಮನೆ ಈ ಲೋಕ ಎನ್ನುವಂತೆ ಅಥವಾ ಅರಿವಿಗೆ ಧಕ್ಕದ ಶಕ್ತಿಯ ಲೀಲೆ ಎನ್ನುವ ಹಾಗೆ ಎಂದು ಬುಡಣ ಸಾಬರಿಗೆ ಅನ್ನಿಸುವ ಹಾಗೆ ಬದುಕು ಸಾವಿನ ಆಟದ ಗುಟ್ಟು ಅದರ ರಹಸ್ಯದ ಅಭೇದ್ಯತೆ ಬೆಳಕು-ಕತ್ತಲಿನ ಕಣ್ಣು ಮುಚ್ಚಾಲೆಯಾಟದಲ್ಲಿ ಅನುಭವಕ್ಕೆ ಬರುವ ವಿಶೇಷ ಎಂದು ಹೇಳುತ್ತದೆ. ಹಾಗೆ ವಯಸ್ಸಿಗೆ ಕೂದಲು ನರೆತು, ಮೈ ಮನಸ್ಸುಮಾಗಿದ ಬುಡಣಸಾಬರನ್ನಾಗಲೀ, ಮಳೆಗೆ ಹೆದರಿ ಹಳೆಯ ಮನೆಯೊಳಗೇ ಉಳಿದ ಮುದುಕ ಸದಾಶಿವರಾಯರನ್ನಾಗಲೀ, ಮೊಮ್ಮಕ್ಕಳನ್ನು ಆಡಿಸುವ ಹಲ್ಲಿಲ್ಲದ ಕೋಳಿಗಿರಿಯಣ್ಣನ್ನಗಲೀ ಮುಟ್ಟದೇ ಸಾವು ಎಳೆ ವಯಸ್ಸಿನ ಆಟದ ಹಂಬಲವನ್ನು ಇನ್ನೂ ಮೈತುಂಬ ತುಂಬಿಕೊಂಡಿರುವ ನರಸಿಂಹನನ್ನು ಕೊಂಡುಹೋಗುವ ಜೀವನದಾಟದ ವೈಚಿತ್ರ್ಯ. ಹಾವು ಕಡಿದಿದ್ದರೂ ಇಲ್ಲ ಎಂದು ಭಾವಿಸಿ ಗಾಯಕ್ಕೆ ಸುಣ್ಣ ಹಚ್ಚಿಕೊಂಡ ಬೆರಳು ಕಪ್ಪಗಾಗುವುದು ಕತ್ತಲೆ-ಬೆಳಕಿನ, ಸಾವು-ಬದುಕಿನ ಆಟದ ಇನ್ನೊಂದು ಮುಖ. ಇಲಿಯೋ ಹಾವೋ ಎಂದು ಒಳಮನಸ್ಸಿಗೆ ಅನುಮಾನವಾಗಿ ಆತಂಕಗೊಂಡು, ಅದನ್ನು ಮರೆಯಲು ಆಟಕ್ಕೆ ಮೈಮನಸ್ಸನ್ನು ಒಳಗು ಮಾಡಲು ಯತ್ನಿಸುವುದು ಸಾವಿನ ಭಯದ ಇನ್ನೊಂದು ಮುಖ.

ಈ ಬೆಳಕು-ಕತ್ತಲಿನ ವಿವರಗಳ ಜೊತೆ ಹಾಸುಹೊಕ್ಕಾಗಿರುವ ಇನ್ನೊಂದು ಅಂಶ ಎಂದರೆ ಸತ್ಯ-ಮಿಥ್ಯ, ತಿಳಿವು-ಭ್ರಮೆಗಳ ನಡುವೆ ನಡೆಯುವ ಆಟ, ಮಾಧವ ಹಾವು ಎಂದು ಹೆದರಿದ್ದು ಹಗ್ಗವಾದರೆ ನರಸಿಂಹ ಇಲಿ ಎಂದು ಭಾವಿಸಿದ್ದು ಹಾವಾಗುತ್ತದೆ. ಕಂಬಳಿ ಕುಪ್ಪೆ ಹೊದ್ದ ಮನುಷ್ಯನನ್ನು ಕಂಡು ಬದುಕಿ ಉಳಿಯುವ ಹುಡುಗರು ಥರಥರ ನಡುಗಿದರೆ, ಸಾಯುವ ನರಸಿಂಹನ ಕಣ್ಣಿಗೆ ಅವನು ಹಗ್ಗ ಮಾರಲು ಬಂದ ಬೆಪ್ಪನೊ, ಹುಚ್ಚನೊ ಅಷ್ಟೆ.

ಇಂಥ ಇಮ್ಮೊಗದ ವಿವರಗಳನ್ನು ಎಚ್ಚರದಿಂದ ನೇಯ್ದು, ಅನುಭವಕ್ಕೆ ಬರುವ, ಅಂಟಿಗೆ ಸಿಕ್ಕು ಸಿಗದ ಸಾವಿನ ಆಟದ ಲೀಲೆಯನ್ನು ಒಂದು ವಿಸ್ಮಯಜನಕವಾದ ಸಂಗತಿಯಾಗಿ ಚಿತ್ತಾಲರು ಕಾಣಿಸಿದ್ದಾರೆ. ಅವಿಭಾಜ್ಯ ಅಂಗವಾದ ಸಾವು ಜೀವನದಷ್ಟೆ ಕೌತುಕಪೂರ್ಣವಾದ ಪವಾಡ ಎನ್ನುವುದನ್ನು ಮುಂದೆ ಆಗಮಾಡಿ ತೋರಿಸಿದ್ದಾರೆ.

ಛಲ : ಕತೆಗಿಂತ ಕತೆಯ ಬಂಧ, ಕತೆಯಲ್ಲಿಯ ವಾತಾವರಣ, ಕತೆಯ ನಿರೂಪಣೆ, ಕತೆಯ ಒಟ್ಟು ನಿರೂಪಣೆ ಸಾಮಾನ್ಯ ಕತೆಗೊಂದು ಅದರ ಮೂಲದಲ್ಲಿಲ್ಲದ ಗಹನತೆಯನ್ನೊದಗಿಸುತ್ತದೆ. ಮೃತ್ಯು, ಮೃತ್ಯು ಸದೃಶವಾದ ವಿನಾಶಕಾರಕವಾದ ಛಲ ಇವುಗಳನ್ನು ಅಕ್ಕಪಕ್ಕದಲ್ಲಿಟ್ಟು ನೋಡಿದರೆ ಒಂದು ನೈಸರ್ಗಿಕವಾದರೆ ಇನ್ನೊಂದು ವಿಕೃತ ಎಂದು ಮಾರ್ಮಿಕವಾಗಿ ಕತೆ ಹೇಳುವ ರೀತಿಯಲ್ಲೇ ನಿರಾಯಾಸ ಸೂಚಿತಗೊಳಿಸುವ ವಿಧಾನ ಚಿತ್ತಾಲರ ಕಲಾಸಿದ್ಧಿಯನ್ನು ಸಾರಿ ಹೇಳುತ್ತದೆ. ಆದರೂ ಅಡಿಗರು ಹೇಳುವಂತೆ ಒಂದು ಮಟ್ಟದಲ್ಲಿ ಉತ್ತಮ ಎನ್ನಬಹುದಾದ ಈ ಕತೆ ಅಂತಿಮ ನಿರ್ಣಯದಲ್ಲಿ ಸೋಲುತ್ತದೆ.

ಕಥಾನಾಯಕ ಧಾರವಾಡದಿಂದ ಉತ್ತರಕ್ರಿಯೆಗೆಂದು ಗೋಕರ್ಣಕ್ಕೆ ಬಂದಿರಲು ಸತ್ತ ಅಪ್ಪನಿಗೆ ಪಿಂಡಗಳನ್ನರ್ಪಿಸುವ ಅಧಿಕಾರ ಹಿರಿಯ ಹಾಗೂ ಕಿರಿಯ ಮಕ್ಕಳಿಗೆ ಇದ್ದಷ್ಟು ನಡುವಿನವನಾದ ನಾಯಕನಿಗಿಲ್ಲ ಎಂತಲೇ ಈ ಎಲ್ಲ ವಿಧಿಕಾಂಡಗಳಲ್ಲಿ ನನ್ನ ಸ್ಥಾನ ಗೌಣ ಎಂಬ ಬಗೆಗಿನ ರೀತಿ-ರಿವಾಜುಗಳ ಬಗೆಗೆ ನೋವಿದೆ. ಈ ಕತೆಯಲ್ಲಿನ ಪ್ರಧಾನ ಪಾತ್ರವಾದ ಪದ್ದಕ್ಕ ಇಲ್ಲಿ ಛಲಕ್ಕೆ ಹೆಸರಾದವಳು, ತನ್ನ ಗಂಡ ಪಿತ್ರಾರ್ಜಿತ ಆಸ್ತಿಯನ್ನು ಮಾರಿದುದರ ಹಿನ್ನೆಲೆಯಲ್ಲಿ.

೧"ನಿಮ್ಮ ಅಜ್ಜ-ಮುತ್ತಜ್ಜರಿಂದ ಬಂದ ನೆಲ ಎಂಬ ಅಭಿಮಾನ ಎಳ್ಳಷ್ಟು ಬೇಡವೇ? ನಿಮ್ಮಂತ ಅಭಿಮಾನವಿಲ್ಲದ ಮನುಷ್ಯನನ್ನು ನಾ ಜನ್ಮದಲ್ಲಿ ಕಂಡಿಲ್ಲ"೧ ಎನ್ನುತ್ತಾಳೆ. ಆಕೆಯ ಈ ಮಾತಿನಲ್ಲಿ ಆಕೆಯ ಮನಃಸ್ಥಿತಿಯನ್ನು ಅರಿಯಲು ಸಾಧ್ಯವಿದೆ. ಆಕೆ ತನ್ನ ಗಂಡನ ಈ ತಪ್ಪಿಗಾಗಿ ತಾನು ಮನನೋಯುತ್ತಾಳೆ. ತನ್ನ ಶತೃಗಳೆಂದು ಭಾವಿಸಿದವರಿಗೆ ಈ ನೆಲವನ್ನು ಕೊಟ್ಟ ತಪ್ಪಿಗಾಗಿ ೨"ನೀವು ಈಗ ಮಾರಿದ ನೆಲವನ್ನು ತಿರುಗಿ ಕೊಂಡು ಅದು ಸಾಧ್ಯವಾಗದಿದ್ದಲ್ಲಿ ಅದರ ಮಗ್ಗುಲಲ್ಲಿಯ ಜಾಗ ಕೊಂಡು ನಮ್ಮದೇ ಆದ ಮನೆಯನ್ನು ಕಟ್ಟುವ ತನಕ ಈ ಬೆಂಕಿಯ ಮೇಲೆ ಬೇಯಿಸಿದ ಅನ್ನವ ಉಣ್ಣಲಾರೇ..."೨ ಎಂದು ಶಪಥಗೈದು ಅಂತೆಯೇ ನಡೆಯುತ್ತಾಳೆ. ಇಲ್ಲಿ ತನ್ನ ಶತೃಗಳಿಗೆ ತಮ್ಮ ನೆಲವನ್ನು ಮಾರಿದ ಗಂಡನ ಮತ್ತು ಶತೃಗಳ ಬಗೆಗೆ ಆಕ್ರೋಶವಿದೆ. ಹಾಗಾಗಿಯೇ ಆ ಕೆಲಸವನ್ನು ತನ್ನ ಮಗನ ಸಹಾಯದಿಂದ ಮಾಡಿಯೇ ತೀರುತ್ತಾಳೆ. ತನ್ನ ಮನೆ ಕಟ್ಟಲು ತ್ರಿವಿಕ್ರಮ ಕಳಿಸಿದ ಹಣದಲ್ಲಿ ಅರ್ಧ ತನ್ನ ದಾಯಾದಿಯ ಮಗ ಕಳಿಸಿದ್ದಂತೆ. ತನ್ನ ತಂದೆಯ ತಪ್ಪಿಗಾಗಿ ಪ್ರಾಯಶ್ಚಿತ್ತಗೊಂಡು ತಾನು ಕಳಿಸಿದಂತೆ. ಮೊನ್ನೆ ಬೆಳ್ಳಿಯ ಗಂಟೆಗೆಂದು ಕಳಿಸಿದ ಹಣ ಕೂಡ ಆತನದೇ ಅಗಿರಬಹುದು ಎಂದು ಕಥಾನಾಯಕನಿಗೆ ಪದ್ದಕ್ಕ ಹೇಳುತ್ತಾಳೆ.

೧. ಯಶವಂತ ಚಿತ್ತಾಲ: ಐವತ್ತೊಂದು ಕತೆಗಳೂ::ಪುಟ ೨೦೭ ೨. ಅದೇ ಪುಟ-೨೦೮

ಆಕೆಯ ಹಠ, ಛಲ, ಇಲ್ಲಿ ಧ್ವನಿತವಾಗಿದ್ದು ಹಾಗೇನಾದರೂ ತನ್ನ ಮಗ ಅವರ ಸಹಾಯವನ್ನು ಪಡೆದಿದ್ದು ನಿಜವಾದರೆ ೧"ಯಾವುದರ ಮೇಲೆ ಅಟ್ಟ ಅನ್ನಕ್ಕೆ ನಾನು ಈವರೆಗೆ ಎರವಾದೆನೋ ಅದೇ ಬೆಂಕಿಯಲ್ಲಿ ಈ ಮನೆಯನ್ನು ಸುಡುತ್ತ ನನ್ನನ್ನು ಸುಟ್ಟುಕೊಳ್ಳುತ್ತೇನೆ. ನನ್ನ ಹೆಣ ಸುಡುವ ಅಧಿಕಾರ ಸಹ ಅವನಿಗಿಲ್ಲ."೧ ಎಂದು ಶಪಥಗೈಯ್ಯುತ್ತಾಳೆ. ಜೊತೆಗೆ ತನ್ನ ಮಗನೇನಾದರೂ ದಾಯಾದಿಯ ಮಗನ ಹಣ ಪಡೆದಿದ್ದು ನಿಜ ಆದರೆ ಶ್ರಮವಹಿಸಿ ಅವರ ಬಿಡಿಗಾಸನ್ನೂ ಬಿಡದೆ ವಾಪಸ್ಸು ಮಾಡಲು ಹೇಳುವುದಾಗಿ ತಿಳಿಸುತ್ತಾಳೆ. ಇಲ್ಲಿಯ ಆಕೆಯ ಇಂತಹ ಕಠಿಣ ನಿಲುವಿಗೆ ಆಕೆಗೆ ಆಗಿದ್ದ ಆಘಾತವೂ ಕಾರಣವಿರಬಹುದು.

ಆದರೆ ಈಕೆಯ ಹಠದ ಬಗೆಗೆ / ಛಲದ ಬಗೆಗೆ ಸಮಾಜವು ಆಡುವ ಮಾತಿನಂತೆ ಭಟ್ಟರು, ೨"ಚೌಡಿ! ಚೌಡಿಯದೇ ಅವತಾರ, ಅವಳ ದೇವರ ಭಕ್ತಿಯೇ! ಮಗ ಸಾಯಲು ಬಿದ್ದಾಗ ಮನೆಯಲ್ಲಿದಳೇ? ಗಂಡ ಪಾಪ ಇವಳ ಕೃತ್ಯಗಳಿಗೆ ವಿಲಿವಿಲಿ ಒದ್ದಾಡಿ ನೀರಿನ ತಳ ಕಾಣಲಿಲ್ಲವೇ? ಅದೆಂತಹ ಪಾಷಾಣದಂತಹ ಮನಸ್ಸಪ್ಪಾ, ಗಂಡ ಸತ್ತು ವರ್ಷವೂ ಕಳೆದಿರಲಿಕ್ಕಿಲ್ಲ, ಮೈಮೇಲಿನ ಬಂಗಾರ ಮಾರಿ ಈಗ ಮನೆ ಕಟ್ಟಿದ ಜಾಗ ಕೊಂಡಳಲ್ಲ, ಮಗನನ್ನು ಕಾಡಿ, ಬೇಡಿ ತುಂಬುತ್ತ ತಡವುತ್ತಲಾದರೂ ಗಂಡನನ ಧೈರ್ಯದಿಂದ ತಾನೇ ಎಲ್ಲ ದೇಖರೇಖ ನಡೆಸಿ ಮನೆಯನ್ನು ಕಟ್ಟಿಸಿದಳಲ್ಲ"೨ ಎಂಬ ಮಾತಿನಲ್ಲಿ ಆಕೆಯ ಅಭಿವೃದ್ಧಿಯನ್ನು ಸಹಿಸದ ಹಾಗೂ ಆಕೆಯ ಛಲದ ಬಗೆಗೆ ಬೇರೆಯದೇ ರೀತಿಯಲ್ಲಿ ನೋಡುವ, ಆಕೆಯ ಸಾಧನೆಯನ್ನು ಸಹೃದಯತೆಯಿಂದ ಗಮನಿಸದ ಸ್ಥಿತಿಯು ಕಾಣಸಿಗುತ್ತದೆ.

ಕತೆಯಾದಳು ಹುಡುಗಿ ಕಥಾಸಂಕಲನದಲ್ಲಿನ ಕತೆಗಳೆಲ್ಲವೂ ಆರಂಭವಾಗುವುದು ಬನ್ನಿ ಕುಳಿತುಕೊಳ್ಳಿ. ಒಂದು ಕತೆ ಹೇಳುತ್ತೇನೆ ಎಂಬಂಥ ಪಾಠಕರನ್ನು ಉದ್ದೇಶಿಸಿ ಆಡುವಂತಹ ಸಾಂಪ್ರದಾಯಿಕ ಮಾತುಗಳಿಂದ, ಈ ಸಂಕಲನದಲ್ಲಿನ ಕತೆ ಕತೆಯಲ್ಲಿ ಬಂದಾತ ಮನೆಗೂ ಬಂದು ಕತ ತಟ್ಟಿದ.

ಕತೆಯಲ್ಲಿ ಬಂದಾತ ಮನೆಗೂ ಬಂದು ಕದ ತಟ್ಟಿದ : ಕತೆ ಮಹತ್ವವಾದುದು. ಸಕ್ಕರೆ ನಿದ್ರೆಯಲ್ಲಿದ್ದ ಕತೆಗಾರರನ್ನು ಕದತಟ್ಟಿ ಎಬ್ಬಿಸಿ ತುಂಬಾ ಆತ್ಮೀಯನಂತೆ ವರ್ತಿಸಿ, ಕತೆ ಬರೆಯಲು ಕೂರುವ ಬಾಲ್ಕನಿ, ಆ ಮನೆ, ಎದುರಿಗೆ ಕಾಣುವ ಸಮುದ್ರ ಇತ್ಯಾದಿಗಳ ಬಗೆಗೆ ಮಾತನಾಡಿ ಕೊನೆಗೆ ತಬ್ಬಿಬ್ಬಾದ ಕಥೆಗಾರರನ್ನು ನೋಡಿ ಆ ನಂತರ ಪರಿಚಯ ಮಾಡಿಕೊಳ್ಳುವ ವೋಮು ಬಹಳ ಅದ್ಭುತ ಪಾತ್ರವಾಗಿ ನಿಲ್ಲುತ್ತಾನೆ.

೩"ನಾನು ನಿಮ್ಮ ವೋಮೂ ಸರ್, ನಿಮ್ಮ ಇತ್ತೀಚಿನ ಕತೆಯಲ್ಲಿ ಬಂದ ಹರಿಜನರ ಹುಡುಗ "೩ಎಂದು ಪರಿಚಯ ಮಾಡಿಕೊಳ್ಳುತ್ತಾನೆ. ಆದರೆ ವಿನಾಯಕ ವೋಮುವಿನ ಬಗೆಗೆ ಹೇಳಿ ಕತೆಗಾರರು ಈ ಬಗ್ಗೆ ಒಂದು ಕತೆ ಬರೆಯಬೇಕೆಂದು ಒತ್ತಾಯ ಪಡಿಸಲಾಗಿ ಲೇಖಕರು ಬರೆದರು. ಆದರೆ ಆ ಕತೆಯಲ್ಲಿ ತನ್ನ ತಂದೆ ಬೆಂಕಿಯಲ್ಲಿ ಸತ್ತಿದ್ದ ಆಘಾತವೂ ಹೇಗೆ ಕತೆಯಲ್ಲಿ ಬೇರೆಯ ಪಾತ್ರಗಳ ಮೂಲಕ ಅಭಿವ್ಯಕ್ತವಾಗುತ್ತದೆಂಬುದು ಗಮನಾರ್ಹ

---

೧. ಯಶವಂತ ಚಿತ್ತಾಲ: ಐವತ್ತೊಂದು ಕತೆಗಳೂ::ಪುಟ ೨೧೨

೨. ಆದೇ ಪುಟ-೨೧೦ ೩.ಆದೇ ಪುಟ-೨೧೯

ವೋಮು ಬಂದವನೆ ಸರಸರನೆ ಮಾತನಾಡಿ ವಾಹಗನನಂತೆ ವರ್ತಿಸಿ ಕೊನೆಗೆ ತಾನೇ ಲೇಖಕರಿಗೊಂದು ಕತೆ ಹೇಳುತ್ತಾನೆ. ಸೇಲ್ಸ್‌ಮನ್ ತನ್ನ ಸ್ನೇಹಿತನೇ ಆದ, ಹೊಸದಾಗಿ ಎಂ.ಡಿ. ಆದವನೆದುರು ತನಗೆ ಬಡ್ತಿ ಕೊಡಬೇಕೆಂದು ಕೇಳಲು ಹೋದಾಗ ಜಗಮಗಿಸುವ ವಿದ್ಯುದ್ದೀಪಗಳ ನಡುವೆ ಸ್ನೇಹಿತನ ಬಗೆಗೆ ಮಾತನಾಡದೆ ಎಂ.ಡಿ. ವ್ಯಾವಹಾರಿಕ ಮಾತನಾಡಿ ವಿದ್ಯುದ್ದೀಪಗಳು ನಂದು ಮೇಣದಬತ್ತಿ ಬಂದೊಡನೆ ತನ್ನ ಸ್ನೇಹಿತನನ್ನು ಆತ್ಮೀಯವಾಗಿ ಮಾತನಾಡಿಸುತ್ತಿರುವಾಗ ಸೇಲ್ಸ್‌ಮನ್ ಬಡ್ತಿ ಬಗೆಗೆ ಮಾತನಾಡಲು ಸುಸಮಯವೆಂದುಕೊಳ್ಳುತ್ತಿರುವಾಗಲೇ ಮತ್ತೆ ವಿದ್ಯುದ್ದೀಪಗಳು ಜಗಮಗಿಸಲಾರಂಭಿಸುತ್ತವೆ. ಮತ್ತೆ ಸ್ನೇಹಿತರ ಮಾತು ವ್ಯಾವಹಾರಿಕರ ಮಾತಾಗಿ ಪರಿಣಮಿಸುತ್ತದೆ. ಇಲ್ಲಿ ಎಂ.ಡಿ.ಗೆ ವಿದ್ಯುದ್ದೀಪಗಳ ಬೆಳಕಿನಲ್ಲಿ ತನ್ನ ಸ್ನೇಹಿತನೂ ಕಾಣಲಾರ, ಬರೇ ವ್ಯಾವಹಾರಿಕ ಮನಃಸ್ಥಿತಿ ಮಾತ್ರ ಜೀವಂತವಾಗಿರುತ್ತದೆ. ಅದೇ ಮೇಣದಬತ್ತಿಯ ಬೆಳಕಿನಲ್ಲಿ ಸ್ನೇಹಿತ ಮತ್ತು ಆತನ ಸಂಸಾರದ ಬಗೆಗೂ ವಿಚಾರಿಸುವಂತಹ ಪ್ರವೃತ್ತಿ. ಆದರೆ ಸೇಲ್ಸ್‌ಮನ್ ವಿದ್ಯುದ್ದೀಪ, ಮೇಣದಬತ್ತಿ ಎರಡರ ಬೆಳಕಿನಲ್ಲೂ ಸ್ನೇಹಿತನನ್ನೇ ಕಾಣುತ್ತಾನೆ. ಇಲ್ಲಿ ಸೇಲ್ಸ್‌ಮನ್ ಎಂ.ಡಿ. ವಿರುದ್ಧ ಮುಖಗಳಾಗಿ ನಿಲ್ಲುತ್ತಾರೆ. ಈ ಕತೆಯನ್ನು ವೋಮೂ ಲೇಖಕರಿಗೆ ಹೇಳುವಲ್ಲಿ ಆತನು ಸೇಲ್ಸ್‌ಮನ್‌ನನಾಗೇ ಕಾಣಿಸುತ್ತಾನೆ. ಇಲ್ಲಿ ಮೋಮೂವಿನ ಮನಃಸ್ಥಿತಿಯನ್ನು ಅರಿಯಬೇಕಾಗುತ್ತದೆ.

ವೋಮೂ ತಾನು ಬಂದ ಉದ್ದೇಶವನ್ನು ಹೇಳದೆ ಅದನ್ನು ಪತ್ರದಲ್ಲಿ ಬರೆದಿರುವುದಾಗಿ, ತಾನು ಹೋದ ನಂತರ ಆ ಪತ್ರವನ್ನು ಓದಬೇಕಾಗಿ ತಿಳಿಸಿ ಹೊರಟು ಹೋಗುತ್ತಾನಾದರೂ ಆನಂತರ ಲೇಖಕರ ಮನದಲ್ಲಿ ಚಿರಾಯುವಾಗಿ ಉಳಿದುಬಿಡುತ್ತಾನೆ. ವೋಮೂ ಕೊಟ್ಟ ಪತ್ರದಲ್ಲಿ ಒಂದು ಕತೆಯಿರಬಹುದೆಂದು ಊಹಿಸಿದ ಲೇಖಕರು ತಮ್ಮ ವ್ಯಾವಹಾರಿಕ ಪ್ರವಾಸದಲ್ಲಿ ತೊಡಗಿ ನಂತರದ ಒಂದು ವಾರದಲ್ಲಿ ಓದುವುದು ಅವರು ತೋರಿದ ನಿರ್ಲಕ್ಷ್ಯ ಮನಃಸ್ಥಿತಿಗೆ ಸಾಕ್ಷಿ.

ವೋಮೂವಿನ ಪತ್ರ ಹೀಗಿತ್ತು ೧"ಸರ್! ನಿಮ್ಮ ಬಾಲ್ಕನಿಯಿಂದ ಕಾಣುವ ಲೋಕದಿಂದ ತೀರ ಬೇರೆಯಾದ ಒಂದು ಲೋಕವನ್ನು ನೋಡುವುದಿದ್ದರೆ ಇಲ್ಲಿ ಈ ಯಾದಿಯಲ್ಲಿ ಹೇಳಿದ ಜಾಗಕ್ಕೆ ಬನ್ನಿ,; ನಮ್ಮ ಯೂನಿಯನ್ನಿನ ಅಪೇಕ್ಷೆಗಳು ಎಷ್ಟು ಸಾಧುವಾಗಿವೆ ಎನ್ನುವುದು ನಿಮಗಾದರೂ ತಿಳಿಯುತ್ತದೆ. ಅವರ ಬದುಕಿನ ರೀತಿಯನ್ನು ಕಣ್ಣಾರೆ ನೋಡುವ ಅವಕಾಶವೂ ಸಿಗುತ್ತದೆ.."೧. ಎಂಬಿತ್ಯಾದಿಯಾಗಿ ಸಹಾಯ ಯಾಚನೆಯನ್ನು ಕಂಡಾಗ ಲೇಖಕರ ಮನಸ್ಸು ಮರುಗುತ್ತದೆಯಾದರೂ ನಿಶ್ಚಯವಾಗಿಯೂ ಆ ಕೆಲಸ ನನ್ನಿಂದ ಆಗುತ್ತಿರಲಿಲ್ಲ ಎಂಬುದೇ ಅವರ ಉತ್ತರ. ಆ ವೋಮುವಿನ ಸಹಾಯ ಹಸ್ತಕ್ಕೆ ಲೇಖಕರಿಂದ ಸಹಾಯ ಮಾಡಲಾಗದ ಪರಿಸ್ಥಿತಿ ಇದ್ದುದನ್ನು ಅವರೇ ಕತೆಯಲ್ಲಿ ಹೇಳುತ್ತಾರೆ. ೨ "ಒಳಗೆ ಬರಲೇ ಸರ್ ಎಂದು ನಿರ್ಧಾರದ ಹೆಜ್ಜೆ ಇಡುತ್ತ ಒಳಗೆ ಬಂದನೆಂದರೆ ಬಂದವನು ಯಾರೆಂಬುದರ ಬಗ್ಗೆ ಸಂಶಯವೇ ಬೇಡ. ಕುಳ್ಳಿರಿಸಿಕೊಂಡು ನಾನು ಅವನ ದಾರಿ ಕಾಯುತ್ತಿರುವುದರ ಬಗ್ಗೆ ದಯಮಾಡಿ ತಿಳಿಸಿರಿ. ಅವನಿಂದ ಅವನ ಪತ್ತೆ ತಿಳಿದು ನನಗೊಂದು ಸಾಲಿನದಾದರೂ ಪತ್ರ ಬರೆಯಿರಿ. ಅಲ್ಲಿಯವರೆಗೂ ಅವನು ಸತ್ತಿಲ್ಲ. ನಮ್ಮಲ್ಲಿ ಯಾರೂ ಅವನ ಕೊಲೆ ಮಾಡಿಲ್ಲ, ಎಂಬ ಒಂದೇ ಒಂದು ಭರವಸೆಗೆ ಜೋತುಬಿದ್ದು ಇಲ್ಲಿಯ ಜೋಪಡಿಪಟ್ಟಿಗಳಿದ್ದ ವಸತಿಗಳನ್ನೆಲ್ಲ ಸುತ್ತುತ್ತಿರುತ್ತಾನೆ. ಅವನು ಕಣ್ಣಿಗೆ ಬೀಳುವ ತನಕ ಅಥವಾ ನಿಮ್ಮಿಂದ ಸುದ್ದಿ ತಿಳಿಯುವ ತನಕ ಈ ಕತೆಯನ್ನು ಅಪೂರ್ಣವಾಗಿಯೇ ಇರಿಸುತ್ತೇನೆ. (ಸಶೇಷ)"೨ ಎಂದು ಕತೆಯನ್ನು ಮುಗಿಸುವುದು ಗಮನಾರ್ಹ.

೧.ಯಶವಂತ ಚಿತ್ತಾಲ: ಐವತ್ತೊಂದು ಕತೆಗಳೂ:೨೨೬ ೨. ಅದೇ ಪುಟ ೨೨೯

ಅಶ್ವತ್ಥಾಮನ್ : ಈ ಕತೆಯಲ್ಲಿ ಕವಿಯ ಕಾಳಜಿಯು ಉತ್ತಮವಾಗಿಯೇ ಕೆಲಸ ಮಾಡಿದೆ ಆತ ಇಡೀ ರಾತ್ರಿ (ರಾಮಚಂದ್ರ) ಕತೆಯನ್ನು ಬರೆಯುತ್ತಾನಾದರೂ ಅದು ಮತ್ತೆ ಓದಲಾಗದ ರೀತಿಯಲ್ಲಿ ಲಿಖಿತ ರೂಪದಲ್ಲಿ ದಾಖಲಾಗಿರುತ್ತದೆ. ವಾಸುವಿಗೂ ಕೂಡ ನಿನ್ನ ಪಾತ್ರವೂ ತಾನು ಬರೆದ ಕತೆಯಲ್ಲಿ ಚಿತ್ರಿತವಾಗಿದೆ ಎಂದು ಹೇಳುತ್ತಾನಾದರೂ ಆ ಕತೆಯು ಓದಲಾಗದ ಸ್ಥಿತಿಯಲ್ಲಿ ಬರವಣಿಗೆಯನ್ನು ಕಂಡಿದೆ. ಎಂಬುದರ ಅರಿವು ರಾಮಚಂದ್ರರಿಗೇ ತಿಳಿಯದ ವಿಚಾರ. ಆ ವಿಚಾರವು ಕಥೆಯನ್ನು ವಾಸುವಿಗೆ ಓದಿ ಹೇಳಲು ನೋಡಿದಾಗಲೇ ಆತನ ಅರಿವಿಗೆ ಬರುವುದಾಗಿದೆ.

ಕಾಶಿಗೆ ಹೋಗಿ ಸತ್ತ ಮುದುಕಮ್ಮನ ಬಗೆಗೆ ಈತ ಬರೆದೆನೆಂದು ಹೇಳುವಾಗ ವಾಸೂ ತನ್ನ ಬಗೆಗೂ ಬರೆದಿರಬಹುದೆಂದು ಕುತೂಹಲದಿಂದ ಕೇಳುವುದು ಹೇಳುವಾಗ ಮನಸ್ಸಿಗೆ ಸಾಕ್ಷಿಯಾಗಿದೆ. ಅಂತೆಯೇ ವೀಣಾ ಕತೆಗಾರರ ಪ್ರೇಯಸಿ ಆಕೆಯು ಮುದುಕಿಯ ಬಗೆಗೆ ರಾಮಚಂದ್ರು ದಹಿಸುತ್ತಿದ್ದ ಅತೀವ ಕಾಳಜಿಯಿಂದ ನೊಂದ ವೀಣಾ ೧"ಅವಳು ಕುರೂಪಿಯಾದ ಮುದುಕಿಯಾಗಿರದಿದ್ದರೆ ಅವಳು ನಿಮ್ಮ ಚಿಕ್ಕಂದಿನ ಪ್ರೇಯಸಿಯೆಂದು ಸಂಶಯಪಡುತ್ತಿದ್ದೆ."೧ ಎಂಬಂತೆ ಸಾತಕ್ಕನ ಬಗ್ಗೆ ವೀಣಾಗೆ ಅನ್ನಿಸಿದ ಅಸೂಯೆಯ ಮಾತು ಕೂಡ ಮುಗ್ಧತೆ ಮತ್ತು ಬರಿಯ ಪ್ರೀತಿಯನ್ನೇ ಬಯಸುವ ವೀಣಾಳ ಮನಃಸ್ಥಿತಿ ಅರಿವಿಗೆ ಬರುತ್ತದೆ.

ವಾಸೂ ತನ್ನನ್ನ ಕತೆಯಲ್ಲಿ ನಾಗಪ್ಪನ ಪಾತ್ರವಾಗಿ ಚಿತ್ರಿಸಿರುವುದಾಗಿ ಹೇಳಿದಾಗ ತನ್ನ ಬಗೆಗೆ ನಿಮಗೆ ಗೊತ್ತಿಲ್ಲ ರಾಯರೇ ಎನ್ನುತ್ತ ತನ್ನನ್ನ ಸಾಕಿ ಸಲಹಿದ ಅಕ್ಕನ ಬಗೆಗೆ ಕತೆ ಬರೆಯಬೇಕೆಂದು ಬಯಸುವ ಆತ ಒಂದು ಅದ್ಭುತ ವ್ಯಕ್ತಿತ್ವವೆಂಬಂತೆ ಕಟ್ಟಿನಿಲ್ಲುತ್ತಾನೆ.

ರಾಮಚಂದ್ರರು ನೂರಕ್ಕೂ ಮೀರಿದ ಪುಟಗಳಲ್ಲಿ ತೋಡಿಕೊಂಡದ್ದೆಲ್ಲ ಬರಿಯ ಗೀಚು ಗೀಚಾಗಿತ್ತೇ ಹೊರತು ಓದಲು ಶಕ್ಯವಾದ ಅಕ್ಷರಗಳಾಗಿ ಮೂಡಿರಲಿಲ್ಲ. ಆದರೂ ಇಡೀ ರಾತ್ರಿ ಬರೆದ ಆ ಕತೆಯಲ್ಲಿ ಓದಲು ಶಕ್ಯವಾದಂತ ಕೆಲವು ವಾಕ್ಯಗಳಿದ್ದವು ಅವೆಲ್ಲವೂ ಮನದಾಳದ ಯಾವುದೋ ಮೂಲೆಯಲ್ಲಿ ಹುದುಗಿದ ಪಶ್ಚಾತ್ತಾಪ ಮತ್ತು ನೋವಿನ ಬೇಗುದಿಯಿಂದ ಬಂದ ಮಾತುಗಳೇ ಸರಿ.

ಕಾಶಿಯಾತ್ರೆಗೆ ಹೊರಟ ಸಾತಕ್ಕನ ಸಾವಿನ ವಿಚಾರ ತಿಳಿದ ರಾಮಚಂದ್ರರಿಗೆ ಪ್ರತಿಯೊಂದು ಸಾವಿಗೆ ನಾನೇ ಕಾರಣವೇನೋ ಎನ್ನುವಂತಹ ಭ್ರಮೆಯಾಗುತ್ತದೆ. ಇದಕ್ಕೆ ಮೂಲ ಕಾರಣ ಪಾರ್ವತಿಯ ಸಾವು. ಆಕೆಯ ಸಾವಿಗೆ ತಾನೇ ಕಾರಣನೆಂಬ ಪಶ್ಚಾತ್ತಾಪ ಇತರರ ಸಾವಿನಲ್ಲೂ ಅನುಭವಿಸುವ ಮನೋಸೂಕ್ಷ್ಮತೆ ಆತನದು. ಹಾಗಾಗಿಯೇ ಸತ್ತವಳು ಸಾತಕ್ಕ. ಪಾರ್ವತಕ್ಕಳೆಂದೇಕೆ ಹೇಳುವಿರಿ? ಎಂಬ ವೀಣಾಳ ಮಾತಿಗೆ ರಾಮಚಂದ್ರ ಕುಗ್ಗುವುದಕ್ಕೂ ಇದೇ ಕಾರಣ.

ಮನಸ್ಸಿನ ಭಾವನೆಗಳೇ ಬರವಣಿಗೆಯಲ್ಲಿ ಅಭಿವ್ಯಕ್ತವಾಗುವುದು ಸಹಜವೇ ಸರಿ. ಹಾಗಾಗಿ ರಾಮಚಂದ್ರನಿಗೆ ಬರೆಯಲು ಕೂತರೆ ಪಾರ್ವತಿಯ ಸಾವೇ ಪ್ರಧಾನವಾಗಿ ನಿಲ್ಲುತ್ತದೆ. ಹಾಗಾಗಿಯೇ... ೨"ಕತೆ ಬರೆಯುವುದನ್ನು ಎಂದೋ ನಿಲ್ಲಿಸಿದ್ದೇನೆ... ಬರೆದರೂ ಪ್ರಕಟಿಸುವುದನ್ನು..... ಬರೆಯಲು ಕೂತರೆ ನನಗರಿವು ಇಲ್ಲದೇನೆ ಪಾರ್ವತಿಯ ಸಾವಿನ ನೆರಳೇ ಎದ್ದು ಬರುತ್ತದೆ.."೨ ಎಂದು ಹೇಳುವುದಾಗಿದೆ.

---

೧. ಯಶವಂತ ಚಿತ್ತಾಲ: ಐವತ್ತೊಂದು ಕತೆಗಳು:೨೬೧ ೨. ಆದೇ ಪುಟ-೨೬೪

ಸಾಮಾನ್ಯ ಮನಃಸ್ಥಿತಿಯು ಹೇಗೆಂದರೆ ಬೇಕೆಂದು ಬಯಸಿದ್ದು ಸಿಗುವವರೆಗೂ ಕಾಯ್ದು ಅದು ದಕ್ಕುವ ಸಂದರ್ಭದಲ್ಲಿ ಅದು ನಮ್ಮನ್ನು ಸೇರದಂತೆ ಕಾರ್ಯ ನಿರ್ವಹಿಸುವವರನ್ನು ಕಂಡಾಗ ಅವರು ನಾಶವಾದರೆ ನಾನು ಬಯಸಿದ್ದೆಲ್ಲ ದಕ್ಕುತ್ತದೆಂಬ ಭಾವ ಸಹಜವೇ ಸರಿ. ಇಲ್ಲಿಯೂ ರಾಮಚಂದ್ರ ಪಾರ್ವತಿಯನ್ನು ಸೇರುವುದನ್ನು ತಡೆಯುವ ತಂದೆ-ತಾಯಿಗಳೇ ಇಲ್ಲವಾದರೆ ಎಂಬ ಮನಃಸ್ಥಿತಿಗೆ ರಾಮಚಂದ್ರ ಬಂದು ನಿಲ್ಲುತ್ತಾನೆ. ೧"ನಾನು ಹುಟ್ಟಿದ್ದೇ ಅಪ್ಪನಿಗೆ ವಿರಕ್ತಿ ಬಂದು ತೀರ್ಥಯಾತ್ರೆಗೆ ಹೊರಟು ಹೋಗಿದ್ದರೆ ಅಥವಾ ಶೂದ್ರಳಾದ ನಿನ್ನೊಡನೆ ಮದುವೆಯಾದರೆ ಬಾವಿಯಲ್ಲಿ ಹಾರಿ ಜೀವ ತೆಗೆದುಕೊಳ್ಳುತ್ತೇನೆಂದು ಚಂಡಿಯ ಅವತಾರವಾದ ಅಮ್ಮ ನಾನು ಹುಟ್ಟುವಾಗಲೇ ಸತ್ತುಹೋಗಿದ್ದರೆ.."೧ ಎಂದು ಬಯಸುವ ಮನಃಸ್ಥಿತಿ ಅನ್ಯರಿಗೆ ಕೇಡು ಬಯಸುವಂತಹುದಲ್ಲ, ಬದಲಿಗೆ ಧಕ್ಕಲು ಬೇಕಾದ ಮಾರ್ಗೋಪಾಯಗಳನ್ನು ಹುಡುಕುವ ಮನಃಸ್ಥಿತಿಯಾಗಿದೆ.

ಅತೀವ ಪ್ರೀತಿ-ಆತ್ಮೀಯರ ಅಗಲಿಕೆಯಿಂದ ಆರಂಭದಲ್ಲಿ ಆದ ನೋವು ಅಂತ್ಯದವರೆಗೂ ಅದೇ ಉತ್ಕಟತೆಯಿಂದಿರಲಾರದಾದರೂ, ತನ್ನಿಂದಲೇ ಆಕೆಯು ಸತ್ತಳೆಂದು ನೊಂದ ಮನಸ್ಸಿಗೆ ತಾನು ತೆಗೆದುಕೊಂಡ ನಿರ್ಧಾರ ಹಾಗೂ ಪಲಾಯನವಾದಿತನದಿಂದ ತಾನು ಪ್ರೀತಿಸಿದವಳ ಸಾವಾಯಿತೆಂಬ ನೋವು ಆಕೆಯ ಸಾವಿನ ವಿಚಾರ ಕೇಳಿದಾಗ ಆದ ನೋವಿನ ಉತ್ಕಟತೆ ಈತನ ಅಂತ್ಯದವರೆಗೂ ಅದೇ ಉತ್ಕಟತೆಯಿರುತ್ತದೆ ಎಂಬುದಕ್ಕೆ ರಾಮಚಂದ್ರನ ಬರಹ, ಮಾತು, ಮನಸ್ಥಿತಿಯೇ ಕಾರಣ ೨ " ನಿನ್ನ ಸಾವಿನ ದುಃಖವನ್ನು ಮೊತ್ತ ಮೊದಲು ಅನುಭವಿಸಿದಾಗಿನ ಉತ್ಕಟತೆಯಿಂದಲೇ ತಿರುತಿರುಗಿ ಅನುಭವಿಸುವ ಹಾಗೆ ಇಂತಹ ಹೊಸ ಹೊಸ ತಂತ್ರಗಳನ್ನು ಯೋಜಿಸುತ್ತೇನೆ. ಬೆನ್ನ ಹುರಿಯಲ್ಲೇ ಬೇರುಬಿಟ್ಟ ಈ ಪಾಪಪ್ರಜ್ಞೆಯಿಂದ ನವೆಯುತ್ತ ಕೆಂಪು ಜ್ವಾಲೆಯ ನಾಲಗೆಗಳಿಂದ ಕಾಲ ದಿಕ್ಕುಗಳನ್ನು ನೆಕ್ಕುತ್ತ ಉರಿದ ನಿನ್ನ ಚಿತೆಯಿಂದಲೇ ಎತ್ತಿಕೊಂಡಂತಿದ್ದ ಈ ಸುಡುವ ಕೆಂಡಗಳನ್ನು ತಲೆಯಲ್ಲಿ ಹೊತ್ತು ಮೂಲೆ-ಮೂಲೆಗಳಲ್ಲಿ ತಂಪನ್ನರಸುತ್ತ ಅಲೆಯುತ್ತಿರುತ್ತೇನೆ......."೨ ಎಂದು ನೊಂದು ನುಡಿಯುವ ಮಾತುಗಳು ಮನದಾಳದಿಂದ ಬಂದಂತವುಗಳೇ ಹೊರತು ಕೃತಕವಾದವುಗಳಲ್ಲ. ಇಡೀ ಕತೆಯಲ್ಲಿ ತಾನು ಕತೆಯನ್ನು ಇಡೀ ರಾತ್ರಿ ಬರೆಯುತ್ತಾನಾದರೂ ಅದು ಪೂರ್ಣ ದಾಖಲಾಗಿರುವುದಿಲ್ಲ, ದಾಖಲಾದ ಅಲ್ಪ-ಸ್ವಲ್ಪ ಮಾಹಿತಿಯೂ ಕೂಡ ಆತನ ಪಶ್ಚಾತ್ತಾಪದ, ಮನದಾಳದ ನೋವಿನ ಸಂಗತಿಗಳೇ ಆಗಿವೆ. ಒಟ್ಟಾರೆ ಈ ಕತೆಯು ಒಂದು ಅದ್ಭುತ ರಚನೆಯಾಗಿದ್ದು ಈ ಕತೆಯ ತಂತ್ರಗಾರಿಕೆಗೆ ಕತೆಗಾರರೂ ಎಲ್ಲಿಯೂ ಪೆಟ್ಟಾಗದಂತೆ ಬಹು ಕಾಳಜಿ ವಹಿಸಿರುವುದು ಗಮ್ಯವಾಗುತ್ತದೆ.

ಮುಖಾಮುಖಿ : ವಸ್ತು ಚಿತ್ತಾಲರ ಕತೆಗಳಲ್ಲಿ ಮತ್ತೆ-ಮತ್ತೆ ಕಾಣಿಸಿಕೊಳ್ಳುವ ಮೂಲಭೂತ ಯಾತನೆ ಮಹಾಭಾರತದ ಅಶ್ವತ್ಥಾಮನಂತೆ ಈ ಕತೆಯ ಕೇಂದ್ರ ವ್ಯಕ್ತಿ ಇಂಥ ಯಾತನೆಯ ಪ್ರತೀಕವಾಗಿದ್ದಾನೆ. ಹೆಂಡತಿ, ಮಗಳು ಒಳ್ಳೆಯ ನೌಕರಿ ಎಲ್ಲ ಇದ್ದರೂ ಈತ ಅರಿಯದ ನೋವಿನಿಂದ ಬಳಲುವ ಹಳ್ಳಿ ಬಿಟ್ಟು ನಗರ ಸೇರಿದ ಲೇಖಕ. ಬರವಣಿಗೆಯ ಮೂಲಕ ತನ್ನ ನೋವಿನ ನೆಲೆ, ಸೆಲೆಗಳನ್ನು ಅರಿಯಲು ಸಾಧ್ಯವಾಗಬಹುದು. ತನಗೆ ಅದರಿಂದ ಬಿಡುಗಡೆ ಸಿಗಬಹುದೆಂದು ಆಸೆ ಇಟ್ಟುಕೊಂಡವ ತನ್ನ ಮತ್ತು ಚಿಕ್ಕಂದಿನಲ್ಲಿಯೇ ತನ್ನ ಮೇಲೆ ಪ್ರಭಾವ ಬೀರಿದ ಇಂದಿರಕ್ಕನ ಸಂಬಂಧದಲ್ಲಿ ಈ ಸಂಬಂಧಕ್ಕೆ ಅಂಟಿಕೊಂಡ ಜಟಿಲ ಪಾಪಪ್ರಜ್ಞೆಯಲ್ಲಿ ತನ್ನ ನೋವಿನ ಮೂಲವಿದೆ ಎಂಬ ನಂಬುಗೆಯಿಂದ ಅದನ್ನು ಕೆದಕಿ-ಕೆದಕಿ ನೋಡಿ ಬುದ್ಧಿಪೂರ್ವಕವಾಗಿ ವಿವೇಚಿಸಿ ಶಬ್ದಗಳಲ್ಲಿ ಹಿಡಿದು ಆ ನೋವಿನಿಂದ ಪಾರಾಗಲು ಯತ್ನಿಸುತ್ತಿರುವವವ ಇಂದಿರಕ್ಕನೊಡನೆ ಅನಿರೀಕ್ಷಿತವಾಗಿ ಜರುಗುವ ಎರಡು ಭಟ್ಟಿಗಳಲ್ಲಿ ಅವಳ ಜೀವನವು ಭಂಜರಾಗಿರುವುದಕ್ಕೆ ಅವಳಲ್ಲಾದ

೧. ಯಶವಂತ ಚಿತ್ತಾಲ: ಐವತ್ತೊಂದು ಕತೆಗಳೂ:೨೬೪ ೨. ಅದೇ ಪುಟ-೨೬೫

ಭಯಾನಕ ಬದಲಾವಣೆಗೆ ತಾನು ಸಣ್ಣವನಿದ್ದಾಗ ಇಂದಿರಕ್ಕನ ಪ್ರೇಮಿ ಅವಳಿಗೆ ಮುಟ್ಟಿಸಲು ಕೊಟ್ಟ ಪತ್ರವನ್ನು ಹರಿದುಹಾಕಿದುದೇ ಕಾರಣ ಎಂದು ಅವನಿಗೆ ಖಾತ್ರಿಯಾಗುತ್ತದೆ. ಆದರೆ ಇಂದಿರಕ್ಕನೊಡನೆ ಮುಖಾಮುಖಿ ಮುಗಿಯುವುದರಲ್ಲಿಯೇ ಅವಳ ಸಾವಿನ ಹಿಂದೆಯೇ ಎಷ್ಟೋ ವರ್ಷಗಳಿಂದ ಬೇಪತ್ತೆಯಾದ ಬಹುಶಃ ಆತ್ಮಹತ್ಯೆ ಮಾಡಿಕೊಂಡ ಅವಳ ಪ್ರೇಮಿ. ಪೊತ್ತೆಮೀಸೆಯ ಮನುಷ್ಯನೊಂದಿಗೆ ಮತ್ತೊಂದು ಮುಖಾಮುಖಿ ಪ್ರಾರಂಭವಾಗುತ್ತದೆ. ಲೇಖಕನ ಮನಸ್ಸಿನ ಆಳದಲ್ಲಿ ಈ ಮನುಷ್ಯನ ನಿಗೂಢ ನಿರ್ಗಮನ ತನ್ನ ಚಿಕ್ಕಂದಿನಲ್ಲಿಯೇ ಮನೆಬಿಟ್ಟು ಹೋದ ತಂದೆಯ ನಿಗೂಢ ನಿರ್ಗಮನ ಇವುಗಳಿಗೆ ಸಂಬಂಧ ಏರ್ಪಟ್ಟು ನೋವು ಮತ್ತಷ್ಟು ಬಲವಾಗುತ್ತದೆ. ಕಲೆ ಮತ್ತು ನೋವುಗಳಲ್ಲಿನ ಸಂಘರ್ಷದಲ್ಲಿ ನೋವಿನ ಕೈ ಮೇಲಾಗುತ್ತದೆ. ತನ್ನ ಅನುಭವವನ್ನು ಕಲೆಯಾಗಿಸಿ ಲೇಖಕ ಕ್ಷಣಿಕವಾದ ಶಾಂತಿಯನ್ನು ಅನುಭವಿಸಿದರೂ ಆದರಿಂದ ಮುಕ್ತಿ ದೊರಕುವುದಿಲ್ಲ. ನೋವಿನ ಗೂಢ ಅವನನ್ನ ಕಾಡುವುದು ನಿಲ್ಲುವುದಿಲ್ಲ.

೧ " ಮುಖಾಮುಖಿಯ ನಿರೂಪಕನೂ, ನಾಯಕನೂ ಆದ ಕತೆಗಾರ, ಕತೆಯ ಅಂತ್ಯದಲ್ಲೂ ಬದುಕಿನ ಹೊಸ ಅರ್ಥಗಳನ್ನು ಶೋಧಿಸುವ ಕ್ರಿಯೆಯಲ್ಲಿ ತೊಡಗುವುದು ಅರ್ಥಪೂರ್ಣವಾಗಿದೆ ಅಶ್ವತ್ಥಾಮ ಉದ್ಧಾರ ಮುಖಾಮುಖಿ ಈ ಮೂರು ಕತೆಗಳಲ್ಲೂ ಒಂದಲ್ಲ ಒಂದು ಬಗೆಯ ಪಾಪಪ್ರಜ್ಞೆ ಕತೆಗಳ ಕೇಂದ್ರ ಪ್ರತಿಮೆಯಾಗಿದೆ. ಪಾಪಪ್ರಜ್ಞೆ ಮುಖ್ಯವಾಗಿ ಲೈಂಗಿಕ ಸಂಬಂಧದಲ್ಲಾದ ಅನ್ಯಾಯದ ಪ್ರಶ್ನೆ ಇವುಗಳಲ್ಲಿ ಅಡಕವಾಗಿದೆ ಏನೇ ಆಗಲಿ ಈ ವಿಚಾರದ ಅಂತಿಮ ವ್ಯಾಖ್ಯಾನ, ಅಂತಿಮ ನಿರ್ಣಯ, ಕಡೆಯ ಮಾತು, ತನಗೆ ಇನ್ನೂ ತಿಳಿದಿಲ್ಲ ಎಂಬುದೇ ಕತೆಗಾರನ ನಿಲುವಾಗಿರುವಂತಿದೆ"೧

'ಉದ್ಧಾರ' ಕತೆಯ ಆರಂಭದಲ್ಲಿಯೇ ೨ "ಅಹಲ್ಯೆ ಅಮ್ಮನ ಹಾದಿ ಕಾಯುತ್ತ ಕುಳಿತಿದ್ದಳು"೨ ಎಂದು ಆರಂಭವಾಗುತ್ತದೆ. ಅಹಲ್ಯೆಯು ತಾಯಿಯು ದೂರ ಹೋಗಿ ಮನೆಗೆ ಬಾರದ ದಿನಗಳಲ್ಲಿ ಅತೀವ ಯಾತನೆ ಮತ್ತು ಕನಸುಗಳ ತೋಳ ತೆಕ್ಕೆಯಲ್ಲಿ ಸಿಲುಕುತ್ತಾಳೆ. ಆಕೆ ಎರಡೂ ಸಲ ಕಂಡ ಕನಸುಗಳ ಸನ್ನಿವೇಶ ಒಂದೇ, ಹಿತ್ತಿಲ ಬಾವಿಯ ಬಳಿಯಲ್ಲಿಯ ಕಲ್ಲು ಮರಗಿಯಲ್ಲಿ ತಾನು ಒಗೆಯುವ ಅರಿವೆಗಳನ್ನು ನೆನೆಯುತ್ತಿದ್ದಾಗ ಹಿತ್ತಿಲ ಬೇಲಿಯ ಕಂಡಿಯೊಳಗಿಂದ ಕಪ್ಪು ನಾಯಿಯೊಂದು ಒಳಗೆ ಬಂದು ನೆಲವನ್ನು ಮೂಸುತ್ತ, ಮೂಸುತ್ತ ನೇರವಾಗಿ ತನ್ನ ಹತ್ತಿರ ಬಂದದ್ದು ತಡೆದು, ಮುಖವನ್ನೆತ್ತಿ ತನ್ನ ಕಣ್ಣುಗಳಲ್ಲೇ ಸಿಟ್ಟಿನಿಂದ ನೋಡುತ್ತ ಗುರುಗುಟ್ಟುತ್ತದೆ. ಕಿಟಾರನೆ ಚೀರಿದ್ದು ತನಗೆ ಎಚ್ಚರ ಮೊತ್ತ ಮೊದಲ ಸಲ ಕನಸು ಕಂಡ ಕೆಲದಿನಗಳಲ್ಲೇ ಅವಳ ಲಗ್ನವಾದದ್ದು ಎರಡನೆಯ ಸರತಿ ಕನಸು ಬಿದ್ದ ಮರುದಿವಸ ಸರಿಯಾಗಿ ನೆನಪಿದೆ. ಹೀಗೇ ಮಳೆ ಬಿದ್ದಿತ್ತು. ಆ ದಿನ ರಾತ್ರಿ ಕೂಡ ಅಮ್ಮ ಹೀಗೇ ಮನೆಯಲ್ಲಿದ್ದಿರಲಿಲ್ಲ. ಗಂಗಾವಳಿಗೆ ಹೋಗಿದ್ದಳು ಅಬಚಿಯ ಮನೆಗೆ ಹೋಗಿದ್ದಾಗ ಆ ರಾತ್ರಿ ಉದ್ದ ಕೂದಲು ಬೆಳೆಸಿದ ಕೈಯಲ್ಲೊಂದು ಸಣ್ಣ ಟ್ರಂಕನ್ನು ಹಿಡಿದ ತರುಣನೊಬ್ಬ ಮಳೆಯಲ್ಲಿ ಸಂಪೂರ್ಣವಾಗಿ ತೋತ್ದು ಚಳಿಯಿಂದ ನಡುಗುತ್ತ ನಾನು ಇಲ್ಲಿಯ ಮಠದಲ್ಲಿ ಕೀರ್ತನೆಗಾಗಿ ಬಂದ ಕೀರ್ತನೆಕಾರ. ಮಳೆಯಲ್ಲಿ ದಾರಿ ತಪ್ಪಿ ಇಲ್ಲಿ ಬಂದಿದ್ದೇನೆ. ನಿಮಗೆ ತೊಂದರೆಯಾಗದಿದ್ದರೆ ಒಂದು ರಾತ್ರಿಯನ್ನು ಇಲ್ಲಿ ಕಳೆಯಬಹುದು ಎಂದುಕೊಂಡಿದ್ದೆ. ಒಳಗೆ ಬರಲೇ? ಎಂದಾಗ ಅಹಲ್ಯೆ ಅದಕ್ಕೆ ಒಪ್ಪಿದ್ದಳು.

---

೧. ಯಶವಂತ ಚಿತ್ತಾಲ: ಡಾ।ಕೆ.ಎಲ್.ಗೋಪಾಲಕೃಷ್ಣಯ್ಯ : ಸಂ: ಡಾ।ಪ್ರಧಾನ್‌ಗುರುದತ್ತ : ಪುಟ-೯೦

೨. ಯಶವಂತ ಚಿತ್ತಾಲ ಐವತ್ತೊಂದು ಕತೆಗಳು: ೨೮೨

ಆತನನ್ನು ನೋಡಿದ ಅಹಲ್ಯೆಗೆ ಆದ ಅನುಭವ ಆಕೆಯ ಮಾತಿನಲ್ಲೇ ನೋಡುವುದಾದರೆ ೧''ಹೆಗಲು ಮುಟ್ಟುವ ಉದ್ದ ತಲೆಗೂದಲು, ಮಾತನಾಡುವಾಗ ತುಟಿಗಳಂಚಿನಲ್ಲಿ ಸಣ್ಣ ಮುಗುಳುನಗೆ , ಸ್ವಚ್ಛ ಕಣ್ಣುಗಳಲ್ಲಿ ಮಾತ್ರ ಎಂತಹದೋ ಮ್ಲಾನತೆ-ಬೈರಾಗಿಯ ಕಣ್ಣುಗಳ ಹಾಗೆ. ಅವಳು ಮೊತ್ತ ಮೊದಲು ನೋಡಿದ ದಿನವೇ ವಿಚಿತ್ರ ರೀತಿಯಿಂದ ಹುಚ್ಚು ಹಿಡಿಸಿದ ಅವಳನ್ನು ಮದುವೆಯಾದವನ ಕಣ್ಣುಗಳಲ್ಲಿ ಕಂಡ ಬೈರಾಗಿಯ ದೃಷ್ಟಿ!......''೧ ಒಟ್ಟಾರೆ ಕನಸು ಕೊರತೆಗಳ ಮತ್ತು ಬಯಕೆಗಳ ಈಡೇರಿಕೆಗಾಗಿ ಹವಣಿಸುತ್ತದೆಂಬುದು ಆದಿನ ಬೆಳಗಾಗುವುದರೊಳಗೆ ೨''ಆ ರಾತ್ರಿ ತಾವಿಬ್ಬರೂ ಜಾರಿದ್ದೆವು.''೨ ಎಂಬ ಮಾತಿನಲ್ಲಿ ಎಲ್ಲವೂ ಧ್ವನಿತವಾಗುತ್ತದೆ. ಸಂನ್ಯಾಸಿಯ ವೇಷ ಧರಿಸಿದರೂ ಆತನಲ್ಲಿಯೂ ಕಾಮದ ಹೊಗೆಯಾಡುತ್ತಿದ್ದುದನ್ನು ನಾವಿಲ್ಲಿ ಗಮನಿಸಬೇಕು. ಆಕೆಯನ್ನು ಸೇರಿದ ಸನ್ಯಾಸಿ ಬೆಳಗಾಗುತ್ತಲೆ ಆಕೆಯ ಪಾದಗಳನ್ನು ಕಣ್ಣೀರಿನಿಂದ ಒದ್ದೆ ಮಾಡಿ ಕ್ಷಮೆ ಬೇಡಿ ಹೊರಟು ಹೋಗುತ್ತಾನೆ. ಕತೆಯುದ್ದಕ್ಕೂ ಅತೃಪ್ತ ಕಾಮದ ಹೊಗೆ ಪಾತ್ರಗಳನ್ನಾದರಿಸುತ್ತದೆ.

ಆದರೆ ಅಹಲ್ಯೆ ಆ ದಿನ ಆದ ಭಯದಿಂದ ನೇಣುಬಿಗಿದು ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ.

೩''ಕತೆಗಾರರು ನಿರೂಪಣೆಯಲ್ಲಿ ಉದ್ದೇಶಪೂರ್ವಕವಾಗಿಯೇ ಕೆಲವು ಸಂದೇಹಗಳನ್ನು ಉಳಿಸಿ ಓದುಗರ ಭಾವಯತ್ರಿ ಪ್ರತಿಭೆಯ ಚಾಲನೆಗೆ ಅವಕಾಶ ಮಾಡಿಕೊಟ್ಟಿರುವಂತಿದೆ. ಬಹುಶಃ ಗೌತಮ ಋಷಿಯ ವೇಷದಲ್ಲಿ ಬಂದ ಇಂದ್ರ ಮತ್ತು ಸ್ವುರದ್ರೂಪಿಯಾದ ದೇವೇಂದ್ರರ ಸೂಚನೆ ಇಲ್ಲಿರಬಹುದೇ? ತರುಣ ಪ್ರಾಯದ ಕೀರ್ತನಕಾರನೊಂದಿಗೆ ಅಹಲ್ಯೆ ಜಾರಿದುದಕ್ಕೂ ಅವಳ ಆತ್ಮಹತ್ಯೆಗೂ ನೇರ ಸಂಬಂಧ ಕಲ್ಪಿಸುವುದಿಲ್ಲ. ಬದಲಾಗಿ, ಕಟಾಂಜನದ ಸರಳಿಗೆ ಹಣೆಯುಬ್ಬು ಹೊರಗೆ ನೋಡುತ್ತಿದ್ದಾಗ ದಣಪೆಯಾಚೆ ಕಾಣಿಸಿದ ಗಡ್ಡ ಮೀಸೆಗಳ ಬಾವಾಜಿಯ ಮೂಲಕ ಅಹಲ್ಯೆಯ ಅಂದಿನ ಪಾಪದ ನೆನಪನ್ನು ಕೆದಕುತ್ತಾರೆ.

ನಡುರಾತ್ರಿಯಲ್ಲಿ ಅಹಲ್ಯೆಗೆ ಎಚ್ಚರವಾದಾಗ, ಅಡಿಗೆ ಮನೆಯ ಹಿತ್ತಲ ಬದಿಯ ಕದದ ಮೇಲೆ ನಾಯಿ ಕಾಲುಗುರಿನಿಂದ ಕೆರೆದ ಸದ್ದು ಅದೇ ತನ್ನ ಕನಸುಗಳಲ್ಲಿ ಧುತ್ ಎಂದು ಪ್ರಕಟವಾಗಿ ತನ್ನನ್ನು ಹೆದರಿಸುತ್ತಿದ್ದ ಆ ಕಪ್ಪು ಕಪ್ಪು ನಾಯಿ. ಇದು ಅತೃಪ್ತ ಕಾಮ, ಪಾಪಭಯ, ಸಾವು ಈ ಎಲ್ಲಕ್ಕೂ ಸಂಕೇತವಾದಂತಿದೆ. ಇನ್ನು ಕಥಾನಾಯಕಿಯ ಹೆಸರು, ಗೌತಮನ ಪತ್ನಿಯ ನೆನಪನ್ನು ತರುವ ಹಾಗೆಯೇ, ದಣಪೆಯಾಚೆ ಕಾಣಿಸಿದ ಗಂಡನ ಗಡ್ಡ ಮೀಸೆಗಳು, ತನ್ನ ಗಂಡನ ಕಣ್ಣೋಟವನ್ನು ಹೋಲುವ ಕಣ್ಣ ಹೊಳಪು ಇವೆಲ್ಲ ಗೌತಮ ಋಷಿಯ ವೇಷದಲ್ಲೇ ಆಗಮಿಸಿ ಅಹಲ್ಯೆಯನ್ನು ಮೋಹಕ್ಕೆ ಒಡ್ಡಿದ ಅಹಲ್ಯಾಚಾರ, ಇಂದ್ರನನ್ನು ಪ್ರತಿನಿಧಿಸುವ ಚಿತ್ರವಾಗಿದೆ. ದೇವರ ಮುಂದೆ ಅಹಲ್ಯೆ ಕಲ್ಲಾಗಿದ್ದಳು. ಎಂಬುದು ಗೌತಮ ಶಾಪದ ಪರಿಣಾಮವನ್ನು ಧ್ವನಿಸುತ್ತದೆ. ರಾಮಾಯಣದ ಅಹಲ್ಯೆ, ಇಂದ್ರರ ಪ್ರಸಂಗಕ್ಕೆ ಇಷ್ಟೆಲ್ಲ ಹೋಲಿಕೆಗಳಿದ್ದರೂ ಇವಳು ರಾಮಾಯಣದ ಅಹಲ್ಯೆಯಲ್ಲ. ಕಥೆಯ ಹೆಸರು, ಉದ್ಧಾರ ಎಂದಿದ್ದರೂ ಇಲ್ಲಿ ಅಹಲ್ಯೆಯ ಉದ್ಧಾರವಿಲ್ಲ. ಶಾಪ ವಿಮೋಚನೆಯಿಲ್ಲ. ಪುನರುಜ್ಜೀವನವಿಲ್ಲ. ರಾಮಾಯಣದ ಅಹಲ್ಯೆಯನ್ನು ಅಂಕೋಲೆಯ ಅಹಲ್ಯೆಯ ಪಕ್ಕದಲ್ಲಿಟ್ಟು ಇಬ್ಬರಿಗೂ ಇರುವ ಹೋಲಿಕೆ ವ್ಯತ್ಯಾಸಗಳನ್ನು ಧ್ವನಿಸುವುದು ಕಥೆಯ ವಿಶಿಷ್ಟ ತಂತ್ರವಾಗಿದೆ. ಉದ್ಧಾರ ಪತಿತ ಪಾವನ ಕಲ್ಪನೆಯ ವಿಡಂಬನೆಯಾಗಿದೆ.''೩ ಒಟ್ಟಾರೆ ಚಿತ್ತಾಲರ ಕಥನ ಕೌಶಲ, ಕಲಾತ್ಮಕ ನಿರೂಪಣೆ ಮೆಚ್ಚುವಂತಿದೆ.

೧. ಯಶವಂತ ಚಿತ್ತಾಲ: ಐವತ್ತೊಂದು ಕತೆಗಳು:೨೮೮ ೨. ಅದೇ ಪುಟ-೨೮೮

೩. ಯಶವಂತ ಚಿತ್ತಾಲ : ಡಾ।ಕೆ.ಎಲ್.ಗೋಪಾಲಕೃಷ್ಣಯ್ಯ :ಸಂ: ಡಾ।ಪ್ರಧಾನ್‌ಗುರುದತ್ತ ಪುಟ-೮೭

ಒಂದು ಹೆಸರಿನ ಕತೆ : ಒಂದು ಹೆಸರಿನ ಸುತ್ತ ಎಣೆದಿರುವ ಕಥೆ ಎನ್ನುವುದಕ್ಕಿಂತ ಮಿಗಿಲಾಗಿ ಒಂದು ಹೆಸರಿನ ವಿಷಯವಾಗಿ ಮನಸ್ಸುಗಳು ಏಳುವ ತವಕ, ತಲ್ಲಣಗಳ ಚಿತ್ರಣ ಎನ್ನಬಹುದಾಗಿದೆ. ಕರುಳಿನ ಕ್ಯಾನ್ಸರ್‌ನಿಂದ ಸತ್ತುಹೋದ ಲೇಖಕರ ಗೆಳೆಯ ಪುರುಷೋತ್ತಮನ ವಿಚಾರವಾಗಿ ಲೇಖಕರು ತಮ್ಮ ಮನಸ್ಸಿನಲ್ಲಿನ ತುಮುಲದ ಚಿತ್ರಣ ಮನಮುಟ್ಟುವಂತೆ ಇಲ್ಲಿ ಮಾಡಿದೆ. ಪುರುಷೋತ್ತಮ ಸತ್ತ ಎಂಬ ಹೆಂಡತಿಯ ಮಾತನ್ನು ಕೇಳಿ ಪುರುಷೋತ್ತಮ ಸತ್ತಿಲ್ಲ ಎಂದು ಬಚ್ಚಲ ಮನೆಗೆ ಹೋದ ಲೇಖಕರು ಅಲ್ಲಿಯೇ ತಾನು ಏಕೆ ಹಾಗೆ ಅಂದೆ ಎಂದು ಯೋಚಿಸುತ್ತಾ ಸುಮಾರು ಸಮಯ ಕಳೆಯುತ್ತಾರೆ. ಮನುಷ್ಯನಿಗೆ ತನ್ನ ಮನಸ್ಸನ್ನೇ ವಿಶ್ಲೇಷಿಸಿಕೊಳ್ಳಲು ನಗುವ ಕೆಲವೇ ಕೆಲವು ಏಕಾಂತದ ಸ್ಥಳಗಳಲ್ಲಿ ಬಚ್ಚಲು ಮನೆಯೂ ಒಂದು ಎಂಬುದು ಗಮನಾರ್ಹ.

ಪುರುಷೋತ್ತಮನ ಗೆಳತಿ ವಿಜಯಾ ತನ್ನ ಮಗುವಿಗೆ ಲೇಖಕರ ಹೆಸರನ್ನು ಇಡುವ ಪುರುಷೋತ್ತಮನ ಮನದ ಇಂಗಿತವನ್ನು ತಿಳಿಸಿದಾಗ ಅದಕ್ಕೆ ಲೇಖಕರ ಹೆಂಡತಿಯೇ ಸಮ್ಮತಿ ಸೂಚಿಸಿದಾಗ, ಅಲ್ಲಿ ಸೇರಿದ ಜನರಿಗೆ ಇದು ಸೇರದೆ ಇರುವ ಸಂಗತಿಯೂ ಕೂಡ ಇಲ್ಲಿ ಗಮನಾರ್ಹ. ಹೇಗೆ ತಮಗೆ ಸಂಬಂಧಿಸಿದ ಒಂದು ಹೆಸರೂ ಕೂಡ ಪರರಿಗೆ ಇಟ್ಟಾಗ ಅದರಲ್ಲೂ ಸಮಾಜ ಬಾಹಿರವಾಗಿ ಹುಳಿದ ಒಂದು ಮಗುವಿಗೆ ಇಡಲು ಹೋದಾಗ ಹೇಗೆ ಮನುಷ್ಯನ ಮನಸ್ಸು ಕೇವಲ ತನ್ನ ಹೆಸರಿನ ಮೇಲೂ ಪಾಶವನ್ನು ತೋರಿಸುತ್ತದೆ ಎಂಬುದನ್ನು ಲೇಖಕರು ಇಲ್ಲಿ ಚಿತ್ರಿಸಿದ್ದಾರೆ. ಮನುಷ್ಯನ ಮನೋದೌರ್ಬಲ್ಯ ಇಲ್ಲಿ ಸೊಗಸಾಗಿ ಮೂಡಿಬಂದಿದೆ.

ಲೇಖಕರು ತಮ್ಮ ಮಗುವಿಗೆ ಪುರುಷೋತ್ತಮನ ಹೆಸರನ್ನು ಇಡಬೇಡಿ ಎಂದು ಎಷ್ಟೋ ಸಲ ಮನದಲ್ಲಿ ಅಂದುಕೊಂಡರೂ ಅದನ್ನು ಪುರುಷೋತ್ತಮನ ಬಗೆಗಿನ ಅವರ ಭಾವನೆಗಳು ವ್ಯಕ್ತಪಡಿಸಲು ಬಿಡುವುದೇ ಇಲ್ಲ. ಅಯೋ ಹೆಂಡತಿ ಕೇಳಿದಾಗ ತಾನು ಪುರುಷೋತ್ತಮನ ಹೆಸರನ್ನು ಹೇಳಲೇ ಇಲ್ಲವಲ್ಲ ಎಂದು ಲೇಖಕರ ಮನಸು ಕ್ಯಾನ್ಸರ್‌ನಿಂದ ಸತ್ತವನ ಹೆಸರನ್ನು ಏಕೆ ಇಡುವುದು? ಅಜ್ಜಿ ಕಾಲದ ಹೆಸರನ್ನು ಏಕೆ ತನ್ನ ಮಗುವಿಗೆ ಇಡುವುದು? ಎಂಬ ಸಮಾಧಾನ ಹೇಳುತ್ತದೆ. ವಾಸ್ತವದಲ್ಲಿ ಅದಕ್ಕೆ ಕಾರಣವಾದ ಭಾವವೇ ಬೇರೆ. ನಾವೆಲ್ಲರೂ ಹಾಗೆಯೇ ಅಲ್ಲವೇ? ಕಠೋರ ಸತ್ಯವನ್ನು ಮರೆಮಾಚಲು ಹಲವು ಕುಂಟುನೆಪಗಳನ್ನು ಹುಡುಕುತ್ತೇವೆ. ನಾನು ಮಾಡುತ್ತಿರುವುದು ತಪ್ಪು ಎಂದು ತಿಳಿದರೂ ನಮ್ಮ ಮನಸ್ಸು ಅದಕ್ಕೂ ಅನೇಕ ಕುಂಟು ಸಮಜಾಯಿಷಗಳನ್ನು ಕೊಡುತ್ತದೆ. ಅದನ್ನು ನಾವು ನಿಜವೆಂದೇ ಭ್ರಮಿಸುತ್ತ ಹೋಗುತ್ತೇವೆ. ಆದರೂ ಒಳಗಿನ ಸತ್ಯ ಮಾತ್ರ ಹಾಗೆಯೇ ಇರುತ್ತದೆ.

ಹೆಂಡತಿ ಆನಂದ ಎಂಬ ಹೆಸರನ್ನು ಸೂಚಿಸಿದಾಗ ಲೇಖಕರು ಅದಕ್ಕೆ ಒಪ್ಪಿಗೆಕೊಟ್ಟಾಗ ಅವನ ಮನಸ್ಸಿನಲ್ಲಿ ಮೂಡುವ ಪುರುಷೋತ್ತಮ ಮೊದಲ ಬಾರಿ ಸತ್ತ ಎಂಬ ಭಾವವನ್ನು ಅಡಗಿಸಿಕೊಳ್ಳಲು ಲೇಖಕರು ಮನಸ್ಸಿನಲ್ಲೇ ತಮಗೆ ತಾವೇ ಹೇಳಿಕೊಳ್ಳುವ ಸಮಜಾಯಿಷೆ ಇಲ್ಲಿ ಮುಖ್ಯ.

ಅಪಘಾತ: ಈ ಕಥೆಯನ್ನು ನೋಡುವುದಾದರೆ ಒಂದು ಅಪಘಾತದಲ್ಲಿ ಸತ್ತ ವ್ಯಕ್ತಿ ಯಾರು ಎಂಬುದು ಖಚಿತವಾಗಿಲ್ಲದ ಸಮಯದಲ್ಲಿ ಮನಸ್ಸು ವ್ಯಕ್ತಪಡಿಸುವ ಸಂಕಟದ ಹೊರಣವೇ ಇಲ್ಲದೆ ಸತ್ತವನ ಕಿಸೆಯಲ್ಲಿ ಎಸ್.ವಿ.ಕುಲ್ಕರ್ಣಿ ಎಂಬ ಹೆಸರಿನ ಪಾಸ್ ದೊರೆಯಿತು. ಆ ಹೆಸರಿನ ಆಧಾರದ ಮೇಲೆ ಮನೆಗೆ ಬಂದ ಪೋಲೀಸ್ ಪೇದೆಗೆ ಆಶ್ಚರ್ಯ ಕಾದಿತ್ತು. ಏಕೆಂದರೆ, ಆ ಮನೆಯಲ್ಲಿಮೂವರು ಅಣ್ಣ-ತಮ್ಮಂದಿರ ಹೆಸರು ಎಸ್.ವಿ.ಕುಲ್ಕರ್ಣಿ ಎಂದೇ ಮೊದಲನೆಯವ

ಸುರೇಶ ಎಸ್.ವಿ.ಕುಲಕರ್ಣಿ, ಎರಡನಯವ ಸುಭಾಷ್ ವಿ.ಕುಲ್ಕರ್ಣಿ, ಮೂರನೆಯ ಸುಧಾಕರ ಬಿ.ವಿ.ಕುಲ್ಕರ್ಣಿ ಇವರಲ್ಲಿ ಸತ್ತ ವ್ಯಕ್ತಿ ಯಾರೆಂಬುದು ನಿರ್ಧಾರವಾಗಿಲ್ಲದ ಸಮಯದಲ್ಲಿ ಅವರ ಮನೆಯವರ ಮಾನಸಿಕ ಕ್ಷೋಭೆಯ ಚಿತ್ರಣವೇ ಈ ಕಥೆ.

ಶಿವನನ್ನು ನೋಡಲು ಹೊರಟ ನೀಲಕಂಠ ಮೂವರೂ ಒಳ್ಳೆಯವರೇ ಮೂವರೂ ಸಾಯದಿರಲಿ ಎಂದೇ ಆಶಿಸಿದರೂ ಅವನ ಒಳಮನಸ್ಸು ಮಾತ್ರ ತನ್ನ ಭಾವ ಸುಧಾಕರನಾಗಿಲ್ಲದೆ ಇದ್ದರೆ ಸರಿ ಎಂದೇ ಬಯಸುತ್ತಿತ್ತು.

ಸುರೇಶನ ಹೆಂಡತಿಯದೂ ಇದೇ ಕಥೆ. ತನ್ನ ಗಂಡ ಬರುವ ಹೊತ್ತಾಯಿತು ದೇವರೇ ಅವರೇ ಬರಲಿ ಎಂದು ಪ್ರಾರ್ಥಿಸುತ್ತಿತ್ತು. ಗಂಡ ಬಂದರೆ ಸತ್ತವರಲ್ಲಿ ಸುಭಾಷ್, ಸುಧಾಕರ ಇರಬಹುದು ಎನ್ನುವ ಯೋಚನೆಯಲ್ಲಿ ಲೋಚಗುಟ್ಟಿದ ಹಲ್ಲಿಯ ಧನಿ ಕೇಳಿ ದೇವರೇ ಅವರೂ ತುಂಬಾ ಒಳ್ಳೆಯವರು ಅವರೂ ಆಗದಿರಲಿ ಎಂದುಕೊಳ್ಳುತ್ತಲೇ ಹೆಜ್ಜೆ ಸಪ್ಪಳದೊಂದಿಗೆ ಬಂದ ವ್ಯಕ್ತಿಯ ಮುಖ ಅಸ್ಪಷ್ಟವಾಗಿ ಕಾಣುತ್ತಿರಲು ಕಡೆಗೆ ಆಕೆಯ ಮನಸ್ಸು ತನ್ನ ಗಂಡ ಸುರೇಶನೇ ಆಗಿರಲಿ ಎಂದುಕೊಂಡಳು. ಕೊನೆಗೂ ಬಂದವನು ಆತನೇ ಆಗಿದ್ದ. ಹೇಗೆ ಮನಸ್ಸು ನಮಗೆ ತೀರಾ ಹತ್ತಿರದಲ್ಲಿರುವವರು ಸಾಯದಿರಲಿ. ಅವರಿಗೆ ಕೆಡುಕಾಗದಿರಲಿ ಎಂದು ಬಯಸುತ್ತದೆ ಎನ್ನುವ ಚಿತ್ರಣವಂತೂ ಇಲ್ಲಿ ಬಹಳಷ್ಟು ಕೌತುಕವಾಗಿದೆ.

ಸುರೇಶನ ಆಗಮನ ಅವನ ಹೆಂಡತಿ ಸುಮತಿಗೆ ನಿರುಮ್ಮಳ ಭಾವತರಿಸಿದರೆ ಸುಭಾಷನ ಹೆಂಡತಿ ಶಾಂತಾಗೆ ಮಾತ್ರ ಕಳವಳ ತಂದಿಟ್ಟಿತು. ಇವಳದಂತೂ ಇನ್ನೂ ಸಂಕೀರ್ಣ ಮನೋಸ್ಥಿತಿ ಸುರೇಶ ಸತ್ತಿಲ್ಲವೆಂಬುದು ಖಚಿತವಾಗಿದೆ ಆದರೆ ಸತ್ತವರು ಇನ್ಯಾರು? ಸುಭಾಷ್......? ಸುಧಾಕರ....? ಇವರಲ್ಲಿ ಒಬ್ಬ ಸತ್ತಿಲ್ಲದಿದ್ದರೂ ಮತ್ತೊಬ್ಬ ಸತ್ತಿರುತ್ತಾನೆ....ಇಂತಹ ಮನಃಸ್ಥಿತಿಯಲ್ಲಿ ಸುಭಾಷನ ಹೆಂಡತಿ ಶಾಂತಾಳ ಮನಸ್ಸು.

೧"ಸುರೇಶ ಮನೆಗೆ ಬಂದನೆಂದರೆ, ಸತ್ತವನು ಸುಭಾಷನಾಗುವ ಸಂಭವ ಹೆಚ್ಚಿತ್ತಲ್ಲವೇ? ಸತ್ತವನು ಇವರಲ್ಲೊಬ್ಬ; ಸುಭಾಷ್ ಇಲ್ಲವೇ ಸುಧಾಕರ! ಶಾಂತಾಳ ಮೈ ಮೇಲೆ ಮುಳ್ಳು ನಿಂತವು. ಸುಧಾಕರ! ಬಿಡ್ತು ಬಿಡ್ತು ಅದು ಆಗಬಾರದು ದೇವರೇ ತುಂಬಿದ ಬಸುರಿ. ಇಂದೇ ತವರಿಗೆ ಕರೆದೊಯ್ಯಲು ಅಣ್ಣ ಬಂದ ಖುಷಿಯಲ್ಲಿ ಎಷ್ಟೊಂದು ಹರಟಿದ್ದಳು ಹುಡುಗಿ..... ಸತ್ತವನು ಸುಭಾಷನೇ ಆಗಿದ್ದರೆ..... ಬೇಡ ಬೇಡ ದೇವರೇ ಅವರನ್ನು ಬದುಕಿಸು... ಹಾಗಾದರೆ ನಾನು ಪ್ರಾರ್ದಿಸುತ್ತಿದ್ದುದು ಸುಧಾಕರನೇ ಸಾಯಲಿ ಎಂದೋ? ಸುಭಾಷನೋ? ಸುಧಾಕರನೋ?....."೧ ಇಲ್ಲಿ ಕಥೆಗಾರರು ಶಾಂತಾಳ ಮನಸ್ಸಿನ ತೊಳಲಾಟ ದ್ವಂದ್ವಗಳನ್ನು ಹಿಡಿದಿಟ್ಟಿದ್ದಾರೆ.

ಸುಭಾಷ್ ಬಂದು ಬಿಟ್ಟಾಗಲಂತೂ ಸುಧಾಕರನ ಹೆಂಡತಿ ಸೀತಾ ಅವನ ದನಿ ಕೇಳುತ್ತಲೇ ಅಯ್ಯೋ ನನ್ನ ರಾಜಾ ಎಂದು ಚೀರುವ ಮೂಲಕ ದುಃಖವನ್ನು ಹೊರಹಾಕುತ್ತಾಳೆ. ಬದುಕಿ ಉಳಿದ ಇಬ್ಬರು ಹೆಸರುಗಳೇ ಸಾವನ್ನಪ್ಪಿದವರ ಹೆಸರನ್ನು ನಿಶ್ಚಯಿಸಿದಾಗ ಇಡೀ ಮನೆಯವರೆಲ್ಲಾ ದುಃಖದ ಹೊಳೆಯಲ್ಲಿ ತೇಲುವಾಗ ಸತ್ತವರು ಯಾರೆಂಬುದು ಖಚಿತವಾಗಿಲ್ಲದ ಸಮಯದಲ್ಲಿ ಸತ್ತವನು ಇವನಾಗದಿರಲಿ, ಅವನಾಗದಿರಲಿ ಎಂಬ ಪ್ರಾರ್ಥನೆ, ಯಾರಿರಬಹುದು ಎಂಬ ಆತಂಕದಿಂದ ಯಾರೂ ಜೋರಾಗಿ, ಬಹಿರಂಗವಾಗಿ ದುಃಖವನ್ನು ವ್ಯಕ್ತಪಡಿಸಿರಲಿಲ್ಲ. ಆದರೆ ಮೂವರಲ್ಲಿ ಇಬ್ಬರು ಮರಳಿ ಬಂದಾಗ ಸತ್ತವನು ಉಳಿದವನೊಬ್ಬನೇ ಇರಬೇಕೆಂದು ಇಡೀ ಮನೆಯವರೆಲ್ಲಾ ರೋಧಿಸತೊಡಗಿದ ಚಿತ್ರ ಇಲ್ಲಿ ಬಹು ಚೆನ್ನಾಗಿ ಮೂಡಿದೆ.

೧. ಯಶವಂತ ಚಿತ್ತಾಲ: ಐವತ್ತೊಂದು ಕತೆಗಳೂ:೩೬೦

ಕೊನೆಗೆ ಸುಧಾಕರನು ಬಂದಾಗ ಅವರಲ್ಲಿ ಉಂಟಾದ ಆಶ್ಚರ್ಯ, ಚರ್ಚೆ, ಸಂತಸಗಳು ಹೇಳತೀರವು. ಸುಧಾಕರನ ಪಾಸ್‌ನಲ್ಲಿ ಅವನ ಗೆಳೆಯ ರಾಮಕೃಷ್ಣ ಪ್ರಯಾಣಿಸುತ್ತಿದ್ದ. ಆಗ ಸಂಭವಿಸಿದ ಅಪಘಾತದಲ್ಲಿ ರಾಮಕೃಷ್ಣ ತೀರಿಹೋದ ಸಂಗತಿ ತಿಳಿದು ನಿರುಮ್ಮಳವಾಯಿತಾದರೂ..... ಇಡಿಯ ದಿನ ಮೂವರೂ ಸೊಸೆಯರಿಗೂ ಒಬ್ಬರನ್ನೊಬ್ಬರು ಮಾತನಾಡಿಸುವ ಮನಸ್ಸಾಗಲಿ, ತಮ್ಮ ಮೈದುನರನ್ನು ನೋಡುವ ಧೈರ್ಯವಾಗಲೀ ಒಬ್ಬರಿಗೂ ಆಗದೇ ಇದ್ದದ್ದು ಅವರ ಮನದಲ್ಲಿ ಕಾಡುತ್ತಿದ್ದ ಪಾಪಪ್ರಜ್ಞೆನೆ ಸಾಕ್ಷಿಯಾಗಿದೆ.

"ಮಾತಿನಲ್ಲಿ ಬರಲೊಪ್ಪದ ದಾಸಣ್ಣ" ಕಥೆಯನ್ನು ನೋಡುವುದಾದರೆ ಚಿಕ್ಕಂದಿನಲ್ಲಿ ನಾವು ಕೆಲವರ ಬಗೆಗೆ ಯಾವುದೋ ಕಾರಣಕ್ಕೆ, ಯಾವುದೋ ಸನ್ನಿವೇಶದಲ್ಲಿ ಬೆಳೆಸಿಕೊಂಡ ಋಣಾತ್ಮಕ ಭಾವನೆಗಳು ಹೇಗೆ ಅವು ನಾವು ಬೆಳೆದು ದೊಡ್ಡವರಾದ ಮೇಲೂ ಉಳಿಯುತ್ತವೆ. ಅವು ಹೇಗೆ ಕೆಲವೊಂದು ಬಾರಿ ನಮ್ಮ ವ್ಯಕ್ತಿತ್ವದ ಮೇಲೆ ಪ್ರಭಾವ ಬೀರುತ್ತವೆ ಎಂಬ ವಿವರ ಇಲ್ಲಿದೆ ಅಷ್ಟೇ ಅಲ್ಲ, ಚಿಕ್ಕಂದಿನಲ್ಲಿ ಈ ರೀತಿಯ ಭಾವನೆಗಳನ್ನು ಬೆಳೆಸಿಕೊಂಡ ಒಬ್ಬ ವ್ಯಕ್ತಿ ತನ್ನ ಇಳಿ ವಯಸ್ಸಿನಲ್ಲಿ ಅವನನ್ನು ಭೇಟಿಯಾಗುವುದು, ಭೇಟಿಯಾಗುವಾಗ ಅವನ ಮನಸ್ಸಿನಲ್ಲುಂಟಾಗುವ ತಲ್ಲಣಗಳು, ಆತನ ಮಾನಸಿಕ ಕ್ಷೋಭೆಯ ಚಿತ್ರಣ ಇಲ್ಲಿದೆ.

೧ "ಚಿಕ್ಕಂದಿನಲ್ಲಿ ತನ್ನನ್ನು ವಿನಾಕಾರಣ ದ್ವೇಷಿಸುವ ವ್ಯಕ್ತ ಈತ (ಪಾಪಣ್ಣ) ಎಂದು ತಿಳಿದು ಅವನಿಗೆ ತುಂಬಾ ಹೆದರಿಕೊಂಡಿದ್ದ. ದೊಡ್ಡವನಾಗಿ ಬೆಳೆಯುತ್ತಿದ್ದ ಹಾಗೆ ಬದುಕಿನಲ್ಲಿ ಸಾಧಿಸಬೇಕೆಂದುಕೊಂಡದ್ದಕ್ಕೆಲ್ಲ ದಾಸಣ್ಣನನ್ನು ಮರೆಯುವುದು ನೆನಪಾಗುವ ಹಾಗೆ ನೋಡಿಕೊಳ್ಳುವುದು ಅತ್ಯವಶ್ಯಕವೆಂದು ಅವನು ತಿಳಿದುಕೊಂಡಂತಿದ್ದು....."೧ ಈ ವಾಕ್ಯಗಳಲ್ಲಿ ಕಥೆಗಾರರು ಕಥಾನಾಯಕ ದಾಸಣ್ಣನ ಮೇಲೆ ಮನಸ್ಸಿನಲ್ಲಿ ಇರಿಸಿಕೊಂಡಿದ್ದ ಭಾವನೆಗಳನ್ನು ಹಿಡಿದಿಡುವ ಪ್ರಯತ್ನ ಮಾಡಿದ್ದಾರೆ।

ತನ್ನ ಇಳಿವಯಸ್ಸಿನಲ್ಲಿ ದಾಸಣ್ಣನ ಮೊಮ್ಮಗಳಾದ ರೇಖಾಳಿಗೆ ಕೆಲಸ ಕೊಡಿಸುವ ಕಥಾನಾಯಕ ದಾಸಣ್ಣನನ್ನು ಭೇಟಿಯಾಗುತ್ತಾನೆ. ಈ ಮುಖಾಮುಖಿಗೂ ಮುನ್ನ ಕಥಾನಾಯಕನ ಮನಸ್ಸಿಲ್ಲಿನ ತವಕ-ತಲ್ಲಣಗಳು ಇಲ್ಲಿ ಮುಖ್ಯ.

೨"ಇಷ್ಟು ವರ್ಷ ತನ್ನ ಬದುಕಿಗೆ ನಿರ್ದಿಷ್ಟ ರೂಪ ಒದಗಿಸಿದ ಒಂದು ಪ್ರಬಲ ಸಂಕೇತವಾಗಿರುವ ಸಂಗತಿ, ಸುಪ್ತ ಪ್ರೇರಣೆಯಾಗಿರುವ ಸಂಗತಿ ನಾಳೆ ಜೀವಂತ ವ್ಯಕ್ತಿಯಾಗಿ, ರಕ್ತ ಮಾಂಸಗಳುಳ್ಳ, ಮನುಷ್ಯನಾಗಿ ಕಣ್ಣೆದುರು ಪ್ರಕಟವಾದಾಗ ತನ್ನ ಮೇಲೆ ಆಗಬಹುದಾದ ಪರಿಣಾಮ ಎಂಥದ್ದು?"೨ ಎಂದು ಮನಸ್ಸಲ್ಲೇ ಕಥಾನಾಯಕ ತಳಮಳಗೊಳ್ಳುತ್ತಾನೆ.

ಇಷ್ಟೆಲ್ಲಾ ತಳಮಳಗಳಿಗೆ, ಕ್ಷೋಭೆಗೆ ಮುಖ್ಯವಾದ ಹಾಗೂ ಮೂಲಭೂತವಾದ ಕಾರಣವೆಂದರೆ ದಾಸಣ್ಣನ ಲೈಂಗಿಕ ಜೀವನ, ದಾಸಣ್ಣನು ಪ್ರೀತಿಸುತ್ತಿದ್ದ ವಿಧವೆ ಪ್ರಯಾಗಿ, ಆಕೆಯೊಡನೆಯ ಪ್ರೇಮ ಅತಿಯಾದಾಗ ದಾಸಣ್ಣ ಬರೆಯಲೆತ್ನಿಸಿದ್ದು, ಆಗ ಪ್ರಯಾಗಿ ತಾನು ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಚೀಟಿ ಬರೆದು ಕಳಿಸಿದ್ದು, ಆ ಚೀಟಿಯನ್ನು ಇಲ್ಲಿನ ಕಥಾನಾಯಕ ತನ್ನಪ್ಪನಿಗೆ ಕೊಟ್ಟಿದ್ದು, ಅಲ್ಲಿಂದ ಕಥಾನಾಯಕನ ಅಣ್ಣನಿಗೆ ತಲುಪಿ ಅವನೇ ದಾಸಣ್ಣ ಪ್ರಯಾಗಿಯ ಮದುವೆ ಮಾಡಿಸಿದ್ದು.

---

೧. ಯಶವಂತ ಚಿತ್ತಾಲ: ಐವತ್ತೊಂದು ಕತೆಗಳೂ:೩೬೩ ೨. ಅದೇ ಪುಟ-೩೬೫

ಆದರೆ ಆ ಚೀಟಿಯನ್ನು ದಾಸಣ್ಣನಿಗೆ ತಲುಪಿಸದೆ ಇದ್ದದ್ದು ಮಾತ್ರ ಈ ಕಥಾನಾಯಕನೇ. ಇದೇ ಆತನ ಮನಸ್ಸಿನಲ್ಲಿನ ಕ್ಷೋಭೆಗೆ ಕಾರಣವಾಗಿತ್ತು. ದಾಸಣ್ಣನಿಗೆ ಇದು ತಿಳಿದಿರಲಿಲ್ಲ ಎಂಬ ಸಂಗತಿ ತಿಳಿದ ಕೂಡಲೇ ಈ ಕಥಾನಾಯಕ ನಿರುಮ್ಮಳವಾಗುತ್ತಾನೆ.

ಒಟ್ಟಾರೆ ಯಾರನ್ನೂ ಇಲ್ಲಿ ನಮ್ಮ ಸುಖಕ್ಕಾಗಲೀ, ದುಃಖಕ್ಕಾಗಲೀ ಕೇವಲ ಕಾರಣವಾಗುವ ಸಂಗತಿಯಾಗಲು ಬಿಡಬಾರದೇನೋ... ಜೀವಂತ ವ್ಯಕ್ತಿ ಜೀವಂತವಾಗಿಯೇ ನಮ್ಮ ಬದುಕಿನಲ್ಲಿ ಬರಬೇಕೇ ಹೊರತು ಸಂಕೇತ ವಾಗಲು ಬಿಡಬಾರದೇನೋ... ಎಂಬ ನಿಲುವಿಗೆ ಕಥೆ ಬರುತ್ತದೆ.

ಹುಟುಕಾಟ : ಮೂರು ಭಾಗಗಳಿಂದ ಕೂಡಿದ ತುಸು ದೀರ್ಘವೆನಿಸಬಹುದಾದ ಕಥೆ. ಇದು ಹಲವು ಆಕಸ್ಮಿಕಗಳಿಂದ ಕೂಡಿದ ಈ ಕಥೆಯ ಅಂತ್ಯ ಕೊನೆಯಿರದ ಹುಡುಕಾಟದಲ್ಲಿ ತೊಡಗಿಕೊಳ್ಳುತ್ತದೆ. ತೀರಾ ಚಿಕ್ಕಂದಿನಲ್ಲಿ ತನ್ನ ಮಗನೊಬ್ಬನನ್ನು ಕಳೆದುಕೊಂಡ ರಾವ್‌ಜೀಬಾಯಿ ತನ್ನ ೭೦ನೇ ವಯಸ್ಸಿನವರೆಗೂ ಕಳೆದುಹೋದ ಮಗನನ್ನು ಹುಡುಕುವ ಪರಿ ನಿಜಕ್ಕೂ ಆತನಿಗೆ ಬುದ್ಧಿಭ್ರಮಣೆಯಾಗಿರಬೇಕೆಂದು ಓದುಗರಿಗೆ ಅನ್ನಿಸುತ್ತದೆ. ಆದರೆ ಕತೆಯಲ್ಲಿ ನಾಲ್ಕಾರು ಬಾರಿ ತನ್ನ ಅಜ್ಜನನ್ನು ಹುಡುಕಿಕೊಂಡು ಬರುವ ಹುಡುಗ ರಾವ್‌ಜೀಭಾಯಿಯ ಮೊಮ್ಮಗನಾಗಿರಬಹುದೇ? ಎಂಬ ಸಂಶಯ ಮಾತ್ರ ಹಾಗೆಯೇ ಉಳಿಯುತ್ತದೆ.

ದೊಂಬರ ಹುಡುಗನನ್ನು ಕಂಡಾಗ ಆತನೇ ತನ್ನ ಮಗನಿರಬೇಕೆಂದು ಭ್ರಮಿಸಿದ ರಾವ್‌ಜೀಭಾಯಿಯ ಮುಂದೆ ಚಿಕ್ಕವಯಸ್ಸಿನ ಹುಡುಗನನ್ನು ತನ್ನ ಮೊಮ್ಮಗನೆಂದು ಭ್ರಮಿಸಿ, ಅವರನ್ನು ಹುಡುಕಲು ಮನೆಬಿಟ್ಟು ಹೊರಡುವುದು ಕಥೆಯ ಅಂತ್ಯದಲ್ಲೂ ಆತನ ಹುಡುಕಾಟ ಫಲಿಸಿತೇ? ಎನ್ನುವ ನಿರ್ಧಾರಾತ್ಮಕವಾದ ಉತ್ತರ ದೊರೆಯುವುದಿಲ್ಲ.

೧"ಕಣ್ಣ ಮುಂದೆಯೇ ಘಟಿಸಿದ ಸಾವನ್ನು ಕೂಡ ಒಂದು ದಿನ ಮರೆಯಬಹುದೇನೋ ಆದರೆ ಎಲ್ಲೋ ಬದುಕಿ ಇದ್ದೂ ಎಂಥ ಕಠಿಣ ಪರಿಸ್ಥಿತಿಯಲ್ಲಿ ಹೊಟ್ಟೆಯ ಮಗು ದಿನಗಳೆಯುತ್ತದೆಯೋ ಎಂದು ತಾವು ಬದುಕಿರುವವರೆಗೂ ತಿಳಿಯಲಾಗದ ಪರಿಸ್ಥಿತಿ ಮಾತ್ರ ಮನಸ್ಸನ್ನು ಹುಚ್ಚಿನ ಅಂಚಿಗೆ ಒಯ್ದರೆ ಆಶ್ಚರ್ಯವಿಲ್ಲ!"೧ ಎಂಬ ಕಥೆಗಾರನ ಸಾಲುಗಳು ನಿಜಕ್ಕೂ ನಿಜ.

ಇಲ್ಲಿ ಕೇವಲ ಮಗುವನ್ನು ಕಳೆದುಕೊಂಡ ರಾವ್‌ಜೀಭಾಯಿಯ ಮನೋಲೋಕ, ಅವನ ಮನೋ ಬೇನೆ ಮಾತ್ರ ವ್ಯಕ್ತವಾಗುತ್ತ ಇದರೊಟ್ಟಿಗೆ ಇವನು ವಾಸಿಸುತ್ತಿದ್ದ ಕಟ್ಟಡದ ಸೆಕ್ರೆಟ್ರಿ ಮನೆಯ ಆಳು ಧೋಂತೋನ ಮನೋಲೋಕವೂ ಅನಾವರಣಗೊಂಡಿದೆ. ಅಪ್ಪ-ಅಮ್ಮನ ಮೋರೆಯನ್ನು ಕಂಡು ಇರದ ಈತ ರಾವ್‌ಜೀಭಾಯಿಯ ಕಥೆ ಕೇಳಿ ತಾನೇ ಆತನ ಮಗನಿರಬಹುದೆಂದು ಮನಸ್ಸಿನಲ್ಲೇ ಭಾವಿಸುತ್ತಾನೆ.

ಇವನಷ್ಟೇ ಅಲ್ಲ, ಈ ಕಟ್ಟಡದ ಸೆಕ್ರೆಟ್ರಿಯ ತಂದೆ-ತಾಯಿ ಜಮಕೇದ, ಫ್ರೇನಿ, ರಾವ್‌ಜೀಭಾಯಿ ಯ ಕಥೆ ಕೇಳುತ್ತಾ ಆತ ಎಂದೋ ಕಳೆದುಕೊಂಡ ಮಗನ ಹುಡುಕಾಟದಲ್ಲಿ ತೊಡಗಿರುವುದನ್ನು ಕಂಡ ಅವರ ಮನಸ್ಸು, ೨"ತಮ್ಮನ್ನು ಈ ಮುದಿವಯಸ್ಸಿನಲ್ಲಿ ಆಳು-ಕಾಳುಗಳ ತಾಜಿಯಲ್ಲಿ ಬಿಟ್ಟುಹೋಗುವ ಯೋಜನೆಯಲ್ಲಿದ್ದ ಸೋರಲಾ ಡಾಯನಾ... ರದ್ದೇ ಯೋಚನೆ."೨.

---

೧. ಯಶವಂತ ಚಿತ್ತಾಲ: ಐವತ್ತೊಂದು ಕತೆಗಳೂ:೩೮೩ ೨. ಅದೇ ಪುಟ-೩೮೯

ರಾವ್‌ಜೀಭಾಯಿ ಡೊಂಬರ ಹುಡುಗನನ್ನು ತನ್ನ ಮಗನೆಂದು ಗದ್ದಲ ಎಬ್ಬಿಸಿದ ಕಥೆ ಕೇಳಿದ ಧೋಂಡೋ ಎಷ್ಟರಮಟ್ಟಿಗೆ ಮಾನಸಿಕವಾಗಿ ಪ್ರತಿಕ್ರಿಯಿಸಿದನೆಂದರೆ ಆತನ ಮನಸ್ಸು ಬಿಕ್ಕಳಿಸುತ್ತಿತ್ತು.

೧"ಮಗು ಕಳವಾದ ಸಂಕಟವೊಂದು, ಮರಳಿ ಸಿಕ್ಕಾಗ ಅದು ತನ್ನ ಮಗುವೇ"೧ ಎಂದು ಗುರುತು ಹಿಡಿಯಲಾಗದ ಸಂಕಟ ಇನ್ನೊಂದು, ಇವುಗಳಲ್ಲಿ ಯಾವುದು ಹೆಚ್ಚು ನೋವಿನದು? ಎಂದು ಧೋಂಡೋ ಚಿಂತಿಸುವ ಪರಿ ನಿಜಕ್ಕೂ ಅನನ್ಯ.

ಆದರೆ ಮನೆಯಲ್ಲಿ ಈ ರಾವ್‌ಜೀಭಾಯಿಯ ಹುಡುಕಾಟದ ಕಥೆ ಮೈಕೆಲ್‌ಗೆ ಪತ್ರಿಕೆಯ ಆಧಾರವಾಗಿ ಕಂಡದ್ದು ಮಾತ್ರ ವಿಪರ್ಯಾಸ. ಆ ಮೂಲಕನಿಂತಿದ್ದ ತನ್ನ ಪತ್ರಿಕೆಯನ್ನು ಮರಳಿ ಮುದ್ರಿಸಿ ಮುಖಪುಟದಲ್ಲಿ ರಾವ್‌ಜೀಭಾಯಿಯ ಫೋಟೋ ಮಾರಾಟ ಮಾಡಿದ್ದು ರಾವ್‌ಜೀಭಾಯಿ ಸ್ಥಳೀಯರಲ್ಲಿ ದಂತ ಕಥೆಯಾಗುವಂತೆ ಮಾಡುವುದು ಇದರ ದುರಂತ.

ಈ ಕಥೆಯಲ್ಲಿ ಕಥೆಗಾರರು ಹೇಳುವ ಮನುಷ್ಯ ಜೀವನದ ವೈಚಿತ್ರ್ಯವನ್ನು ಬಲ್ಲವರಾರು? ಎಂಬ ವಾಕ್ಯ ಸಾರ್ವತ್ರಿಕ ವಾಕ್ಯದಂತೆ ಒಂದು ಕ್ಷಣ ನಮ್ಮ ಮನಸ್ಸನ್ನು ಹಿಡಿದಿಡುತ್ತದೆ.
ಚಕ್ರವ್ಯೂಹ : ಕಥೆಯಲ್ಲಿ ನಲವತ್ತೈದು ವರ್ಷ ದಾಟಿದ ಕಥಾನಾಯಕನು ಪಿ.ಎಚ್.ಡಿ. ಮಾಡುವ ಉದ್ದೇಶದಿಂದ ಅಮೇರಿಕೆಯ ವಿಹಾಕೆನ್ ಎಂಬ ನಗರದಲ್ಲಿದ್ದಾಗ ಅನುಭವಿಸಿದ ಲೈಗಿಂಕ ಆಕರ್ಷಣೆಯ ತುಮುಲ, ದ್ರೋಣಾಚಾರ್ಯರು ಒಡ್ಡುವ ಚಕ್ರವ್ಯೂಹವನ್ನು ಹೊಕ್ಕ ಅಭಿಮನ್ಯುವಿನ ಪರಿಸ್ಥಿತಿ ಕಥಾನಾಯಕನದು. ೨"ಕತೆಗೆ ಕೊಟ್ಟಿರುವ ಶೀರ್ಷಿಕೆ ಸಾಂಕೇತಿಕವಾಗಿದೆ. ಮಹಾಭಾರತ ಯುದ್ಧದ ಹದಿಮೂರನೇ ದಿನ ದ್ರೋಣಾಚಾರ್ಯರು ಒಡ್ಡಿದ ಚಕ್ರವ್ಯೂಹವನ್ನು ಭೇದಿಸಿ ಒಳಹೋಗುವುದನ್ನು ಮಾತ್ರ ಬಲ್ಲವನಾಗಿದ್ದ ಅಭಿಮನ್ಯು ವ್ಯೂಹದೊಳಗೆ ತನ್ನ ಅಪ್ರತಿಮ ಸಾಹಸವನ್ನು ಮೆರೆದರೂ ಅಲ್ಲಿಂದ ಹೊರಬರಲಾರದೆ ಕೌರವನ ಕಡೆಯ ಷಡ್ರಥದ ಬಾಣಕ್ಕೆ ಬಲಿಯಾದ ದುರವಸ್ಥೆಯ ಸೂಚಕ ಇದು. ಕಥೆಯ ಸಂದರ್ಭದಲ್ಲಿ ಈ ಪ್ರತೀಕವನ್ನು ನ್ಯೂಯಾರ್ಕ್ ಮಹಾನಗರದ ವೈಭವ. ಲೈಗಿಂಕ ಪ್ರಚೋದನೆ, ಆಕರ್ಷಣೆಗಳನ್ನು ಧ್ವನಿಸಲು ನಿಯೋಜಿಸಲಾಗಿದೆ. ಲೂಯಿಸಾಳ ಪ್ರೀತಿಗೆ ದ್ವಂದ್ವಾರ್ಥವಿರುವಂತಿದೆ. ಅವಳಿಂದ ತಪ್ಪಿಸಿಕೊಳ್ಳಬೇಕೆಂದು ಓಡಿದರೂ ಅಂತಿಮವಾಗಿ ಅವಳಿಗೆ ವಶವಾಗುತ್ತಾನೆ. ಒಂದು ದೃಷ್ಟಿಯಿಂದ ನೋಡಿದರೆ ವಿದೇಶೀ ನೆಲದಲ್ಲಿ ಏಕಾಂಗಿಯಾಗಿ ಅನಾಥಪ್ರಜ್ಞೆಯಿಂದ, ಕಾಮಲಾಲಸೆಯಿಂದ ಪರಿತಪಿಸುವ ನಾಯಕನನ್ನು ಹದಿನೈದು ಡಾಲರಿಗೆ ಸ್ವರ್ಗ ತೋರಿಸುತ್ತೇನೆ ಎಂದು ಮೈಮೇಲೆ ಬೀಳುವ ಬೆಡಗಿಯರಿಂದ ರಕ್ಷಿಸಿದ್ದು ಲೂಯಿಸಾಳ ಪ್ರೀತಿಯೇ. ಹೆಂಡತಿಯ ಗರ್ಭಪಾತದ ಬಗೆಗೆ ಲೂಯಿಸಾಳ ಪ್ರೀತಿಯ ಬಗೆಗೆ ಯೋಚಿಸುತ್ತ, ಪಾರ್ಕಿನಲ್ಲಿ ಕೂತಾಗ, ಜೇಬಿನಲ್ಲಿಟ್ಟುಕೊಂಡು ಬಂದಿದ್ದ ಗರ್ಭನಿರೋಧಕವನ್ನು ಎಸೆದುಬಿಡುವುದು, ವಿದೇಶೀ ಹೆಣ್ಣಿನಲ್ಲಿ ತನ್ನ ಬೀಜ ಬಿತುವ ಸನ್ನಾಹವಿರಬಹುದೇ?

ಅಭಿಮನ್ಯು ತಾಯಿ ಗರ್ಭದಲ್ಲಿರುವಾಗಲೇ ಚಕ್ಯವ್ಯೂಹ ಪ್ರವೇಶ ವಿದ್ಯೆಯನ್ನು ಕಲಿತದ್ದು, ಮಗನ ಸಾವಿಗಾಗಿ ಪರಿತಪಿಸುವ ಅರ್ಜುನನ ಕೋಪ-ತಾಪ ಕೃಷ್ಣನನ್ನು ಉದ್ದೇಶಿಸಿದ ಸ್ವರ್ಗತಃ- ಇವುಗಳ ವಿವರ ಕಥೆಗೆ ಅನಗತ್ಯ ಭಾರವೆನಿಸಲೂಬಹುದು. ಏನಿದ್ದರೂ ಚಕ್ರವ್ಯೂಹದ ಹರವು ದೊಡ್ಡದು. ಪುರಾಣ ಪ್ರಸಂಗದ ಸಂಯೋಜನೆಯಲ್ಲಿ ಕತೆಗಾರ ತೋರಿರುವ ಕೌಶಲವನ್ನು ಮೆಚ್ಚಲೇಬೇಕು."೨

---

೧. ಯಶವಂತ ಚಿತ್ತಾಲ: ಐವತ್ತೊಂದು ಕತೆಗಳು:೩೯೭

೨. ಯಶವಂತ ಚಿತ್ತಾಲ : ಡಾ|ಕೆ.ಎಲ್.ಗೋಪಾಲಕೃಷ್ಣಯ್ಯ:ಸಂ: ಡಾ|ಪ್ರಧಾನ್ ಗುರುದತ್ತ :ಪುಟ-೯೨

೧"ಚಕ್ರವ್ಯೂಹ ಕಥೆಯ ನಾಯಕನೂ ಅಹಲ್ಯೆ ಕಥೆಯಲ್ಲಿನ ಅಹಲ್ಯೆಯ ಹಾಗೆ ಪಾಪವೆಂದು ತಿಳಿದುಕೊಂಡ ತಾನು ಮಾಡಿದ ಕೆಲಸವೊಂದರಿಂದ ನರಳುತ್ತಿರುವವನು. ಎರಡು ಕತೆಯಲ್ಲಿ ಸುತ್ತಲ ವಾತಾವರಣವು ಅವರನ್ನು ಹೊರತಪ್ಪಿಸಿಕೊಳ್ಳಲಾಗದಂತ ವೃತ್ತವಾಗಿಯೇ ಸುತ್ತುವರಿದಿದೆ. ಚಕ್ರವ್ಯೂಹ ಕಥೆಯ ನಾಯಕ ತಾನು ಹಿಂದೆ ಬೊಂಬಾಯಿಯಲ್ಲಿ ತನ್ನ ಹೆಂಡತಿಯ ಗರ್ಭಪಾತಕ್ಕೆ ಕಾರಣನಾದ ಸಂದರ್ಭವು ಈಗ ನ್ಯೂಯಾರ್ಕಿನಲ್ಲಿಯೂ ಬಂದೊದಗುವುದರ ಸನ್ನಿವೇಶವನ್ನು ಕುರಿತ ಹಾಗೆ ವ್ಯಥೆಪಡುತ್ತಿದ್ದಾನೆ. ಈಗ ನ್ಯೂಯಾರ್ಕಿನಲ್ಲಿ ಲೂಯಿಸಾಳ ಜೊತೆಗೆ ಲೈಗಿಂಕ ಸಂಬಂಧವನ್ನು ಬೆಳೆಸಬೇಕಾದಂಥ ಸನ್ನಿವೇಶದಲ್ಲಿ ಹಿಂದೆ ತನ್ನ ಹೆಂಡತಿಯ ಗರ್ಭಪಾತ ಒಳಗಿನ ಜೀವವೊಂದರ ಹತ್ಯೆಗೆ ತಾನು ಕಾರಣನಾದಂಥ ಪಾಪಪ್ರಜ್ಞೆಯೊಂದು ಇವನನ್ನು ಕಾಡುತ್ತದೆ. ಬೆಳೆಯಿಂದ ಚೈತನ್ಯವೊಂದರ ಹತ್ಯೆಗೆ ಕಾರಣನಾದೆ ಎನ್ನುವ ಮಾನವೀಯ ನೆಲೆಯಿಂದಾದ ಪಾಪಪ್ರಜ್ಞೆ ಇವನದೇ.....?"೧

ಬೀಗ ಮತ್ತು ಬೀಗದ ಕೈ : ಕೇಶವನ ದುರಂತ ಬರಿ ವೈಯಕ್ತಿಕವಾದುದಲ್ಲ. ವ್ಯಕ್ತಿಗಳ ಪರಸ್ಪರ ಸ್ಪಂದನಾರಾಹಿತ್ಯಕ್ಕೆ ಸಾಕ್ಷಿ, ತನ್ನೊಂದಿಗೇ ಇರುವ ಇತರರೊಡನೆ ಯಾವುದೇ ರೀತಿಯ ಸಂದರ್ಶನ ಏರ್ಪಡಿಸುವುದರಲ್ಲಿ ಅಸಫಲನಾಗುವ ಕೇಶವ ಇದ್ದೂ ಸತ್ತಂತೆ. ಬೀಗ ಮತ್ತು ಬೀಗದ ಕೈ ಕತೆಯಲ್ಲಿನ ಸಂಕೇತ ವ್ಯಕ್ತಿ ಕೇಂದ್ರದಲ್ಲಿ ಮಾತ್ರವಲ್ಲದೇ ಸಾಮಾಜಿಕ ಕೇಂದ್ರದಲ್ಲಿಯೂ ನಿಜವಾಗುತ್ತದೆ. ವ್ಯಕ್ತಿ ಸಮಾಜದೊಂದಿಗೆ ಸಂವಾದ ಸಾಧಿನೆಕೊಳ್ಳಲಾಗದ ದುರಂತ ದಾಖಲಾಗಿದೆ ಕೇಶವ ತನ್ನ ಊರಿನಿಂದ ತಾಯಿ ಕೊಟ್ಟ ಬೀಗವನ್ನು ಬೊಂಬಾಯಿಗೆ ತಂದು ಸುರಕ್ಷಿತನೆಂದು ಭಾವಿಸಿದ್ದಾನೆ. ತನ್ನ ವ್ಯಕ್ತಿತ್ವದಲ್ಲಿ ಇಲ್ಲದ ಆತ್ಮವಿಶ್ವಾಸ ಇವನಿಗೆ ಕ್ರಮೇಣ ಹಲವಾರು ಅನುಭವಗಳ ಮೂಲಕ ಗೊತ್ತಾಗುತ್ತದೆ. ಬೀಗದಕೈ ಕಳೆದುಕೊಂಡು ಈತ ಸಾವನ್ನಪ್ಪುತ್ತಾನೆ. ಸಾಂಕೇತಿಕ ನೆಲೆಯಲ್ಲಿ ವ್ಯಕ್ತಿತ್ವದ ದುರ್ಬಲತೆಯನ್ನು ಕತೆಯು ಚಿತ್ರಿಸುತ್ತದೆ.

ಕೇಶವನ ದುರಂತವನ್ನು ಎರಡು ನೆಲೆಗಳಲ್ಲಿ ಅರ್ಥೈಸಬಹುದೆಂದು ತೋರುತ್ತದೆ. ಹಳ್ಳಿಯಿಂದ ಮುಂಬೈ ನಗರಕ್ಕೆ ಬಂದ ಅತಿ ಸಂಕೋಚ ಸ್ವಭಾವದವನೂ, ಸೂಕ್ಷ್ಮವೇದಿಯೂ ಆದ ಯುವಕನೊಬ್ಬ ಹೊಸ ಪರಿಸರದಲ್ಲಿನ ಜನರೊಡನೆ ಸಂವಹನ ಸಾಧಿಸಲಾರದೆ ಆ ಪತ್ತೆಯನ್ನು ಕಾಣಲಾರದೆ ಅನುಭವಿಸಿದ ಧಾರುಣ ಪರಕೀಯತೆ ಅವನ ಸಾವಿಗೆ ಕಾರಣವಾಗುತ್ತದೆನ್ನಬಹುದು. ಕನ್ನಡ, ಮರಾಠಿ, ಹಿಂದಿ, ಇಂಗ್ಲೀಷ್, ಈ ಎಲ್ಲ ಗೊತ್ತಿದ್ದರೂ ಸಾಮಾಜಿಕ ಸಂಪರ್ಕಕ್ಕೆ ಅಗತ್ಯವಾದ ಮೂಲಭಾಷೆಯೇ ಅವನಿಗೆ ಗೊತ್ತಿಲ್ಲ. ಆದ್ದರಿಂದಲೇ ಅವನ ಮಾತು ಅವರಲ್ಲಡಗಿದ್ದ ನೋವು ಯಾರಿಗೂ ಅರ್ಥವಾಗುವುದಿಲ್ಲ ಕಡೆಗೆ ಅಯ್ಯಯ್ಯೋ ಎಂದು ಆಧೀಮ ಭಾಷೆಯಲ್ಲಿ ಅರಚಿ ಕುಸಿದು ಬೀಳುತ್ತಾನೆ.

೨"ಪ್ರಾಯ್ಡೀಯ ಮನೋವಿಶ್ಲೇಷಣದ ಪರಿಭಾಷೆಯಲ್ಲಿ ನೋಡಿದರೆ ಬೀಗ ಮತ್ತು ಬೀಗದ ಕೈಗಳು ಸ್ತ್ರೀ-ಪುರುಷ ಕೂಟದ ಸಂಕೇತವಾಗುತ್ತದೆ. ತಾಯಿಯ ಅಪೇಕ್ಷೆಯಂತೆ ಬೀಗದ ಕೈ ರಕ್ಷಣೆಯಲ್ಲಿ ಅವನು ತೋರುವ ಅತಿ ಕಾಳಜಿ. ಹೆತ್ತ ತಾಯ ಮೇಲಿನ ವ್ಯಾಮೋಹ ಡಿ.ಹೆಚ್.ಲಾರೆನ್ಸ್‌ನ Sons and Lovers ನಲ್ಲಿದ್ದ ಹಾಗೆ ಶೀಲರಕ್ಷಣೆಯ ಪ್ರತಿಮೆಯಾಗುತ್ತದೆ. ಈ ಕಾರಣದಿಂದಲೇ ಅವನು ಸಂಜೀವಿನಿಯಂಥ ಸುಂದರ ಯುವತಿಯ ಸಂಪರ್ಕಕ್ಕೆ ಸ್ಪಂದಿಸುವುದು ಸಾಧ್ಯವಾಗುವುದಿಲ್ಲ. ಅವನಿಗೆ ದೇಹ ಭಾಷೆಯ ಪರಿಚಯವೂ ಇಲ್ಲ. ಇದೇ ಅವನ ದುರಂತಕ್ಕೆ ಕಾರಣವೆನ್ನಬಹುದು."೨

೧.ಯಶವಂತ ಚಿತ್ತಾಲ: ಐವತ್ತೊಂದು ಕತೆಗಳೂ:೭೨೪

೨.ಯಶವಂತ ಚಿತ್ತಾಲ : ಡಾ।ಕೆ.ಎಲ್.ಗೋಪಾಲಕೃಷ್ಣಯ್ಯ:ಸಂ: ಡಾ।ಪ್ರಧಾನ್ ಗುರುದತ್ತ :ಪುಟ-೯೪

ಈ ಕತೆಯನ್ನು ಲೈಂಗಿಕ ಪ್ರಜ್ಞೆಯಲ್ಲಿ ವಿಂಗಡಿಸಲು ಕಾರಣ ವಾಸ್ತವವಾಗಿ ಇಲ್ಲಿ ವ್ಯಕ್ತವಾಗಿರುವಂತೆ ಪ್ರಾಯದ ಯುವಕನಿಗೆ ಸಹಜವಾದ ಲೈಗಿಂಕ ಪ್ರಜ್ಞೆಯ ಅಭಾವವೇ ಆಗಿದೆ. ಎಲ್ಲಿಯೂ ವಾಚ್ಯವಾಗದೆ ಆದರೆ ವಾಚ್ಯಾರ್ಥವನ್ನು ತಿರಸ್ಕರಿಸದೆ, ಧ್ವನಿಪೂರ್ಣವಾಗುವ ಈ ರೂಪಕ ಕತೆಯು ಚಿತ್ತಾಲರ ಅಭಿವ್ಯಕ್ತಿ ಸಾಮರ್ಥ್ಯಕ್ಕೆ ನಿದರ್ಶನವಾದ ಭಾವಗೀತೆಯಂತಿದೆ.

ಬೇನ್ಯಾ : ಈ ಕಥೆಯ ಉಪಶೀರ್ಷಿಕೆ "ಇನ್ನೊಬ್ಬರ ಕನಸಿನಲ್ಲಿ ಸಿಕ್ಕಿಬಿದ್ದ ಬಾಲಕನ ಕತೆ" ಎಂಬುದು ಅರ್ಥಪೂರ್ಣವಾಗಿದೆ ಕಥೆಯ ಆರಂಭದಲ್ಲಿ ಲೇಖಕ ಉದ್ಗರಿಸುವ ರೂಸೋ ಮಾತಿನ ಸಾರಾಂಶವೆಂದರೆ ಮೊಟ್ಟ ಮೊದಲ ಬಾರಿಗೆ ಈ ನೆಲದ ತುಣುಕೊಂದನ್ನು ಆಕ್ರಮಿಸಿಕೊಂಡ ವ್ಯಕ್ತಿಯೊಬ್ಬನು ತನ್ನ ಮಾತನ್ನು ನಂಬುವಂತಹ ಮುಗ್ಧ ಜನರಿರುವುದನನು ಕಂಡುಕೊಂಡ. ಇದು ನನ್ನದು ಎಂದು ಹೇಳಿದ ಅವನೇ ನಿಜವಾಗಿ ನಾಗರೀಕ ಸಮಾಜದ ಮೂಲ ಪುರುಷ. ಎಂಬುದಾಗಿದೆ. ಇಲ್ಲಿ ವಿದೇಶೀಯರ ಆಗಮನ. ನಮ್ಮ ದೇಶದವರ ಮುಗ್ಧತೆ, ವಿದೇಶೀಯರು ಆಗಮನಕ್ಕೆ ಮಾತ್ರವೇ ನಿಲ್ಲದೇ ನಮ್ಮವರ ಮುಗ್ಧತೆಯನ್ನು ಬಳಸಿಕೊಂಡು ಮಾಡಿದ ಆಕ್ರಮಣ ಇತ್ಯಾದಿಗಳನ್ನು ಪೂರ್ಣವಾಗಿಯೇ ರೂಸೋವಿನ ಈ ಮೇಲಿನ ಮಾತು ಧ್ವನಿಸುತ್ತದೆ.

೧"ಈ ಕತೆಯ ಬೆನ್ನೆಲುಬಿನಂತಿರುವ ಬೆಳಕನ್ನು ಕಟ್ಟಿ ಹಾಕುವುದು ಎಂಬ ಪರಿಭಾಷೆಯ ಪ್ರೇರಣೆಯನ್ನು ಖಾಸಗಿ ಆಸ್ತಿ ಸಂಗ್ರಹದ ಮೂಲ ಮತ್ತು ಅದರ ರಕ್ಷಣೆಗಾಗಿರುವ ಆಡಳಿತ ವ್ಯವಸ್ಥೆ ಇವುಗಳನ್ನು ಕುರಿತು ಕಾರ್ಲ್‌ಮಾರ್ಕ್ಸ್ ಮತ್ತು ಫ್ರೆಡ್ರಿಕ್ ಎಂಗಲ್ಸ್ ಅವರ ಚಿಂತನೆಯಲ್ಲಿ ಗುರುತಿಸಬಹುದು. ಆದರೆ ಚಿತ್ತಾಲರು ವೈಜ್ಞಾನಿಕ ಸಮಾಜದ ತತ್ವಗಳನ್ನು ನೇರವಾಗಿ ಪ್ರತಿಪಾದಿಸುವುದಿಲ್ಲ. ಹಾಗೆ ಪ್ರತಿಪಾದಿಸುವುದು ಕತೆಗಾರನ ಕೆಲಸವೂ ಅಲ್ಲ. ಬದಲಾಗಿ ಬೇನ್ಯಾನಂಥ ಭಿಕ್ಷುಕ ಬಾಲಕರು ಯಾವ ಮಾನವೀಯ ಅಂತಃಕರಣದಿಂದ ವಂಚಿತರಾಗಿದ್ದಾರೋ ಆ ಮಾನವೀಯ ಸಂವೇದನೆಯನ್ನು ಓದುಗರಲ್ಲಿ ಜಾಗೃತಗೊಳಿಸುವ ಕೆಲಸವನ್ನು ಮಾಡುತ್ತಾರೆ."೧

ಬ್ಯಾಂಡ್‌ಸ್ಟ್ಯಾಂಡ್ ಕಡೆಯಿಂದ ನಗರಕ್ಕೆ ಹೋಗುವ ರಸ್ತೆಯ ಸಿಗ್ನಲ್ ಬಳಿ ಕಾರಿನಲ್ಲಿ ಕುಳಿತ ಪಾವಸಿ ದಂಪತಿಗಳು ಕೈ ಒಡ್ಡಿದ ಬೇನ್ಯಾನಿಗೆ ಹಣ ಕೊಡುವಾಗ ಹೆಂಡತಿ ವಾಟ್ ಎ ಕ್ಯೂಟ್ ಚೈಲ್ಡ್ ಎಂದದ್ದಕ್ಕೆ ಆಕೆಯ ಗಂಡ ದೊಡ್ಡ ದಾರ್ಶನಿಕನ ಹಾಗೆ ಯಸ್ : ಬಟ್ ವಾಟ್ ಎ ಕೊಲೋಸಲ್ ವೇಸ್ಟ್ ಆಫ್ ಹ್ಯೂಮನ್ ಟೇಲೆಂಟ್ಸ್ ಎನ್ನುತ್ತಾನೆ.

ಭಿಕ್ಷುಕರ ಗುಡಿಸಲುಗಳನ್ನು ಮುರಿದು ಹಾಕಿದ್ದು ವಿದೇಶೀ ತಜ್ಞರ ಸಲಹೆ ಸಹಕಾರಗಳ ಪ್ರಕಾರ ಅಲ್ಲಿ ಕಿವುಡ, ಮೂಕರುಗಳ ಸಂಸ್ಥೆಗಾಗಿ ದೊಡ್ಡಕಟ್ಟಡ ಕಟ್ಟುವ ಸಲುವಾಗಿ, ಪೋಲೀಸ್ ವ್ಯಾನಿನಲ್ಲಿ ಭಿಕ್ಷುಕರನ್ನು ತುಂಬಿಕೊಂಡು ಹೋಗುವಾಗ ಇನ್ಸ್‌ಪೆಕ್ಟರ್ ಬಯ್ಯುತ್ತಾನೆ. ದೇಶದ ಬಗ್ಗೆ ಎಳಷ್ಟು ಅಭಿಮಾನ ತೋರಿಸದ ಬೋಳಿ ಮಕ್ಕಳು, ನಾಯಿ ಜನ್ಮದವರು ಎಂದು ಬೇನ್ಯಾ ನಾಯಿಯ ಹಾಗೆ ಮೈ ಮುದುಡಿ ಕೂತಲ್ಲೇ ಕಣ್ಣುಮುಚ್ಚುತ್ತಾನೆ. ಈ ಎಲ್ಲಾ ವೈಚಿತ್ರ್ಯಗಳ ನಡುವೆ ನಡುವೆ ಮಾನವೀಯತೆ ಯನ್ನು ಶೋಧಿಸಬೇಕಾಗಿದೆ.

೧. ಯಶವಂತ ಚಿತ್ತಾಲ : ಡಾ।ಕೆ.ಎಲ್.ಗೋಪಾಲಕೃಷ್ಣಯ್ಯ:ಸಂ: ಡಾ।ಪ್ರಧಾನ್ ಗುರುದತ್ತ :ಪುಟ-೩೮

ಮುಂಬಯಿ ಮಹಾನಗರದ ಝೋಪಡಪಟ್ಟಿಗಳ ಜನರ ಬದುಕು ಆಧುನಿಕ ಕೈಗಾರಿಕಾ ನಗರಗಳ ಸಾಮಾಜಿಕಾರ್ಥಿಕ ಸಮಸ್ಯೆಗಳು, ಬಲಾಢ್ಯರಿಗೆ ಮಾತ್ರ ಬದುಕುವ ಹಕ್ಕು. ಇವೆಲ್ಲದರ ನಡುವೆಯೆ ಮಿಡಿಯುವ ಅಥವಾ ಮಿಡಿಯಬೇಕಾದ ಮಾನವೀಯ ಅಂತಃಕರಣಗಳ ದೃಷ್ಟಿಯಿಂದ ಕತೆಯಾದಳು ಹುಡುಗಿ ಕತೆಯಲ್ಲಿ ಬಂದಾತ ಮನೆಗೂ ಒಂದು ಕದತಟ್ಟದ ಮೊದಲಾದವುಗಳ ಜೊತೆಗೆ ಸೇರಬಹುದಾದ ಕತೆ ಬೇನ್ಯಾ

ಬಾಂದ್ರಾದ ರಸ್ತೆಗಳ ಕೂಟವೊಂದರಲ್ಲಿ ತುಂಬ ವಯಸ್ಸಾದ ಮುದುಕ-ಮುದುಕಿಯರೊಂದಿಗೆ ತಳವೂರಿದ್ದ ಭಾಷೆ ಬೇಡುವ ಹುಡುಗ ಬೇನ್ಯಾ. ಇವನು ಎಲ್ಲಿ ಹುಟ್ಟಿದ, ಹೇಗೆ ಬೆಳೆದ, ಈ ಹೆಸರು ಯಾರಿಬ್ಬರು ಅದರ ಅರ್ಥವೇನು, ಇಲ್ಲಿಗೆ ಹೇಗೆ ಬಂದ ಇದಾವುದೂ ಗೊತ್ತಿಲ್ಲ. ರಸ್ತೆಯಲ್ಲಿ ಚಲಿಸುವ ವಾಹನಗಳು ನಿಂತಾಗ ಕೈಯೊಡ್ಡಿ ಭಿಕ್ಷೆ ಬೇಡುತ್ತಾ ತನ್ನ ಸುತ್ತಿನ ಭೂ ಪ್ರದೇಶವನ್ನು ನೋಡುತ್ತ ಬೇನ್ಯಾ ಬೆಳೆಯುತ್ತಿರುವಾಗಲೇ ಅವನ ಎದುರಿಗಿದ್ದ ದೊಡ್ಡ ಮೈದಾನದ ಮೇಲೆ ಗ್ರೇಟ್ ಈಸ್ಟರ್ನ್ ಸರ್ಕಸ್ ಕಂಪನಿಯು ಬೇಡುಬಿಟ್ಟಿತು. ದಿನ ಬೆಳಗಾಗುವುದರೊಳಗಾಗಿ ನೂರಾರು ಜನ ಸೇರಿ ನೆಲವನ್ನು ಸಮಮಾಡಿ ಸುತ್ತ ತಗಡುಗಳನ್ನು ಕಟ್ಟಿ ಕಂಬಗಳನ್ನು ನಿಲ್ಲಿಸಿ ಗುಡಾರ ಹಾಕಿಬಿಟ್ಟರು. ಎಲ್ಲಿ ಬೇಕೆಂದರಲ್ಲಿ ಹೀಗೆ ಪಾಗಾರ ಎಬ್ಬಿಸಿ ಟೆಂಟು ನಿಲ್ಲಿಸಿ ಬೆಳಕನ್ನು ಕಟ್ಟಿಹಾಕುವ ಈ ಬಲಾಢ್ಯರ ತಂಡದ ಬಗ್ಗೆ ಬೇನ್ಯಾಗೆ ನಿಗೂಢ ಭಯ, ಕೌತುಕ, ಸರ್ಕಸ್ ಅಲ್ಲಿರುವಷ್ಟು ಕಾಲ ಬೇನ್ಯಾನ ದಂಧೆಯೂ ಚೆನ್ನಾಗಿ ನಡೆಯುತ್ತಿತ್ತು.

ವಿಶೇಷವಾಗಿ ವಿದೇಶಿಯರನ್ನು ಆಕರ್ಷಿಸಲೆಂದೇ ಸಜ್ಜುಗೊಳಿಸಿದ ಕಲಾನಗರದ ವೈಭವನ್ನು ನೋಡಿ ಬೇನ್ಯಾ ಗೊಂದಲಿಸಿದ್ದ. ನಿಂತಲ್ಲೇ ನಡುಗಿದ ತನಗೇ ಗೊತ್ತಾಗದ ಹಾಗೇ ಯಾರೋ ಇನ್ನೊಬ್ಬರ ಕನಸಿನಲ್ಲಿ ನಡದು ಬಿಟ್ಟಿದ್ದೇನೆ ಎಂಬ ಭಯವಾಗಿ ಅವರಿಗೆ ಎಚ್ಚರವಾಗುವ ಮೊದಲೇ ಅದರೊಳಗಿಂದ ಹೊರಬೀಳುವ ಅವಸರದಲ್ಲಿದ್ದವನ ಹಾಗೆ ಅಲ್ಲಿಂದ ಓಟಕಿತ್ತ ನಂತರ ಸರ್ಕಸ್ ಕಂಪನಿ ಟೆಂಟು ಕಿತ್ತು ವಾರದೊಳಗಾಗಿ ನಿರ್ಗತಿಕರು ಬಂದು ಮತ್ತೆ ಅದೇ ಜಾಗದಲ್ಲಿ ಟೆಂಟು ಹಾಕಿದರು ಅದನ್ನು ನೋಡುತ್ತಾ ಕುಳಿತ ಬೇನ್ಯಾ ಧಡಕ್ಕನೆ ಎದ್ದು ಎಲ್ಲಿಂದಲೋ ಕಲ್ಲುಗಳನ್ನು ಎತ್ತಿ ತಂದು ತಾವು ಕೂರುವ ಜಾಗದ ಸುತ್ತಲೂ ಇಡಹತ್ತಿದ ಹಾಗೆ ಇಟ್ಟಿದ್ದೇ ತಡ ಕಲ್ಲುಗಡಿಯಿಂದಾಗಿ ನಿರ್ದಿಷ್ಟ ಅಳತೆ, ಆಕಾರ ಮೂಡಿದ ನೆಲಕ್ಕೆ ವಿಚಿತ್ರ ಮಾಂತ್ರಿಕ ಬಲ ಬಂದಿತ್ತು ಎನ್ನುವ ರೀತಿ ಬೇನ್ಯಾ ಬದಲಿಸಹತ್ತಿದ. ಆದರೆ ಆ ಚೋಪಡಿಗಳು ಬಹಳ ಕಾಲ ಉಳಿಯಲಿಲ್ಲ ಕಾರಣ ಅಲ್ಲಿ ಮೂಕರು ಕಿವುಡರ ಸಂಸ್ಥೆಗಾಗಿ ದೊಡ್ಡ ಕಟ್ಟಡ ಏಳುತ್ತದೆ. ವಿದೇಶೀ ಸಂಸ್ಥೆಯ ತಜ್ಞರ ಸಲಹೆ ಬರುವವರಿದ್ದರು. ಹಾಗಾಗಿ ಇವರನ್ನು ಖಾಲಿ ಮಾಡಿಸಲಾಗಿತ್ತು. ಇಲ್ಲಿ ಕನಸು ಕಾಣುವ ಕಣ್ಣುಗಳು ಆಕ್ರಮಣಶೀಲತೆ ಮುಗ್ಧ ಮನಃಸ್ಥಿತಿ ಎಲ್ಲವೂ ಕಾಣಸಿಗುತ್ತದೆ.

ಕತೆಯಾದಳು ಹುಡುಗಿ :ಇದು ಸಂವೇದನಾಶೀಲ ಲೇಖಕನೊಬ್ಬನ ವೇದನೆಯ ಇನ್ನೊಂದು ಮುಖವನ್ನು ತೋರಿಸುವುದು, ಗಟ್ಟಿಯಾಗಿ, ದಟ್ಟವಾಗಿ ಕಂಡುಂಡ ವೈಯಕ್ತಿಕ ಅನುಭವಗಳನ್ನು ಕೃತಿಗಳ ಮೂಲಕ ನೀಡುತ್ತ ಹೋಗುವುದು ಚಿತ್ತಾಲರಿಗೆ ಮೊದಲಿನಿಂದಲೂ ಸಾಧಿಸಿದ್ದು, ದುಃಖ, ಸಾವು ವೈಯಕ್ತಿಕ ವಿಷಯಗಳು ಸಾಹಿತಿಕ ವಾತಾವರಣದಲ್ಲಿ ಈ ವೈಯಕ್ತಿಕ ಅನುಭವಗಳಿಗೆ ಯಾವ ಮಹತ್ವೂ ಇಲ್ಲ ಎಂತಲೇ ಲೇಖಕನ ಮಗಳ ಸಾವು ಸಹ ಆತನಿಗೆ ತನ್ನ ಸಾಹಿತ್ಯ ಸೃಷ್ಟಿಗೆ ವಸ್ತುವಾಗದು. ಆದರೂ ಅಭಿವ್ಯಕ್ತಿಗೊಳಿಸದೆ ಇರಲೂ ಆತನಿಗೆ ಸಾಧ್ಯವಿಲ್ಲ ಎಂತಲೇ ತನ್ನ ಮಗಳನ್ನು ಚೋಪಡಪಟ್ಟಿಯಲ್ಲಿ ವಾಸ ಮಾಡುತ್ತಿರುವ ಕಾರ್ಮಿಕನೊಬ್ಬನ ಮಗಳಾಗಿ ಮಾಡಿ ಅವಳ ಮೇಲೆ

ಸ್ಕೂಟರಲ್ಲಿ ಬರುವ ಇಬ್ಬರು ಯುವಕರು ಅತ್ಯಾಚಾರ ಮಾಡುವರು ಇದಕ್ಕೆ ಇನ್ನೂ ಒಂದು ತಿರುವು ಬರುವಂತೆಯೂ ಕತೆಗಾರ ಸನ್ನಿವೇಶ ಜೋಡಿಸುವನು. ಛಸ್ನಾಲ ಗಣಿ ಕಾರ್ಮಿಕನ ಮಗಳಾದ ಆ ಜಾನಕಿ ಗಣಿಯಲ್ಲಿ ನೀರು ನುಗ್ಗಿ ನೂರಾರು ಜನ ಮೃತಪಟ್ಟ ದಿನ ತಂದೆಯ ದಾರಿ ಕಾಯುತ್ತಿರುವಾಗ ಈ ಅತ್ಯಾಚಾರ ಸಂಭವಿಸುವುದು ಈ ಕತೆ ಎಲ್ಲರಿಂದಲೂ ಪ್ರಪಂಡ ಪ್ರಶಂಸೆಗೆ ಒಳಗಾಗುವುದು. ಕತೆಗಾರನ ಮೊದಲ ದುರಂತಕ್ಕೆ ಇದು ಇನ್ನೊಂದು ದುರಂತ ಕತೆಯುದ್ದಕ್ಕೂ ವ್ಯಂಗ್ಯ ಕತೆಗೆ ಹೊಸ ಆಯಾಮ ಕೊಡುವುದು. ಕತೆಯ ಕೊನೆಯಲ್ಲಿ ಕತೆಗಾರ, ಆತನ ಹೆಂಡತಿ ಅನಾಥಾಶ್ರಮಕ್ಕೆ ಹೋಗಿ ಒಂದು ಹೆಣ್ಣು ಮಗುವನ್ನು ತಂದು ಅವಳಿಗೆ ಜಾನಕಿ ಎಂದು ಹೆಸರಿಡುವುದು ಬದುಕು ಸಾಹಿತ್ಯದ ಬಗ್ಗೆ ನಾವು ಬೆಳೆಸಿಕೊಳ್ಳಬೇಕಾದ ಧೋರಣೆ ಕಲ್ಪನೆಗಳಿಗೂ ಧ್ವನಿಪೂರ್ಣ ಉತ್ತರ ನೀಡುವುದು.

ಕತೆಯಾದಲು ಹುಡುಗಿ ಒಂದೇ ಕಾಲಕ್ಕೆ ಮಗಳನ್ನು ಕಳೆದುಕೊಂಡ ತಂದೆಯೊಬ್ಬನ ವ್ಯಥೆ ಹಾಗೂ ಈ ವ್ಯಥೆಯನ್ನು ಮಾನವ ಸಹಜ ವ್ಯಾಕುಲತೆಯಿಂದ ಇನ್ನೊಬ್ಬನಿಗೆ ಮುಟ್ಟಿಸಲು ಹೋದಾಗ ನೇರವಾಗಿ ಮುಟ್ಟಿಸುವುದೇ ಅಸಾಧ್ಯವಾಗಿ ನಿರೂಪಣೆ ಹಲವಾರು ರೀತಿಯಲ್ಲಿ ರೂಪಾಂತರಗೊಳ್ಳುವುದರ ಚಿತ್ರಣವಾಗಿದೆ. ಹೀಗೆ ವಿರೂಪಗೊಳ್ಳಲು ಸಧ್ಯದ ಸಾಮಾಜಿಕ ಸಾಹಿತ್ಯಕ ನಿರೂಪಣಾ ತಂತ್ರವನ್ನು ಆದರ ಭಾವನಾತ್ಮಕ ಶಿಲ್ಪವನ್ನು ನಿರ್ಮಿಸಿದ ಕೇಂದ್ರ ಕಲ್ಪನೆ ಮಾರ್ಕ್ಸ್ ತನ್ನ ಸಮಾಜದ ಬಗೆಗೆ ಕಟ್ಟಿದ ಕನಸಿನಲ್ಲಿ ಹುಟ್ಟಿರುವಂಥದ್ದು ಸಾಮಾಜಿಕ ವ್ಯವಸ್ಥೆಯೆಂಬುದು ಸಮಾಜ ರೂಪಿತ ಮನುಷ್ಯನ ಸಹಜ ಸ್ವಭಾವವೇ ಆಗಿ ರೂಪುಗೊಳ್ಳುವಂತಿಕರಬೇಕು. ಹಾಗೆ ಆದಾಗ ಮಾತ್ರ ಹೊಟ್ಟೆಯ ಮಗಳು ಜಾನಕಿ ಸತ್ತ ವ್ಯಥೆಯ ಕತೆ ಹೊಟ್ಟೆಯ ಮಗಳ ಕತೆಯೇ ಆಗಿ ಸಾಮಾಜಿಕರನ್ನು ಮುಟ್ಟುವುದು ಸಾಧ್ಯವಾದೀತು. ಇದು ವ್ಯಕ್ತಿ ಮತ್ತು ಸಮಾಜಗಳ ನಡುವಿನ ಆರೋಗ್ಯಕರ ಪರಿಪೂರ್ಣ ಸಂಬಂಧ ಆದರೆ ಈಗಿನಂತೆ ಮನುಷ್ಯ ಮನುಷ್ಯರ ನಡುವೆ ಸುಳ್ಳು ಸಂಬಂಧಗಳನ್ನು ಹುಟ್ಟಿಸುವ ಏಲಿಯನೇಷನ್ ಇರುವವರೆಗೂ ವ್ಯಕ್ತಿಯ ಅಂತರಂಗದ ನೋವು ನೈಜವಾಗಿ ಮತ್ತೊಬ್ಬ ವ್ಯಕ್ತಿಯನ್ನು ಮುಟ್ಟುವಂತಹ ಅಭಿವ್ಯಕ್ತಿ ಅಸಾಧ್ಯವೇನೋ ಅಂತೆಯೇ ದೇವರೇ ಎಲ್ಲರಿಗೂ ಅನ್ನ, ಬಟ್ಟೆ, ಇರಲು ಜಾಗ, ವಿದ್ಯೆಬುದ್ಧಿ ನೌಕರಿ ಇರುವಂತಹ ಜಾತಿಗಳಿಲ್ಲದ ವರ್ಗ ಭೇದವಿಲ್ಲದ,ಶೋಷಣೆಯಿಲ್ಲದ ಸುಖೀ ಸಮಾಜ ಹುಟ್ಟಿಬಂದಾಗ ಆದರಲ್ಲಿ ನಮ್ಮ ಪುಟ್ಟಿ ಜಾನಕಿಯ ಬಗ್ಗೆ ಕರೆ ಬರೆಯುವ, ಬರೆದಾಗ ಪ್ರೀತಿಯಿಂದ ಓದುವ ಜನರೂ ಇರಲಿ ಎಂದು ಕತೆಗಾರ ಪ್ರಾರ್ಥಿಸಿದ್ದಾನೆ.

ಸಾಹಿತ್ಯ ಕೃತಿಯಲ್ಲಿ ಸಾಮಾಜಿಕ ಪ್ರಸ್ತುತಿ ಕಡ್ಡಾಯವೆಂದು ಭಾಷಣ ಬಿಗಿಯುವ, ಆದರೆ ಝೋಪಟ ಪಟ್ಟಿಯಿಂದ ತಂದ ಮಗುವಿನ ಹುಟ್ಟುಹಬ್ಬಕ್ಕೆ ಬರುವ ಸಹೃದಯತೆಯನ್ನು ತೋರಲಾರದ ಸಾಹಿತ್ಯ ಮಿವರ್ಶಕ ಗೆಳೆಯರ ವಿಡಂಬನೆಗೆ ಕತೆಯಲ್ಲಿ ಹೆಚ್ಚಿನ ಸ್ಥಾನ ದೊರತಿದೆ ಆದರೂ ಅಂತ್ಯದಲ್ಲಿ ಕತೆಗಾರ ವ್ಯಕ್ತಪಡಿಸುವ ವ್ಯಕ್ತಿ-ಸಮಾಜಗಳ ಆರೋಗ್ಯಕರ ಸಂಬಂಧದ ಕಳಕಳಿ ಹೃದ್ಯವಾಗಿದೆ.

ಉಪಸಂಹಾರ

ಯಶವಂತ ಚಿತ್ತಾಲರು ಆಧುನಿಕ ಕನ್ನಡ ಬರಹಗಾರರಲ್ಲಿ ವಿಶಿಷ್ಟರಾದವರು, ಮಾತೃ ಭಾಷೆ ಕೊಂಕಣಿಯಾದರೂ, ಆಂಗ್ಲಭಾಷೆಯಲ್ಲಿ ಅಧ್ಯಯನ ಮಾಡಿದರೂ, ಪರಿಸರದಲ್ಲಿದ್ದ ಭಾಷೆ ಮರಾಠಿಯಾದರೂ ಕನ್ನಡದಲ್ಲಿ ಬರೆದರು. ಪಾಲಿಮರ ವಿಜ್ಞಾನವನ್ನು ಅಧಯ್ಯನ ಮಾಡಿದರೂ ಪ್ರವೃತ್ತಿಯಿಂದ ಕನ್ನಡದಲ್ಲಿ ಕಥೆ-ಕಾದಂಬರಿಗಳನ್ನು ಬರೆದರು. ಇವರ ಬರವಣಿಗೆಗೆ ಸಂಬಂಧಿಸಿದಂತೆ ಸ್ಫೂರ್ತಿ ಅಥವಾ ಪ್ರೇರಕಶಕ್ತಿಯ ಬಗೆಗೆ ವಿಮರ್ಶಕರು ಹೇಳುವುದೇ ಬೇಡ. ಸ್ವತಃ ಚಿತ್ತಾಲರೇ ಹೇಳಿಕೊಳ್ಳುತ್ತಾರೆ. ೧''ಉತ್ತರ ಕನ್ನಡ ಜಿಲ್ಲೆ ಅದರಲ್ಲೂ ನನ್ನ ಹುಟ್ಟೂರಾದ ಹನೇಹಳ್ಳಿ ಇವು ನನ್ನ ಮಟ್ಟಿಗೆ ಬರೇ ನೆಲದ ಹೆಸರುಗಳಲ್ಲ. ಬದಲು ನನ್ನ ಸಾಹಿತ್ಯದ ಮಟ್ಟಿಗೆ ಕಾರಣವಾಗಿ ಅದರ ಚೈತನ್ಯಕ್ಕೆ ನಿರಂತರವಾದ ಜೀವಸೆಲೆಯಾಗಿ ನಿಂತ ಮೂಲಭೂತವಾದ ಪ್ರೇರಕಶಕ್ತಿಗಳಾಗಿವೆ ಎಂದು ನಂಬಿದ್ದೇನೆ''೧.

ಈ ಹನೇಹಳ್ಳಿಯೇ ಅವರ ಕಥೆಯ, ಕಾದಂಬರಿಗಳ ಮೂಲನೆಲೆ ಇದರ ಜೊತೆಗೆ ಅವರ ಜೀವನದಲ್ಲಿ ನಡೆದ ಕೆಲವು ಘಟನೆಗಳು, ದುರಂತಗಳು ಪದೇ ಪದೇ ಅವರ ಕಾದಂಬರಿಗಳಲ್ಲೋ ಅಥವಾ ಕತೆಗಳಲ್ಲೋ ಬರುವಷ್ಟು ಅಗಾಧ ಪ್ರಭಾವವನ್ನು ಅವರ ಮನಸ್ಸಿನ ಮೇಲೆ ಉಂಟುಮಾಡುತ್ತವೆ. ಅವುಗಳೆಂದರೆ ಅವರೇ ಹೇಳುವಂತೆ ೨''೧೯೪೮ ರಲ್ಲಿ ಹಿರಿಯ ಅಣ್ಣ ತನ್ನ ವಯಸ್ಸಿನ ೩೬ನೇ ವರ್ಷದಲ್ಲಿ ಆಕಸ್ಮಿಕವಾಗಿ ತೀರಿಕೊಂಡಾಗ, ೧೯೫೫ ರಲ್ಲಿ ಅಪ್ಪ ಬಾವಿಯಲ್ಲಿ ಹಾರಿ ಜೀವ ಕಳೆದುಕೊಂಡಾಗ, ೧೯೫೬ ರಲ್ಲಿ ನನ್ನ ಹೆಂಡತಿ ಆಕಸ್ಮಿಕವಾಗಿ ಬೇನೆ ಬಿದ್ದು ಪ್ರಾಣತಿಂಕವಾಗಿ ಡಾಕ್ಟರ್‌ರು ಬದುಕುವ ಆಸೆ ಇಲ್ಲವೆಂದು ಹೇಳಿದಾಗ, ಸ್ವತಃ ಎಂ.ಎಸ್.ರಾಯ್ ಹಾಗೂ ಎಲ್.ಎನ್.ರಾಯ್ ಸತ್ತ ಬಗೆ ಕಂಡಾಗ, 1೯೬೩ ರಲ್ಲಿ ನನ್ನ ೨೧ ವರ್ಷದ ಸುಂದರ, ಆರೋಗ್ಯವಂತ ಭಾವ ಸತ್ತ ಸನ್ನಿವೇಶ ಗಮನಿಸಿದಾಗ ಬದುಕನ್ನು ಕುರಿತು ಭಾವ ಪ್ರಪಂಚದಲ್ಲಿ ಎದ್ದ ಬಿರುಗಾಳಿಯನ್ನು ತಡೆಹಿಡಿಯಲು ಮಾನವತಾವಾದ ಚೌಕಟ್ಟು ಸಾಲದೆನಿಸಿತು''೨.

ಈ ಘಟನಾವಳಿಗಳ ಪ್ರಭಾವವನ್ನು ಇವರ ಕಥೆಗಳಲ್ಲಿ ಕಾಣಬಹುದು. ಶಿಕಾರಿಯ ನಾಗಪ್ಪ ತನ್ನ ಅಪ್ಪ ಬಾವಿಯಲ್ಲಿ ಬಿದ್ದು ಆತ್ಮಹತ್ಯೆ ಮಾಡಿಕೊಂಡಿದ್ದೇಕೆ ಎನ್ನುವ ಹಳಹಳಿಕೆಯಲ್ಲೇ ತೊಳಲಾಡುವುದನ್ನು ನಾವು ಕಾಣಬಹುದು. ಅದೇ ರೀತಿ ಬಹಳಷ್ಟು ಕಥೆಗಳಲ್ಲಿ ಪದೇ ಪದೇ ಬರುವ ಸಾವಿಗೂ ಮತ್ತು ಈ ಮೇಲಿನ ಘಟನಾವಳಿಗಳಿಗೂ ಮನೋವೈಜ್ಞಾನಿಕ ದೃಷ್ಟಿಯಿಂದ ಕಾರಣಗಳನ್ನು ಹುಡುಕಬಹುದು. ಇದರೊಟ್ಟಿಗೆ ಮುಖ್ಯವಾಗಿ ಇವರ ಅಗಾದ ಓದು ಈ ಉತ್ಕೃಷ್ಟ ಮಟ್ಟದ ಸಾಹಿತ್ಯ ರಚನೆಗೆ ಮುಖ್ಯ ಕಾರಣ ಎನ್ನುವುದರಲ್ಲಿ ಎರಡು ಮಾತಿಲ್ಲ. ಅವರೇ ಒಂದೆಡೆ ಹೇಳುವ ''ನನ್ನಷ್ಟು ಕೆಟ್ಟ ಓದುಗ ನಿಮಗೆ ಹುಡುಕಿದರೂ ಸಿಗಲಾರ, ನನ್ನ ಓದಿನಲ್ಲಿ ಶಿಸ್ತು ಎಂಬುದಿಲ್ಲ ಬಹಳ ಓದುತ್ತೇನೆ. ಆದರೆ, ಬಹಳ ಓದಿಕೊಂಡವನಲ್ಲ'' ಎನ್ನುವ ಮಾತುಗಳು ಇದಕ್ಕೆ ಸಾಕ್ಷಿಯಾಗುತ್ತವೆ. ಈ ಅಗಾಧ ಓದಿನ ಕಾರಣದಿಂದಾಗಿಯೇ ಸಮರ್ಥವಾದ ಕತೆಗಾರಿಕೆ, ಕಥನತಂತ್ರಗಳು ಅವರಿಗೆ ಸಿದ್ಧಿಸಿದವು.

ತಾವು ವಿಜ್ಞಾನದ ವಿದ್ಯಾರ್ಥಿ ಎಂಬ ಮಾತನ್ನು ಚಿತ್ತಾಲರು ಒತ್ತಿ ಒತ್ತಿ ಹೇಳಿದ್ದಾರೆ. ಇವರ ವಿಜ್ಞಾನದ ಓದು ಇವರ ಮೇಲೆ ಬೀರಿದ ಪ್ರಭಾವ ಅಪಾರವಾದದು. ಡಾ.ಜಿ.ಎಸ್. ಆಮೂರರು ಕೂಡ ಇದನ್ನು ಗುರ್ತಿಸುತ್ತಾರೆ. ಚಿತ್ತಾಲರ ಕಥೆಗಳನ್ನು ಓದುವಾಗ, ವಿಮರ್ಶಿಸುವಾಗ, ಇವರು

---

೧. ಸೃಜನಶೀಲತೆ ಮತ್ತು ನಾನು- ಯಶವಂತಚಿತ್ತಾಲ-ಪುಟ-೬೮ ೨. ಅದೇ ಪುಟ-೧೬

ವಿಜ್ಞಾನದ ವಿದ್ಯಾರ್ಥಿ ಎಂಬ ಅರಿವಿಟ್ಟುಕೊಳ್ಳುವುದು ಅವಶ್ಯಕ. ಏಕೆಂದರೆ, ಇದರಿಂದಲೇ ಅವರಿಗೆ ಭಾವಪ್ರಪಂಚದ ಜೊತೆ ಜೊತೆಗೆ ವೈಚಾರಿಕ ಪ್ರಪಂಚವೂ ಸಿದ್ಧಿಸಿತು.

ಆರಂಭದಲ್ಲಿ ಇವರು ಬರೆದ 'ಬೊಮ್ಮಿಯ ಹುಲ್ಲು ಹೊರೆ' ಕತೆ ಇದು ಪ್ರಕಟವಾದ ನಂತರ ಮದುವೆಯಾಗಲಿದ್ದ ಹುಡುಗಿಯನ್ನು ಕಂಡಾಗ ತಾನು ದೊಡ್ಡ ಕಥೆಗಾರನೆಂದು ಜಂಭ ಕೊಚ್ಚಿಕೊಂಡದ್ದು , ಮುಂದೆ ಇದನ್ನು ಸಾಧಿಸಲು ಅವರು ಇನ್ನಷ್ಟು ಕಥೆಗಳನ್ನ ಬರೆಯತೊಡಗಿದ್ದು, ಇದೆಲ್ಲಾ ತಮಾಷೆಯೆನಿಸಿದರೂ ಎಲ್ಲಿಯೋ ಒಂದು ಕಡೆ ಇದೂ ಕೂಡ ಇವರ ಕಥೆಗೆ ಸ್ಫೂರ್ತಿ ಎನಿಸದೆ ಇರದು.

ಗೌರೀಶ ಕಾಯ್ಕಿಣಿ ಅವರ ಮುನ್ನಡಿಯೊಂದಿಗೆ ಇವರ ಮೊದಲ ಸಂಕಲನ ಸಂದರ್ಶನ ಮತ್ತು ಇತರ ಕಥೆಗಳು ಎಂಬ ಸಂಕಲವು ಪ್ರಕಟವಾದಾಗ ಇದನ್ನು ಮಾಸ್ತಿಯವರಿಗೆ ಚಿತ್ತಾಲರು ಕಳುಹಿಸುತ್ತಾರೆ. ಆಗ ಮಾಸ್ತಿಯವರು ಬರೆದ ಮೆಚ್ಚುಗೆಯ ಸಾಲುಗಳು 'ಈಗಲೂ ತಮ್ಮ ಕಥಾ ಸಾಹಿತ್ಯದ ದಾರಿದೀಪವಾಗಿಯೇ ಉಳಿಯುತ್ತಿದೆ' ಎಂದು ಸ್ವತಃ ಚಿತ್ತಾಲರೇ ನೆನೆಯುತ್ತಾರೆ.

ಈವರೆಗೆ ಚಿತ್ತಾಲರನ್ನು ಕುರಿತಂತೆ ಸಾಕಷ್ಟು ವಿಮರ್ಶೆಗಳು, ಚರ್ಚೆಗಳು ಆಗಿದ್ದರೂ ಇನ್ನೂ ಆಗಬೇಕಾಗಿರುವುದು ಸಾಕಷ್ಟಿದೆ. ಏಕೆಂದರೆ, ಚಿತ್ತಾಲರು ಒಂದೇ ಓದಿಗೆ ದಕ್ಕುವವರಲ್ಲ. ಮಾನವ ಪ್ರಜ್ಞೆ, ಸಾಮಾಜಿಕ ಪ್ರಜ್ಞೆ, ಸಾಹಿತ್ಯ ಮತ್ತು ಸಾಮಾಜಿ ಪರಿಸ್ಥಿತಿಗಳ ಸಂಬಂಧ ಮೊದಲಾದವನ್ನು ಪ್ರತಿವಾದಿಸುವಾಗ ಕಾರ್ಲ್‌ಮಾರ್ಕ್ಸ್, ಬ್ರೆಕ್ಟ್, ಮಾರ್ಕ್ಸ್‌ವಾದಿ ವಿಮರ್ಶಕ ಜಾರ್ಜ್ ಲುಕಾಕ್ಸ್ ಮೊದಲಾದ ಸಮಾಜವಾದಿ ಚಿಂತಕರ ಆಲೋಚನೆಗಳ ಧಾಟಿಯನ್ನು ಅನುಸರಿಸುತ್ತಾರೆಂಬುದು ಗಮನಾರ್ಹ. ವಿನೋದಪೂರ್ಣವಾದ ಕೆಲವು ಕಥೆಗಳನ್ನು ಹೊರತುಪಡಿಸಿದರೆ ನೋವು, ಸಾವು, ಏಕಾಕಿತನ, ಛಿದ್ರ, ಸ್ವಾರ್ಥ, ಕ್ರೌರ್ಯ, ಆಕ್ರಮಣಶೀಲತೆಗಳು, ಕಾಮ, ಇವುಗಳ ನಾನಾ ಮುಖಗಳನ್ನು ಗಾಢವಾಗಿ, ಸೂಕ್ಷ್ಮವಾಗಿ ಸವಿವರವಾಗಿ ಚಿತ್ರಿಸುವ ಸಂದರ್ಭಗಳೇ ಹೆಚ್ಚಾಗಿವೆ.

ಕೊನೆಗೆ ಹಾ.ಮ.ನಾಯಕರ ಈ ಮಾತುಗಳು ಉಲ್ಲೇಖರ್ಹವೆನಿಸುತ್ತವೆ.

"ಕರ್ನಾಟಕದಿಂದ ದೂರವಾಗಿರುವುದು ವೈಯಕ್ತಿಕವಾಗಿ ಚಿತ್ತಾಲರಿಗೆ ಒಂದು ವರವೆಂದೇ ನಾನು ಭಾವಿಸುತ್ತೇನೆ. ಇಂದಿನ ನಮ್ಮ ಸಾಹಿತ್ಯದಲ್ಲಿ ಬಹುಜನ ಶುಚಿವಂತರಾಗಿ ಉಳಿದಿಲ್ಲ, ಹಾಗೆಯೇ ಉಳಿದವರಲ್ಲಿ ಕೇವಲ ಒಬ್ಬಿಬ್ಬರಲ್ಲಿ- ಚಿತ್ತಾಲರು ಗಣ್ಯರು. ಕನ್ನಡ ನಾಡಿನಲ್ಲಿರುವ ಲೇಖಕರಂತೆ ಅವರು ಗುಂಪುಗಾರಿಕೆಗೆ ಒಳಪಟ್ಟಿಲ್ಲ, ಸಾಹಿತ್ಯೇತರ ಕಾರಣಗಳಲ್ಲಿ ಭಾಗಿಯಾಗಿಲ್ಲ, ವೈಯಕ್ತಿಕ ಪೈಪೋಟಿ, ಪರಸ್ಪರ ದೂಷಣೆಗಳಲ್ಲಿ ತೊಡಗಿಲ್ಲ. ಬೆಂಗಳೂರು, ಮೈಸೂರು, ಧಾರವಾಡಗಳ ಸಾಹಿತ್ಯಿಕ ವಾತಾವರಣದಿಂದ ಮುಕ್ತವಾಗಿರುವುದರಿಂದಲೇ ಅವರಿಗೆ ಇದು ಸಾಧ್ಯವಾಗಿದೆ. ನಮ್ಮ ಇತರ ಹಲವು ಲೇಖಕರ ಬಗೆಗೆ ಬಂದಿರುವ ಉದ್ದೇಶಪೂರ್ವಕವಾದ ಪಕ್ಷಪಾತದ ವಿಮರ್ಶೆಯಿಂದ ಚಿತ್ತಾಲರು ತಪ್ಪಿಸಿಕೊಂಡಿದ್ದಾರೆ. ಈ ವಿಷಯದಲ್ಲಿ ಅವರು ಅದೃಷ್ಟವಂತರೆಂದೇ ಹೇಳಬೇಕು. ಕಲುಷಿತಗೊಳ್ಳದ ವಿಮರ್ಶೆ ಅವರಿಗೆ ದಕ್ಕಿದೆ".

೧೯೮೧ ರಲ್ಲಿ ಹಾ.ಮ.ನಾ. ಬರೆದ ಈ ಸಾಲುಗಳು ಪ್ರಸ್ತುತಕ್ಕೂ ಅನ್ವಯವಾಗುತ್ತಿವೆ. ಇದಕ್ಕಾಗಿಯೇ ಇವರು ಆಪ್ತರಾಗುತ್ತಾರೆ.

---

* ಹಾ.ಮಾ.ನಾಯಕ ಮೆಚ್ಚುಮಾತು ಯಶವಂತ ಚಿತ್ತಾಲ: ಕೆಲವು ಅಧ್ಯಯನಗಳು: ಮಿತ್ರ ಪ್ರಕಾಶನ 1981 -ಪುಟ 4-5

ಅನುಬಂಧ
ಯಶವಂತ ಚಿತ್ತಾಲರ ಕೃತಿಗಳು

ಕಥಾಸಂಕಲನಗಳು

೧. ಸಂದರ್ಶನ (೧೯೫೭)
೨. ಆಬೋಲಿನ (೧೯೬೦)
೩. ಆಟ (೧೯೬೯)
೪. ಆಯ್ದ ಕತೆಗಳು (೧೯೭೬)
೫. ಕತೆಯಾದಳು ಹುಡುಗಿ (೧೯೮೦)
೬. ಬೇನ್ಯಾ (೧೯೮೩)
೭. ಚಿತ್ತಾಲರ ಕತೆಗಳು (ಸಮಗ್ರ) (೧೯೮೩)
೮. ಸಿದ್ಧಾರ್ಥ (೧೯೮೮)
೯. ಕಮಟೆಗೆ ಬಂದಾ ಕಿಂದರಿಜೋಗಿ (೧೯೯೭)
೧೦. ಐವತ್ತೊಂದು ಕತೆಗಳು (೨೦೦೦)
೧೧. ಓಡಿ ಹೋದಾ ಮುಟ್ಟಿ ಬಂದಾ (೨೦೦೧)

ಕಾದಂಬರಿಗಳು:

೧. ಮೂರು ದಾರಿಗಳು (೧೯೬೪)
೨. ಶಿಕಾರಿ (೧೯೭೯)
೩. ಛೇದ (೧೯೮೫)
೪. ಪುರುಷೋತ್ತಮ (೧೯೯೦)
೫. ಕೇಂದ್ರ ವೃತ್ತಾಂತ (೧೯೯೭)

ಪ್ರಬಂಧ ಸಂಕಲನ:

೧. ಸಾಹಿತ್ಯ, ಸೃಜನಶೀಲತೆ ಮತ್ತು ನಾನು (೧೯೮೦)
೨. ಸಾಹಿತ್ಯದ ಸಪ್ತಧಾತುಗಳು (೨೦೦೧)

ಕೊಂಕಣಿ ಭಾಷಾಂತರದಲ್ಲಿ :

೧. ಖೇಳ್ ಆನಿ ಹೆರ್ ಕಥಾ (ಒಂಬತ್ತು ಕತೆಗಳ ಕೊಂಕಣಿ ಅನುವಾದ: ವಿಲ್ಯಿಮ್ ದ ಸಿಲ್ವ)
೨. ಕಾಣಿ ಜಾಲೀ ಚಲೀ (ಕತೆಯಾದಳು ಹುಡುಗಿ ಸಂಕಲನದ ಅನುವಾದ : ಮೆಲ್ವಿನ್ ಡಿ ಸಿಲ್ವ)

ಇಂಗ್ಲೀಷ್ ಭಾಷಾಂತರದಲ್ಲಿ :

The Boy who Talked to Trees (Thirteen Short Stories)
Tr: Mrs. Padma Sharma and Dr. B.C. Ramachandra Sharma

ತೆಲುಗು ಭಾಷಾಂತರದಲ್ಲಿ :

೧. ಕಥಗಾ ಮಾರಿನ ಅಮ್ಮಾಯಿ (ಕತೆಯಾದಳು ಹುಡುಗಿ ಅನುವಾದ: ಭಾರ್ಗವಿರಾವ್)

ತಮಿಳು ಭಾಷಾಂತರದಲ್ಲಿ :

೧.ಒರು ಪೆಣ್ ಕಥೈಯಾಗಿರಾಳ್ (ಕತೆಯಾದಳು ಹುಡಿಗಿ : ಅನುವಾದ: ಟಿ.ಬಿ.ಸಿದ್ಧಲಿಂಗಯ್ಯ

ಯಶವಂತ ಚಿತ್ತಾಲರ ಬದುಕು-ಬರಹ
(ಸಂಕ್ಷಿಪ್ತ ಕಾಲಕ್ರಮ ಸೂಚಿ)

೧೯೨೮ ಜನನ –ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲ್ಲೂಕಿನ ಹನ್ನೇಹಳ್ಳಿಯಲ್ಲಿ ತಂದೆ. ವಿಠೋಬಾ: ತಾಯಿ, ರುಕ್ಮಿಣಿ , ಖ್ಯಾತ ಕವಿ ಗಂಗಾಧರ ಚಿತ್ತಾಲರು ಇವರ ಅಣ್ಣಂದಿರು.

೧೯೪೪ ಮ್ಯಾಟ್ರಿಕ್ಯುಲೇಶನ್- ಕರ್ನಾಟಕ ಹಾಯ್‌ಸ್ಕೂಲ್, ಧಾರವಾಡದಿಂದ; ಮುಂಬಯಿ ಪ್ರೆಸಿಡೆನ್ಸಿಗೆ ೧೧ನೆಯ ರ‍್ಯಾಂಕು.

೧೯೪೮ ಬಿ.ಎಸ್.ಸಿ (ಆನರ್ಸ್) –ರಸಾಯನಶಾಸ್ತ್ರದಲ್ಲಿ, ಸಿದ್ಧಾರ್ಥ ಕಾಲೇಜ್, ಮುಂಬಯಿಯಿಂದ.

೧೯೪೯ ಮೊದಲ ಕತೆ 'ಬೊಮ್ಮಿಯ ಹುಲ್ಲು ಹೊರೆ ಯ ಪ್ರಕಟನೆ ಪತ್ನಿಯಾಗಿ ಕೈಹಿಡಿಯಲ್ಲಿದ್ದ ಹುಡುಗಿ ಮಾಲತಿ ಅವರನ್ನು ಮೊದಲ ಬಾರಿ ನೋಡಿದ್ದು, ಮೆಚ್ಚಿಕೊಂಡಿದ್ದು.

೧೯೫೦ ಬಿ.ಎಸ್.ಸಿ.(ಟೆಕ್)-ಪ್ಲ್ಯಾಸ್ಟಿಕ್ ತಂತ್ರವಿಜ್ಞಾನ ಪದವಿ ಪರೀಕ್ಷೆ; ಪ್ರಥಮ ವರ್ಗದಲ್ಲಿ ಪ್ರಥಮ ಸ್ಥಾನ, ಮುಂಬಯಿ ವಿಶ್ವವಿದ್ಯಾಲಯದಿಂದ; ಸುವರ್ಣ ಪದಕ ಗಳಿಕೆ.
ಇಂಡಿಯನ್ ಪ್ಲ್ಯಾಸ್ಟಿಕ್ ಲಿಮಿಟೆಡ್ ಕಂಪನಿಯಲ್ಲಿ ರಿಸರ್ಚ್ ಕೆಮಿಸ್ಟ್ ಆಗಿ ಕೆಲಸಕ್ಕೆ ಸೇರಿದ್ದು.

೧೯೫೩-೮೫ ಬೇಕೆಲ್ಯಾಟ್ ಹೈಲಮ್ ಲಿಮಿಟೆಡ್ ಕಂಪನಿಯಲ್ಲಿ ಟೆಕ್ನಿಕಲ್ ರಿಪ್ರಸೆಂಟೇಟಿವ್ ಆಗಿ ನೌಕರಿ ಆರಂಭ(೧೯೫೩). ಮೂವತ್ತೆರಡು ವರ್ಷಗಳ ದೀರ್ಘ ಅವಧಿಯಲ್ಲಿ ಹಲವು ಹುದ್ದೆಗಳಲ್ಲಿ ಕೆಲಸ ಮಾಡಿ ಕೊನೆಯಲ್ಲಿ ಎಕ್ಸಿಕ್ಯೂಟಿವ್ ಡೈರೆಕ್ಟರರೂ ಆಗಿ ನಿವೃತ್ತಾದದ್ದು (೧೯೭೫). ಮಾರ್ಕೆಟಿಂಗ್ ಹಾಗೂ ರಿಸರ್ಚ್ ಅಂಡ್ ಡೆವಲಪ್‌ಮೆಂಟ್ ಇವರ ಮುಖ್ಯ ಕಾರ್ಯಕ್ಷೇತ್ರಗಳಾಗಿದ್ದುವು. ಹಲವು ಕತೆಗಳಿಗೆ, ಕಾದಂಬರಿಗಳಿಗೆ ಪ್ರೇರಣೆಯಿತ್ತ ಅನುಭವ ದೊರಕಿದ್ದು, ಈ ಅವಧಿಯಲ್ಲಿ.

ಶ್ರೀಮತಿ ಮಾಲತಿಯವರೊಂದಿಗೆ ವಿವಾಹ: ಬದುಕಿಗೆ ಧನ್ಯತೆಯ ಭಾವವನ್ನೂ, ಸಾಹಿತ್ಯಸೃಷ್ಟಿಗೆ ಸ್ಫೂರ್ತಿಯನ್ನು ಚಿಗುರೊಡೆಸಿದ ಘಟನೆ.

೧೯೫೪ ಹಿರಿಯ ಮಗ ರವೀಂದ್ರನ ಜನನ.

೧೯೫೭ ಚೊಚ್ಚಲು ಕಥಾಸಂಕಲನ, ಸಂದರ್ಶನದ ಪ್ರಕಟಣೆ- ಕವಿ ದಿನಕರ ದೇಸಾಯಿ ಅವರಿಂದ, ಅವರ ಅಂಕೋಲೆಯ ಜನತಾ ಪ್ರಕಾಶನ ದ ಪರವಾಗಿ; ಗೌರೀಶಕ್ಯಾಕಿಣಿ ಅವರ ಮುನ್ನುಡಿಯೊಂದಿಗೆ.

೧೯೬೦ ಆಬೋಲೀನ ಕಥಾ ಸಂಕಲನ ಪ್ರಕಾಶನ- ಧಾರವಾಡದ ಮನೋಹರ ಗ್ರಂಥಮಾಲೆಯ ಜಿ.ಬಿ. ಜೋಷಿ ಅವರಿಂದ; ಕೀರ್ತಿನಾಥಕುರ್ತಕೋಟಿಯವರ ಮುನ್ನುಡಿಯೊಂದಿಗೆ.
ಇಂಗ್ಲೆಂಡಿನ ಬೇಕೆಲ್ಯಾಟ್ ಲಿಮಿಟೆಡ್ ಸಂಸ್ಥೆಯ ಬರ್ಮಿಂಗಮ್ ಫ್ಯಾಕ್ಟರಿಗಳಲ್ಲಿ, ಲಂಡನ್ನಿನ ಆಫೀಸುಗಳಲ್ಲಿ ಮೂರು ತಿಂಗಳ ವಿಶೇಷ ತರಬೇತು.

೧೯೬೪ ಚೊಚ್ಚಲು ಕಾದಂಬರಿ ಮೂರು ದಾರಿಗಳು ಪ್ರಕಾಶನ. (ಮನೋಹರ ಗ್ರಂಥ ಮಾಲೆ, ಧಾರವಾಡ)

೧೯೬೬ ಇಂಗ್ಲೆಂಡಿನ ಉರ್ವಿಕ್ ಮ್ಯಾನೇಜ್‌ಮೆಂಟ್ ಸೆಂಟರ್‌ನ ಮಾರ್ಕೆಟಿಂಗ್ ಅಂಡ್ ಸೇಲ್ಸ್ ಮ್ಯಾನೇಜ್‌ಮೆಂಟ್ ಕೋರ್ಸ್; ಅಲ್ಲಿಂದಲೇ ಕೆಲವು ವಾರ ಅಮೇರಿಕೆಗೆ ಪ್ರಯಾಣ, ಹೊನೊಲೂಲು, ಟೋಕಿಯೋಗಳ ಮಾರ್ಗ ಭಾರತಕ್ಕೆ ವಾಪಸು.

೧೯೬೭-೬೯ ಮುಂಬಯಿಯ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಪೋಸ್ಟ್‌ಗ್ರ್ಯಾಜ್ಯುಯೇಟ್ ಡಿಪ್ಲೊಮ ಇನ್ ಪ್ಲ್ಯಾಸ್ಟಿಕ್ಸ್ ಕೋರ್ಸ್‌ಗೆ ಹಾಗೂ ಪ್ಲ್ಯಾಸ್ಟಿಕ್ ಅಂಡ್ ರಬ್ಬರ್ ಇನ್‌ಸ್ಟಿಟ್ಯೂಟ್ ನಡೆಸುತ್ತಿದ್ದ ಡಿಪ್ಲೊಮ ಕೋರ್ಸ್‌ನ ವಿದ್ಯಾರ್ಥಿಗಳಿಗೆ ಸಂದರ್ಶಕ ಪ್ರಾಧ್ಯಾಪಕ.

೧೯೬೯ ಆಟ ಕಥಾಸಂಕಲನದ ಪ್ರಕಟಣೆ-ಮುಂಬಯಿಯ ಪೊಪ್ಯುಲರ್ ಪ್ರಕಾಶನದ ಪ್ರಪ್ರಥಮ ಕನ್ನಡ ಪ್ರಕಾಶನ ಸಾಹಸವಾಗಿ; ಗೋಪಾಲಕೃಷ್ಣ ಅಡಿಗರ ಮುನ್ನುಡಿಯೊಂದಿಗೆ.

೧೯೭೦-೭೨ ಅಮೇರಿಕೆಯ ನ್ಯೂಜರ್ಸಿಯ ಸ್ಟೀವನ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಅಧ್ಯಯನ; ರಾಸಾಯನಿಕ ತಂತ್ರವಿಜ್ಞಾನದಲ್ಲಿ (Chemical Engineering) ಸ್ನಾತಕೋತ್ತರ ಪದವಿ {M.E. (Chem)}.
ಅಮೇರಿಕನ್ ಮೆಟಾಸೀಲ್ ಎನ್ನುವ ಆರ್ ಅಂಡ್ ಡಿ ಸಂಸ್ಥೆಯಲ್ಲಿ ಬೊಂಡೆಡ್ ಟೆಫ್ಲೋನ್ ಮೇಲೆ ಸಂಶೋಧನಾ ಕೆಲಸ.

೧೯೭೨-೭೫ ಅಮೇರಿಕೆಯಿಂದ ಭಾರತಕ್ಕೆ ವಾಪಸು; ಬೇಕೆಲ್ಯಾಟ್ ಹೈಲಮ್ ಸಂಸ್ಥೆಯಲ್ಲಿ ಜನರಲ್ ಮ್ಯಾನೇಜರ್ (ಮಾರ್ಕೆಟಿಂಗ್) ಹುದ್ದೆಯಿಂದ ಎಕ್ಸಿಕ್ಯುಟಿವ್ ಡೈರೆಕ್ಟರ್ ಸ್ಥಾನದವರೆಗೆ ಬಡತಿಗಳು.

೧೯೭೪ ಪ್ಲ್ಯಾಸ್ಟಿಕ್ಸ್ ಎಕ್ಸ್‌ಪೋರ್ಟ್ ಕೌನ್ಸಿಲ್‌ನ ಏಕಸದಸ್ಯ ನಿಯೋಗವಾಗಿ ಯುರೋಪು ಹಾಗೂ ಮಧ್ಯಪೂರ್ವ ದೇಶಗಳ ಅಧ್ಯಯನ ಪ್ರವಾಸ.

೧೯೭೬ ಆಯ್ದ ಕತೆಗಳು ಪ್ರಕಟಣೆ-ಡಾ. ಜಿ.ಎಸ್.ಅಮೂರ ಅವರ ಮುನ್ನುಡಿಯೊಂದಿಗೆ (ಬಾಪ್ಕೊ ಪ್ರಕಾಶನ, ಬೆಂಗಳೂರು)

೧೯೭೯ ಶಿಕಾರಿ ಕಾದಂಬರಿಯ ಪ್ರಕಟಣೆ- ಡಾ.ಜಿ.ಎಸ್.ಅಮೂರ ಅವರ ಮುನ್ನುಡಿಯೊಂದಿಗೆ (ಬಾಪ್ಕೊ ಪ್ರಕಾಶನ, ಬೆಂಗಳೂರು).

೧೯೮೦ ಕತೆಯಾದಳು ಹುಡುಗಿ ಕಥಾ ಸಂಕಲನದ ಪ್ರಕಟಣೆ- ಎಸ್.ದಿವಾಕರರ ಮುನ್ನುಡಿಯೊಂದಿಗೆ (ಬಾಪ್ಕೊ ಪ್ರಕಾಶನ, ಬೆಂಗಳೂರು).
ಕತೆಯಾದಳು ಹುಡುಗಿ ಕಥಾ ಸಂಕಲನಕ್ಕೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ.

೧೯೮೧ ೧೯೭೯ ರ ಶ್ರೇಷ್ಠ ಸೃಜನಶೀಲ ಸಾಹಿತ್ಯ ಕೃತಿಯೆಂದು ಶಿಕಾರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ವಿಶೇಷ ಪುರಸ್ಕಾರ.
ಸಾಹಿತ್ಯ, ಸೃಜನಶೀಲತೆ ಮತ್ತು ನಾನು ಪ್ರಬಂಧ ಸಂಕಲನದ ಪ್ರಕಟನೆ (ಜ್ಯೋತಿಷ್ಮತಿ ಪ್ರಕಾಶನ, ಉಡುಪಿ).

೧೯೮೩ ಕತೆಯಾದಳು ಹುಡುಗಿ ಕಥಾ ಸಂಕಲನಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ.
೧೯೭೯ ರ ಶ್ರೇಷ್ಠ ಸೃಜನಶೀಲ ಸಾಹಿತ್ಯ ಕೃತಿಯೊಂದು ಶಿಕಾರಿ ಕಾದಂಬರಿಗೆ ವರ್ಧಮಾನ ಪ್ರಶಸ್ತಿ.

೧೯೮೩ (ಮುಂ) ಬೇನ್ಯಾ ಕಥಾ ಸಂಕಲನದ ಪ್ರಕಟಣೆ (ಲಿಪಿ ಮುದ್ರಣ, ಬೆಂಗಳೂರು).
ಚಿತ್ತಾಲರ ಕತೆಗಳು(ಸಮಗ್ರ) ಕಥಾ ಸಂಗ್ರಹದ ಪ್ರಕಟಣೆ (ಪ್ರಜಾ ಪ್ರಿಂಟರ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು).

೧೯೮೪ ಪೊಲಿಮರ್ ಟೆಕ್ನಾಲಜಿಯಲ್ಲಿ ಇವರ ಸಾಧನೆಯನ್ನು ಗಮನಿಸಿ ಪ್ಲ್ಯಾಸ್ಟಿಕ್ಸ್ ಅಂಡ್ ರಬ್ಬರ್ ಇನ್‌ಸ್ಟಿಟ್ಯೂಟ್‌ನಿಂದ ' ಫೆಲೋಷಿಪ್' ಮನ್ನಣೆ; ಯೂನಿವರ್ಸಿಟಿ ಡಿಪಾರ್ಟ್‌ಮೆಂಟ್ ಆಫ್ ಟೆಕ್ನಾಲಜಿಯಿಂದಲೂ ಇಂಥದೇ ಗೌರವ.

೧೯೮೫ ಛೇದ ಕಾದಂಬರಿಯ ಪ್ರಕಟಣೆ (ಗೀತಾ ಬುಕ್‌ಹೌಸ್, ಮೈಸೂರು). ಬೇಕೆಲ್ಯಾಯ್ಟ್ ಹೈಲಮ್ ಕಂಪನಿಯಿಂದ ಸೇವಾ ನಿವೃತ್ತಿ.

೧೯೮೬ ಖೇಳ್ ಆನಿ ಹೆರ್ ಕಥಾ – ಒಂಬತ್ತು ಕತೆಗಳ ಕೊಂಕಣಿ ಅನುವಾದ: ವಿಲ್ಯಮ್ ದ ಸಿಲ್ವ (ಪ್ರಗತಿ ಪ್ರಕಾಶನ, ಮಂಗಳೂರು)

೧೯೮೭ ಮುಂಬಯಿಯ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಹೊತ್ತಿಗೆ ಅಧ್ಯಕ್ಷರ ಹಸ್ತದಿಂದ ಸನ್ಮಾನ.
೧೯೮೮ ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ
(ಸಿದ್ಧಾರ್ಥ ಕಥಾ ಸಂಕಲನದ ಪ್ರಕಟನೆ (ಅಂಕಣ ಪ್ರಕಾಶನ, ಬೆಂಗಳೂರು) .

೧೯೯೦ ಪುರುಷೋತ್ತಮ ಕಾದಂಬರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ.

೧೯೯೩ ಮಾಸ್ತಿ ಪ್ರಶಸ್ತಿ.
ಪುರುಷೋತ್ತಮ ಕಾದಂಬರಿಗೆ 'ಭಾರತೀಯ ಭಾಷಾ ಪ್ರಶಸ್ತಿ'
ಶಿವಮೊಗ್ಗೆಯ ಕರ್ನಾಟಕ ಸಂಘದಿಂದ ಸನ್ಮಾನ.

೧೯೯೪ ಹದಿಮೂರು ಕತೆಗಳ ಇಂಗ್ಲೀಷ್ ಭಾಷಾಂತರ-ಶ್ರೀಮತಿ ಪದ್ಮಾಶರ್ಮ ಮತ್ತು ಡಾ.ಬಿ.ಸಿ.ರಾಮಚಂದ್ರ ಶರ್ಮ ಅವರಿಂದ (Pengiun India ಅವರಿಂದ The boy who Talked to Trees ಎಂಬ ಹೆಸರಿನಲ್ಲಿ)

೧೯೯೫ ಕಾಣಿ ಜಾಲೀ ಚಲೀ- ಕತೆಯಾದಳು ಹುಡುಗಿ ಸಂಕಲನದ ಕೊಂಕಣಿ ಭಾಷಾಂತರ: ಮೆಲ್ವಿನ್ ಡಿ'ಸಿಲ್ವಾ (ಸಾಹಿತ್ಯ ಅಕಾಡೆಮಿ, ನವದೆಹಲಿ)

೧೯೯೬ ಕೇಂದ್ರ ವೃತ್ತಾಂತ ಕಾದಂಬರಿಯ ಪ್ರಕಟಣೆ (ಗೀತಾ ಬುಕ್‌ಹೌಸ್, ಮೈಸೂರು).

೧೯೯೭ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ- ಕರ್ನಾಟಕ ಸರ್ಕಾರದಿಂದ
ಮುಂಬಯಿಯಲ್ಲಿ ನಡೆದ ಮಹಾರಾಷ್ಟ್ರ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ.
೧೯೯೮ ಡಾ.ಶಿವರಾಮ ಕಾರಂತ ಪ್ರಶಸ್ತಿ – ದೆಹಲಿಯ ಕರ್ನಾಟಕ ಸಂಘದಿಂದ.

೨೦೦೦ ಯಶವಂತ ಚಿತ್ತಾಲ: ಐವತ್ತೊಂದು ಕತೆಗಳು-ಸಮಗ್ರ ಕಥಾ ಸಂಕಲನದ ಪ್ರಕಟಣೆ (ಗೀತಾ ಬುಕ್ ಹೌಸ್, ಮೈಸೂರು)
೨೦೦೧ ಸಾಹಿತ್ಯದ ಸಪ್ತಧಾತುಗಳು.

ಗ್ರಂಥಋಣ

೧. ಯಶವಂತ ಚಿತ್ತಾಲ: ಐವತ್ತೊಂದು ಕತೆಗಳು- ೨೦೦೦
ಪ್ರಕಾಶಕರು: ಗೀತಾಬುಕ್‌ಹೌಸ್, ಮೈಸೂರು.

೨. ಮನೋವೈಜ್ಞಾನಿಕ ನೆಲೆಗಟ್ಟು-ಪ್ರೋ:ವಿ.ಕೆ.ಕೃಷ್ಣಪ್ಪ-೨೦೦೭
ಪ್ರಕಾಶಕರು: ಸಪ್ತಗಿರಿ ಪ್ರಕಾಶನ, ಮಂಡ್ಯ.

೩. ಶೈಕ್ಷಣಿಕ ಮನೋವಿಜ್ಞಾನ- ಡಾ।ಎನ್.ಬಿ.ಕೊಂಗವಾಡ-೧೯೯೬
ಪ್ರಕಾಶನ : ವಿದ್ಯಾನಿಧಿ ಪ್ರಕಾಶನ, ಗದಗ.

೪. ಸಾಲು ದೀಪಗಳು : ಸಂಪಾದಕರು ; ಜಿ.ಎಸ್.ಸಿದ್ಧಲಿಂಗಯ್ಯ, ಎಂ.ಹೆಚ್.ಕೃಷ್ಣಯ್ಯ
ಪ್ರಕಾಶನ : ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೫. ಯಶವಂತಚಿತ್ತಾಲ : ಡಾ।ಕೆ.ಎಲ್.ಗೋಪಾಲಕೃಷ್ಣಯ್ಯ
ಸಂಪಾದಕರು: ಪ್ರಧಾನ್‌ಗುರುದತ್ತ-೨೦೦೨
ಪ್ರಕಾಶನ : ನವ ಕರ್ನಾಟಕ ಪ್ರಕಾಶನ .

೬. ಸಂದರ್ಶನ –ಯಶವಂತ ಚಿತ್ತಾಲ- ೧೯೫೭
ಪಕ್ರಾಶನ – ಜನತಾ ಪ್ರಕಾಶನ, ಅಂಕೋಲೆ

೭. ಆಬೋಲೀನ – ಯಶವಂತ ಚಿತ್ತಾಲ-೧೯೬೦
ಪ್ರಕಾಶನ- ಧಾರವಾಡದ ಮನೋಹರ ಗ್ರಂಥಮಾಲೆ

೮. ಕತೆಯಾದಳು ಹುಡುಗಿ- ಯಶವಂತ ಚಿತ್ತಾಲ-೧೯೮೦
ಪ್ರಕಾಶನ- ಬಾಪ್ಕೊ ಪ್ರಕಾಶನ, ಬೆಂಗಳೂರು.

೯. ಬೇನ್ಯಾ – ಯಶವಂತ ಚಿತ್ತಾಲ - ೧೯೮೩
ಪ್ರಕಾಶನ- ಪ್ರಜಾಪ್ರಿಂಟರ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು.

೧೦. ಪೂರ್ವ-ಪಶ್ಚಿಮ- ಆರ್.ರಾಮಚಂದ್ರ
ಪ್ರಕಾಶನ- ಸಿ.ವಿ.ಜಿ. ಪಬ್ಲಿಕೇಷನ್, ಬೆಂಗಳೂರು.

೧೧. ಆಕಾಶದ ಹಕ್ಕು - ಹೆಚ್.ಎಸ್.ವೆಂಕಟೇಶಯ್ಯ
ಪ್ರಕಾಶನ - ಸಿ.ವಿ.ಜಿ.ಪಬ್ಲಿಕೇಷನ್, ಬೆಂಗಳೂರು.

೧೨. ನಮಸ್ಕಾರ- ಹೆಚ್.ಎಸ್.ರಾಘವೇಂದ್ರರಾವ್ -೨೦೦೬
ಅಭಿನವ ಪ್ರಕಾಶನ- ಬೆಂಗಳೂರು.

೧೩. ಸಾಹಿತ್ಯ- ಸೃಜನಶೀಲತೆ ಮತ್ತು ನಾನು- ಯಶವಂತಚಿತ್ತಾಲ
ಪ್ರಕಾಶನ - ವಸಂತ ಪ್ರಕಾಶನ-೧೯೮೧

೧೪. ನಾಲ್ಕನೆಯ ಸಾಹಿತ್ಯ ಚರಿತ್ರೆ- ಸುಮತೀಂದ್ರನಾಡಿಗ
ಪ್ರಕಾಶನ : ಸಪ್ನ ಬುಕ್‌ಹೌಸ್.